ಶಿವಾನುಭವ ಗ್ರಂಥಮಾಲಾ ನಂ|| ೪೫

# ಶಿವಾನುಭವ ಸತ್ಯಮಾರ್ಗ.

1939

236.
1847.

ಫ. ಗು. ಹಳಕಟ್ಟಿ.

ಶಿವಾನುಭವ ಗ್ರಂಥಮಾಲಾ ನಂ|| ೪೫.

# ಶಿವಾನುಭವ ಸತ್ಯಮಾರ್ಗ.

ಸಂಪಾದಕರು

ರಾ|| ಬ|| ಫ. ಗು. ಹಳಕಟ್ಟಿ,

ಬಿ. ಎ. ಎಲ್. ಎಲ್. ಬಿ.

ವಿಜಾಪುರ.

(ಇದರ ಯಾವತ್ತು ಅಧಿಕಾರವು ಸಂಪಾದಕರಿಂವ ಕಾದಿಡಲ್ಪಟ್ಟಿದೆ.)

236
1847

ಇದನ್ನು ವಿಜಾಪುರದಲ್ಲಿ ರಾ॥ ಬ॥ ಫ. ಗು. ಹಳಕಟ್ಟಿ ಇವರು ತಮ್ಮ
“ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ” ನಲ್ಲಿ ಮುದ್ರಿಸಿದರು
ಮತ್ತು ಅವರು ಅಲ್ಲಿಯೇ ಪ್ರಕಟಿಸಿದರು.

1847.

# ಪ್ರಸ್ತಾವನೆ.

ಈಗಿನ ಕಾಲದಲ್ಲಿ ಉಪಯುಕ್ತ ವಿಷಯಗಳುಳ್ಳ ಚಿಕ್ಕ ಗ್ರಂಥಗಳನ್ನು ಓದುವ ಅಭಿಲಾಷೆಯು ಜನರಲ್ಲಿ ಹೆಚ್ಚುತ್ತಲಿದೆ. ಇದು ಶುಭ ಚಿನ್ಹವು. ಇದರಿಂದ ಜನತೆಯಲ್ಲಿ ವಾಚನಾಭಿರುಚಿಯು ಬೆಳೆಯುವದರಲ್ಲಿ ಸಂದೇಹವಿರಲಾರದು. ಈಚೆಗೆ ಶಿವಶರಣರ ವಿಚಾರಗಳನ್ನು ತಿಳಿಯಲು ಬಹು ಜನರು ಅಪೇಕ್ಷಿಸುವದು ಕಂಡುಬರುತ್ತದೆ. ಅವರಿಗೋಸ್ಕರ ಈ ಗ್ರಂಥವನ್ನು ನಾವು ಸಿದ್ಧಪಡಿಸಿದ್ದೇವೆ.

ನಾವು ಶಿವಶರಣರ ವಾಙ್ಮಯವನ್ನು ಪ್ರಸಿದ್ಧಿಸುವ ನಮ್ಮ ಪ್ರಯತ್ನಗಳಲ್ಲಿ ಕೆಲವು ಮೆಟ್ಟಲುಗಳುಂಟಾಗಿದ್ದು ಅವುಗಳನ್ನು ನಾವು ನಮ್ಮ ವಾಚಕರ ಇದಿರಿಗೆ ಇಲ್ಲ ಇಡುವದು ಅವಶ್ಯ ತೋರುತ್ತದೆ.

ನಾವು ಶಿವಶರಣರ ವಾಙ್ಮಯದ ಸಂಶೋಧನೆ ಮತ್ತು ಸಂಗ್ರಹದ ಕಾರ್ಯವನ್ನು ಮೊದಲು ೧೯೦೩ ರಲ್ಲಿ ಪ್ರಾರಂಭಿಸಿದೆವು. ಮುಂದೆ ೧೯೦೪ ರಲ್ಲಿ ವಿಜಾಪುರದಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದಾಗ್ಗೆ ವಿಜಾಪುರ ಜಿಲ್ಲೆಯ ಉತ್ತರ ಭಾಗಗಳಲ್ಲಿರುವ ಗ್ರಾಮಗಳಲ್ಲಿ ಸಂಚರಿಸುವ ಪ್ರಸಂಗಗಳು ನಮಗೆ ಆಗಿಂದಾಗ್ಗೆ ಬರುತ್ತಿದ್ದವು. ಬಸವೇಶ್ವರನ ಕಾಲದಲ್ಲಿ ಈ ಭಾಗವು ‘ತರ್ದೆವಾಡಿ ನಾಡು’ ಎಂದು ಕರೆಯಲ್ಪಡುತ್ತಿತ್ತು. ಇಲ್ಲಿಯೇ ಹಿಂದಿನ ಕಾಲದಲ್ಲಿ ಬಹುಜನ ಶಿವಶರಣರು ಆಗಿ ಹೋಗಿದ್ದಾರೆ. ಆದ್ದರಿಂದ ಅವರು ರಚಿಸಿದ ಅನೇಕ ವಚನ ಗ್ರಂಥಗಳು ನಮ್ಮ ಕಯ್ಯಲ್ಲಿ ಬೀಳಲಾಗಿ ಅವುಗಳನ್ನು ಸಂಗ್ರಹಿಸುವ ಕಾರ್ಯವನ್ನು ನಾವು ೧೯೧೮ ರ ವರೆಗೂ ನಡೆಯಿಸಿದೆವು. ಇದು ನಮ್ಮ ಪ್ರಯತ್ನದ ಮೊದಲನೆಯ ಮೆಟ್ಟಲೆಂದು ಹೇಳಬಹುದು. ಈ ಅವಧಿಯಲ್ಲಿ ಸುಮಾರು ಒಂದು ಸಹಸ್ರಗ್ರಂಥಗಳು ಸಂಗ್ರಹಿಸಲ್ಪಟ್ಟವು ಅವುಗಳ ಒಂದು ಪ್ರದರ್ಶನವು ೧೯೨೩ ರಲ್ಲಿ ಮಾಡಲ್ಪಟ್ಟಿತು.

ಆದರೆ ಈ ವಚನಗಳು ವ್ಯವಸ್ಥಿತವಾಗಿ ಎಲ್ಲಿಯೂ ಒತ್ತಟ್ಟಿಗೆ ದೊರೆಯಲಿಲ್ಲ. ಅವುಗಳಲ್ಲಿ ವಿಷಯದ ಜೋಡಣೆ ಇಲ್ಲದ್ದರಿಂದ ಅವು

ಗಳಲ್ಲಿಯ ವಿಚಾರಗಳ ನಿಶ್ಚಿತ ಸ್ವರೂಪವನ್ನು ತಿಳಿಯುವದು ಅಶಕ್ಯವಾಗಿದ್ದಿತು. ಆದರೆ ಯಾವ ವಚನ ತೆಗೆದುಕೊಂಡರೂ ಅವರಲ್ಲಿ ಹೊಸ ವಿಚಾರ, ಹೊಸ ತರದ ಭಾಷೆ, ಒಂದು ಬಗೆಯ ಸ್ಫೂರ್ತಿ, ಇವುಗಳು ಮಾತ್ರ ಸ್ಪಷ್ಟವಾಗಿ ಕಂಡು ಬರುತ್ತಿದ್ದವು. ಇದರಿಂದ ಇವು ಒಂದು ಹೊಸ ತರದ ವಾಙ್ಮಯಕ್ಕೆ ಸೇರಿದವೆಂದು ನಮಗೆ ಭಾಸವಾಗಹತ್ತಿತು. ಇವು ಶಿವಶರಣರ ಸಾಮಾಜಿಕ, ನೈತಿಕ, ಮತ್ತು ಧಾರ್ಮಿಕ ವಿಚಾರಗಳ ಮೇಲೆ ಯಾವ ಪ್ರಕಾಶವನ್ನು ಕೆಡಹುತ್ತವೆಂಬುದನ್ನು ತಿಳಿಯಲು ಅವುಗಳನ್ನು ಶಕ್ಯವಿದ್ದಷ್ಟರಮಟ್ಟಿಗೆ ವಿಷಯಾನುಸಾರ ಸಂಗ್ರಹ ಮಾಡತೊಡಗಿದೆವು. ಈ ಸಂಗ್ರಹವೇ ನಾವು ೧೯೩೧ ರಲ್ಲಿ ಪ್ರಸಿದ್ಧಿಸಿದ ವಚನ ಶಾಸ್ತ್ರಸಾರ ಭಾಗ ೧ ಇದು ಇರುತ್ತದೆ. ಅದು ಈಗಲೂ ಬಹು ಜನರ ಮೆಚ್ಚುಗೆಗೆ ಪಾತ್ರವಾಗಿರುತ್ತದೆ. ಇದು ನಮ್ಮ ಪ್ರಯತ್ನದ ಎರಡನೆಯ ಮೆಟ್ಟಲಾಗಿದೆ.

ಇದರ ತರುವಾಯ ನಾವು ಸಂಗ್ರಹಿಸಿದ ವಚನ ಗ್ರಂಥಗಳಲ್ಲಿಯ ಪ್ರತಿಯೊಂದು ಉಕ್ತಿಯನ್ನು ಒಂದೊಂದಾಗಿಯೇ ಒಂದೇ ಓಲೆಯ ಮೇಲೆ ಸ್ವತಂತ್ರವಾಗಿ ಬರೆಯಿಸತೊಡಗಿದೆವು. ಹೀಗೆ ಬರೆಯಿಸಿದ ಒಲೆಗಳು ಅನೇಕ ವಚನಕಾರರವಿದ್ದು ಅವುಗಳನ್ನು ಆಯಾ ವಚನಕಾರರ ಹೆಸರುಗಳ ಪ್ರಕಾರ ಒತ್ತಟ್ಟಿಗೆ ಸಂಗ್ರಹಿಸುವ ಕಾರ್ಯವನ್ನು ಕೈಕೊಂಡೆವು. ಇದರಿಂದ ಅನೇಕ ವಚನ ಗ್ರಂಥಗಳು ನಮ್ಮಲ್ಲಿ ನಿರ್ಮಾಣವಾಗಹತ್ತಿದವು. ಈ ಕಾರ್ಯ ಮಾಡುವದಕ್ಕೋಸ್ಕರ ನಾವು ಇಬ್ಬರು ಲೇಖಕರನ್ನು ನೇಮಿಸಿಕೊಂಡೆವು. ಅವರು ಈ ಪ್ರಕಾರ ಮೂರು ವರ್ಷ ಒಂದೇಸವನೆ ಕೆಲಸಮಾಡಿದರು. ಹೀಗೆ ಸಂಗ್ರಹವಾದ ವಚನಗಳನ್ನು ನಾವು ಮುಂದೆ ಶಕ್ಯವಿದ್ದಷ್ಟರ ಮಟ್ಟಿಗೆ ವಿಷಯಾನುಸಾರವಾಗಿ ಜೋಡಿಸಿ ಅವುಗಳನ್ನು ಪ್ರಸಿದ್ಧಿಸುವದಕ್ಕೋಸ್ಕರ ಒಂದು ಪ್ರೆಸ್ಸನ್ನು ಸ್ಥಾಪಿಸಿ ಶಿವಾನುಭವ ಪತ್ರಿಕೆಯನ್ನು ೧೯೨೬ ರಲ್ಲಿ ಪ್ರಾರಂಭಿಸಿದೆವು. ಇದು ನಮ್ಮ ಪ್ರಯತ್ನದ ಮೂರನೆಯ ಮೆಟ್ಟಲಾಗಿದೆ.

೧೯೨೬ ರಲ್ಲಿ ಸ್ಥಾಪಿತವಾದ ಈ ಶಿವಾನುಭವ ಪತ್ರಿಕೆಯು ಈ ವರೆಗೆ ೨೬ ವರ್ಷ ಒಂದೇಸವನೆ ಕಾರ್ಯಮಾಡುತ್ತ ಬಂದಿದೆ. ಅದರ ಮೂಲಕ ೬೦--೭೦ ವಚನ ಗ್ರಂಥಗಳೂ, ೪೦—೪೫ ಹರಿಹರನ ರಗಳೆಗಳೂ, ವೀರಶೈವೇತಿಹಾಸಕ್ಕೆ ಸಂಬಂಧಿಸಿದ ಅನೇಕ ಪುರಾತನ ಗ್ರಂಥಗಳೂ, ಮೊದಲು ಅಪರಿಚಿತವಾದ ಮಹತ್ವದ ಶಿಲಾಶಾಸನಗಳೂ ಪ್ರಕಟವಾಗುತ್ತ ಬಂದವು. ಅಲ್ಲದೆ ಅನೇಕ ಮಹನೀಯರು ವೀರಶೈವ ಸಂಸ್ಕೃತಿಯ ಮೇಲೆ ವಿಧವಿಧ ಲೇಖಗಳನ್ನು ಈ ವರೆಗೂ ಅದರಲ್ಲಿ ಬರೆಯುತ್ತ ಬಂದಿದ್ದಾರೆ. ಇದು ನಮ್ಮ ಪ್ರಯತ್ನದ ನಾಲ್ಕನೆಯ ಮೆಟ್ಟಲೆಂದು ಹೇಳಬಹುದು.



ಈಗಿನದು ಇದರ ಮುಂದಿನ ಮೆಟ್ಟಲಾಗಿದೆ. ಈ ವರೆಗೆ ಸಂಶೋಧನೆಯ ದೃಷ್ಟಿಯಿಂದ ಬರೆಯಲ್ಪಟ್ಟ ಲೇಖಗಳಲ್ಲಿ ಮಹತ್ವವಾದವುಗಳನ್ನು ಆರಿಸಿ ಅವುಗಳನ್ನು ಒತ್ತಟ್ಟಿಗೆ ಸಂಗ್ರಹಿಸಿ ಜನತೆಯ ಮುಂದೆ ಇಡುವದೇ ಇದರ ಉದ್ದೇಶವಾಗಿದೆ. ಇದರಿಂದ ವಿಚಾರಪೂರ್ವಕವಾಗಿ ಬರೆದ ಲೇಖಗಳು ಸ್ಥಿರಪಡುವವು. ಅವು ಅಳಿದು ಹೋಗಬಾರದು, ಅವು ಮುಂದಿನ ಸಂಶೋಧನ ಕಾರ್ಯಗಳಿಗೆ ಮಾರ್ಗದರ್ಶಿಯಾಗಬೇಕು, ಅಲ್ಲದೆ ಸಾಮಾನ್ಯ ಜನರಿಗೂ ಅವು ಬೋಧಪ್ರದವಾಗಬೇಕು, ಈ ಉದ್ದೇಶಗಳನ್ನಿಟ್ಟುಕೊಂಡು ನಾವು ಈ ಹೊಸ ಉಪಕ್ರಮವನ್ನು ಪ್ರಾರಂಭಿಸಿದ್ದೇವೆ.

'ಶಿವಾನುಭವ' ಈ ವಿಷಯವು ಬಹು ತಾತ್ವಿಕವಾದುದು, ಮತ್ತು ಬಹು ಘನತರವಾದುದು. ಅದರ ಸಾಮಾನ್ಯ ಸ್ವರೂಪವನ್ನು ಎಲ್ಲರೂ ತಿಳಿಯುವದು ಬಹು ಅವಶ್ಯವು. ಆದುದರಿಂದ ಈ ವಿಷಯವನ್ನು ಕುರಿತು ಶಿವಾನುಭವದಲ್ಲಿ ಬಗೆಗೆ ಕೆಲವು ಮಹತ್ವದ ಲೇಖಗಳನ್ನು ನಾವು ಈ ಗ್ರಂಥದಲ್ಲಿ ಸಂಗ್ರಹಿಸಿದ್ದೇವೆ. ಮೂಲ ಲೇಖಗಳು ವಾಚಕರಿಗೆ ತಿಳಿಯಲು ಕಠಿಣವಾಗಬಾರದೆಂದು ನಾವು ಅವುಗಳ ಸಾರವನ್ನು ಪೀಠಿಕೆಯಲ್ಲಿ ಕೊಟ್ಟಿದ್ದೇವೆ.

ವಾಚಕರು ಈ ಗ್ರಂಥದ ಉದ್ದೇಶವನ್ನು ತಿಳಿದುಕೊಂಡು ನಮ್ಮ ಈ ಪ್ರಯತ್ನಕ್ಕೋಸ್ಕರ ಸಹಾನುಭೂತಿಯನ್ನು ವಹಿಸಿ ನಮಗೆ ಇದರಲ್ಲಿ ಸಹಾಯಕರಾಗುವರೆಂದು ನಮ್ಮ ವಿನಂತಿ ಇದೆ.

ಫ. ಗು. ಹಳಕಟ್ಟಿ
ಸಂಪಾದಕ.

# ಪೀ ಠಿ ಕೆ.

ನಾವು ಶಿವಶರಣರ ವಾಙ್ಮಯ ಅಥವಾ ಶಿವಾನುಭವ ಶಾಸ್ತ್ರವನ್ನು ಪ್ರಕಟಿಸುವ ಉದ್ದಿಶ್ಯವಾಗಿ ಶಿವಾನುಭವ ಪತ್ರಿಕೆಯನ್ನು ಮೊದಲು ಪ್ರಾರಂಭಿಸಿದೆವು. ಇದರ ಮೊದಲನೆಯ ಸಂಚಿಕೆಯು ೧೯೨೬ ನೇ ಫೇಬರವರಿ ತಿಂಗಳಿನಲ್ಲಿ ಹೊರಟಿತ್ತು ಅದರಲ್ಲಿ ಈ ವರೆಗೆ ೬೦—೭೦ ಹೊಸ ಗ್ರಂಥಗಳು ಪ್ರಸಿದ್ಧವಾಗಿರುತ್ತವೆ. ಇವುಗಳಲ್ಲಿ ಬಸವೇಶ್ವರ, ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಅಲ್ಲಮಪ್ರಭು, ಶೂನ್ಯ ಸಂಪಾದನೆ, ಹಡಪದಪ್ಪಣ್ಣ, ಮಹಾದೇವಿಯಕ್ಕ, ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯ, ದೇವರ ದಾಸಿಮಯ್ಯ ಇವರೇ ಮೊದಲಾದ ಪ್ರಸಿದ್ಧ ಶಿವಶರಣರ ಮಹತ್ವದ ವಚನ ಗ್ರಂಥಗಳು ಇರುತ್ತವೆ. ಈ ಗ್ರಂಥಗಳಲ್ಲನೇಕವು ವಚನ ಸಂಗ್ರಹ ಗ್ರಂಥಗಳಲ್ಲಿಯ ವಚನಗಳನ್ನು ಆಯ್ದು ಅವುಗಳನ್ನು ಒತ್ತಟ್ಟಿಗೆ ಸೇರಿಸಿ ಸಿದ್ಧಪಡಿಸಿದ ಗ್ರಂಥಗಳಾಗಿವೆ. ಆದ್ದರಿಂದ ಇವು ಸಂಶೋಧನೆಯ ಮೂಲಕ ಉಂಟಾದ ಹೊಸ ಗ್ರಂಥಗಳೇ ಎಂದು ಹೇಳಬಹುದು. ಇವಲ್ಲದೆ ಹರಿಹರನ ರಗಳೆಗಳ ಪರಿಚಯವು ಈ ಮೊದಲಿಗೆ ಯಾರಿಗೂ ಇರಲಿಲ್ಲ. ಈ ಮಹಾಕವಿಯ ೪೦—೪೫ ರಗಳೆಗಳನ್ನು ನಾವು ಈ ಪತ್ರಿಕೆಯ ದ್ವಾರಾ ಪ್ರಕಟಿಸುತ್ತ ಬಂದೆವು. ಈ ಕಾರ್ಯವಲ್ಲದೆ ಸಂಶೋಧನಾತ್ಮಕವಾಗಿ ಬರೆದ ಐತಿಹಾಸಿಕ ಧಾರ್ಮಿಕ ಲೇಖಗಳೂ ಇದರಲ್ಲಿ ಪ್ರಸಿದ್ಧವಾಗುತ್ತ ಬಂದವು. ಹೀಗೆ ಈ ಪತ್ರಿಕೆಯು ವಾಙ್ಮಯ ಸಂಶೋಧನೆಯ ಕಾರ್ಯಗಳನ್ನು ಹೋದ ೨೩ ವರ್ಷಗಳಿಂದಲೂ ಮಾಡುತ್ತ ಬಂದಿದೆ.

ಈ ಪತ್ರಿಕೆಯನ್ನು ನಾವು .ಪ್ರಾರಂಭಿಸುವ ಮೊದಲು ವಚನಶಾಸ್ತ್ರ ಸಾರ ಭಾಗ ೧ ಎಂಬ ಗ್ರಂಥವನ್ನು ೧೯೨೩ ರಲ್ಲಿ ಪ್ರಕಟಿಸಿದೆವು. ಇದರಲ್ಲಿ ಶಿವಶರಣರ ಉದಾತ್ತ ವಿಚಾರಗಳುಳ್ಳ ಅಸಂಖ್ಯ ವಚನಗಳನ್ನು ನಾವು ಪ್ರಸಿದ್ಧಿಸಿದೆವು. ೧೫ ನೇ ೧೬ ನೇ ಶತಮಾನಗಳಲ್ಲಿ ಕೆಲವು ವಚನ ಸಂಗ್ರಹ ಗ್ರಂಥಗಳು ಇದೇ ರೀತಿಯಾಗಿ ಪ್ರಕಟವಾಗಿವೆ. ಆದರೆ ಅವುಗಳಲ್ಲಿ ೩೦-೪೦ ವಚನಕಾರರ ಹೆಸರುಗಳು ಮಾತ್ರ ದೊರೆಯುತ್ತವೆ. ದಿವಂಗತ ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತೆಯಲ್ಲಿ ೫೦—೬೦ ವಚನಕಾರರ



ಹೆಸರುಗಳನ್ನು ಪ್ರಸಿದ್ಧಿಸಿದ್ದಾರೆ. ಆದರೆ ನಾವು ಪ್ರಸಿದ್ಧಿಸಿದ ವಚನಶಾಸ್ತ್ರ ಸಾರ ಭಾಗ ೧ ಈ ಗ್ರಂಥದ ೧೯೨೩ ರ ಮೊದಲನೆಯ ಆವೃತ್ತಿಯಲ್ಲಿ ೨೧೨ ಜನ ವಚನಕಾರರ ಹೆಸರುಗಳು ಮತ್ತು ಅದರ ೨ ನೇ ಆವೃತ್ತಿಯಲ್ಲಿ ೨೩೭ ಜನ ವಚನಕಾರರ ಹೆಸರುಗಳು ಉಲ್ಲೇಖಿಸಲ್ಪಟ್ಟಿವೆ. ಈ ವಚನಕಾರರಲ್ಲಿ ಬಹಳ ಸ್ವಲ್ಪ ಜನರ ಹೆಸರುಗಳ ಪರಿಚಯವು ನಮ್ಮವರಿಗೆ ಮೊದಲು ಇದ್ದಿತು.

ನಾವು ಹೀಗೆ ಪ್ರಕಟಮಾಡಿದ ಬಳಿಕ ವಚನ ಗ್ರಂಥಗಳು ಒಂದು ಕಾಲದಲ್ಲಿ ಒಂದು ಸ್ವತಂತ್ರ ವಾಙ್ಮಯವನ್ನೇ ಉಂಟುಮಾಡಿದವೆಂಬುದು ಕನ್ನಡಿಗರ ಲಕ್ಷದಲ್ಲಿ ಬರತೊಡಗಿತು. ಈ ವಾಙ್ಮಯವು ನೈತಿಕ, ಸಾಮಾಜಿಕ, ತಾತ್ವಿಕ ಎಂದು ಬಹುವಿಧವಾಗಿದೆ. ಪ್ರತಿಯೊಬ್ಬ ವಚನಕಾರನು ಸ್ವತಂತ್ರ ವಿಚಾರವುಳ್ಳವನಿದ್ದು. ಅವನ ಶೈಲಿಯು ಅವನದೇ ಆಗಿರುತ್ತದೆ. ಹಿಂದಿನ ಕಾಲದಲ್ಲಿ ವಚನಕಾರರು ಸಮಾಜದಲ್ಲಿ ಬಹು ವ್ಯಾಪಕವಾದ ಕ್ರಾಂತಿಕಾರಕ ಕಾರ್ಯಗಳನ್ನು ಮಾಡಿದ್ದರ ಪರಿಣಾಮವು ಇದಾಗಿರುತ್ತದೆ.

ಈ ವಚನ ಗ್ರಂಥಗಳಲ್ಲಿ ನಿರೂಪಿತವಾದ ತತ್ವಗಳಿಗೆ 'ಶಿವಾನುಭವ' ಎಂಬ ಸಂಕ್ಷಿಪ್ತ ಹೆಸರಿದೆ. ಬಸವೇಶ್ವರನ ಕಾಲದಲ್ಲಿ ಉಂಟಾಗಿದ್ದ ಶಿವಾನುಭವ ಮಂಟಪದಲ್ಲಿ ನಡೆಯುತ್ತಿದ್ದ ಚರ್ಚೆಗಳ ಪರಿಣಾಮವೇ ಈ ಶಿವಾನುಭವವಾಗಿದೆ. ಈ ಶಿವಾನುಭವವನ್ನು ಕೇಳಲಿಕ್ಕೆ ಮತ್ತು ಅರಿತುಕೊಳ್ಳಲಿಕ್ಕೆ ಹಿಂದುಸ್ತಾನದ ಅನೇಕ ದಿಗ್ಭಾಗಗಳಿಂದ ಮುಖ್ಯವಾಗಿ ಕಾಶ್ಮೀರ, ಆಂಧ್ರ, ದ್ರಾವಿಡ ದೇಶಗಳಿಂದ ವಿದ್ವಜ್ಜನರು ಕಲ್ಯಾಣ ಪಟ್ಟಣಕ್ಕೆ ಆಗಾಗ್ಗೆ ಬರುತ್ತಿದ್ದರೆಂದು ತಿಳಿದು ಬರುತ್ತದ

ಹೀಗೆ ಬಸವೇಶ್ವರನ ಕಾಲದಲ್ಲಿ ಅಥವಾ ಅವನಕಿಂತ ಸ್ವಲ್ಪ ಪೂರ್ವದಲ್ಲಿ ಪ್ರಾರಂಭವಾದ ಈ ಮಹತ್ವದ ವಾಙ್ಮಯವು ಅವನ ತರುವಾಯ ೧೦೦—೧೫೦ ವರ್ಷಗಳ ವರೆಗೆ ನಡೆಯುತ್ತ ಬಂದು, ಮುಂದೆ ೧೪ ನೇ ಶತಮಾನದಲ್ಲಿ ದೇಶದಲ್ಲಿ ಮುಸಲ್ಮಾನರ ದಾಳಿಗಳು ಹೆಚ್ಚಾಗಲು, ಇಲ್ಲಿದ್ದ ಶಿವಾನುಭವಿಗಳು ಬೇರೆ ದೇಶಗಳಿಗೆ ಹೋಗಬೇಕಾಯಿತು. ಆಗ ಈ ವಾಙ್ಮಯದ ಬಹು ಭಾಗವು ನಾಶವಾಯಿತು. ಆದರೂ ವಿಜಯನಗರದ ರಾಜನಾದ ೨ ನೇ ದೇವರಾಜನ ಕಾಲದಲ್ಲಿ ಇದು ಕೆಲವು ಕಾಲ ತಲೆ ಎತ್ತಿತು. ಆಗ ಕೆಲವು ವಚನಗಳು ನಿರ್ಮಿಸಲ್ಪಟ್ಟವು ಮತ್ತು ಹಿಂದಿನ

ವುಗಳು ಸಂಗ್ರಹಿಸಲ್ಪಟ್ಟವು. ಆದರೆ ಈ ಸ್ಥಿತಿಯು ಬಹಳ ದಿವಸ ಉಳಿಯಲಿಲ್ಲ. ಕತ್ತಲೆಯ ಯುಗವು ಪುನಃ ಉಗಮಿಸಿತು. ವಿಚಾರ ಮತ್ತು ಅನುಭವದ ಮೇಲೆ ಉಂಟಾಗುತ್ತ ಬಂದ ವಚನಗಳು ಕಳೆಗುಂದಿದವು. ಅವುಗಳ ಬದಲು ಅಂಧ ಶ್ರದ್ಧೆಯನ್ನು ಹೆಚ್ಚಿಸುವ ಪುರಾಣಗ್ರಂಥಗಳು ಹೆಚ್ಚಾಗಹತ್ತಿದವು. ಹೀಗೆ ಶಿವಾನುಭವ ಶಾಸ್ತ್ರಕ್ಕೆ ಈ ಕಾಲದಲ್ಲಿ ಅವನತ ಸ್ಥಿತಿಯು ಪ್ರಾಪ್ತವಾಯಿತು.

ಈ ಸ್ಥಿತಿಯು ವಿಜಯನಗರ ರಾಜ್ಯವು ಹಾಳಾದ ಬಳಿಕ ೩೦೦-೩೫೦ ವರ್ಷಗಳ ವರೆಗೂ ಹಾಗೆಯೇ ಉಳಿಯಿತು. ಈ ದೀರ್ಘ ಅವಧಿಯಲ್ಲಿ ಶಿವಶರಣರ ವಚನ ವಾಙ್ಮಯದ ಪರಿಚಯವೇ ಸಮಾಜದಲ್ಲಿ ಉಳಿಯಲಿಲ್ಲ. ಈ ಕಾಲದಲ್ಲಿ ಒಂದಾದರೂ ವಚನ ಗ್ರಂಥವು ನಿರ್ಮಾಣವಾದದ್ದು ಕಂಡು ಬರುವದಿಲ್ಲ.

ಹೋದ ಶತಮಾನದ ಮಧ್ಯಕಾಲದಲ್ಲಿ ಕೆಲವು ಬಳ್ಳಾರೀ ಮಹನೀಯರು ೨—೩ ವಚನ ಗ್ರಂಥಗಳನ್ನು ಪ್ರಸಿದ್ಧಿಸಿದ್ದು ಕಂಡು ಬರುತ್ತದೆ. ಆದರೆ ಅವುಗಳಿಗೆ ನಾಡಿನಲ್ಲಿ ಯಾವ ಪ್ರಾಶಸ್ತ್ಯವೂ ಇರಲಿಲ್ಲ. ಆಗಿನ ಕಾಲದಲ್ಲಿ ವೀರಶೈವ ವಾಙ್ಮಯವು ಸಂಸ್ಕೃತ ಭಾಷೆಯಲ್ಲಿರಬಹುದೆಂಬ ತಿಳಿವಳಿಯುಂಟಾಗಿ ಬಹು ಜನ ವಿದ್ಯಾರ್ಥಿಗಳು ಕಾಶಿಯಲ್ಲಿರುವ ಪಾಠಶಾಲೆಗಳಲ್ಲಿ ಅಭ್ಯಾಸ ಮಾಡಲು ಹೋಗಹತ್ತಿದರು. ಅವರು ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಹೊಂದಿದರು. ಆದರೆ ವೀರಶೈವ ಗ್ರಂಥಗಳು ಮತ್ತು ಶಿವಾನುಭವದ ವಿಷಯಗಳು ಈ ಭಾಷೆಯಲ್ಲಿ ಹೆಚ್ಚಾಗಿ ಇರದ್ದರಿಂದ ವಚನ ವಾಙ್ಮಯದ ತತ್ವಗಳು ಜನರಿಗೆ ಗೋಚರವಾಗದೆ ಹೋದವು.

ಆದರೆ ಶಿವಾನುಭವ ಪತ್ರಿಕೆಯು ಸ್ಥಾಪಿತವಾದ ಬಳಿಕ ಅದರ ಮೂಲಕ ಅನೇಕ ವಚನ ಗ್ರಂಥಗಳು ನಾಡಿನಲ್ಲಿ ಕ್ರಮೇಣ ಪ್ರಸಾರವಾಗ ಹತ್ತಿದವು. ಇದರಿಂದ ಮೊದಲಿನ ಸ್ಥಿತಿಯು ಈಗ ಉಳಿದಿರುವದಿಲ್ಲ. ಶಿವಶರಣರ ವಿಚಾರಗಳನ್ನು ತಿಳಿಯಬೇಕೆಂಬ ಉತ್ಕಟ ಆಕಾಂಕ್ಷೆಗಳು ಎಲ್ಲ ಕಡೆಗೂ ಹೆಚ್ಚುತ್ತಲಿವೆ. ಇದು ಕೇವಲ ವೀರಶೈವರಲ್ಲಷ್ಟೇ ಅಲ್ಲ, ಇತರ ಸಮಾಜದವರಲ್ಲಿಯೂ ಕೂಡ ಉಂಟಾಗಿರುತ್ತದೆ. ಅವರಲ್ಲಿ ಕೆಲವರು ವಚನ ವಾಙ್ಮಯದ ಮೇಲೆ ಕೆಲವು ಮಹತ್ವದ ಗ್ರಂಥಗಳನ್ನು ಬರೆದಿದ್ದಾರೆ. ವಚನ



ಗ್ರಂಥಗಳು ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಹೊಂದಹತ್ತಿವೆ. ಹೀಗೆ ಈ ವಾಙ್ಮಯಕ್ಕೆ ಒಂದು ಉಚ್ಚಸ್ಥಾನವು ಈಗ ಪ್ರಾಪ್ತವಾಗಿರುತ್ತದೆ.

ಹೀಗೆ ವಚನ ವಾಙ್ಮಯವು ಪ್ರಾದುರ್ಭಾವವಾದ ಬಳಿಕ ಅನೇಕ ಮಹನೀಯರು ವೀರಶೈವ ಅಥವಾ ಶಿವಶರಣರ ವಿಶಾಲ ತತ್ವಗಳನ್ನು ಕುರಿತು ವಿಸ್ತೃತ ಲೇಖಗಳನ್ನು ಪತ್ರಿಕೆಗಳಲ್ಲಿ ಬರೆಯ ತೊಡಗಿದರು. ಅವುಗಳಲ್ಲಿ ಅನೇಕ ಲೇಖಗಳು ಶಿವಾನುಭವ ಪತ್ರಿಕೆಯಲ್ಲಿ ಪ್ರಸಿದ್ಧವಾಗಿವೆ. ಅವು ಸಂಶೋಧನಾತ್ಮಕವಾಗಿ ಬರೆದವುಗಳಿದ್ದು ಅವು ಸಂಗ್ರಾಹ್ಯವೂ ಆದರಣೀಯವೂ ಆಗಿರುತ್ತವೆ. ಆದರೆ ಅವು ಪ್ರಸಿದ್ಧವಾದ ಸಂಚಿಕೆಗಳು ಈಗ ಉಪಲಬ್ಧವಿರುವದಿಲ್ಲಾದ್ದರಿಂದ ಅವುಗಳಲ್ಲಿಯ ಮಹತ್ವದ ಲೇಖಗಳು ಅವುಗಳ ಕೂಡ ನಾಶವಾಗಿ ಹೋಗಿರುತ್ತವೆ. ಇದು ತತ್ವವಿವೇಚನೆ ಮತ್ತು ಸಂಶೋಧನೆಯ ದೃಷ್ಟಿಯಿಂದ ಹಾನಿಕಾರಕವಾಗಿರುತ್ತದೆ. ಆದ್ದರಿಂದ ಇಂಥ ಲೇಖಗಳನ್ನು ಪತ್ರಿಕಾ ಸಂಪಾದಕರು ಆಯ್ದು ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಸಿದ್ಧಿಸುವದು ಅವರ ಮುಖ್ಯ ಹೊಣೆಯಾಗಿರುತ್ತದೆಂದು ನಮಗೆ ತೋರುತ್ತದೆ. ಆದ್ದರಿಂದ ಶಿವಾನುಭವ ಪತ್ರಿಕೆಯಲ್ಲಿಯ ‘ ಶಿವಾನುಭವ ’ ಈ ವಿಷಯಕ್ಕೆ ಸಂಬಂಧಿಸಿದ ಕೆಲವು ಮಹತ್ವದ ಲೇಖಗಳನ್ನು ನಾವು ಆಯ್ದು ಈ ಗ್ರಂಥದಲ್ಲಿ ಪ್ರಕಟಮಾಡಿರುತ್ತೇವೆ.

ಈ ಗ್ರಂಥದಲ್ಲಿ ಒಟ್ಟು ಏಳು ಲೇಖಗಳಿರುತ್ತವೆ. ಇವುಗಳಲ್ಲಿ ಮೊದಲಿನ ಮೂರು ಲೇಖಗಳು ಶಿವಾನುಭವದ ಸಾಮಾನ್ಯ ಸ್ವರೂಪವನ್ನು ವಿವರಿಸುತ್ತವೆ. ವೀರಶೈವ ಸಮಾಜದಲ್ಲಿ ಗಣ್ಯರಾದ ಮೂವರು ಮಠಾಧೀಶರು-ಶ್ರೀ ಬಂಥನಾಳ ಶಿವಯೋಗಿಗಳು, ಶ್ರೀ ವಿದ್ಯಾವಾಚಸ್ಪತಿ ಶಂಭುಲಿಂಗ ಸ್ವಾಮಿಗಳು ಹಿರಿಯಮಠ ವಿಜಾಪುರ ಮತ್ತು ಶ್ರೀ ಮಹಾದೇವ ಸ್ವಾಮಿಗಳು ಸರ್ಪಭೂಷಣಮಠ ಬೆಂಗಳೂರು, ಇವರು ಬರೆದಿರುತ್ತಾರೆ. ಅವರೆಲ್ಲರೂ ತಮ್ಮ ಲೇಖಗಳಲ್ಲಿ ಶಿವಾನುಭವದ ವಿವೇಚನೆಯನ್ನು ಬೇರೆ ಬೇರೆ ದೃಷ್ಟಿಯಿಂದ ಮಾಡಿದರೂ ಅವು ಪರಸ್ಪರ ಪೂರಕವಾಗಿರುತ್ತವೆ. ಅವುಗಳನ್ನು ಒಟ್ಟಾರೆ ನೋಡಿದಲ್ಲಿ ಶಿವಾನುಭವದ ನಿಜಸ್ವರೂಪವು ವಾಚಕರಿಗೆ ಚನ್ನಾಗಿ ಅರಿಕೆಯಾಗದೆ ಇರದು. ಈ ಮೂರು ಲೇಖಗಳ ತರು

ವಾಯ ಶ್ರೀಯುತ ಕಲ್ಯಾಣಪ್ಪ ಬ್ಯಾಳಿ ಇವರ ಲೇಖ, ಆ ಮೇಲೆ ರಾ|| ಬ||
ಫ. ಗು. ಹಳಕಟ್ಟಿ ಇವರು ಬರೆದ ಮೂರು ಲೇಖಗಳು ಕೊಡಲ್ಪಟ್ಟಿವೆ.
ಈ ಕಡೆಯ ನಾಲ್ಕು ಲೇಖಗಳಲ್ಲಿ ಶಿವಯೋಗವೆಂದರೇನು, ಷಟ್‌ಸ್ಥಲ
ಮಾರ್ಗದ ಸ್ವರೂಪವಾವುದು, ಇವುಗಳ ವಿವೇಚನೆಯು ಬಂದಿರುತ್ತದೆ.
ಇವುಗಳಲ್ಲಿ ಮಾನವೀ ಪ್ರಾಣಿಯಲ್ಲಿರುವ ಶಕ್ತಿಗಳ ಯೋಗ್ಯ ಮತ್ತು
ಪೂರ್ಣ ವಿಕಾಸವು ಹೇಗಾಗುತ್ತದೆಂಬುದು ಹೇಳಲ್ಪಟ್ಟಿವೆ.

### ಶ್ರೀ ಬಂಥನಾಳ ಶಿವಯೋಗಿಗಳು.

ಈ ಮಹಾನುಭಾವರು "ಶಿವಾನುಭವದ ಸತ್ಯ ಮಾರ್ಗ" ಎಂಬ ಶಿರೋ
ಲೇಖನ ಕೆಳಗೆ ಶಿವಾನುಭವ ಪತ್ರಿಕೆಯ ತಾ|| ನೇ ಸಂಚಿಕೆಯಲ್ಲಿ ತಮ್ಮ
ಈ ಲೇಖವನ್ನು ಪ್ರಸಿದ್ಧಿಸಿದ್ದಾರೆ. ಬಂಥನಾಳ ಗ್ರಾಮವು ಇಂಡೀ ತಾಲೂ
ಕಿನಲ್ಲಿ ಒಂದು ಪುಣ್ಯಕ್ಷೇತ್ರವಾಗಿದೆ. ಹಿಂದಿನ ಕಾಲವಲ್ಲಿ ಈ ಕ್ಷೇತ್ರದಲ್ಲಿ
ಒಬ್ಬ ಮಹಾಯೋಗಿಗಳು ಆಗಿಹೋಗಿದ್ದು ಅವರ ಸೀಠವಲ್ಲಿಯೇ ಈಗಿನ
ಶಿವಯೋಗಿಗಳು ಅಧಿಕಾರಾರೂಢರಾಗಿದ್ದಾರೆ. ಈಗಿನ ಸ್ವಾಮಿಗಳು ಹಿಂದಿ
ನವರಂತೆಯೇ ಪ್ರಭಾವಶಾಲಿಗಳಾಗಿ ಈ ಭಾಗದಲ್ಲೆಲ್ಲ ಬಹಳ ಹೆಸರು
ವಾಸಿಗಳಾಗಿದ್ದಾರೆ. ಪ್ರತಿ ಅಮಾವಾಸ್ಯೆಗೆ ಅಸಂಖ್ಯ ಜನರು ಈ ಕ್ಷೇತ್ರಕ್ಕೆ
ಬಂದು ಶ್ರೀ ಸ್ವಾಮಿಗಳವರ ದರ್ಶನಲಾಭವನ್ನು ಹೊಂದಿ ಹೋಗುತ್ತಾರೆ.
ಆಗ ಅಗ್ನಿಯನ್ನು ಹಾಯುವ ಕಾರ್ಯವೂ ನಡಿಯುತ್ತದೆ. ಶ್ರೀ ಸ್ವಾಮಿಗ
ಳವರು ವಿಜಾಪುರ ವೀರಶೈವ ವಿದ್ಯಾವರ್ಧಕ ಸಂಸ್ಥೆಯ ಅಧ್ಯಕ್ಷರಾಗಿದ್ದು
ಈ ಸಂಸ್ಥೆಯ ಚಟುವಟಿಕೆಗಳಲ್ಲಿ ಅದಕ್ಕೆ ಯಾವಾಗಲೂ ಸಹಾಯ
ಮಾಡುತ್ತ ಬಂದಿದ್ದಾರೆ. ಆಲಮಟ್ಟಿ ವೀರಶೈವ ವಿದ್ಯಾಲಯವು ಇವರ
ಸಹಾಯದಿಂದಲೇ ಪ್ರಾರಂಭವಾದದ್ದೂ ಬೆಳೆದದ್ದೂ ಇರುತ್ತದೆ. ಶ್ರೀ
ಸ್ವಾಮಿಗಳವರು ವಿದ್ವಾಂಸರೂ ಉತ್ತಮ ತರಗತಿಯ ಭಾಷಣಕಾರರೂ
ಪುರಾಣ ಪ್ರವಚನ ಹೇಳುವಲ್ಲಿ ಬಲ್ಲಿದರೂ ಆಗಿದ್ದಾರೆ. ಇವರ ವಿಷಯ
ವಾಗಿ ವಿಜಾಪುರ ಜಿಲ್ಲೆಯಲ್ಲೆಲ್ಲ ಪೂಜ್ಯ ಭಾವವು ಎಲ್ಲ ಜನರಲ್ಲಿ ತುಂಬಾ
ವಾಸವಾಗಿರುತ್ತದೆ. ವಿಜಾಪುರ ವಿಜಯ ಕಾಲೇಜದ ಸಂಸ್ಥಾಪಕರು ಇವ
ರಾಗಿದ್ದು ಅದಕ್ಕೋಸ್ಕರ ಒಂದು ದೊಡ್ಡ ನಿಧಿಯು ಶೇಖರವಾಗಿದ್ದು ಇದು
ಅವರ ಸತತ ಪ್ರಯತ್ನಗಳ ಫಲವಾಗಿದೆ. ಇವರು ಶಿವಯೋಗಾಭ್ಯಾಸದಲ್ಲಿ
ನಿರತರೂ ಅದರಲ್ಲಿ ವಿಶೇಷ ಅನುಭವವನ್ನು ಹೊಂದಿದವರೂ ಆಗಿದ್ದಾರೆ.



ಶ್ರೀ ಸ್ವಾಮಿಗಳವರು 'ವೀರಶೈವ ಶಿವಾನುಭವ' ( Mysticism )
ಈ ವಿಷಯವನ್ನು ಕುರಿತು ಬಹು ಚೆನ್ನಾಗಿ ತಮ್ಮ ಈ ಲೇಖದಲ್ಲಿ ವಿವ
ರಿಸಿದ್ದಾರೆ. ಶಿವಾನುಭವಕ್ಕೆ ಕೇವಲ ಬಾಹ್ಯಾಚಾರಗಳೇ ಸಾಕಾಗದೆ ಈ ಆಚಾ
ರಗಳ ಜೊತೆಗೆ ಅಂತರಂಗದ ಶುದ್ಧತೆಯೂ ಅಗತ್ಯವಿರುವದೆಂದು ಅವರು
ಇಲ್ಲಿ ಹೇಳಿದ್ದಾರೆ. ಶಿವಶರಣರು ಅಂತರಂಗದಲ್ಲಿ ಪರಿಶುದ್ಧರೂ ಭಾವನಾ
ಪ್ರಾಧಾನ್ಯರೂ ಆಗಿದ್ದರಿಂದಲೇ ಚಿದ್ಘನಮೂರ್ತಿಯು ಅವರ ಶುದ್ಧ ಹೃದ
ಯದಲ್ಲಿ ವಿರಾಜಿಸುತ್ತಾನೆ. ಆದರೆ ಮನುಷ್ಯನು ಇಂದ್ರಿಯ ಜಾಲದಲ್ಲಿ
ಸಿಕ್ಕಿಬೀಳುವದರಿಂದ ಅವನಿಗೆ ನಿಜವಾದ ಸುಖವು ಲಭಿಸದೆಂದು ಅವರ
ಅಭಿಪ್ರಾಯವಾಗಿದೆ. ಅವರು ಮುಂದೆ ಅನ್ನುವದೇನಂದರೆ:- " ನಾವು
ಹೊಟ್ಟೆಯ ಗುಲಾಮರು, ಉಡುಪುತೊಡಪುಗಳ ಗುಲಾಮರು, ನಾವು
ನಮ್ಮ ದೇಶದ ಹಾಗೂ ದೇಶಾಭಿಮಾನದ ಗುಲಾಮರು, ಮತ್ತು ಕೀರ್ತಿಯ
ದೊಡ್ಡ ಗುಲಾಮರು. ಈ ಪ್ರಕಾರವಾದ ಅನೇಕ ಗುಲಾಮಗಿರಿಗಳಿಂದ
ನಮ್ಮ ಈಶ್ವರತ್ವವು ಮುಚ್ಚಿಹೋಗಿರುವದೆಂದು " ಹೇಳಿದ್ದಾರೆ. ಅವರು
ಹೀಗೆ ಹೇಳಿದ್ದು ನಿಜವಿದೆ. ಹೀಗೆ ಶ್ರೀ ಸ್ವಾಮಿಗಳು ಅಭಿಪ್ರಾಯಪಡುತ್ತ
ಮುಂದೆ ಹೇಳುವದೇನಂದರೆ:— " ನಾವು ಇಂದ್ರಿಯ ಜನ್ಯ ಸುಖದುಃಖ
ಗಳಾಚೆಗೆ ಹೋಗಲು ಅವಿಶ್ರಾಂತ ಪ್ರಯತ್ನವನ್ನು ಮಾಡತಕ್ಕದ್ದು.
ಇದಕ್ಕೇನೇ ಶಿವಾನುಭವ ಅಥವಾ ಶಿವಯೋಗಾನುಸಂಧಾನವೆನ್ನುವರು. "
ಎಂದು ಅವರು ಶಿವಾನುಭವದ ವ್ಯಾಖ್ಯೆಯನ್ನು ಮಾಡಿದ್ದಾರೆ. ಇದು
ಮಿಸ್ಟಿಸಿಜಮದ ಯೋಗ್ಯ ವ್ಯಾಖ್ಯೆ ಇದೆ. ಈ ವಿಷಯವಾಗಿ ಅವರು ಈಗಿನ
ಸ್ಥಿತಿಯನ್ನು ಟೀಕಿಸುತ್ತ ಅನ್ನುವದೇನಂದರೆ:- ನಾವು ಕೇವಲ ಬುದ್ಧಿಯ
ಬೆನ್ನು ಹತ್ತಿ ಹೋಗಬಾರದು. ನಮ್ಮ " ಶಿಕ್ಷಣದ ಈಗಿನ ಧೋರಣಗಳನ್ನು
ನೋಡಿದರೆ ಕೇವಲ ಬುದ್ಧಿಯನ್ನು ಪ್ರಜ್ವಲಿತ ಮಾಡುವದರ ಕಡೆಗೆ ಅದು
ಇದೆಯೇ ಹೊರ್ತು ಅಂತಃಕರಣದ ಸಾತ್ವಿಕವೃತ್ತಿಯನ್ನು ಜಾಗ್ರತ ಮಾಡು
ವದರ ಕಡೆಗೆ ಇರುವದಿಲ್ಲ. " ಆದರೆ " ಬುದ್ಧಿಯ ಕೆಲಸವು ಕೇವಲ
ಕಾರ್ಯದ ನಿಶ್ಚಯವನ್ನು ಮಾಡುವದಾಗಿದೆ. ಅಂತಃಕರಣದ ಕೆಲಸವಾ
ದರೋ ಬುದ್ಧಿಯ ಆಚೇಕಡೆಗೆ ಹೋಗಿ ಪರಮೇಶ್ವರನ ದರ್ಶನ ಹೊಂದುವ
ದಿರುತ್ತದೆ. ಇಲ್ಲಿಯವರೆಗೆ ಆಗಿ ಹೋದ ಸಾಧು ಸಂತ ಶರಣರನ್ನು ನೋಡಿ
ದರೆ ಅವರಲ್ಲಿ ಬುದ್ಧಿ ತೇಜಸ್ಸಿಗಿಂತಲೂ ಅಂತಃಕರಣದ ತೇಜಸ್ಸುಳ್ಳವರೇ
ಅಧಿಕರಾಗಿದ್ದಾರೆಂದು ಸ್ಪಷ್ಟ ಕಂಡುಬರುತ್ತದೆ. " ಎಂದು ಸ್ವಾಮಿಗಳು

ಶಿವಶರಣರ ಉದಾಹರಣೆಯನ್ನು ಉದಹರಿಸಿದ್ದಾರೆ. ಅವರು ಬೋಧಿಸುವದೇನಂದರೆ:- ಯಾವ ವಿಚಾರವು ಅಂತಃಕರಣಕ್ಕೆ ಸರಿಹೋಗುವದೋ ಅದನ್ನು ಯಾರ ಅಂಜಿಕೆ. ಇಲ್ಲದೆಯೂ ಮನುಷ್ಯನು ಮಾಡುತ್ತ ಹೋಗಬೇಕು. ಒಂದು ಸತ್ಕಾರ್ಯ ಮಾಡಬೇಕೆಂದು ಅಂತಃಕರಣ ಪೂರ್ವಕವಾಗಿ ಇಚ್ಛೆಯಾದರೆ ಬುದ್ಧಿಯು ಒಂದುವೇಳೆ ಅಡ್ಡ ಬರಬಹುದು. ಹೀಗೆ ಮಾಡೋಣದರದಿಂದ ಇವರು ಸಿಟ್ಟಿಗೆ ಬರುತ್ತಾರೆ, ಅವರು ಮುನಿಸುಗೊಳ್ಳುತ್ತಾರೆ, ಮತ್ತೊಬ್ಬರಿಗೆ ಬೇಸರವಾಗುತ್ತದೆ, ಈ ಮೊದಲಾದ ವಿಚಾರಗಳನ್ನು ಬುದ್ಧಿಯು ನಮಗೆ ಹೇಳಲಿಕ್ಕೆ ಹತ್ತುತ್ತದೆ. ಇಂಥ ಪ್ರಸಂಗದಲ್ಲಿ ನಾವು ನಮ್ಮ ಕಿವಿಗಳನ್ನು ಕಿವುಡುಮಾಡಲಿಕ್ಕೇಬೇಕು. ಅಂತಃಕರಣದರ್ಶಿತವಾದ ಮಾರ್ಗದಿಂದ ಹೋದದ್ದಾದರೆ ನಮ್ಮ ಕೈಯಿಂದ ತಪ್ಪುಗಳು ಬಹಳ ಕಡಿಮೆಯಾಗುತ್ತವೆ." ಎಂದು ಹೇಳುತ್ತಾರೆ. ಶ್ರೀಸ್ವಾಮಿಗಳವರು ಕಡೆಗೆ ಹೇಳುವದೇನಂದರೆ:- ಶಿವಾನುಭವವು ಇಂದ್ರಿಯಗಳ ಆಚೆ ಕಡೆಗಿದೆ. ಮೇಲೆ ಹೇಳಿದ ದೃಷ್ಟಿಯಿಂದ ನಡೆದದ್ದಾದರೆ ಈ ಪಾಶವು ಸಾವಕಾಶವಾಗಿ ಬಿಚ್ಚಲು ಪ್ರಾರಂಭವಾಗಿ ಕಡೆಗೆ ಕಳಚಿ ಬೀಳುವದು. ಆಗ ಅಂಗದ ಪ್ರತಿಯೊಂದು ಅವಯವವನ್ನೂ ಬಾಹ್ಯಾಂತರ ಇಂದ್ರಿಯಗಳನ್ನೂ ಲಿಂಗರೂಪದಲ್ಲಿಯೇ ಕಂಡು ತಾನು ಲಿಂಗರೂಪನಾಗಿ ಲಿಂಗ ಭೋಗೋಪಭೋಗಿಯಾಗಿ ಕಡೆಗೆ ಆ ಪರತರ ಪರಂಜ್ಯೋತಿ ಸ್ವರೂಪನಾದ ನಿರಂಜನ ಮಹಾ ಪ್ರಭುವಾಗುವದೇ ಶಿವಾನುಭವವೆಂದು" ಶ್ರೀ ಸ್ವಾಮಿಗಳು ಅಭಿಪ್ರಾಯ ಪಟ್ಟಿರುತ್ತಾರೆ. "ಲಿಂಗಸಹಿತ ನಡೆ, ಲಿಂಗಸಹಿತ ನುಡಿ, ಲಿಂಗಸಹಿತ ಸರ್ವೇಂದ್ರಿಯ ಸುಖವು. ಲಿಂಗಾಲಿಂಗಿತವಾಗಿಹ ಇಂಥಾ ಲಿಂಗಾಂಗಿಯೇ ಸಹಜ" ಎಂಬ ಉಕ್ತಿಯನ್ನು ಅವರು ಉದಹರಿಸುತ್ತ ಶಿವಾನುಭವದ ನಿಜಾಚರಣೆಯನ್ನೂ ಅದರ ನಿಜ ಸ್ವರೂಪವನ್ನೂ ಅವರು ಈ ಲೇಖದಲ್ಲಿ ಹೃದಯಂಗಮವಾಗಿ ನಿರೂಪಿಸಿದ್ದಾರೆ.

## ವಿದ್ಯಾವಾಚಸ್ಪತಿ ಶಂಭುಲಿಂಗಸ್ವಾಮಿಗಳು
## ಹಿರಿಯಮಠ ವಿಜಾಪೂರ

ಈ ಮಹಾನುಭಾವರು ಮೊದಲು ಧಾರವಾಡ ಜಿಲ್ಲೆಯಲ್ಲಿದ್ದು ಮುಂದೆ ವಿಜಾಪುರ ಪಟ್ಟಣದಲ್ಲಿ ಇರಹತ್ತಿದರು.. ಇವರು ಸಂಸ್ಕೃತ ಮತ್ತು ಕನ್ನಡ ಭಾಷೆಗಳನ್ನು ಚನ್ನಾಗಿ ಬಲ್ಲವರು. ವೇದಗಳು ಭಾಷ್ಯಗಳು



ಉಪನಿಷದ್ಗ್ರಂಥಗಳನ್ನು ಬಹು ಆಳವಾಗಿ ಅಭ್ಯಾಸಮಾಡಿದ್ದಾರೆ. ಷಟ್ ಶಾಸ್ತ್ರಗಳನ್ನೂ ಕೂಡ ಚನ್ನಾಗಿ ಬಲ್ಲವರು. ಪುಣೆ ಭಂಡಾರಕರ ಇನಸ್ಟಿಟ್ಯೂಟನಲ್ಲಿ ಸಂಶೋಧನ ಕಾರ್ಯಗಳು ಹೇಗೆ ನಡಿಯುತ್ತವೆಂಬುದನ್ನು ಇವರು ಅಲ್ಲಿ ಕೆಲವು ದಿವಸ ಇದ್ದು ತಿಳಿದುಕೊಂಡಿದ್ದಾರೆ. ಶಿವಾಗಮಗಳನ್ನು ಚನ್ನಾಗಿ ಪರಿಶೀಲನೆ ಮಾಡಿದ್ದಾರೆ. ಅವರು ಎಂದೂ ವ್ಯರ್ಥ ವೇಳೆಗಳೆಯರು. ಯಾವಾಗಲೂ ಅಭ್ಯಾಸದಲ್ಲಿಯೇ ಇರುತ್ತಾರೆ. ಇವರ ಸಂಸ್ಕೃತ ಪುಸ್ತಕಾಲಯವು ಬಹು ದೊಡ್ಡದಿದೆ. ಈಚೆಗೆ ಅವರು ಶಿವಶರಣರ ವಾಙ್ಮಯವನ್ನು ಸಹ ಚನ್ನಾಗಿ ಅಭ್ಯಾಸಮಾಡಿ ಅದಕ್ಕೋಸ್ಕರ ಆದರ ವಹಿಸಿದ್ದಾರೆ. ಶಿವಾನುಭವಪತ್ರಿಕೆಗೋಸ್ಕರ ಅವರು ಯಾವಾಗಲೂ ಆದರ ಭಾವವುಳ್ಳವರು. ಅವರು ಉತ್ತಮ ವಾಗ್ಮಿಗಳಾಗಿದ್ದಾರೆ. ಅವರು ಸಭೆಗಳಲ್ಲಿ ಅತ್ಯುತ್ತಮ ರೀತಿಯಿಂದ ಭಾಷಣಮಾಡಬಲ್ಲರು. ಅವರು ಪುರಾಣ ಹೇಳುವಲ್ಲಿ ಅತ್ಯಂತ ಸಮರ್ಥರು. ಅವರು ಸಾವಿರಾರು ಜನರ ಮನಸ್ಸನ್ನು ಆಕರ್ಷಿಸುವ ರೀತಿಯಿಂದ ಮನೋವೇಧಕವಾಗಿ ಪುರಾಣಗಳನ್ನು ಹೇಳಬಲ್ಲರು. ಪುರಾಣವನ್ನು ಹೇಳಲು ತಮಗೆ ಸಹಾಯವಾಗಬೇಕೆಂದು ಅವರು ಸಂಗೀತ ಶಾಸ್ತ್ರವನ್ನು ಪದ್ಧತಿಗನುಸರಿಸಿ ಕಲಿತಿದ್ದಾರೆ. ಅವರ ಈ ಯೋಗ್ಯತೆಯನ್ನು ಕಂಡು ವಿಜಾಪುರಸ್ಥರು ಇಲ್ಲಿಯ ಹಿರಿಯ ಮಠಕ್ಕೆ ಅವರನ್ನು ಪಟ್ಟಾಧಿಕಾರಿಗಳನ್ನಾಗಿ ಮಾಡಿದರು. ಮುಂದೆ ಅವರು ಕೆಲವು ಕಾಲ ಧರ್ಮ ಬೋಧೆ ಮಾಡುತ್ತ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿದರು. ಆಗ ಅವರ ವಿದ್ವತ್ತೆಯನ್ನು ನೋಡಿ ಜನರು ಮೆಚ್ಚಿ ಅವರಿಗೆ "ವಿದ್ಯಾವಾಚಸ್ಪತಿ" ಎಂಬ ಬಿರುದನ್ನು ಬಳ್ಳಾರಿಯಲ್ಲಿ ಕೊಟ್ಟು ಮನ್ನಿಸಿದರು. ಇದಲ್ಲದೆ ಶ್ರೀ ಸ್ವಾಮಿಗಳವರು ಅನೇಕ ಮಹತ್ವದ ಗ್ರಂಥಗಳನ್ನು ಬರೆದಿದ್ದಾರೆ. ಮಹಿಮ್ನ ಸ್ತೋತ್ರಕ್ಕೆ ಟೀಕೆ, ಅಷ್ಟಾವರಣಪರಿಚಯ, ವೇದಾಂತಸಾರ, ತತ್ವಜ್ಞಾನ, ಎಂಬಿವೇ ಅನೇಕ ಮಹತ್ವದ ಗ್ರಂಥಗಳನ್ನು ಬರೆದಿದ್ದಾರೆ. ಹೀಗಿರುವಲ್ಲಿ ಅವರು ಇನ್ನು ಮುಂದೆ ತಾವು ಕೇವಲ ಅಧ್ಯಾತ್ಮ ಚಿಂತನದಲ್ಲಿದ್ದುಕೊಂಡು ಆತ್ಮಶಕ್ತಿಯನ್ನು ಬೆಳಿಸಬೇಕೆಂಬ ಆಕಾಂಕ್ಷೆಯು ಅವರಲ್ಲಿ ಉಂಟಾಯಿತು. ಆಗ ಅವರು ಜನರ ಸಹವಾಸವನ್ನು ಬಿಟ್ಟುಕೊಟ್ಟು, ಜಮಖಂಡಿಯಿಂದ ೫-೬ ಮೈಲುಗಳ ಮೇಲಿರುವ ಒಂದು ಕಾಡಿನಲ್ಲಿ ಯಾರೂ ಇಲ್ಲದಂಥ ಪ್ರದೇಶವನ್ನು ಆಯ್ದು, ಅಲ್ಲಿ ಮೌನವ್ರತದಲ್ಲಿ ಇರತೊಡಗಿದ್ದಾರೆ. ಈಗಲೂ ಅವರು ಅಲ್ಲಿಯೇ ಇದ್ದಾರೆ. ಕೇವಲ

ದುಗ್ಧಾಹಾರಿಗಳಾಗಿದ್ದಾರೆ. ಅವರು ಯಾರನ್ನೂ ಇಲ್ಲಿ ಕಾಣುವದಿಲ್ಲ. ಸುತ್ತಲಿನ ಭಕ್ತಾದಿಗಳು ಅವರಿಗೆ ಯೋಗ್ಯವಾದ ವಾಸಸ್ಥಳವನ್ನು ಕಲ್ಪಿಸಿ ಕೊಟ್ಟಿದ್ದಾರೆ. ಅವರು ಮೌನವ್ರತವನ್ನು ಪ್ರಾರಂಭಿಸುವ ಮೊದಲು ಬಹುಜನರು ಅವರನ್ನು ಆಗಿಂದಾಗ್ಗೆ ಕಂಡು ಅವರ ಅಧ್ಯಾತ್ಮಜ್ಞಾನ ಬೋಧೆಯನ್ನು ಕೇಳಿ ಆನಂದಿಸಿ ಹೋಗುತ್ತಿದ್ದರು. ಹೀಗೆ ಶ್ರೀ ಸ್ವಾಮಿಗಳವರು ಆಚರಿಸುತ್ತ ಬಂದಿದ್ದಾರೆ.

ಶ್ರೀ ಸ್ವಾಮಿಗಳವರು ಶಿವಾನುಭವವೆಂದರೇನೆಂಬುದನ್ನು ತಮ್ಮ ಲೇಖದಲ್ಲಿ ಹೇಳಿರುತ್ತಾರೆ. ಅದು ಹೇಗೆಂದರೆ:- "ಶಿವನೇ ಪರವಸ್ತುವು. ತದ್ವ್ಯತಿರಿಕ್ತವಾದುದೆಲ್ಲವೂ ಅಶಿವಾತ್ಮಕವಾದುದು. ಅಂದರೆ ಶಿವನು ಅಚ್ಚ ಸುಖದ ನಿಧಿಯು. ಆನಂದರೂಪನಾದ ಸಾಕ್ಷಾತ್ಕಾರ ಅಂದರೆ ಅನುಭವವು, ಇಂತಪ್ಪ ಶಿವನ ಅನುಭವ (ಶಿವಾನುಭವ) ದಿಂದಲೇ ನೀವು ನಿಜವಾದ ಸುಖವನ್ನು ಹೊಂದಿ ನಿತ್ಯ ಶಾಂತರೆನಿಸುವಿರಿ" ಎಂದು ಸ್ವಲ್ಪದರಲ್ಲಿ ಇದರ ಮರ್ಮವನ್ನು ತಿಳಿಸಿಹೇಳಿದ್ದಾರೆ. ಬಾಹ್ಯ ವಿಷಯಗಳ ಹಂಬಲವನ್ನು ಬಿಟ್ಟರೆ ಶಿವಾನುಭವವು ಸಾಧ್ಯವೆಂದು ಶ್ರೀ ಸ್ವಾಮಿಗಳವರು ಈ ಲೇಖದಲ್ಲಿ ಒತ್ತಿಹೇಳಿದ್ದಾರೆ. ಶ್ರೀ ಬಂಥನಾಳ ಶಿವಯೋಗಿಗಳು ತಮ್ಮ ಲೇಖದಲ್ಲಿ ಶಿವಾನುಭವದ ನಿಜಸ್ವರೂಪವನ್ನು ವಿಸ್ತಾರವಾಗಿ ಹೇಳಿದ್ದು ಶ್ರೀ ಶಂಭುಲಿಂಗ ಸ್ವಾಮಿಗಳು ತಮ್ಮ ಈ ಲೇಖದಲ್ಲಿ ವಿಷಯಗಳನ್ನು ಅಳಿದಲ್ಲಿ ಇದು ಶಕ್ಯವೆಂದು ನಿರೂಪಿಸಿದ್ದಾರೆ. ಅವರು ಅನ್ನುವದೇನಂದರೆ:- "ವಿಷಯವ್ಯಾಮೋಹವಿಲ್ಲದಾತನೇ ಅಚ್ಚ ಸುಖಿಯು. ಇದಕ್ಕೆ ವಿಪರೀತವಾಗಿ ಹೊಟ್ಟೆತುಂಬ ಕೂಳನುಂಡು ಕಣ್ಣತುಂಬ ನಿದ್ದೆಮಾಡಿ ಕಾಲ ಕಳೆಯುವದೇ ಅಚ್ಚಸುಖವೆಂಬುದಾಗಿ ಬಡಬಡಿಸುವ ಹುಚ್ಚ ಮನುಜರೀಗ ಹೆಚ್ಚಾಗುತ್ತಲಿದ್ದಾರೆ. ಮನವೆಳಿಸಿದ ವಿಷಯಗಳನ್ನು ಮನವಾರೆ ಭೋಗಿಸಲು ಅನುಕೂಲಗಳಾದ ಸಾಧನಸಾಮುಗ್ರಿಗಳು ಎಲ್ಲಿ ನೋಡಿದಡಲ್ಲಿ ಹೇಗೆ ಬೇಕೋ ಹಾಗೆ ದೊರೆಯುತ್ತಿರುವ ಈಗಿನ ಕಾಲನೇ ಸುಧಾರಿಸಿದ ಕಾಲನಂತೆ! ಹಿಂದಿನ ಕಾಲನ ಹಿಂದುಗಳ ಮಿದುಡು ಮದಡವಾಗಿದ್ದಿತಂತೆ!! ಅಯ್ಯೋ ಅಜ್ಞಾನವೇ"!!! ಎಂದು ಶ್ರೀ ಸ್ವಾಮಿಗಳವರು ಈಗಿನವರು ಸುಖಬಡುವ ರೀತಿಯನ್ನು ಹೀಯಾಳಿಸಿದ್ದಾರೆ. ಈ ಪ್ರಕಾರ ಶಿವಾನುಭವದ ಆನಂದವನ್ನು ಹೊಂದುವ ಬಗೆಯನ್ನು ಶ್ರೀ ಸ್ವಾಮಿಗಳು ಜನರಿಗೆ ಈ ಲೇಖದಲ್ಲಿ ತಿಳಿಸಿಕೊಟ್ಟಿರುತ್ತಾರೆ.



## ಶ್ರೀ ಮಹಾದೇವ ಸ್ವಾಮಿಗಳು ಸರ್ಪಭೂಷಣ ಮಠ ಬೆಂಗಳೂರು

ಈ ಮಹಾನುಭಾವರ ಪೂರ್ವದ ಗ್ರಾಮವು ವಿಜಾಪುರ ತಾಲೂಕಿನಲ್ಲಿರುವ ಮಮದಾಪುರವು. ಮುಂದೆ ಅವರು ಹೆಚ್ಚಿನ ತರದ ಧಾರ್ಮಿಕ ಶಿಕ್ಷಣವನ್ನು ಹೊಂದಲು ಅಪೇಕ್ಷಿಸಿ ಕಾಶೀ ಪಟ್ಟಣಕ್ಕೆ ಹೋದರು. ಅಲ್ಲಿ ಅವರು ಸಂಸ್ಕೃತಾಧ್ಯಯನವನ್ನು ಚನ್ನಾಗಿ ಮಾಡಿ ಅದರಲ್ಲಿಯ ಉಚ್ಚ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಧಾರವಾಡದಲ್ಲಿ ಶ್ರೀ ಮೃತ್ಯುಂಜಯ ಸ್ವಾಮಿಗಳವರು ನಡಿಸಿದ್ದ ಶಿವಾನುಭವ ಕಾಲೇಜಿನಲ್ಲಿ ಸೇರ್ಪಡೆಹೊಂದಿದರು. ಅಲ್ಲಿ ಅವರು ವಚನ ವಾಙ್ಮಯದ ಪರಿಶೀಲನೆಯನ್ನು ಆಳವಾಗಿ ಮಾಡುವದರಲ್ಲಿ ಬಹಳ ಶ್ರಮವನ್ನು ವಹಿಸಿದರು. ತರುವಾಯ ಅವರು ಬೆಂಗಳೂರಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ಸರ್ಪಭೂಷಣಮಠಕ್ಕೆ ಅಧಿಕಾರಿಗಳಾದರು. ಸರ್ಪಭೂಷಣ ಸ್ವಾಮಿಗಳು ಕರ್ನಾಟಕದಲ್ಲಿ ಹೆಸರಾದ ಜ್ಞಾನಿಗಳು ಮತ್ತು ಸಾಧುಗಳು. ಅವರು ರಚಿಸಿದ ಪದ್ಯಗಳು ಈಗಲೂ ನಾಡಿನಲ್ಲಿ ಬಹಳ ಪ್ರಸಿದ್ಧಿಯನ್ನು ಹೊಂದಿರುತ್ತವೆ. ಇಂಥ ಮಹತ್ವದ ಮಠಕ್ಕೆ ಇವರು ಅಧಿಪತಿಗಳಾದ ಬಳಿಕ ಅವರು ಧರ್ಮಜಾಗ್ರತೆಯ ಕಾರ್ಯಗಳನ್ನು ಬಹುಬಲವಾಗಿ ಸಾಗಿಸಿದರು. ಅವರು ಶಿವಶರಣರ ವಿಚಾರಗಳು ಮತ್ತು ಅವರ ವಾಙ್ಮಯ ಇವುಗಳಿಗೋಸ್ಕರ ಅತ್ಯಂತ ಪೂಜ್ಯಭಾವವನ್ನು ತಾಳಿ ಅವುಗಳ ಪ್ರಚಾರ ಕಾರ್ಯದಲ್ಲಿ ಯಾವಾಗಲೂ ತೊಡಗಿರುತ್ತಾರೆ. ಮೈಸೂರದೇಶದಲ್ಲಿ ಆಗುತ್ತಿದ್ದ ಸಾರ್ವಜನಿಕ ಸಭೆಗಳಿಗೆ ಇವರು ಯಾವಾಗಲೂ ನಿಮಂತ್ರಿಸಲ್ಪಡುತ್ತಾರೆ. ಆಗ ಅವರ ಗಂಭೀರವಾದ ಮತ್ತು ಉಚ್ಚ ವಿಚಾರಗಳಿಂದ ತುಂಬಿದ ಭಾಷಣಗಳು ಬಹಳ ಜನಪ್ರಿಯವಾಗುತ್ತವೆ. ಅವರ ಪ್ರಚಾರ ಕಾರ್ಯಗಳ ಫಲವಾಗಿಯೇ ಮೈಸೂರಪ್ರಾಂತದಲ್ಲಿ ಶಿವಶರಣರ ವಾಙ್ಮಯದ ವಿಷಯವಾಗಿ ಜನರಲ್ಲಿ ಆದರವು ಬೆಳೆದಿರುತ್ತದೆ. ಶ್ರೀ ಸ್ವಾಮಿಗಳು ಪ್ರತಿದಿವಸ ಮಠದಲ್ಲಿ ಪ್ರವಚನವನ್ನು ನಡಿಸುವದುಂಟು. ಅವರಿಗೆ ಶಿವಶರಣರ ತತ್ವಗಳನ್ನು ವಿವರಿಸಿ ಹೇಳುವದೇ ನಿತ್ಯ ಕ್ರಮವಾಗಿರುತ್ತದೆ. ಸಂಸ್ಕೃತವನ್ನು ಕಲಿತು ಶ್ರಮಪಡುವದಕ್ಕಿಂತಲೂ ವಚನ ವಾಙ್ಮಯವನ್ನು ನಮ್ಮ ಶಾಸ್ತ್ರಿಗಳು ಅಭ್ಯಾಸಮಾಡಬೇಕೆಂದು ಸ್ಪಷ್ಟವಾಗಿ ಹೇಳುವದುಂಟು.

ಶ್ರೀ ಬಂಥನಾಳ ಶಿವಯೋಗಿಗಳು ಶಿವಾನುಭವದ ಉಚ್ಚ ಧ್ಯೇಯ
ವನ್ನು ವಿವರಿಸಿದ್ದರೆ ಶ್ರೀ ಶಂಭುಲಿಂಗ ಸ್ವಾಮಿಗಳು ವಿಷಯವಾಸನೆ
ಯನ್ನು ಆಳಿದಲ್ಲಿ ಇದು ಸಾಧ್ಯವೆಂದು ಹೇಳಿಪ್ಪಾರೆ. ಆದರೆ ವಿಷಯ
ವಾಸನೆಯನ್ನು ಅಳಿಯುವದರ ಅರ್ಥವೇನೆಂಬುದನ್ನು ಶ್ರೀ ಮಹಾದೇವ
ಸ್ವಾಮಿಗಳು ತಮ್ಮ ಲೇಖದಲ್ಲಿ ಬಹು ವಿಸ್ತೃತವಾಗಿ ವಿಶದಪಡಿಸಿರುತ್ತಾರೆ.
ಮನುಷ್ಯನು ವಿಷಯಗಳನ್ನು ದೂರಮಾಡುವದೆಂದರೆ ಶರೀರವನ್ನು ಕ್ಷಯಿ
ಸುವದಿರದೆ ಅದರ ಸದುಪಯೋಗ ಮಾಡುವದಿರುತ್ತದೆಂದು ಶಿವಶರಣರ
ಅಭಿಪ್ರಾಯವಿದೆ. ಈ ಅಭಿಪ್ರಾಯವನ್ನು ಶ್ರೀ ಸ್ವಾಮಿಗಳವರು ಸಮರ್ಥಿ
ಸುತ್ತ ಅನ್ನುವದೇನಂದರೆ:- "ಈ ಶರೀರಕ್ಕೂ ನಾವು ದ್ರೋಹಮಾಡ
ಬಾರದು. ಶರೀರ ಇರುವ ವರೆಗೆ, ಅದರ ಎಚ್ಚರು ನಮಗೆ ಇರುವ ವರೆಗೆ
ಹೊರಗಣ ಸುಖ ನಮಗೆ ಅವಶ್ಯಕ" ಎಂದು ಹೇಳಿ, "ಆ ಇಂದ್ರಿಯಗಳು
ಸನ್ಮಾರ್ಗದಲ್ಲಿ ನಿಯುಕ್ತವಾದರೆ ಅವುಗಳಿಂದಲೇ ನಮ್ಮ ಪ್ರಗತಿಯುಂಟಾ
ಗುತ್ತದೆ." ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಅವರು ಅನ್ನುವದೇನಂದರೆ – "ದುರ್ನಿರೋಧಗಳಾದ ಇಂದ್ರಿಯಗ
ಳನ್ನು ನಿಗ್ರಹಿಸುವದು ಅತ್ಯಾವಶ್ಯಕ. ಆದರೆ ಇದರ ಜೊತೆಗೆ ಅವನ್ನು
ಸನ್ಮಾರ್ಗದ ಕಡೆ ಪ್ರೇರಿಸುವ ಶಕ್ತಿ ಸಾಮರ್ಥ್ಯಗಳನ್ನು ನಾವು ಅಭ್ಯಾಸ
ದಿಂದ ಪಡೆಯಬೇಕು." "ಕಾಯವೆಂಬುದು ಹೊಲಸಲ್ಲ. ಅದು ಒಳ್ಳೆಯ
ಕೆಲಸ ಮಾಡಲಿಕ್ಕಾಗಿಯೇ ಬಂದಿದೆ. ಅದನ್ನು ಪ್ರಸಾದ ಕಾಯವನ್ನಾಗಿ
ಮಾಡುವ ಶಕ್ತಿಯನ್ನು ಮನುಷ್ಯನು ಪಡೆಯಬೇಕು."

"ಇಂದ್ರಿಯಗಳನ್ನು ವ್ಯವಸ್ಥೆಗೊಳಿಸುವವೇ ತಪಸ್ಸು. ಮಾತಿನಲ್ಲಿ
ಮೌನವನ್ನವಲಂಬಿಸಿ ಬಂದವರೊಡನೆ ಲೇಖನದಲ್ಲಿ ವ್ಯವಹಾರ ನಡಿಸು
ವದು ತಪಸ್ಸಲ್ಲ. ಅಶನದ ವ್ಯವಹಾರಗಳನ್ನು ತೊರೆದು ಸದ್ ವ್ಯವ
ಹಾರಗಳಲ್ಲಿಯೇ ನಾಲಿಗೆಯನ್ನೂ ಮನಸ್ಸನ್ನೂ ನಿಯೋಗಿಸುವದೇ ಪರಮ
ತಪಸ್ಸು." ನಮ್ಮ ಕಾಯವನ್ನು ಶುದ್ಧಮಾಡಿಕೊಂಡು ಪವಿತ್ರ ಭಾವನೆ
ಯಿಂದ ಜೀವವನ್ನು ಸಾಗಿಸುವದೇ ಯೋಗವೆಂದು ಶ್ರೀ ಸ್ವಾಮಿಗಳವರ
ಅಭಿಪ್ರಾಯವು.

ಅವರು ಮುಂದೆ ಅನ್ನುವದೇನಂದರೆ:—ಇಂತಹ ಯೋಗಿಗೆ ವಿಶ್ವವೇ
ಕುಟುಂಬವಾಗುತ್ತದೆ. ಅವನ ಪ್ರೇಮ ಸರ್ವವ್ಯಾಪಕವೂ ವಿಶಾಲವೂ ಆಗು



ತ್ತದೆ. ನೀಚಭಾವನೆಯು ಅವನಿಂದ ದೂರ ಸರಿಯುತ್ತದೆ.......ಕಟ್ಟಿಗೆ
ಯನ್ನು ಬೆಂಕಿ ಹೇಗೆ ಸುಡದ ಹಾಗೆ ಅದರಲ್ಲಿ ಸೇರಿಕೊಂಡಿದೆಯೋ,
ಹಾಲಿನಲ್ಲಿ ತುಪ್ಪವು ವಾಸನೆ ಇಲ್ಲದೆ ಕಾಣದೆ ಹೇಗೆ ಸೇರಿದೆಯೋ, ಬೀಜ
ದೊಳಗೆ ವೃಕ್ಷವು ಹೇಗೆ ಅಂತರ್ಭಾವವಾಗಿದೆಯೋ, ಕಬ್ಬಿನೊಳಗೆ ಬೆಲ್ಲವು
ಹೇಗೆ ಸೇರಿಕೊಂಡಿದೆಯೋ, ಹಾಗೆ ನಮ್ಮ ಶರೀರದಲ್ಲಿ ನಿಗೂಢವಾಗಿ
ಇರುವ ಪರಮಾತ್ಮನನ್ನು "ಭಾವಿಸಿ ತಿಳಿದು ಮಥಿಸಿ ಪ್ರಯೋಗಾಂತರದಿಂ
ಪ್ರಸನ್ನತೆಯಂ ಮಾಡಿಕೊಂಡು ತದನುಭಾವಿಯಾಗಿ ಇರುವುದೇ" ಪರಮ
ಕಾರ್ಯವು. ಹೀಗೆ ಜೀವನವನ್ನು ಉತ್ತಮಗೊಳಿಸುವದೇ ಸಂಸಾರವೆನಿ
ಸುವುದು. ಹೀಗೆ ಶ್ರೀ ಸ್ವಾಮಿಗಳು ಮನುಷ್ಯನು ತನ್ನ ಜೀವನವನ್ನು
ಹೇಗೆ ಸಾಗಿಸಬೇಕೆಂಬುದನ್ನು ನಿರೂಪಿಸಿದ್ದಾರೆ.

## ಶಿವಾನುಭವ ಸಾಧನೆ

ಹಿಂದಿನ ಲೇಖಗಳಲ್ಲಿ ಶಿವಾನುಭವದ ಸಾಮಾನ್ಯ ಸ್ವರೂಪ ತಾತ್ವಿಕ
ರೀತಿಯಿಂದ ಹೇಳಲ್ಪಟ್ಟಿದೆ. ಮುಂದೆ ಈ ಸ್ಥಿತಿಯನ್ನು ಮನುಷ್ಯನು ಹೇಗೆ
ಹೊಂದಬೇಕೆಂಬ ಪ್ರಶ್ನೆಯು ಸ್ವಾಭಾವಿಕವಾಗಿ ಉದ್ಭವಿಸುತ್ತದೆ. ಶಿವಾನು
ಭವದ ಉಚ್ಚ ಸ್ಥಿತಿಯನ್ನು ಯೋಗಸಾಧನೆಯ ಮೂಲಕವೇ ಸಾಧಿಸಬಹು
ದೆಂದು ಬಹು ಜನರ ತಿಳುವಳಿಕೆ ಈಗಲೂ ಇದೆ. ಆದರೆ ಇದನ್ನು
ಶಿವಶರಣರು ಒಪ್ಪಿರುವದಿಲ್ಲ. ಯೋಗಸಾಧನೆಯ ಮೂಲಕ ಅಂತಃಶಕ್ತಿ
ಯನ್ನು ಬೆಳಿಸಿಕೊಂಡು ಸಿದ್ಧಿಗಳನ್ನು ಮಾಡುವದು ಸಾಧ್ಯವಾದರೂ ಅದು
ಶಿವಾನುಭವವಲ್ಲವೆಂದು ಅವರ ಅಭಿಪ್ರಾಯವಿದೆ. ಇದರ ವಿಸ್ತೃತ ವಿವೇ
ಚನೆಯನ್ನು ಶ್ರೀಯುತ ಬ್ಯಾಳಿ ಕಲ್ಯಾಣಪ್ಪನವರು "ಶಿವಯೋಗ ಅಥವಾ
ಲಿಂಗಾನುಸಂಧಾನ" ಈ ಲೇಖದಲ್ಲಿ ಮಾಡಿರುವರು. ಇದರ ಮುಂದಿನ
ಮೂರು ಲೇಖಗಳನ್ನು ರಾ|| ಬ|| ಫ. ಗು. ಹಳಕಟ್ಟಿ ಇವರು ಬರೆದಿದ್ದು
ಅವುಗಳಲ್ಲಿ ಮೊದಲನೆಯದಾದ "ಶಿವಾನುಭವದ ಸಾಮಾನ್ಯಸ್ವರೂಪ"
ಇದರಲ್ಲಿ ಅವರು ಯೋಗಾಭ್ಯಾಸದ ರೀತಿಗಳನ್ನು ಷಟ್‌ಸ್ಥಲಗಳಲ್ಲಿ ಹೇಗೆ ಶಿವ
ಶರಣರು ಸಂಬಂಧಿಸಿರುವರೆಂಬುದನ್ನು ಹೇಳಿದ್ದಾರೆ. ಇದರ ಮುಂದಿನ ಲೇಖ
ವಾದ "ಕಾಯಕ" ಇದರಲ್ಲಿ ಮನುಷ್ಯನು ತನ್ನ ನಿತ್ಯ ಜೀವನವನ್ನು ಶಿವಾನು
ಭವದ ತತ್ವಗಳಿಗನುಸಾರವಾಗಿ ಹೇಗೆ ಸಾಗಿಸಬೇಕೆಂಬುದನ್ನು ಅವರು
ವಿವರಿಸಿದ್ದಾರೆ. ಮತ್ತು ಕಡೆಯ ಲೇಖದಲ್ಲಿ ಷಟ್‌ಸ್ಥಲಗಳು ಮನುಷ್ಯನ

ಕ್ರಿಯೆಗೆ ಹೇಗೆ ಸಂಬಂಧಪಡುತ್ತವೆ ಮತ್ತು ಮನುಷ್ಯನ ವಿಕಾಸಕ್ಕೆ ಅವು ಹೇಗೆ ಕಾರಣವಾಗುತ್ತವೆ, ಎಂಬುದನ್ನು ಅವರು ವಿವರಿಸಿದ್ದಾರೆ. ಈ ಎಲ್ಲ ಲೇಖಗಳನ್ನು ವಾಚಕರು ಓದಿದಲ್ಲಿ ವೀರಶೈವ ಧರ್ಮದ ನಿಜ ಸ್ವರೂಪ ಹೇಗಿರುತ್ತದೆಂಬುದು ಅವರ ಲಕ್ಷಕ್ಕೆ ಬಾರದೆ ಇರಲಾರದು.

## ಶ್ರೀಯುತ ಕಲ್ಯಾಣಪ್ಪ ಬ್ಯಾಳಿ, ಬಿ. ಏ. ಬಿ. ಟಿ.

ಇವರು ವಿಜಾಪುರ ಜಿಲ್ಲೆಯಲ್ಲಿರುವ ಹುನಗುಂದ ಗ್ರಾಮದವರು. ಅವರು ಪದವೀಧರರಾದ ಬಳಿಕ ಕೈ. ವಾ. ಮಂಜಪ್ಪ ಹರ್ಡೇಕರ ಇವರು ಸ್ಥಾಪಿಸಿದ್ದ ವೀರಶೈವ ವಿದ್ಯಾಲಯ ಆಲಮಟ್ಟಿ ಇದರಲ್ಲಿ ಶಿಕ್ಷಕರಾಗಿ ನಿಂತು ಅಲ್ಲಿ ಅನೇಕ ವರ್ಷ ಕೆಲಸ ಮಾಡಿದರು. ಹೀಗೆ ಅವರು ಸೇರುವಲ್ಲಿ ಸಮಾಜ ಸೇವೆಯನ್ನು ಮಾಡಬೇಕೆಂಬುದೇ ಅವರ ಮುಖ್ಯ ಉದ್ದೇಶವಾಗಿದ್ದಿತು. ವಿದ್ಯಾಲಯದಲ್ಲಿದ್ದ ವಿದ್ಯಾರ್ಥಿಗಳಿಗೆ ಶರಣರ ತತ್ವಗಳನ್ನು ಬೋಧಿಸುವದೇ ಅವರ ಮುಖ್ಯ ಉದ್ದೇಶವಾಗಿದ್ದಿತು. ಇದನ್ನು ಅವರು ಮನಃ ಪೂರ್ವಕವಾಗಿ ಜರಗಿಸುತ್ತ ಬಂದರು. ಈ ಕಾಲದಲ್ಲಿ ಅವರು ಅನೇಕ ಚಿಕ್ಕ ಚಿಕ್ಕ ಗ್ರಂಥಗಳನ್ನು ಬರೆದರು. ಅವು ಇನ್ನೂ ಅಪ್ರಕಾಶಿತವಾಗಿವೆ. ಮುಂದೆ ಅವರು ವಿಜಾಪುರ ಪಟ್ಟಣದಲ್ಲಿರುವ ಶ್ರೀ ಸಿದ್ಧೇಶ್ವರ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ನೇಮಿಸಲ್ಪಟ್ಟರು. ಅಲ್ಲಿ ಅವರು ಉತ್ತಮರೀತಿಯಿಂದ ಕೆಲಸ ಮಾಡಿದ್ದರಿಂದ ಅವರು ಈ ಶಾಲೆಯ ಹೆಡ್‌ಮಾಸ್ತರರಾಗಿ ನೇಮಿಸಲ್ಪಟ್ಟರು. ಅವರು ಈಗ್ಗೆಯೂ ಅದೇ ಸಂಸ್ಥೆಯಲ್ಲಿ ಕೆಲಸ ಮಾಡುತ್ತಾರೆ. ಅವರು ಸಂಸ್ಕೃತ ಮತ್ತು ಕನ್ನಡ ಭಾಷೆಗಳನ್ನು ಚನ್ನಾಗಿ ಬಲ್ಲವರು. ಅವರು ವಚನ ವಾಙ್ಮಯವನ್ನು ಆಳವಾಗಿ ಅಭ್ಯಾಸಮಾಡಿದ್ದಾರೆ. ಅವರು ಶಿವಾನುಭವ ಮತ್ತು ನವಕರ್ನಾಟಕ ಈ ಪತ್ರಿಕೆಗಳಲ್ಲಿ ವಿದ್ವತ್‌ಪ್ರಚುರವಾದ ಅನೇಕ ಲೇಖಗಳನ್ನು ಬರೆದಿದ್ದಾರೆ. ಸರಳ ಸುಲಭ ಭಾಷೆಯಲ್ಲಿ ಉಚ್ಚತರದ ವಿಚಾರಗಳನ್ನು ಜನರ ಮನಸ್ಸಿನಲ್ಲಿ ಬಿಂಬಿಸುವಂತೆ ಬರೆಯುವ ಅವರ ಪದ್ಧತಿಯು ವರ್ಣನೀಯವಾಗಿದೆ. ಅವರು ಶಿವಾನುಭವ ಪತ್ರಿಕೆಯಲ್ಲಿ ಬರೆದ ಲೇಖಗಳಲ್ಲಿ ಷಟ್‌ಸ್ಥಲಗಳ ನಿರೂಪಣೆ ಮತ್ತು ಶೂನ್ಯ ಸಂಪಾದನೆಯ ರಹಸ್ಯ ಇವು ಬಹು ಮಹತ್ವದ್ದಾಗಿವೆ. ಅವರು ಅನೇಕ ಪ್ರಹಸನಗಳನ್ನೂ ಏಕಾಂಕ ನಾಟಕಗಳನ್ನೂ ಬರೆದಿದ್ದಾರೆ. ಅವರು ಉತ್ತಮ ಕವಿಗಳೂ ಇದ್ದಾರೆ.



ಶ್ರೀಯುತ ಕಲ್ಯಾಣಪ್ಪ ಬ್ಯಾಳಿಯವರು ಬರೆದ ಲೇಖ ಶಿವಯೋಗ ಅಥವಾ ಲಿಂಗಾನುಸಂಧಾನ. ಇದರಲ್ಲಿ ಲಿಂಗಾನುಸಂಧಾನಕ್ಕೂ ಇತರ ಯೋಗಗಳಿಗೂ ಇರುವ ತಾರತಮ್ಯ ಭಾವವನ್ನು ಅವರು ನಿರೂಪಿಸಿದ್ದಾರೆ. ಅವರು ಅನ್ನುವದೇನಂದರೆ:— ಯೋಗಮಾರ್ಗಕ್ಕಿಂತಲೂ ಅಧಿಕವಾದ ಲಿಂಗಾನುಸಂಧಾನ ಮಾರ್ಗವನ್ನು ಪ್ರಸ್ಥಾಪಿಸುವದಕ್ಕಾಗಿಯೂ ಪಂಡಿತ ಪಾಮರರಿಗೆಲ್ಲರಿಗೆ ಅನ್ವಯಿಸುವಂಥ ಷಟ್‌ಸ್ಥಲ ಮಾರ್ಗವನ್ನು ನೆಲೆಗೊಳಿಸುವದಕ್ಕಾಗಿಯೂ ಶಿವಶರಣರು ಕ್ಲೇಶಕರವಾದ ಯೋಗಮಾರ್ಗವನ್ನು ಅಲ್ಲಗಳೆದಿರುವರು." ಬಸವಾದಿ ಪ್ರಮಥರು "ತ್ರಿಲಿಂಗಗಳ ರೀತಿಯನ್ನು ತಿಳಿದುಕೊಂಡು ತಮ್ಮ ಯೋಗಸಾಧನೆಗಳನ್ನು ಲಿಂಗಾನುಭವದ ತಳಹದಿಯ ಮೇಲೆ ಕಟ್ಟಲಾರಂಭಿಸಿದರು." ಹಠಯೋಗ ಸಾಧನೆಯಿಂದ ಕಷ್ಟಕರವಾದ ಸುಖವು ಲಭಿಸಿದರೂ ಅದು ಕಷ್ಟವೇ ಹೊರತು ನಿಜಸುಖವಲ್ಲ. ಇಂದ್ರಿಯಗಳನ್ನು ಬಲಾತ್ಕಾರದಿಂದ ನಿಗ್ರಹಿಸಿ ಪ್ರಾಣಾಯಾಮವನ್ನು ಅಭ್ಯಾಸಿಸಿ ಆಯುಷ್ಯವನ್ನು ಬೆಳೆಯಿಸಿಕೊಳ್ಳಬಹುದು. ರೋಗಗಳನ್ನು ಸಹ ಕಳೆದುಕೊಳ್ಳಬಹುದು. ಆದರೆ ಮನುಷ್ಯನ ಜೀವನದ ಗುರಿಯು ಇಷ್ಟೇ ಅಲ್ಲ. ಜೀವಾನಂದವನ್ನು ಹೊಂದುವದೇ ಅವನ ಅಂತಿಮ ಧ್ಯೇಯವು." ಎಂದು ಹಠಯೋಗ ಮತ್ತು ಶಿವಯೋಗ ಇವುಗಳಲ್ಲಿರುವ ತಾರತಮ್ಯವನ್ನು ಅವರು ವಿಶದಪಡಿಸಿದ್ದಾರೆ.

ಅವರು ಅನ್ನುವದೇನಂದರೆ:- "ಶಿವಯೋಗವು ಅಂತರಂಗವನ್ನು ಕ್ಕೈಸುವ ಕಲೆಯು. ಸಶಾಸ್ತ್ರೀಯವಾಗಿ ಮಾಡುವದೆಲ್ಲವೂ ಯಂತ್ರದ ಕೆಲಸದಂತೆ ನೀರಸವಾಗಿರುತ್ತದೆ. ಆದರೆ ಕಲಾಯುಕ್ತವಾಗಿ ಮಾಡುವ ಕಾರ್ಯದಲ್ಲಿ ಸೌಂದರ್ಯ ಸ್ವಾರಸ್ಯಗಳು ತುಂಬಿತುಳುಕುತ್ತವೆ. ಆದುದರಿಂದ ಶಿವಯೋಗವು ಹಠಯೋಗದ ಪರ್ಯಾಯ ಶಬ್ದವೆಂದು ಭಾವಿಸಲಿಕ್ಕೆ ಬರಲಾರದು." ಷಟ್‌ಸ್ಥಲಗಳಲ್ಲಿ ಒಂದಾದ ಪ್ರಾಣಲಿಂಗಿ ಸ್ಥಲವು ಯೋಗವೆಂದು ಅನೇಕರು ಭಾವಿಸಿರುವರು. ಆದರೆ ಲೇಖಕರು ಅನ್ನುವದೇನಂದರೆ:- "ಪ್ರಾಣಲಿಂಗಿಸ್ಥಿತಿಯು ರೇಚಕ, ಪೂರಕ, ಕುಂಭಕ ಇತ್ಯಾದಿಗಳಿಂದ ಉಂಟಾಗಿರುವದಿಲ್ಲ. ಆದರೆ ಅನುಕ್ರಮವಾಗಿ ಭಕ್ತಿಗೆ ಸಂಬಂಧಪಟ್ಟ ವಿಶ್ವಾಸ, ನಿಷ್ಠೆ, ಸಾವಧಾನ, ಭಕ್ತಿಗಳಿಂದ ಉದ್ಭವಿಸಿರುತ್ತದೆ. ಆದುದರಿಂದ ಪ್ರಾಣಲಿಂಗಿ ಸ್ಥಳವು ಯೋಗಾಭ್ಯಾಸಕ್ಕೆ ಸಂಬಂಧಿಸಿದ್ದೆಂದು ತಿಳಿಯುವದು ತಪ್ಪು." "ಯೋಗಶ್ಚಿತ್ತವೃತ್ತಿ ನಿರೋಧಃ" ಎಂದು

ಅಷ್ಟಾಂಗ ಯೋಗವನ್ನು ಪರಾಮರ್ಶಿಸುವವರು ಹೇಳಿದ್ದಾರೆ. ಆದರೆ ವೀರಶೈವರ ಶಿವಯೋಗವು ಚಿತ್ತವೃತ್ತಿ ನಿರೋಧವಲ್ಲ. ಆದರೆ ಅದು ಮನಸ್ಸಿನ ಪ್ರವೃತ್ತಿಗಳನ್ನು ಸದ್ವಿಷಯಗಳ ಕಡೆಗೆ ಹೊರಳಿಸುವದಾಗಿದೆ" ಎಂದು ಲೇಖಕರು ಹೇಳಿರುವರು.

ಹೀಗೆ ಹೇಳಿ ಅವರು ಕಡೆಗೆ ಅನ್ನುವದೇನಂದರೆ:—"ಶಿವಯೋಗಿಗಳಾದವರು ಲಿಂಗಾನುಸಂಧಾನಿಗಳೂ ಷಟ್‌ಸ್ಥಲಜ್ಞಾನಿಗಳೂ ಲೋಕಸಂಗ್ರಹತತ್ಪರರೂ ಆಗಬೇಕು. ನುಡಿದಂತೆ ನಡೆಯುವ ಇಂಥ ಮಹಾವಿಭೂತಿಗಳು ಕಾಲ ಕಾಲಕ್ಕೆ ಭಕ್ತರಲ್ಲಿಯೂ ಗುರುಗಳಲ್ಲಿಯೂ ವಿರಕ್ತರಲ್ಲಿಯೂ ಹುಟ್ಟಿದ್ದಾರೆ. ಅವರನ್ನು ಎಲ್ಲ ಮನುಷ್ಯರು ಜಾತಿಮತಭೇದವಿಲ್ಲದೆ ಮಹಾ ವಿಭೂತಿಗಳೆಂದು ಮನ್ನಿಸುತ್ತಿದ್ದಾರೆ. ಅವರೇ ಜಗದ್ಗುರುಗಳು. ಅವರೇ ಜಗದಾಚಾರ್ಯರು. ಅವರೇ ಶಿವಶರಣ ಶಿವಯೋಗಿಗಳು ಎಂದು ಹೇಳಿದ್ದಾರೆ. ಈ ಪ್ರಕಾರ ಶ್ರೀಯುತ ಕಲ್ಯಾಣಪ್ಪ ಬ್ಯಾಳಿ ಇವರು ಯೋಗಕ್ಕೂ ಲಿಂಗಾನುಸಂಧಾನಕ್ಕೂ ಇರುವ ವ್ಯತ್ಯಾಸವನ್ನು ಈ ಲೇಖದಲ್ಲಿ ಹೇಳಿದ್ದಾರೆ.

ಶಿವಾನುಭವವನ್ನು ಹೊಂದಲಿಚ್ಛಿಸುವವರು ಯೋಗದ ಕ್ಲಿಷ್ಟಮಾರ್ಗವನ್ನು ಅನುಸರಿಸಕೂಡದೆಂದು ಈ ಲೇಖದ ಮುಖ್ಯ ಅಭಿಪ್ರಾಯವಾಗಿದೆ.

### ರಾ॥ ಬ॥ ಫ. ಗು. ಹಳಕಟ್ಟಿ ಇವರ ಲೇಖಗಳು.

ಹಿಂದಿನ ಲೇಖಗಳಲ್ಲಿ ಶಿವಾನುಭವವೆಂದರೇನು ಮತ್ತು ಶಿವಾನುಭವವು ಯೋಗಾಭ್ಯಾಸವೇ ಹೇಗೆ ಎಂಬ ವಿಷಯಗಳು ತಾತ್ವಿಕವಾಗಿ ವಿವೇಚಿಸಲ್ಪಟ್ಟಿವೆ. ಆದರೆ ತಾತ್ವಿಕ ವಿವೇಚನೆಗಳು ನಿತ್ಯಕ್ರಿಯೆಗಳಲ್ಲಿ ಯಾವಾಗಲೂ ಮಾರ್ಗದರ್ಶಿಗಳಾಗಲಾರವು. ಆದ್ದರಿಂದ ಶಿವಶರಣರು ವ್ಯವಹಾರಿಕ ದೃಷ್ಟಿಯಿಂದಲೂ ಕೂಡ ಆಳವಾಗಿ ವಿಚಾರಮಾಡಿ ಮನುಷ್ಯನು ಪ್ರಪಂಚದಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ಗೊತ್ತುಪಡಿಸಿರುತ್ತಾರೆ.

### ಶಿವಾನುಭವದ ಸಾಮಾನ್ಯ ಸ್ವರೂಪ.

ಹಿಂದಿನ ವಿವರಣೆಗಳ ಮೇಲಿಂದ ಶಿವಶರಣರು ಹಿಂದೂಧರ್ಮದಲ್ಲಿ ಒಂದು ಹೊಸತರದ ಧರ್ಮವನ್ನೇ ನಿರ್ಮಿಸಿದರೆಂಬ ತಿಳಿವಳಿಕೆಯು ಅನೇಕರಿಗೆ ಉಂಟಾಗಬಹುದು. ಆದರೆ ಅವರ ವಿಚಾರಗಳನ್ನು ನಾವು ಪರಿಶೀ-



ಲಿಸಿದಲ್ಲಿ ಅವರು ಪೂರ್ವಪರಂಪರೆಯನ್ನು ಬಿಟ್ಟಿಲ್ಲೆಂದು ಕಂಡುಬರುತ್ತದೆ. ಶಿವಶರಣರ ಯಾವ ಗ್ರಂಥವನ್ನು ತೆಗೆದುಕೊಂಡರೂ ಅವರು ವೇದಾಗಮೋಪನಿಷತ್ತುಗಳನ್ನು ಆಧಾರವಾಗಿಟ್ಟುಕೊಂಡೇ ತಾವು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತೇವೆಂದು ಯಾವಾಗಲೂ ಹೇಳುವದುಂಟು. ಬಸವೇಶ್ವರ ಮೊದಲ್ಗೊಂಡು ಯಾವ ಶಿವಶರಣರ ಉಕ್ತಿಗಳನ್ನು ತೆಗೆದುಕೊಂಡರೂ ಅವುಗಳಲ್ಲಿ ವೇದ ಉಪನಿಷತ್ತು ಇವುಗಳಲ್ಲಿಯ ಅಸಂಖ್ಯ ಅವತರಣಗಳನ್ನು ತೆಗೆದುಕೊಂಡಿರುವದು ಕಂಡುಬರುತ್ತದೆ. ಈ ಪ್ರಕಾರ ಶಿವಶರಣರು ಹಿಂದಿನವರ ಮುಖ್ಯ ತತ್ವಗಳನ್ನು ನಿರಾಕರಿಸಿರುವದಿಲ್ಲ. ಅವರು ತಮ್ಮ ಷಟ್‌ಸ್ಥಲಸಿದ್ಧಾಂತದಲ್ಲಿ ಸಾಂಖ್ಯ ಮತ್ತು ಯೋಗದ ಮುಖ್ಯ ತತ್ವಗಳನ್ನು ಹೇರಳವಾಗಿ ಉಪಯೋಗಿಸಿದ್ದುಂಟು. ಆದರೆ ಅವರು ಹೀಗೆ ಉಪಯೋಗಿಸಿಕೊಳ್ಳುವಲ್ಲಿ ತಮ್ಮದೇ ಆದ ಲಿಂಗಾಂಗಸಾಮರಸ್ಯದ ವೈಶಿಷ್ಟ್ಯವನ್ನು ಅವುಗಳಲ್ಲಿಟ್ಟು ಇದಕ್ಕನುಸಾರವಾಗಿ ಆವಶ್ಯಕ ಮಾರ್ಪಾಡುಗಳನ್ನು ಮಾಡಿರುವದು ಕಂಡುಬರುತ್ತದೆ. ಇದರಿಂದ ಅವರ ವಿಚಾರಗಳಿಗೆ ಒಂದು ಹೊಸ ಸ್ವರೂಪು ಉಂಟಾದಂತೆ ಕಂಡುಬರುತ್ತದೆ. ಆದರೆ ಅವರು ತಮ್ಮ ಪೂರ್ವಪರಂಪರೆಯನ್ನು ಬಿಟ್ಟಿರುವದಿಲ್ಲ.

ಷಟ್‌ಸ್ಥಲದಲ್ಲಿ ಆರು ವಿಭಾಗಗಳಿದ್ದು, ಭಕ್ತಿಯೋಗ ಮತ್ತು ಕರ್ಮಯೋಗಗಳು ಮೊದಲನೆಯ ಎರಡು ವಿಭಾಗಗಳಾದ ಭಕ್ತ ಮತ್ತು ಮಹೇಶ್ವರ ಸ್ಥಲಗಳಲ್ಲಿ ಸೇರ್ಪಡೆಯಾಗುತ್ತವೆ. ಹಠಯೋಗದ ವಿಷಯಗಳು ಪ್ರಾಣಲಿಂಗಿಸ್ಥಲದಲ್ಲಿ ಬರುತ್ತವೆ. ಜ್ಞಾನಯೋಗ ಮತ್ತು ರಾಜಯೋಗದ ತತ್ವಗಳು ಶರಣ ಮತ್ತು ಐಕ್ಯಸ್ಥಲಗಳಲ್ಲಿ ಬರುತ್ತವೆ. ಹೀಗೆ ಹಿಂದೂಧರ್ಮದಲ್ಲಿ ಅತ್ಯಂತ ಮಹತ್ವದ ಯೋಗ ಭಾಗಗಳು ಷಟ್‌ಸ್ಥಲ ಶಾಸ್ತ್ರದ ಬೇರೆ ಬೇರೆ ಸ್ಥಳಗಳಲ್ಲಿ ಸೇರ್ಪಡೆಯಾಗಿರುವದು ಕಂಡು ಬರುತ್ತದೆ. ಆದರೆ ಇವುಗಳ ವಿವೇಚನೆ ಮಾಡುವಲ್ಲಿ ಅವರು ತಮ್ಮದೇ ಆದ ಲಿಂಗಾಂಗ ಸಾಮರಸ್ಯದ ರೀತಿಯನ್ನು ಅವುಗಳಿಗೆ ಸಂಬಂಧಿಸಿ ತಮ್ಮ ಕ್ರಿಯಾಚರಣೆಗಳಲ್ಲಿ ಅವಶ್ಯಕ ಮಾರ್ಪಾಡುಗಳನ್ನು ಮಾಡಿದ್ದಾರೆ. ಈ ವಿಚಾರಗಳು ಪ್ರಕೃತ ಲೇಖದಲ್ಲಿ ಹೇಳಲ್ಪಟ್ಟಿವೆ.

ಮೊದಲು ನೈತಿಕ ಉನ್ನತಿ, ಅದರೊಡನೆ ಮಾನಸಿಕ ಉನ್ನತಿ ಮತ್ತು ಜ್ಞಾನಾನುಭವದ ಮೂಲಕ ಭಾವೋನ್ನತಿ, ಇವುಗಳನ್ನು ಮನುಷ್ಯನು

ತನ್ನಲ್ಲಿ ಉಂಟುಮಾಡಿಕೊಂಡು ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳನ್ನು ಉಜ್ವಲಗೊಳಿಸತಕ್ಕದ್ದು.

ನೈತಿಕಾಚಾರ ಮತ್ತು ಶಿವಯೋಗಾಚರಣೆಗಳ ಮೂಲಕ ಮನುಷ್ಯನ ಶಕ್ತಿಗಳು ತಾವಾಗಿಯೇ ಅವನಲ್ಲಿ ವಿಕಾಸ ಹೊಂದುತ್ತವೆ. ಈ ಪ್ರಕಾರ ಶಿವಶರಣರು ಜನರಲ್ಲಿ ನೀತಿಯನ್ನೂ ಧಾರ್ಮಿಕ ವೃತ್ತಿಯನ್ನೂ ಬೀರಿ ಲಿಂಗದ ತಿಳುವಳಿಕೆಯನ್ನು ಎಲ್ಲರಲ್ಲಿ ಹುಟ್ಟಿಸಿ ಮನಸ್ಸಿನಲ್ಲಿ ಶುದ್ಧತೆಯನ್ನು ಹೆಚ್ಚಿಸಿ ಸಮಾಜದಲ್ಲಿ ಉನ್ನತವಾದ ಮತ್ತು ಸ್ಥಿರವಾದ ಸುಧಾರಣೆಯನ್ನುಂಟು ಮಾಡಿದರೆಂದು ಈ ಲೇಖದಲ್ಲಿ ಹೇಳಲ್ಪಟ್ಟಿದೆ.

## ಕಾಯಕ

ಈ ಶಬ್ದಕ್ಕೊಂದು ಮನೋರಂಜಕ ಇತಿಹಾಸವಿದೆ. ವೀರಶೈವ ಸಮಾಜದಲ್ಲಿ ಕಾಯಕದ ಅಯ್ಯನವರೆಂಬ ಪಂಗಡವು ಈಗಲೂ ಇದ್ದು ಅವರು ಮುಳ್ಳು ಆವಿಗೆಯ ಕಾಯಕ, ಗಂಟೇ ಕಾಯಕ, ಬೊಬ್ಬೇ ಕಾಯಕ ಎಂದು ಮೊದಲಾಗಿ ಹೆಸರುಗಳನ್ನಿಟ್ಟುಕೊಂಡು ಜನರಿಂದ ಭಿಕ್ಷೆಯನ್ನು ಎತ್ತುತ್ತಾರೆ. ಪಂಚ ಪೀಠಾಧಿಪತಿಗಳಿಂದ ಈ ಅಯ್ಯನವರು ತಮ್ಮ ಕಾಯಕಗಳನ್ನು ಸ್ವೀಕರಿಸಿ ಅವರಿಗೆ ಪ್ರತಿ ವರ್ಷ ಕೆಲ ಕಾಣಿಕೆಗಳನ್ನು ಕೊಡುವದೂ ಉಂಟು. ಇದರ ಮೇಲಿಂದ ಕಾಯಕವೆಂದರೆ ಪಂಚ ಪೀಠಾಧಿಪತಿಗಳು ಬೇರೆ ಬೇರೆ ನಾಡಿನ ಜನರು ಧರ್ಮದಂತೆ ನಡೆಯುತ್ತಾರೋ ಇಲ್ಲವೋ ಎಂಬುದನ್ನು ನಿರೀಕ್ಷಿಸಿ ಪೀಠಗಳಿಗೆ ವರದಿಗಳನ್ನು ಕಳಿಸುವದಕ್ಕೋಸ್ಕರ ನಿಯಮಿಸಲ್ಪಟ್ಟವರು ಮತ್ತು ಅನಾಚಾರಗಳನ್ನು ಕಂಡಲ್ಲಿ ಅವುಗಳನ್ನು ಸತ್ಯಾಗ್ರಹದಿಂದಲಾದರೂ ದೂರಮಾಡುವವರು ಎಂಬ ವಿಚಾರಗಳು ಎಲ್ಲ ಕಡೆಗೂ ರೂಢವಾಗಿದ್ದವು. ಆದರೆ ವಚನ ಶಾಸ್ತ್ರವನ್ನು ನಾವು ನಿರೀಕ್ಷಿಸುತ್ತ ಹೋದ ಹಾಗೆ ಕಾಯಕಕ್ಕೆ ಈ ತರದ ಅರ್ಥವಿರದೆ ಶ್ರಮವಹಿಸಿ ಉದ್ಯೋಗ ಮಾಡುವದು ಮತ್ತು ಅದರಿಂದ ಸಂಪಾದಿಸಿದ್ದನ್ನು ಅರ್ಪಣಭಾವದಿಂದ ವಿನಿಯೋಗಿಸುವದು ಎಂದು ಇದ್ದುದು ನಮಗೆ ತೋರಿಬರಹತ್ತಿತು. ಈ ಭಾವವುಳ್ಳ ಅನೇಕ ವಚನಗಳನ್ನು ನಾವು ನಮ್ಮ ವಚನಶಾಸ್ತ್ರಸಾರ ಭಾಗ ೧ ಉತ್ತರಾರ್ಧ ಈ ಗ್ರಂಥದಲ್ಲಿ ಉದಹರಿಸಿದ್ದೇವೆ. ಈ ತತ್ವವು ಕೇವಲ ಭಕ್ತರಿಗಷ್ಟೇ ಅಲ್ಲ, ಜಂಗಮರಿಗೂ



ಶ್ರೀಯುತ ಕಲ್ಯಾಣಪ್ಪ ಬ್ಯಾಳಿಯವರು ಬರೆದ ಲೇಖ ಶಿವಯೋಗ ಅಥವಾ ಲಿಂಗಾನುಸಂಧಾನ. ಇದರಲ್ಲಿ ಲಿಂಗಾನುಸಂಧಾನಕ್ಕೂ ಇತರ ಯೋಗಗಳಿಗೂ ಇರುವ ತಾರತಮ್ಯ ಭಾವವನ್ನು ಅವರು ನಿರೂಪಿಸಿದ್ದಾರೆ. ಅವರು ಅನ್ನುವದೇನಂದರೆಃ— ಯೋಗಮಾರ್ಗಕ್ಕಿಂತಲೂ ಅಧಿಕವಾದ ಲಿಂಗಾನುಸಂಧಾನ ಮಾರ್ಗವನ್ನು ಪ್ರಸ್ಥಾಪಿಸುವದಕ್ಕಾಗಿಯೂ ಪಂಡಿತ ಪಾಮರರಿಗೆಲ್ಲರಿಗೆ ಅನ್ವಯಿಸುವಂಥ ಷಟ್‌ಸ್ಥಲ ಮಾರ್ಗವನ್ನು ನೆಲೆಗೊಳಿಸುವದಕ್ಕಾಗಿಯೂ ಶಿವಶರಣರು ಕ್ಲೇಶಕರವಾದ ಯೋಗಮಾರ್ಗವನ್ನು ಅಲ್ಲಗಳೆದಿರುವರು. ” ಬಸವಾದಿ ಪ್ರಮಥರು “ ತ್ರಿಲಿಂಗಗಳ ರೀತಿಯನ್ನು ತಿಳಿದುಕೊಂಡು ತಮ್ಮ ಯೋಗಸಾಧನೆಗಳನ್ನು ಲಿಂಗಾನುಭವದ ತಳಹದಿಯ ಮೇಲೆ ಕಟ್ಟಲಾರಂಭಿಸಿದರು. ” ಹಠಯೋಗ ಸಾಧನೆಯಿಂದ ಕಷ್ಟಕರವಾದ ಸುಖವು ಲಭಿಸಿದರೂ ಅದು ಕಷ್ಟವೇ ಹೊರತು ನಿಜಸುಖವಲ್ಲ. ಇಂದ್ರಿಯಗಳನ್ನು ಬಲಾತ್ಕಾರದಿಂದ ನಿಗ್ರಹಿಸಿ ಪ್ರಾಣಾಯಾಮವನ್ನು ಅಭ್ಯಾಸಿಸಿ ಆಯುಷ್ಯವನ್ನು ಬೆಳೆಯಿಸಿಕೊಳ್ಳಬಹುದು. ರೋಗಗಳನ್ನು ಸಹ ಕಳೆದುಕೊಳ್ಳಬಹುದು. ಆದರೆ ಮನುಷ್ಯನ ಜೀವನದ ಗುರಿಯು ಇಷ್ಟೇ ಅಲ್ಲ. ಜೀವಾನಂದವನ್ನು ಹೊಂದುವದೇ ಅವನ ಅಂತಿಮಧ್ಯೇಯವು. ” ಎಂದು ಹಠಯೋಗ ಮತ್ತು ಶಿವಯೋಗ ಇವುಗಳಲ್ಲಿರುವ ತಾರತಮ್ಯವನ್ನು ಅವರು ವಿಶದಪಡಿಸಿದ್ದಾರೆ.

ಅವರು ಅನ್ನುವದೇನಂದರೆಃ- “ ಶಿವಯೋಗವು ಅಂತರಂಗವನ್ನು ಕ್ಯೆಸುವ ಕಲೆಯು. ಸಶಾಸ್ತ್ರೀಯವಾಗಿ ಮಾಡುವದೆಲ್ಲವೂ ಯಂತ್ರದ ಕೆಲಸದಂತೆ ನಿರಸವಾಗಿರುತ್ತದೆ. ಆದರೆ ಕಲಾಯುಕ್ತವಾಗಿ ಮಾಡುವ ಕಾರ್ಯದಲ್ಲಿ ಸೌಂದರ್ಯ ಸ್ವಾರಸ್ಯಗಳು ತುಂಬಿತುಳುಕುತ್ತವೆ. ಆದುದರಿಂದ ಶಿವಯೋಗವು ಹಠಯೋಗದ ಪರ್ಯಾಯ ಶಬ್ದವೆಂದು ಭಾವಿಸಲಿಕ್ಕೆ ಬರಲಾರದು. ” ಷಟ್‌ಸ್ಥಲಗಳಲ್ಲಿ ಒಂದಾದ ಪ್ರಾಣಲಿಂಗಿ ಸ್ಥಲವು ಯೋಗವೆಂದು ಅನೇಕರು ಭಾವಿಸಿರುವರು. ಆದರೆ ಲೇಖಕರು ಅನ್ನುವದೇನಂದರೆಃ- “ ಪ್ರಾಣಲಿಂಗಿಸ್ಥಿತಿಯು ರೇಚಕ, ಪೂರಕ, ಕುಂಭಕ ಇತ್ಯಾದಿಗಳಿಂದ ಉಂಟಾಗಿರುವದಿಲ್ಲ. ಆದರೆ ಅನುಕ್ರಮವಾಗಿ ಭಕ್ತಿಗೆ ಸಂಬಂಧಪಟ್ಟ ವಿಶ್ವಾಸ, ನಿಷ್ಠೆ, ಸಾವಧಾನ, ಭಕ್ತಿಗಳಿಂದ ಉದ್ಭವಿಸಿರುತ್ತದೆ. ಆದುದರಿಂದ ಪ್ರಾಣಲಿಂಗಿ ಸ್ಥಳವು ಯೋಗಾಭ್ಯಸಕ್ಕೆ ಸಂಬಂಧಿಸಿದ್ದೆಂದು ತಿಳಿಯುವದು ತಪ್ಪು. ” “ ಯೋಗಶ್ಚಿತ್ತವೃತ್ತಿ ನಿರೋಧಃ” ಎಂದು

ಅಷ್ಟಾಂಗ ಯೋಗವನ್ನು ಪರಾಮರ್ಶಿಸುವವರು ಹೇಳಿದ್ದಾರೆ. ಆದರೆ ವೀರಶೈವರ ಶಿವಯೋಗವು ಚಿತ್ತವೃತ್ತಿ ನಿರೋಧನಲ್ಲ. ಆದರೆ ಅದು ಮನಸ್ಸಿನ ಪ್ರವೃತ್ತಿಗಳನ್ನು ಸದ್ವಿಷಯಗಳ ಕಡೆಗೆ ಹೊರಳಿಸುವದಾಗಿದೆ" ಎಂದು ಲೇಖಕರು ಹೇಳಿರುವರು.

ಹೀಗೆ ಹೇಳಿ ಅವರು ಕಡೆಗೆ ಅನ್ನುವವೇನಂದರೆ:—"ಶಿವಯೋಗಿಗಳಾದವರು ಲಿಂಗಾನುಸಂಧಾನಿಗಳೂ ಷಟ್ಸ್ಥಲ ಜ್ಞಾನಿಗಳೂ ಲೋಕಸಂಗ್ರಹತತ್ಪರರೂ ಆಗಬೇಕು. ನುಡಿದಂತೆ ನಡೆಯುವ ಇಂಥ ಮಹಾವಿಭೂತಿಗಳು ಕಾಲಕಾಲಕ್ಕೆ ಭಕ್ತರಲ್ಲಿಯೂ ಗುರುಗಳಲ್ಲಿಯೂ ವಿರಕ್ತರಲ್ಲಿಯೂ ಹುಟ್ಟಿದ್ದಾರೆ. ಅವರನ್ನು ಎಲ್ಲ ಮನುಷ್ಯರು ಜಾತಿಮತಭೇದವಿಲ್ಲದೆ ಮಹಾವಿಭೂತಿಗಳೆಂದು ಮನ್ನಿಸುತ್ತಿದ್ದಾರೆ. ಅವರೇ ಜಗದ್ಗುರುಗಳು. ಅವರೇ ಜಗದಾಚಾರ್ಯರು. ಅವರೇ ಶಿವಶರಣ ಶಿವಯೋಗಿಗಳು" ಎಂದು ಹೇಳಿದ್ದಾರೆ. ಈ ಪ್ರಕಾರ ಶ್ರೀಯುತ ಕಲ್ಯಾಣಪ್ಪ ಬ್ಯಾಳಿ ಇವರು ಯೋಗಕ್ಕೂ ಲಿಂಗಾನುಸಂಧಾನಕ್ಕೂ ಇರುವ ವ್ಯತ್ಯಾಸವನ್ನು ಈ ಲೇಖದಲ್ಲಿ ಹೇಳಿದ್ದಾರೆ.

ಶಿವಾನುಭವವನ್ನು ಹೊಂದಲಿಚ್ಛಿಸುವವರು ಯೋಗದ ಕ್ಲಿಷ್ಟಮಾರ್ಗವನ್ನು ಅನುಸರಿಸಕೂಡದೆಂದು ಈ ಲೇಖನ ಮುಖ್ಯ ಅಭಿಪ್ರಾಯವಾಗಿದೆ.

### ರಾ|| ಬ|| ಫ. ಗು. ಹಳಕಟ್ಟಿ ಇವರ ಲೇಖಗಳು.

ಹಿಂದಿನ ಲೇಖಗಳಲ್ಲಿ ಶಿವಾನುಭವವೆಂದರೇನು ಮತ್ತು ಶಿವಾನುಭವವು ಯೋಗಾಭ್ಯಾಸವೇ ಹೇಗೆ ಎಂಬ ವಿಷಯಗಳು ತಾತ್ವಿಕವಾಗಿ ವಿವೇಚಿಸಲ್ಪಟ್ಟಿವೆ. ಆದರೆ ತಾತ್ವಿಕ ವಿವೇಚನೆಗಳು ನಿತ್ಯಕ್ರಿಯೆಗಳಲ್ಲಿ ಯಾವಾಗಲೂ ಮಾರ್ಗದರ್ಶಿಗಳಾಗಲಾರವು. ಆದ್ದರಿಂದ ಶಿವಶರಣರು ವ್ಯವಹಾರಿಕ ದೃಷ್ಟಿಯಿಂದಲೂ ಕೂಡ ಆಳವಾಗಿ ವಿಚಾರಮಾಡಿ ಮನುಷ್ಯನು ಪ್ರಪಂಚದಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ಗೊತ್ತುಪಡಿಸಿರುತ್ತಾರೆ.

### ಶಿವಾನುಭವದ ಸಾಮಾನ್ಯ ಸ್ವರೂಪ.

ಹಿಂದಿನ ವಿವರಣೆಗಳ ಮೇಲಿಂದ ಶಿವಶರಣರು ಹಿಂದೂಧರ್ಮದಲ್ಲಿ ಒಂದು ಹೊಸತರದ ಧರ್ಮವನ್ನೇ ನಿರ್ಮಿಸಿದರೆಂಬ ತಿಳಿವಳಿಕೆಯು ಅನೇಕರಿಗೆ ಉಂಟಾಗಬಹುದು. ಆದರೆ ಅವರ ವಿಚಾರಗಳನ್ನು ನಾವು ಪರಿಶೀ-



ಲಿಸಿದಲ್ಲಿ ಅವರು ಪೂರ್ವಪರಂಪರೆಯನ್ನು ಬಿಟ್ಟಿಲ್ಲೆಂದು ಕಂಡುಬರುತ್ತದೆ. ಶಿವಶರಣರ ಯಾವ ಗ್ರಂಥವನ್ನು ತೆಗೆದುಕೊಂಡರೂ ಅವರು ವೇದಾಗಮೋಪನಿಷತ್ತುಗಳನ್ನು ಆಧಾರವಾಗಿಟ್ಟುಕೊಂಡೇ ತಾವು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತೇವೆಂದು ಯಾವಾಗಲೂ ಹೇಳುವದುಂಟು. ಬಸವೇಶ್ವರ ಮೊದಲ್ಗೊಂಡು ಯಾವ ಶಿವಶರಣರ ಉಕ್ತಿಗಳನ್ನು ತೆಗೆದುಕೊಂಡರೂ ಅವುಗಳಲ್ಲಿ ವೇದ ಉಪನಿಷತ್ತು ಇವುಗಳಲ್ಲಿಯ ಅಸಂಖ್ಯ ಅವತರಣಗಳನ್ನು ತೆಗೆದುಕೊಂಡಿರುವದು ಕಂಡುಬರುತ್ತದೆ. ಈ ಪ್ರಕಾರ ಶಿವಶರಣರು ಹಿಂದಿನವರ ಮುಖ್ಯ ತತ್ವಗಳನ್ನು ನಿರಾಕರಿಸಿರುವದಿಲ್ಲ. ಅವರು ತಮ್ಮ ಷಟ್ಸ್ಥಲಸಿದ್ಧಾಂತದಲ್ಲಿ ಸಾಂಖ್ಯ ಮತ್ತು ಯೋಗದ ಮುಖ್ಯ ತತ್ವಗಳನ್ನು ಹೇರಳವಾಗಿ ಉಪಯೋಗಿಸಿದ್ದುಂಟು. ಆದರೆ ಅವರು ಹೀಗೆ ಉಪಯೋಗಿಸಿಕೊಳ್ಳುವಲ್ಲಿ ತಮ್ಮದೇ ಆದ ಲಿಂಗಾಂಗಸಾಮರಸ್ಯದ ವೈಶಿಷ್ಟ್ಯವನ್ನು ಅವುಗಳಲ್ಲಿಟ್ಟು ಇವಕ್ಕನುಸಾರವಾಗಿ ಆವಶ್ಯಕ ಮಾರ್ಪಾಡುಗಳನ್ನು ಮಾಡಿರುವದು ಕಂಡುಬರುತ್ತದೆ. ಇದರಿಂದ ಅವರ ವಿಚಾರಗಳಿಗೆ ಒಂದು ಹೊಸ ಸ್ವರೂಪವು ಉಂಟಾದಂತೆ ಕಂಡುಬರುತ್ತದೆ. ಆದರೆ ಅವರು ತಮ್ಮ ಪೂರ್ವಪರಂಪರೆಯನ್ನು ಬಿಟ್ಟಿರುವದಿಲ್ಲ.

ಷಟ್ಸ್ಥಲದಲ್ಲಿ ಆರು ವಿಭಾಗಗಳಿದ್ದು, ಭಕ್ತಿಯೋಗ ಮತ್ತು ಕರ್ಮಯೋಗಗಳು ಮೊದಲನೆಯ ಎರಡು ವಿಭಾಗಗಳಾದ ಭಕ್ತ ಮತ್ತು ಮಹೇಶ್ವರ ಸ್ಥಲಗಳಲ್ಲಿ ಸೇರ್ಪಡೆಯಾಗುತ್ತವೆ. ಹಠಯೋಗದ ವಿಷಯಗಳು ಪ್ರಾಣಲಿಂಗಿಸ್ಥಲದಲ್ಲಿ ಬರುತ್ತವೆ. ಜ್ಞಾನಯೋಗ ಮತ್ತು ರಾಜಯೋಗದ ತತ್ವಗಳು ಶರಣ ಮತ್ತು ಐಕ್ಯಸ್ಥಲಗಳಲ್ಲಿ ಬರುತ್ತವೆ. ಹೀಗೆ ಹಿಂದೂಧರ್ಮದಲ್ಲಿ ಅತ್ಯಂತ ಮಹತ್ವದ ಯೋಗ ಭಾಗಗಳು ಷಟ್ಸ್ಥಲ ಶಾಸ್ತ್ರದ ಬೇರೆ ಬೇರೆ ಸ್ಥಳಗಳಲ್ಲಿ ಸೇರ್ಪಡೆಯಾಗಿರುವದು ಕಂಡು ಬರುತ್ತದೆ. ಆದರೆ ಇವುಗಳ ವಿವೇಚನೆ ಮಾಡುವಲ್ಲಿ ಅವರು ತಮ್ಮದೇ ಆದ ಲಿಂಗಾಂಗಸಾಮರಸ್ಯದ ರೀತಿಯನ್ನು ಅವುಗಳಿಗೆ ಸಂಬಂಧಿಸಿ ತಮ್ಮ ಕ್ರಿಯಾಚರಣೆಗಳಲ್ಲಿ ಅವಶ್ಯಕ ಮಾರ್ಪಾಡುಗಳನ್ನು ಮಾಡಿದ್ದಾರೆ. ಈ ವಿಚಾರಗಳು ಪ್ರಕೃತ ಲೇಖದಲ್ಲಿ ಹೇಳಲ್ಪಟ್ಟಿವೆ.

ಮೊದಲು ನೈತಿಕ ಉನ್ನತಿ, ಅದರೊಡನೆ ಮಾನಸಿಕ ಉನ್ನತಿ ಮತ್ತು ಜ್ಞಾನಾನುಭವದ ಮೂಲಕ ಭಾವೋನ್ನತಿ, ಇವುಗಳನ್ನು ಮನುಷ್ಯನು

ತನ್ನಲ್ಲಿ ಉಂಟುಮಾಡಿಕೊಂಡು ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳನ್ನು ಉಜ್ವಲಗೊಳಿಸತಕ್ಕದ್ದು.

ನೈತಿಕಾಚಾರ ಮತ್ತು ಶಿವಯೋಗಾಚರಣೆಗಳ ಮೂಲಕ ಮನುಷ್ಯನ ಶಕ್ತಿಗಳು ತಾವಾಗಿಯೇ ಅವನಲ್ಲಿ ವಿಕಾಸ ಹೊಂದುತ್ತವೆ. ಈ ಪ್ರಕಾರ ಶಿವಶರಣರು ಜನರಲ್ಲಿ ನೀತಿಯನ್ನೂ ಧಾರ್ಮಿಕ ವೃತ್ತಿಯನ್ನೂ ಬೀರಿ ಲಿಂಗದ ತಿಳುವಳಿಕೆಯನ್ನು ಎಲ್ಲರಲ್ಲಿ ಹುಟ್ಟಿಸಿ ಮನಸ್ಸಿನಲ್ಲಿ ಶುದ್ಧತೆಯನ್ನು ಹೆಚ್ಚಿಸಿ ಸಮಾಜದಲ್ಲಿ ಉನ್ನತವಾದ ಮತ್ತು ಸ್ಥಿರವಾದ ಸುಧಾರಣೆಯನ್ನುಂಟು ಮಾಡಿದರೆಂದು ಈ ಲೇಖದಲ್ಲಿ ಹೇಳಲ್ಪಟ್ಟಿದೆ.

## ಕಾಯಕ

ಈ ಶಬ್ದಕ್ಕೊಂದು ಮನೋರಂಜಕ ಇತಿಹಾಸವಿದೆ. ವೀರಶೈವ ಸಮಾಜದಲ್ಲಿ ಕಾಯಕದ ಅಯ್ಯನವರೆಂಬ ಪಂಗಡವು ಈಗಲೂ ಇದ್ದು ಅವರು ಮುಳ್ಳು ಆವಿಗೆಯ ಕಾಯಕ, ಗಂಟೇ ಕಾಯಕ, ಬೊಬ್ಬೇ ಕಾಯಕ ಎಂದು ಮೊದಲಾಗಿ ಹೆಸರುಗಳನ್ನಿಟ್ಟುಕೊಂಡು ಜನರಿಂದ ಭಿಕ್ಷೆಯನ್ನು ಎತ್ತುತ್ತಾರೆ. ಪಂಚ ಪೀಠಾಧಿಪತಿಗಳಿಂದ ಈ ಅಯ್ಯನವರು ತಮ್ಮ ಕಾಯಕಗಳನ್ನು ಸ್ವೀಕರಿಸಿ ಅವರಿಗೆ ಪ್ರತಿ ವರ್ಷ ಕೆಲ ಕಾಣಿಕೆಗಳನ್ನು ಕೊಡುವದೂ ಉಂಟು. ಇದರ ಮೇಲಿಂದ ಕಾಯಕವೆಂದರೆ ಪಂಚ ಪೀಠಾಧಿಪತಿಗಳು ಬೇರೆ ಬೇರೆ ನಾಡಿನ ಜನರು ಧರ್ಮದಂತೆ ನಡೆಯುತ್ತಾರೋ ಇಲ್ಲವೋ ಎಂಬುದನ್ನು ನಿರೀಕ್ಷಿಸಿ ಪೀಠಗಳಿಗೆ ವರದಿಗಳನ್ನು ಕಳಿಸುವದಕ್ಕೋಸ್ಕರ ನಿಯಮಿಸಲ್ಪಟ್ಟವರು ಮತ್ತು ಅನಾಚಾರಗಳನ್ನು ಕಂಡಲ್ಲಿ ಅವುಗಳನ್ನು ಸತ್ಯಾಗ್ರಹದಿಂದಲಾದರೂ ದೂರಮಾಡುವವರು ಎಂಬ ವಿಚಾರಗಳು ಎಲ್ಲ ಕಡೆಗೂ ರೂಢವಾಗಿದ್ದವು. ಆದರೆ ವಚನ ಶಾಸ್ತ್ರವನ್ನು ನಾವು ನಿರೀಕ್ಷಿಸುತ್ತ ಹೋದ ಹಾಗೆ ಕಾಯಕಕ್ಕೆ ಈ ತರದ ಅರ್ಥವಿರದೆ ಶ್ರಮವಹಿಸಿ ಉದ್ಯೋಗ ಮಾಡುವದು ಮತ್ತು ಅದರಿಂದ ಸಂಪಾದಿಸಿದ್ದನ್ನು ಅರ್ಪಣಭಾವದಿಂದ ವಿನಿಯೋಗಿಸುವದು ಎಂದು ಇದ್ದದ್ದು ನಮಗೆ ತೋರಿಬರಹತ್ತಿತು. ಈ ಭಾವವುಳ್ಳ ಅನೇಕ ವಚನಗಳನ್ನು ನಾವು ನಮ್ಮ ವಚನಶಾಸ್ತ್ರಸಾರ ಭಾಗ ೧ ಉತ್ತರಾರ್ಧ ಈ ಗ್ರಂಥದಲ್ಲಿ ಉದಹರಿಸಿದ್ದೇವೆ. ಈ ತತ್ವವು ಕೇವಲ ಭಕ್ತರಿಗಷ್ಟೇ ಅಲ್ಲ, ಜಂಗಮರಿಗೂ



ಕೂಡ ಅನ್ವಯಿಸುತ್ತದೆಂದು ಅವುಗಳಲ್ಲಿ ಕಂಡುಬಂದಿತು. ಇಂಥ ವಚನಗಳನ್ನು ನಾವು "ಜಂಗಮನು ಕಾಯಕ ಮಾಡತಕ್ಕದ್ದು" "ಜಂಗಮನು ಭಿಕ್ಷೆ ಬೇಡಕೂಡದು" "ಜಂಗಮನು ಭಿಕ್ಷಾರ್ಥಿಯಾಗಿ ದೇಶಾಂತರಿಯಾಗಬಾರದು" "ಬೇಡುವಾತ ಜಂಗಮನಲ್ಲ, ಬೇಡಿಸಿಕೊಂಬಾತ ಭಕ್ತನಲ್ಲ" ಈ ಶಿರೋಲೇಖಗಳ ಕೆಳಗೆ ಉದಹರಿಸಿರುತ್ತೇವೆ.

ಕಾಯಕಕ್ಕೆ ಸಂಬಂಧಿಸಿದ ನಿಜತತ್ವಗಳನ್ನು ನಾವು "ಕಾಯಕ' ಈ ಶಿರೋಲೇಖವುಳ್ಳ ಈಗಿನ ಲೇಖದಲ್ಲಿ ಸವಿಸ್ತಾರವಾಗಿ ನಿರೂಪಿಸಿದ್ದೇವೆ.

ಈ ಲೇಖವು ೧೯೨೭ ನೇ ಇಸ್ವಿ ಸೆಪ್ಟೆಂಬರ ತಿಂಗಳಿನ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು. ಅದು ಆಗಿನ ಪ್ರಮುಖರಲ್ಲಿ ಒಂದು ದೊಡ್ಡ ಚಳವಳಿಯನ್ನುಂಟು ಮಾಡಿತು. ಈ ಲೇಖವನ್ನು ನಿಷೇಧಿಸುವ ಅಸಂಖ್ಯ ಪತ್ರಗಳು ನಮ್ಮ ಕಡೆಗೆ ಆಗ ಬಂದವು. ಇಷ್ಟೇ ಅಲ್ಲ, ಶಿವಾನುಭವ ಪತ್ರಿಕೆಯನ್ನು ಬಹುಜನ ಚಂದಾದಾರರು ಬಹಿಷ್ಕರಿಸಿದರು. ಆದರೆ ನಾವು ಪ್ರತಿಪಾದಿಸಿದ ಕಾಯಕದ ತತ್ವಗಳನ್ನು ಸಮರ್ಥಿಸುವ ಶಿವಶರಣರ ಶ್ರೇಷ್ಠ ಉಕ್ತಿಗಳಿದ್ದ ಮೂಲಕ ಅವುಗಳ ತತ್ವಗಳನ್ನು ಯಾರೂ ಬಹಿರಂಗವಾಗಿ ಖಂಡಿಸಿರುವದಿಲ್ಲ. ಇದರ ಬದಲು "ಕಾಯಕ" ಈ ಶಬ್ದದಲ್ಲಿ ಅನೇಕ ಮಹತ್ವದ ವಿಚಾರಗಳು ತುಂಬಿಕೊಂಡಿದ್ದುದು ಜನರಿಗೆ ಬರಬರುತ್ತ ಕಂಡುಬರಹತ್ತಿತು. ಇದರಿಂದ ಕಾಯಕದ ವಿಷಯವಾಗಿ ಮೊದಲು ಉಂಟಾಗಿದ್ದ ತಪ್ಪು ತಿಳುವಳಿಕೆಗಳು ದೂರಾಗಹತ್ತಿದವು. ಇಷ್ಟೇ ಅಲ್ಲ, "ಕಾಯಕ"ದಲ್ಲಿ ಒಂದು ಶ್ರೇಷ್ಠ ಜೀವನಕ್ರಮವನ್ನು ಶಿವಶರಣರು ಅನುಗೊಳಿಸಿದ್ದಾರೆಂಬುದು ಎಲ್ಲರ ಮನವರಿಕೆಯಾಗಹತ್ತಿತು. ಮುಂದೆ ಬಹುಜನರು ತಮಗೆ ತೋರಿದಂತೆ ಕಾಯಕದ ವಿಷಯವಾಗಿ ಅನೇಕ ಸ್ವತಂತ್ರ ಲೇಖಗಳನ್ನು ಪತ್ರಿಕೆಗಳಲ್ಲಿ ಬರೆಯಹತ್ತಿದರು. ಹೀಗೆ ಈ ಶಬ್ದವು ಹೊಸ ವಿಚಾರಗಳನ್ನು ಸಮಾಜದಲ್ಲಿ ಉಂಟುಮಾಡಿದ್ದು ಅತ್ಯಂತ ಸಮಾಧಾನಕರವಾಗಿರುತ್ತದೆ.

"ಕಾಯಕ" ಈ ಲೇಖದಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳನ್ನು ನಾವು ಬಹಳ ವಿಸ್ತೃತವಾಗಿ ಬರೆದಿದ್ದನ್ನು ವಾಚಕರು ಮೂಲ ಲೇಖದಲ್ಲಿಯೇ ಅವಲೋಕಿಸಬೇಕೆಂದು ನಮ್ಮ ವಿನಂತಿ ಇದೆ.

## ಶಿವಾನುಭವ ಶಾಸ್ತ್ರದ ವಿಸ್ತಾರವು.

ಈ ಲೇಖ ಮಾಲೆಯಲ್ಲಿ ಇದು ಕೊನೆಯದಾಗಿದೆ. ಕೆಲವು ವರ್ಷಗಳ ಹಿಂದೆ ವೀರಶೈವರಿಗೆ ತಮ್ಮ ಧರ್ಮದ ಮೂಲ ತತ್ವಗಳಾವವು, ಅದರ ರಚನೆ ಏನು, ಎಂಬುದರ ವಿಷಯವಾಗಿ ಯಾವ ಪರಿಚಯವೂ ಇರಲಿಲ್ಲ. ಷಟ್‌ಸ್ಥಲ ಶಾಸ್ತ್ರದ ವಿಚಾರಗಳು ಅವರಿಗೆ ಗೊತ್ತಿರಲಿಲ್ಲ. ಅದರ ಸ್ವರೂಪ ಎಂಥದು, ಅದರ ವಿಸ್ತಾರವು ಎಷ್ಟು, ಎಂಬುದು ಏನೂ ತಿಳಿದಿರಲಿಲ್ಲ. ಆದರೆ ವಚನ ಗ್ರಂಥಗಳನ್ನು ನಾವು ಪ್ರಕಟಮಾಡಹತ್ತಿದಂದಿನಿಂದ ಈ ಸ್ಥಿತಿಯು ಕ್ರಮೇಣ ಬದಲಾಗುತ್ತ ನಡಿದದೆ. ಆದರೂ ವೀರಶೈವ ಧರ್ಮಗ್ರಂಥಗಳು ಅವುಗಳಲ್ಲಿ ಮುಖ್ಯವಾಗಿ ವಚನ ಗ್ರಂಥಗಳು ಇನ್ನೂ ಪೂರ್ಣವಾಗಿ ಅಚ್ಚಾಗದೆ ಇರುವದರಿಂದ ಷಟ್‌ಸ್ಥಲದೊಳಗಿನ ಸೂಕ್ಷ್ಮ ವಿಚಾರಗಳು ಇನ್ನೂ ಜನರಿಗೆ ಅವಗತವಾಗಿರುವದಿಲ್ಲ ಇಷ್ಟೇ ಅಲ್ಲ, ಅವುಗಳ ಅಭ್ಯಾಸವು ಸಹ ನಡಿದಿರುವದಿಲ್ಲ. ಅವುಗಳ ಆಚರಣೆಯಂತೂ ದೂರೇ ಉಳಿದದೆ. ಆದ್ದರಿಂದ ವಚನಗಳು ತಮಗೆ ತಿಳಿಯುವದಿಲ್ಲೆಂದು ಬಹು ಜನರು ಯಾವಾಗಲೂ ಅನ್ನುವದುಂಟು.

ಷಟ್‌ಸ್ಥಲ ಶಾಸ್ತ್ರದಲ್ಲಿ ಭಾಗವಿಭಾಗಗಳು ಅಸಂಖ್ಯಾತವಾಗಿವೆ. ಇವುಗಳಲ್ಲೆಲ್ಲ ವಿಶಿಷ್ಟಾರ್ಥವುಳ್ಳ ಶಬ್ದಗಳು ತುಂಬಿಹೋಗಿವೆ. ನಾವು ರಚಿಸಿದ ಶಿವಾನುಭವ ಶಬ್ದಕೋಶದಲ್ಲಿ ಇಂಥ ಶಬ್ದಗಳು ಒಂದು ಸಾವಿರ ಸಂಖ್ಯೆಯನ್ನು ಮಿಕ್ಕಿವೆಂಬುದು ಕಂಡುಬರುವದು. ಶಿವಾನುಭವ ಶಾಸ್ತ್ರದಲ್ಲಿಯ ಪ್ರತಿಯೊಂದು ಶಬ್ದಕ್ಕೂ ಸಂದರ್ಭಕ್ಕನುಸರಿಸಿ ವಿವಿಧ ಅರ್ಥಗಳಿರುತ್ತವೆಂಬುದು ಮೇಲಿನ ಗ್ರಂಥದಿಂದ ವಾಚಕರಿಗೆ ತಿಳಿದುಬರುವದು. ಅವುಗಳನ್ನು ಪರಸ್ಪರ ವಿಂಗಡಿಸಿ ಹೇಳುವದು ಬಹು ದುಸ್ತರವಾದದ್ದು. ಶಿವಾನುಭವ ಶಾಸ್ತ್ರದ ಅಭ್ಯಾಸವು ೭೦೦ ವರ್ಷ ನಿಂತುಹೋದದ್ದರ ಪರಿಣಾಮವು ಇದಾಗಿದೆ. ಈ ೭೦೦ ವರ್ಷಗಳಲ್ಲಿ ಕ್ವಚಿತ್ತಾಗಿ ಕೆಲವರಿಗೆ ಪುರಾತನ ವಚನಗ್ರಂಥಗಳು ಕೈಗೆ ಬಿದ್ದದ್ದರಿಂದ ಅವುಗಳನ್ನು ಅವರು ಅಭ್ಯಾಸ ಮಾಡುತ್ತ ಬಂದರು. ಆದರೆ ಅವರಾದರೂ ತಾವು ತಿಳಿದದ್ದನ್ನು ಯಾರಿಗೂ ತಿಳಿಸದೆ ಗುಪ್ತವಾಗಿ ಇಡುತ್ತ ಬಂದರು. ಹೀಗೆ ಈ ಶಾಸ್ತ್ರವು ಹಿಂದುಸ್ತಾನದಲ್ಲಿ ಹಿಂದೆ ಬಿದ್ದಿದೆ.



ಶಿವಾನುಭವ ಶಾಸ್ತ್ರವು ಎಷ್ಟು ವಿಸ್ತಾರವಾದದ್ದಿರುತ್ತದೆಂಬುದರ ಕಲ್ಪನೆಯು ವಾಚಕರಿಗೆ ಬರಬೇಕೆಂದು ನಾವು ಈ ಲೇಖವನ್ನು ಬರೆದೆವು. ಈ ಲೇಖವು ಶಿವಾನುಭವದ ೧ನೇ ವರ್ಷದ ೧ನೇ ಸಂಚಿಕೆಯಲ್ಲಿ ಅಂದರೆ ೧೯೨೬ ರಲ್ಲಿಯೇ ಪ್ರಸಿದ್ಧವಾಗಿರುತ್ತದೆ.

— ಫ. ಗು. ಹಳಕಟ್ಟಿ,
ಬಿ. ಎ. ಎಲ್. ಎಲ್. ಬಿ.
ವಿಜಾಪುರ.

---

# ಅನುಕ್ರಮಣಿಕೆ.


(೧) ಪ್ರಸ್ತಾವನೆ ... .... ... ೧

(೨) ಪೀಠಿಕೆ ... .... ... ೧

(೩) ಶಿವಾನುಭವದ ಸತ್ಯಮಾರ್ಗ ... ... ೧
—ಶ್ರೀಬಂಥನಾಳು ಶಿವಯೋಗಿಗಳು, ಮು. ಬಂಥನಾಳು.

(೪) ಶಿವಾನುಭವದ ಅವಶ್ಯಕತೆ ... ... ೧೬
—ವಿದ್ಯಾವಾಚಸ್ಪತಿ ಶಂಭುಲಿಂಗಸ್ವಾಮಿಗಳು ಮು. ವಿಜಾಪುರ

(೫) ಜೀವನದಗುಟ್ಟು. ... ... ... ೨೭
— ಶ್ರೀಮಹಾದೇವಸ್ವಾಮಿಗಳು ಸರ್ಪಭೂಷಣಮಠ
ಮು. ಬೆಂಗಳೂರು.

(೬) ಶಿವಯೋಗ ಅಥವಾ ಲಿಂಗಾನುಸಂಧಾನ ... ೪೮
— ಶ್ರೀ. ಕಲ್ಯಾಣಪ್ಪ ಬ್ಯಾಳಿ ಬಿ. ಎ. ಬಿ. ಟಿ. ವಿಜಾಪುರ

(೭) ಶಿವಾನುಭವದ ಸಾಮಾನ್ಯಸ್ವರೂಪು ... ೬೭
—ರಾ॥ ಬ॥ ಫ ಗು. ಹಳಕಟ್ಟಿ,
ಬಿ. ಎ. ಎಲ್. ಎಲ್. ಬಿ. ವಿಜಾಪುರ.

(೮) ಕಾಯಕ. ... .... ... ೭೬
—ರಾ॥ ಬ॥ ಫ. ಗು. ಹಳಕಟ್ಟಿ,
ಬಿ ಎ. ಎಲ್. ಎಲ್. ಬಿ. ವಿಜಾಪುರ.

(೯) ಶಿವಾನುಭವ ಶಾಸ್ತ್ರದ ವಿಸ್ತಾರ. ... ೯೦
—ರಾ॥ ಬ॥ ಫ. ಗು. ಹಳಕಟ್ಟಿ, ಬಿ. ಎ. ಎಲ್. ಎಲ್. ಬಿ.
ವಿಜಾಪುರ.

(೧೦ ಶಿವಯೋಗಾಚರಣೆಯ ತ್ರಿವಿಧಿ. .... ೧೦೭


---

# ಶಿವಾನುಭವದ ಸತ್ಯಮಾರ್ಗ.

"ಹುತ್ತ ಬಡಿದೊಡೆ ಹಾವು ಸಾಯಬಹುದೇನಯ್ಯಾ? ಅಘೋರ ತಪವ ಮಾಡಿದಡೇನು? ಅಂತರಂಗದ ಆತ್ಮಶುದ್ಧಿಯಲ್ಲದವರ ನೆಂತು ನಂಬುವನಯ್ಯ ಕೂಡಲಸಂಗಮದೇವ?" (ಶ್ರೀಮದ್ಬಸವೇಶ)

ಸನಾತನವಾದ ವೈದಿಕ ಧರ್ಮಾನುಸಾರವಾಗಿ ಪ್ರತಿ ಒಬ್ಬನಿಗೆ ಆತ್ಮಸಾಕ್ಷಾತ್ಕಾರವಾಗಬೇಕಾದರೆ, ಅಥವಾ ನಮ್ಮೀ ವೀರಶೈವ ಮತಾನುಸಾರವಾಗಿ ಶಿವಾನುಭವವು ಪ್ರಾಪ್ತವಾಗಬೇಕಾದರೆ, ಅರ್ಥಾತ್ ಈ ಜೀವನು ಶಿವನಾಗಬೇಕಾದರೆ, ಕೇವಲ ಬಾಹ್ಯಾಚಾರಂಗಳೇ ಸಾಕಾಗದೆ ಅವುಗಳ ಜೊತೆಗೆ ಅಂತರಂಗದ ಶುದ್ಧತೆಯೂ ಅಗತ್ಯವಿರುತ್ತದೆಂದು ಕಂಡು ಬರುತ್ತದೆ. ಒಬ್ಬನು ತ್ರಿಕಾಲ ಷೋಡಶೋಪಚಾರಗಳಿಂದ ದೇವತಾರ್ಚನೆ ಮಾಡಬಹುದು. ಒಬ್ಬನು ಸದಾ ಭಸ್ಮರುದ್ರಾಕ್ಷಾದ್ಯಷ್ಟಾವರಣಾನ್ವಿತನಿರಬಹುದು. ಮತ್ತೊಬ್ಬನು ಸದಾ ಜಪಮಾಲೆಯನ್ನು ಹಿಡಿದಿರಬಹುದು. ಆದರೆ ಸರ್ವ ಕರ್ಮಗಳಿಗೆ ಆಧಾರಭೂತವಾದಂಥ ಹೃದಯ ಪವಿತ್ರತೆಯೊಂದಿರದಿದ್ದರೆ ಮಾತ್ರ ಆತನಿಗೆ ಶಿವಾನುಭವದ ಸುಖವು ಎಂದಿಗೂ ದೊರೆಯಲಾರದು. ನಮ್ಮ ಪ್ರಾಚೀನ ಮಹರ್ಷಿಗಳೂ ಮಹಾನುಭಾವರಾದ ಶಿವಶರಣರೂ ಅಂತರಂಗ ಪರಿಶುದ್ಧರೂ ಭಾವನಾ ಪ್ರಾಧಾನ್ಯರೂ ಇದ್ದದರಿಂದಲೇ ಚಿದ್ಘನ ಮೂರ್ತಿಯು ಅವರ ಶುದ್ಧ ಹೃದಯದಲ್ಲಿ ವಿರಾಜಿಸಿದನು. ಜಗತ್ತಿನೊಳಗಿನ ಯಾವ ಧರ್ಮಗ್ರಂಥಾವಲೋಕನೆಯನ್ನು ಮಾಡಿದರೂ ಭಾವನಾರಹಿತವಾದ ಕರ್ಮಗಳಿಗೆ ಬೆಲೆಯೇ ಇರುವದಿಲ್ಲವೆಂಬುದು ಸ್ಪಷ್ಟವಾಗಿ ಕಾಣುತ್ತದೆ. ಸೊನ್ನೆಗೆ ಹಿಂದೆ ಅಂಕಿಯೇ ಇರದಿದ್ದರೆ ಹೇಗೆ ಅದಕ್ಕೆ ಎಣಿಕೆಯೇ ಆಗುವದಿಲ್ಲವೋ ಹಾಗೆಯೇ ಕರ್ಮಗಳಿಗೆ ಅಂತಃಕರಣದ ಅರ್ಥಾತ್ ಭಾವನೆಯ ಆಶ್ರಯವಿದ್ದ ಹೊರ್ತು ಬೆಲೆಯೇ ಇರುವದಿಲ್ಲ. ಪ್ರಯುಕ್ತ ನಾವು ಶಿವಾನುಭಾವಿಗಳಾಗಬೇಕಾದರೆ ಕೇವಲ ಬಹಿರಂಗಾಚರಣಗಳೇ

ಅಂತರಂಗದ ಶುದ್ಧತೆಯ ಅವಶ್ಯಕತೆ.

ಸಾಕಾಗದೆ, ಅವುಗಳ ಜೊತೆಗೆ ಅಥವಾ ಅವುಗಳ ಸಾರ್ಥಕತೆಗೆ ಅಂತರಂಗದ ಪಾವಿತ್ರ್ಯತೆಯೂ ಅಗತ್ಯವೆಂಬುದು ನಿರ್ವಿವಾದ ಸಂಗತಿಯು.

**ಧರ್ಮಾವಲಂಬನದಲ್ಲಿ ಸುಖವು.**

ಲಕ್ಷಾಂತರ ಜೀವ ಕೋಟಿಗಳೊಳಗೆ ಮಿಗಿಲೆಂದೆನಿಸುವ ಈ ಮನುಷ್ಯನು ಉದ್ಧಾರವಾಗಬೇಕಾದರೆ ಮಿಕ್ಕಾದ ಪ್ರಾಣಿಗಳಂತೆ ವಿಷಯಲೋಲುಪ್ತನಾಗದೆ ಧರ್ಮಾವಲಂಬಿಯಾದ ಹೊರ್ತು ಗತ್ಯಂತರವಿಲ್ಲ. ಯಾಕಂದರೆ ನೈಜವಾದ ಶಾಂತಿಯು ವಿಷಯಗಳಲ್ಲಿರದೆ ಧರ್ಮದಲ್ಲಿಯೇ ಅಡಕವಾಗಿರುವದು. ನಾವು ಈ ಜಗತ್ತಿನ ಕಡೆಗೆ ಲಕ್ಷಪೂರ್ವಕವಾಗಿ ನೋಡಿದರೆ ಅರಸು ಮೊದಲು ಮಾಡಿಕೊಂಡು ಒಬ್ಬ ಆಳಿನ ವರೆಗೂ ಪ್ರತಿಒಬ್ಬನು ಸುಖೇಚ್ಛೆಯುಳ್ಳವನಿದ್ದರೂ, ದುಃಖಸ್ಥಿತಿಯೊಳಗೆ ಇದ್ದದ್ದೇ ಕಂಡು ಬರುತ್ತದೆ. ಇಂದ್ರಿಯಜನ್ಯ ಸುಖವು ಸತ್ಯ ಸುಖವಾಗದೆ ಸುಖಾಭಾಸವಾಗಿರುತ್ತದೆ. ಅಂತೆಯೇ "ಸುಖಮತ್ಯಂತಿಕಂ ಯತ್ತತ್ ಬುದ್ಧಿಗ್ರಾಹ್ಯಮತೀಂದ್ರಿಯಂ" ಎಂಬುದಾಗಿ ಭಗವದ್ಗೀತೆಯಲ್ಲಿ ಹೇಳಿದೆ. ಸುಖದ ಕಲ್ಪನೆಯಿಂದ ವಿಷಯಗಳ ಬೆನ್ನು ಹತ್ತಿ ಅದು ದೊರೆಯುವಸಲುವಾಗಿ ಎಷ್ಟು ಶ್ರಮ ವಹಿಸಿದರೂ ಕಡೆಗೆ ನೋಡಲಾಗಿ ಸುಖವು ಎಲ್ಲಿಯೂ ಇರುವದಿಲ್ಲ. ಆ ಸುಖವು ನಮ್ಮ ಕೈಯ್ಯಲ್ಲಿರುವದೆಂದು ಗ್ರಹಿಸುವಷ್ಟರಲ್ಲಿಯೇ ಕೈಯೊಳಗಿಂದ ಹೊರಟುಹೋಗಿರುತ್ತದೆ. ಇಂಥ ಅನೇಕ ಅನುಭವಗಳು ಒಂದರ ಹಿಂದೆ ಒಂದು ಬಂದು ಹೋಗುತ್ತಿದ್ದರೂ, ನಾವು ಬುದ್ಧಿವಂತರಾಗದೆ ಸುಖದ ಕಲ್ಪನೆಯ ಬೆನ್ನು ಹತ್ತುವದನ್ನು ಬಿಡದೆ, ಪುನಃ ಪುನಃ ಅದರ ಹಿಂದೆಯೇ ಓಡುತ್ತಿರುತ್ತೇವೆ. ಎತ್ತು ತೀವ್ರ ನಡೆಯಬೇಕೆಂಬ ಉದ್ದೇಶದಿಂದ ಒಬ್ಬ ಗಾಣಿಗನು ಒಂದು ಚಮತ್ಕಾರವಾದ ಯುಕ್ತಿಯನ್ನು ಯೋಚಿಸಿದನು. ಎತ್ತಿನ ಹೆಗಲ ಮೇಲೆ ಇರುವ ನೊಗಕ್ಕೆ ಒಂದು ಅಡ್ಡಗೋಲನ್ನು ಕಟ್ಟಿ ಅದರ ತುದಿಗೆ ತುಸು ಹುಲ್ಲಿನ ಪೆಂಡೆಯನ್ನು ಕಟ್ಟಿದ್ದನು. ಆದ ಕಾರಣ ಆ ಹುಲ್ಲಿನ ಪೆಂಡೆಯು ಯಾವಾಗಲೂ ಆ ಎತ್ತಿನ ಕಣ್ಣು ಮುಂದೆಯೇ ಇರುತ್ತಿದ್ದಿತು. ನನಗೂ ಹುಲ್ಲಿಗೂ ಅಂತರ ಒಂದು ಮೊಳವಿರುವದರಿಂದ, ಆ ಅಂತರ ಕಡಿಮೆಯಾಗಿ ನನಗೆ ಹುಲ್ಲು ತಿನ್ನಲಿಕ್ಕೆ ಸಿಗುವದೆಂದು ಆ ಎತ್ತು ಭಾವಿಸಿ ಅತಿ ತೀವ್ರದಿಂದ ಓಡಲಿಕ್ಕೆ ಹತ್ತಿತು. ಆದರೆ ಎಷ್ಟು ತಾಸು ಓಡಿದರೂ ಒಂದು ಮೊಳದ ಅಂತರದಲ್ಲಿ ಸ್ವಲ್ಪವೂ



ಕಡಿಮೆಯಾಗಲಿಲ್ಲ. ಆ ಹುಲ್ಲು ಅದಕ್ಕೆ ದೊರೆಯಲಿಲ್ಲ. ಮನುಷ್ಯರಾದ ನಮ್ಮಗಳ ಸ್ಥಿತಿಯೂ ಹಾಗೆಯೇ ಇದೆ. ಇಂದ್ರಿಯಜನ್ಯ ಸುಖದ ಗುಲಾಮರಾಗಿ ಎಷ್ಟೋ ಕಾಲ ಕನಕ ಕಾಮಿನಿ ಮೊದಲಾದ ವಿಷಯಗಳ ಬೆನ್ನು ಹತ್ತಿ ಓಡುತ್ತಿರುವೆವು. ಅನಂತ ಜನ್ಮಗಳನ್ನು ತಿರುಗಿದರೂ ಈ ಹೊತ್ತು ನಾವು ಪುನಃ ಮೊದಲಿನ ಸ್ಥಾನದಲ್ಲಿಯೇ ಇರುತ್ತೇವೆ. ಸುಖ ಮತ್ತು ನಾವು ಇವುಗಳ ನಡುವಿನ ಮೊಳದ ಅಂತರ ಈಗಲೂ ಕಡಿಮೆಯಾಗಿಲ್ಲ. ಪ್ರೇಮ ಪ್ರೇಮವೆಂದು ನಾವು ಭ್ರಮಿಷ್ಠರಾಗಿ ತಿರುಗುತ್ತಿರುತ್ತೇವೆ. ಒಬ್ಬರ ಬಲೆಯೊಳಗೆ ಒಬ್ಬರು ಸಿಲ್ಕಿ ಒದ್ದಾಡುವ ನಮ್ಮ ಈ ಸುಖದ ಕಲ್ಪನೆಯು ಅನಂತ ಕಾಲದಿಂದ ಬೆನ್ನು ಹತ್ತಿ ಬಂದಿರುತ್ತದೆ. ನಾವು ಸದಾ ಸುಖಿಯಾಗಿರಬೇಕು ಮತ್ತು ದುಃಖವು ನಮ್ಮ ಸುತ್ತಮುತ್ತಲು ಸಹ ಸುಳಿಯಬಾರದೆಂದು ಇಚ್ಛಿಸುತ್ತೇವೆ. ಈ ಇಚ್ಛೆಯಿಂದ ಪ್ರೇರಿತರಾಗಿ ಕುರುಡರಂತೆ ತಿರುಗಲಿಕ್ಕೆ ಹತ್ತಿರುತ್ತೇವೆ. ಮಧ್ಯದಲ್ಲಿ ಎಲ್ಲಿಯಾದರೂ ಸುಖದ ಭಾಸವಾಗಿ ಅದಕ್ಕೆ ಅಪ್ಪಿಕೊಳ್ಳಲಿಕ್ಕೆ ಹೋಗುವದಾಗುವದು. ಅದು ಮುಳ್ಳು ಗಿಡವಾಗಿ ಕೈಗೆ ನೆಡಲಿಕ್ಕೆ ಹತ್ತುವದು. ಅನಂತ ಕಾಲದಿಂದ ಈ ಜಗತ್ತು ಹೀಗೆಯೇ ನಡೆದಿರುವದು.

**ಇಂದ್ರಿಯಜನ್ಯ ಸುಖವು ಕ್ಷಣಿಕವಾದುದು.**

ಮುಮುಕ್ಷುಗಳೇ, ತಾವು ತಮ್ಮ ಇಲ್ಲಿಯ ವರೆಗಿನ ಆಯುಷ್ಯಕ್ರಮದ ವಿಚಾರ ಮಾಡಿದರೆ, ನಮಗೆ ನಿರಾಮಯ ಸುಖದ ಪ್ರಾಪ್ತಿಯು ಕ್ಷಣ ಸಹ ಎಂದೂ ಪ್ರಾಪ್ತವಾಗಿಲ್ಲವೆಂದು ನಿಶ್ಚಯವಾಗಿ ಕಂಡುಬರುತ್ತದೆ. ಯಾವ ಸಂಗತಿಯು ನಮ್ಮ ಇಲ್ಲಿಯ ವರೆಗಿನ ಆಯುಷ್ಯದಲ್ಲಿ ಲಭ್ಯವಾಗುವದೆಂದು ಯಾರು ಎದೆ ತಟ್ಟಿ ಹೇಳುವರು? ಈ ಮೃಗಜಲದ ಬೆನ್ನು ಹತ್ತಿ ಓಡಿ ಓಡಿ ನಮ್ಮ ನೀರಡಿಕೆಯು ಮಾತ್ರ ಅಧಿಕವಾಗುತ್ತದೆ. ಇಂದ್ರಿಯಜನ್ಯ ಸುಖದ ಬೆನ್ನು ಹತ್ತಿ ನಾವು ವಿಷಯಗಳ ದಾಸಾನುದಾಸರಾಗಿರುತ್ತೇವೆ. ನಮ್ಮ ಸ್ಥಿತಿಯು ಎಷ್ಟು ನಿರಾಶಾಜನಕವಿದ್ದರೂ, ಅದರಲ್ಲಿಯೇ ಆಶೆಯ ಸ್ಥಾನವನ್ನು ಹುಡುಕುತ್ತಿರುತ್ತೇವೆ. ಒಂದಿಲ್ಲ ಒಂದು ಕಾಲದಲ್ಲಿ ಸುಖಪ್ರಾಪ್ತಿಯಾಗುವದೆಂಬ ಆಶೆಯು ಈಗಲೂ ಬಿಟ್ಟುಕೊಟ್ಟಿರುವದಿಲ್ಲ. ಧರ್ಮಮೂರ್ತಿಯಾದ ಯುಧಿಷ್ಠಿರನು ವನವಾಸದಲ್ಲಿದಾಗ್ಗೆ ಶಾಪರೂಪದಲ್ಲಿದ್ದ ಯಕ್ಷನು– ರಾಜಾ,

ಈ ಜಗತ್ತಿನಲ್ಲಿ ಚಮತ್ಕಾರ ಯಾವುದೆಂದು ಕೇಳಿದ್ದಕ್ಕೆ ಧರ್ಮನು— "ಅಹನ್ಯಾನಿ ಭೂತಾನಿ ಪ್ರವಿಶಂತಿ ಯಮಾಲಯಂ ॥ ಶೇಷಾಃ ಸ್ಥಾವರಮಿಚ್ಛಂತಿ ಕಿಮಾಶ್ಚರ್ಯಂ ಇತಃ ಪರಂ" ಎಂಬುದಾಗಿ ಉತ್ತರ ಹೇಳಿದ್ದಾನೆ. ಅಂದರೆ ನಮ್ಮ ಸುತ್ತುಮುತ್ತಲು ಅನಂತ ಪ್ರಕಾರದ ದುಃಖ ಪಸರಿಸಿದ್ದರೂ ನಾವು ಸುಖದ ಆಶೆಯನ್ನು ಮಾಡುತ್ತೇವೆ. ಮೃತ್ಯುವಿನ ಅವಿರತವಾದ ಸಾಮ್ರಾಜ್ಯವನ್ನು ನೋಡುತ್ತಿದ್ದರೂ ನಾವು ಚಿರಂಜೀವಿಗಳಾಗಬೇಕೆಂಬ ಅಪೇಕ್ಷೆ ಮಾಡುತ್ತೇವೆ. ಇದರ ಹೊರ್ತು ಈ ವಿಶ್ವದಲ್ಲಿ ಇನ್ನೊಂದು ಚಮತ್ಕಾರವೇ ಇಲ್ಲ. ಇದೇ ವಿಷಯವಾಗಿ ಶ್ರೀ. ಪ್ರಭುದೇವರು ಸಹ "ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲವಯ್ಯಾ. ಹೆಣ್ಣು ಮಾಯೆ ಯೆಂಬರು, ಹೆಣ್ಣು ಮಾಯೆಯಲ್ಲವಯ್ಯಾ. ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲವಯ್ಯಾ. ಮನದ ಕೊನೆಯೊಳಗಿರುವ ಆಶೆಯೇ ಮಾಯೆ ಕಾಣಾ ಗುಹೇಶ್ವರಾ." ಎಂದು ಆಶೆಯ ನಿಜಸ್ವರೂಪವನ್ನು ಅವನು ಹೇಳಿದ್ದಾರೆ. ನಮ್ಮ ಮೇಲೆ ಒಮ್ಮೆಲ್ಲ ಒಮ್ಮೆ ದುಃಖದ ಪ್ರಸಂಗವು ಬಂದೀತು ಅಥವಾ ಎಂದಾದರೊಮ್ಮೆ ಮೃತ್ಯುವಿನ ಬಾಯಿಗೆ ತುತ್ತಾಗುವೆವು ಎಂಬ ತಿಳಿವಳಿಕೆಯು ಎಂದೂ ನಮ್ಮ ಮನಸ್ಸಿನಲ್ಲಿ ಬರುವದಿಲ್ಲ.

ಸದ್ಯ ಸ್ಥಿತಿಯಲ್ಲಿ ಸುಖಪ್ರಾಪ್ತಿಯ ಪ್ರಸಂಗವು ಯತ್ಕಿಂಚಿತ್ತಾದರೂ ಇಲ್ಲವೆಂದು ಪ್ರತ್ಯಕ್ಷ ಅನುಭವದಿಂದ ಸಿದ್ಧವಾದರೂ ನಮಗೆ ಬೋಧವಾಗುವದಿಲ್ಲ. ನಮ್ಮ ಸುತ್ತಲು ನಿಜವಾದ ಸುಖ ಪುರುಷನು ಒಬ್ಬನೂ ಇಲ್ಲ.

**ಶಿವಾನುಭವವೆಂದರೇನು ?**

ಒಬ್ಬನು ಶ್ರೀಮಂತನಿದ್ದು ಉಣ್ಣಲಿಕ್ಕೂ ಉಡಲಿಕ್ಕೂ ಯಥೇಚ್ಛವಾಗಿ ಇದ್ದರೂ ಆತನಿಗೆ ಬದ್ಧ ಕೋಷ್ಠತೆಯ ವಿಕಾರವಿರುತ್ತದೆ. ಒಂದಿಷ್ಟು ಉಣ್ಣುವ ಪದಾರ್ಥದ ಕಡೆಗೆ ದೃಷ್ಟಿ ಬಿದ್ದರೇನೇ ಆತನಿಗೆ ವಾಂತಿಯಾಗುವಂತೆ ಅದು ಅಸಹ್ಯ ತೋರುತ್ತದೆ. ಒಬ್ಬನಿಗೆ ಹಸಿವೆಯು ಅತ್ಯಂತವಿದ್ದರೂ, ಆತನಿಗೆ ತುತ್ತಿನಷ್ಟು ಸಹ ಅನ್ನ ದೊರೆಯುವದೂ ಕೂಡಾ ಅತಿ ಪ್ರಯಾಸ. ಒಬ್ಬ ಶ್ರೀಮಂತನು ಮಕ್ಕಳಿಲ್ಲವೆಂದು ದುಃಖಮಾಡುತ್ತಾನೆ. ಆದರೆ ಮತ್ತೊಬ್ಬ ದರಿದ್ರನಿಗೆ ಮಕ್ಕಳದೊಂದು ತಂಡವೇ ಇರುತ್ತದೆ. ಇಷ್ಟು ಮಕ್ಕಳಿಗೆ ತಿನ್ನಲಿಕ್ಕೆ ಏನು ಹಾಕಲಿ, ಎಂಬ ವಿಚಾರದಲ್ಲಿಯೇ ಆತನು ಮುಳುಗಿ ಹೋಗಿರುತ್ತಾನೆ. ಹೀಗೆ ಏಕೆ ಇರುತ್ತ



ದೆಂದರೆ, ಸುಖ ಮತ್ತು ದುಃಖ ಇವು ಒಂದೇ ನಾಣ್ಯದ ಎರಡು ಮಗ್ಗಲುಗಳಂತೆ ಇರುತ್ತವೆ. ನಾಣ್ಯವು ಬೇಕಾದರೆ ಹೇಗೆ ರಾಜನ ಮುಖದೊಡನೆಯೇ ಎರಡನೇ ಮಗ್ಗಲಿನ ಮುದ್ರೆಯನ್ನು ತೆಗೆದುಕೊಳ್ಳಲಿಕ್ಕೆ ಬೇಕಾಗುತ್ತದೆಯೋ, ಹಾಗೆಯೇ ಸುಖಪ್ರಾಪ್ತಿಯಾಗಬೇಕಾಗಿದ್ದರೆ, ದುಃಖವನ್ನು ಅನುಭೋಗಿಸಲಿಕ್ಕೆ ಸಿದ್ಧವಿರಲೇಬೇಕು. ಆದರೆ ಈ ತಿಳಿವಳಿಕೆಯು ನಮಗೆ ಸರಿ ಬೀಳುವದಿಲ್ಲವಾದ್ದರಿಂದ, ಸತ್ಯ ಸುಖದ ಇಚ್ಛೆಯನ್ನು ಮಾತ್ರ ಮಾಡಿ, ಇಂದ್ರಿಯಗಳ ಜಾಲದೊಳಗೆ ಸಿಕ್ಕಿ ಬೀಳುತ್ತೇವೆ. ನಮ್ಮ ಸ್ವಾತಂತ್ರ್ಯದ ಹಕ್ಕು ಹೋಗಿ ಗುಲಾಮಗಿರಿಯು ಮಾತ್ರ ಹಣೆಯ ಬರಹಕ್ಕೆ ಬರುತ್ತದೆ. ಈ ಜಗತ್ತಿನೊಳಗಿನ ಸುಖ ದುಃಖಗಳ ಕಲ್ಪನೆಗಳಲ್ಲಿ ನೈಜವಾದ ತಥ್ಯವು ಎಷ್ಟಿರುತ್ತದೆಂಬದನ್ನು ವಿಚಾರಿಸಿದರೆ, ಇಂದ್ರಿಯಜನ್ಯ ಸುಖದ ಗುಲಾಮರಾಗಿರುವದು ನಮಗೆ ಎಷ್ಟು ಮಾತ್ರವೂ ಯೋಗ್ಯವಾದುದಲ್ಲ. ಯಾರಾದರೂ ಎರಡು ಸವಿ ಮಾತುಗಳನ್ನಾಡಿದರೆ ನಮಗೆ ಆನಂದವಾಗಬೇಕು, ಮತ್ತು ಎರಡು ಕೆಟ್ಟ ಶಬ್ದಗಳನ್ನಾಡಿದರೆ ನಮಗೆ ದುಃಖವಾಗಬೇಕು, ಈ ಸ್ಥಿತಿಯು ನಿಜವಾಗಿಯೂ ಲಜ್ಜಾಸ್ಪದವಾದುದು. ನಮ್ಮ ಸರ್ವ ಆಯುಷ್ಯದ ಕ್ರಮವನ್ನು ವಿಚಾರ ಮಾಡಿದರೆ ಅದರಲ್ಲಿ ಗುಲಾಮಗಿರಿಯ ಹೊರ್ತು ಎರಡನೆಯದೇನೂ ತೋರುವದಿಲ್ಲ. ನಾವು ಹೊಟ್ಟೆಯ ಗುಲಾಮರು ಮತ್ತು ಉಡುಪು ತೊಡಪುಗಳ ಗುಲಾಮರು. ನಾವು ನಮ್ಮ ದೇಶದ ಹಾಗೂ ದೇಶಾಭಿಮಾನದ ಗುಲಾಮರು ಮತ್ತು ಕೀರ್ತಿಯ ದೊಡ್ಡ ಹೆಸರಿನ ಗುಲಾಮರು. ಈ ಪ್ರಕಾರವಾದ ಅನೇಕ ಗುಲಾಮಗಿರಿಗಳಿಂದ ನಮ್ಮ ಈಶ್ವರತ್ವವು ಮುಚ್ಚಿಕೊಂಡು ಹೋಗಿರುವದು. ನಾವು ನಮ್ಮ ಕೈಯ್ಯಿಂದಲೇ ಅದಕ್ಕೆ ಈ ಆವರಣವನ್ನು ಕೊಟ್ಟಿರುತ್ತೇವೆ. ಇಂದಿಗೂ ಈ ಶೃಂಖಲೆಯು ನಮಗೆ ಪಂಜರದೊಳಗಿನ ಗಿಳಿಗೆ ಯಾವ ಪ್ರಕಾರ ಕಾಲು ಗಗ್ಗರೆಯು ಭೂಷಣಪ್ರದವಾಗಿ ತೋರುವದೋ, ಹಾಗೆಯೇ ಇದು ನಮಗೆ ಆನಂದಯುಕ್ತವಾಗಿ ತೋರುತ್ತದೆ. ಈ ಗುಲಾಮಗಿರಿಯ ಸ್ವರೂಪದ ನಿಶ್ಚಿತ ತಿಳುವಳಿಕೆಯು ತಿಳಿಯಲಿಕ್ಕೆ ಹತ್ತಿದರೆ, ಸದ್ಯದ ಸುಖೋತ್ಪಾದಕ ವಸ್ತುಗಳ ನಿಜಸ್ವರೂಪವು ನಮಗೆ ಕಾಣಲಿಕ್ಕೆ ಹತ್ತುವದು. ಮತ್ತು ಇದರೊಳಗಿಂದ ಪಾರಾಗುವ ಉತ್ಕಟೇಚ್ಛೆಯು ಉತ್ಪನ್ನವಾಗುವದು. ಪ್ರಖರವಾದಂಥ ಬೆಂಕಿಯ ಕೆಂಡ

ವನ್ನು ಯಾರಾದರೂ ನಮ್ಮ ಮಸ್ತಕದ ಮೇಲೆ ಅದನ್ನು ತೆಗೆದುಹಾಕುವದರ ಸಲುವಾಗಿ ನಾವು ಎಷ್ಟು ಆತುರ ಪಡುತ್ತೇವೆಯೋ ಅಷ್ಟು ಆತುರತೆಯಿಂದ ಈ ಇಂದ್ರಿಯಜನ್ಯ ಸುಖದುಃಖಗಳ ಆಚೆಗೆ ಹೋಗುವ ಅವಿಶ್ರಾಂತ ಪ್ರಯತ್ನವನ್ನು ನಾವು ಮಾಡತಕ್ಕದ್ದು. ಇದಕ್ಕೇನೇ ಶಿವಾನುಭವ ಅಥವಾ ಶಿವಯೋಗಾನುಸಂಧಾನವೆನ್ನುವರು.

**ಶಿವಾನುಭವಿಯ ನಡೆ.**

ಶಿವಾನುಭವಿಯಾಗುವವನು ಯಾವಾಗಲೂ ನಿತ್ಯಾನಿತ್ಯ ವಸ್ತುವಿನ ವಿಚಾರಮಾಡಬೇಕು. ಈ ಜಗತ್ತಿನಲ್ಲಿ ಸತ್ಯ ವಸ್ತು ಯಾವದು, ಅಸತ್ಯ ವಸ್ತು ಯಾವದು, ಚಿರಕಾಲ ಇರುವ ಪದಾರ್ಥವು ಯಾವದು, ಕ್ಷಣಭಂಗುರವಾದ ಪದಾರ್ಥವು ಯಾವದು, ಇದರ ವಿಚಾರ ನಿತ್ಯ ಮಾಡುತ್ತಿರಬೇಕು. ಪರಮಾತ್ಮನ ಹೊರ್ತು ಸರ್ವ ವಸ್ತುಗಳು ಅನಿತ್ಯವಾದಂಥವುಗಳು ಮತ್ತು ಕ್ಷಣಭಂಗುರವಾದವುಗಳು ಎಂಬದನ್ನು ಶಿವಾನುಭವಿಯಾಗುವವನು ತನ್ನ ಮನಸ್ಸಿನಲ್ಲಿ ನಿಶ್ಚಯಿಸಿರಬೇಕು. ಈ ಪ್ರಪಂಚದಲ್ಲಿಯ ಸರ್ವ ಪದಾರ್ಥಗಳ ಸ್ಥಿತಿಗಳಿಗೆ ಅಂತ್ಯಕಾಲವಿರುತ್ತದೆ. ಪಶು-ಪಕ್ಷಿ-ಮನುಷ್ಯ ಮೊದಲಾದ ಸಕಲ ಪ್ರಾಣಿಗಳೂ ಮರಣಾಧೀನವಾದವುಗಳೇ ಇರುತ್ತವೆ. ಸೂರ್ಯಚಂದ್ರ ಮತ್ತು ಇತರ ಖಗೋಲ ಪದಾರ್ಥಗಳಿಗೆ ಅಂತ್ಯಕಾಲವಿರುತ್ತವೆ. ಇವುಗಳಲ್ಲಿಯ ಪ್ರತ್ಯೇಕ ವಸುವಿಗೆ ಯಾವಾಗಲೂ ರೂಪಾಂತರವಾಗುತ್ತಿರುತ್ತದೆ. ಈ ಹೊತ್ತು ಎತ್ತರವಾದ ಯಾವ ಪರ್ವತವನ್ನು ನೋಡುತ್ತಿರುವೆವೋ, ಅದು ನಾಳೆ ತಗ್ಗಾದ ಸಮುದ್ರವಾಗಬಹುದು. ತಗ್ಗಾದ ಕೊಳ್ಳವು ಎತ್ತರವಾದ ಪರ್ವತವಾಗಬಹುದು. ಈ ಸಂಸಾರದಲ್ಲಿಯ ಯಾವತ್ತು ಪದಾರ್ಥಗಳು ಕ್ಷಣ ಕ್ಷಣಕ್ಕೆ ಬದಲಾವಣೆಯಾಗುತ್ತಿರುತ್ತವೆ. ಆದರೆ ಯಾರಿಗೆ ಯಾವ ತರದ ರೂಪಾಂತರವು ಗೊತ್ತಿಲ್ಲವೋ ಅಂಥವನು ಒಬ್ಬ ಪರಮಾತ್ಮನು ಮಾತ್ರ ಇದ್ದಾನೆ. ನಾವು ಪ್ರತಿಕ್ಷಣ ಬದಲಾವಣೆಯಾಗುತ್ತಿರುತ್ತೇವೆ, ಎಂಬುದನ್ನು ತಿಳಿಯಬೇಕು. ಆದರೆ ನಾವು ಹೇಗೆ ಹೇಗೆ ಪರಮಾತ್ಮನ ಸಮೀಪಕ್ಕೆ ಹೋಗುತ್ತೇವೆಯೋ ಹಾಗೆ ಹಾಗೆ ನಮ್ಮಲ್ಲಿಯ ರೂಪಾಂತರ ಕ್ರಮವು ಕಡಿಮೆಯಾಗುತ್ತದೆ. ಯಾವ ಪ್ರಕೃತಿಯ ನಿಯಮದ ಸ್ವಾಧೀನನಾಗಿ ಈ ಹೊತ್ತು ನಾವು ಗುಲಾಮರಾಗಿ ಕೆಲಸ ಮಾಡುತ್ತಿರುತ್ತೇವೆಯೋ, ಆ ಪ್ರಕೃತಿಯು ಆಗ ತನ್ನ ಅಧಿಕಾರವನ್ನು



ಸಾವಕಾಶ ನಡೆಯಿಸುವದು. ನಾವು ಪರಮೇಶ್ವರನಲ್ಲಿ ಸಮರಸವಾದರೆ ನಮ್ಮ ಗುಲಾಮಗಿರಿಯು ಮುಗಿದು, ನಾವು ಈಶ್ವರ ನಿಯಮದ ಯಜಮಾನರಾಗುತ್ತೇವೆ. ಈ ಗುಲಾಮಗಿರಿಯಿಂದ ಹೊರಟು ಯಜಮಾನತ್ವದ ಕಡೆಗೆ ಹೋಗುವ ಮಾರ್ಗವೇ ಶಿವಾನುಭವದ ಸತ್ಯ ಮಾರ್ಗವು.

**ಪರಮೇಶ್ವರನ ಪ್ರಾಪ್ತಿಯ ಮಾರ್ಗವು ಅನುಭವ ಜನ್ಯವಾದುದು**

ಸರ್ವ ಪ್ರಪಂಚದಲ್ಲಿ ಚೈತನ್ಯ ರೂಪದಿಂದ ವ್ಯಾಪಿಸಿದ ಸತ್ ಚಿತ್ ಆನಂದ ರೂಪನಾದ ಪರಬ್ರಹ್ಮನನ್ನು ಪ್ರಾಪ್ತ ಮಾಡಿಕೊಳ್ಳುವದರ ಸಲುವಾಗಿ ನಮ್ಮ ಆಯುಷ್ಯದ ಪ್ರತಿನಿಮಿಷವನ್ನು ಯೋಗ್ಯ ರೀತಿಯಿಂದ ಉಪಯೋಗ ಮಾಡಿಕೊಳ್ಳಲಿಕ್ಕೇಬೇಕು. ಪ್ರತಿಕ್ಷಣ ನಿತ್ಯ ನಿತ್ಯ ವಸ್ತುವಿನ ವಿಚಾರವನ್ನು ಮಾಡಲೇಬೇಕು. ಧರ್ಮಜ್ಞಾನದ ಸಲುವಾಗಿ ಅಥವಾ ಶಿವಾನುಭವದ ಸಲುವಾಗಿ ಇಂಥ ಬಂಧನದ ಅವಶ್ಯಕತೆ ಏನು, ಎಂದು ವಿಚಾರಿಸಿದರೆ, ಅವರಿಗೆ ಉತ್ತರವಿಷ್ಟೇ. ಪರಮೇಶ್ವರನ ಪ್ರಾಪ್ತಿಯ ಮಾರ್ಗವು ಅನುಭವಜನ್ಯವಾದುದು. ಅದು ಬುದ್ಧಿಗಮ್ಯ ಮಾರ್ಗವಲ್ಲ. ಇದನ್ನು ಯಾವಾಗಲೂ ಲಕ್ಷದಲ್ಲಿಟ್ಟಿರಬೇಕು. ಇಂದ್ರಿಯಗಮ್ಯ ಮಾರ್ಗದಿಂದ ಶಿವನು ಪ್ರಾಪ್ತಿಯಾಗುವದು ಶಕ್ಯವಿಲ್ಲ. ನಾವು ಎಷ್ಟು ಧರ್ಮಗ್ರಂಥಗಳ ಪಾರಾಯಣ ಮಾಡಿದರೂ, ಜಗತ್ತಿನೊಳಗಿನ ಸರ್ವಧರ್ಮಗಳನ್ನು ಓದಿದರೂ, ಸತ್ಯವಾದ ಧರ್ಮಜ್ಞಾನದ ಒಂದು ಶಬ್ದವು ಕೂಡ ನಮಗೆ ಬೋಧವಾಗುವದಿಲ್ಲ. ಅದಕ್ಕಾಗಿಯೇ "ಶಬ್ದಜಾಲಂ ಮಹಾರಣ್ಯಂ ಚಿತ್ತಭ್ರಮಣ ಕಾರಣಂ" ಎಂದುದಾಗಿ ಆದಿ ಶಂಕರಾಚಾರ್ಯರು ಹೇಳಿದ್ದಾರೆ. ನಾವು ಸರ್ವ ಆಯುಷ್ಯವನ್ನೆಲ್ಲ ವಾದ-ವಿವಾದದಲ್ಲಿಯೇ ಕಳೆದರೂ, ಪರಮೇಶ್ವರನ ಪ್ರಾಪ್ತಿಯಾಗುವದಿಲ್ಲ. ಈ ಬುದ್ಧಿ ಜಾಗ್ರತೆಯ ಗೊಂದಲದಲ್ಲಿ ಬೀಳೋಣದರಿಂದ ಈ ಶಿವಾನುಭವದ ವಿಷಯವು ಅಧಿಕ ದುಸ್ತರವಾಗುತ್ತದೆ. ಇಡಿ ಪ್ರಪಂಚದಲ್ಲಿಯೇ ಪ್ರಬುದ್ಧರಾಗುವದರ ಸಲುವಾಗಿ ನಾವು ಎಷ್ಟು ಬುದ್ಧಿ ಸಾಮರ್ಥ್ಯವನ್ನು ಸಂಪಾದಿಸಿದರೂ, ಶಿವಯೋಗಾನುಭವದ ಮಾರ್ಗದಲ್ಲಿ ಒಂದು ಹೆಜ್ಜೆಯನ್ನು ಸಹ ಮುಂದೆ ಇಟ್ಟಂತಾಗಲಾರದು. ಯಾವ ವಸ್ತುವು ಬುದ್ಧಿ ಮತ್ತು ಮನಗಳಿಗೆ ನಿಲುಕದಿರುವದೋ, ಅದನ್ನು ಬುದ್ಧಿಯಾದರೂ ಮುಟ್ಟುವದೆಂತು? ನಮ್ಮ ಈಗಿನ ಸರ್ವ

ಶಿಕ್ಷಣಗಳ ಧೋರಣಗಳನ್ನು ನೋಡಿದರೆ, ಕೇವಲ ಬುದ್ಧಿಯನ್ನು ಪ್ರಜ್ವಲಿತ ಮಾಡುವದರ ಕಡೆಗೆ ಅದೆಯೋ ಹೊರ್ತು, ಅಂತಃಕರಣದ ಸಾತ್ವಿಕ ವೃತ್ತಿಯನ್ನು ಜಾಗ್ರತ ಮಾಡುವದರ ಕಡೆಗಿರುವದಿಲ್ಲ. ಇದಕ್ಕಾಗಿ ನಾವು ಈಗ ಪೂರ್ಣ ಲಕ್ಷ ಕೊಡಬೇಕಾಗಿರುವದು. ಇಲ್ಲದಿದ್ದರೆ ನಾವು ಪೂರ್ವದಕ್ಕಿಂತಲೂ ಹತ್ತುಪಟ್ಟು ಸ್ವಾರ್ಥಸಾಧುಗಳಾಗಿ ಹೋಗುವೆವು. ಈ ಸ್ವಾರ್ಥವು ಇಂದಿಲ್ಲ ನಾಳೆಯಾದರೂ ನಿಶ್ಚಿತವಾಗಿ ನಮ್ಮನ್ನು ಅವನತೆಗೀಡು ಮಾಡುತ್ತದೆ. ಈ ಕಾರಣದ ಸಲುವಾಗಿ ನಮ್ಮ ಅಂತಃಕರಣದ ಸಾತ್ವಿಕ ವೃತ್ತಿಯು ಸದೋದಿತ ಜಾಗ್ರತವಾಗಿರುವಂಥ ಉಪಾಯುಗಳನ್ನೇ ಯೋಚಿಸಬೇಕು.

ಎಲ್ಲಿ ಅಂತಃಕರಣ ಮತ್ತು ಬುದ್ಧಿ ಇವುಗಳ ಮಾರ್ಗ ಭೇದವಿರುತ್ತದೆಯೋ ಅಲ್ಲಿ ಬುದ್ಧಿಗಮ್ಯ ಮಾರ್ಗ ಬಿಟ್ಟು ಅಂತಃಕರಣ ದರ್ಶಿತ ಮಾರ್ಗದಿಂದ ಹೋಗುವದು ಪರಿಣಾಮದಲ್ಲಿ ಅಧಿಕ ಸುಖ

ಬುದ್ಧಿಗಮ್ಯ ಮಾರ್ಗದ ನಿಷ್ಫಲತೆ.

ಕೊಡುವದಾಗಿರುತ್ತದೆ. ಒಂದು ಸತ್ಕಾರ್ಯ ಮಾಡಬೇಕೆಂಬ ಇಚ್ಛೆಯುಂಟಾದರೆ, ನಮ್ಮ ಬುದ್ಧಿಯು ಜಾಗ್ರತವಾಗಿ ಪೃಥಕ್ಕರಣ ಮಾಡಲಿಕ್ಕೆ ಹತ್ತುತ್ತದೆ. ಅದರಲ್ಲಿ ಸ್ವಾರ್ಥ ಪ್ರಬಲವಾದರೆ, ಅಂತಃಕರಣದ ಸಾತ್ವಿಕ ವೃತ್ತಿಯು ಸಂಪುಟಕ್ಕೆ ಬಂದಿತೆಂತಲೇ ತಿಳಿಯಬೇಕು. ಒಬ್ಬ ಸೋಮಾರಿಯಾದ ಮನುಷ್ಯನಿಗೆ ಸಹಾಯ ಮಾಡುವ ಇಚ್ಛೆಯು ನಮಗಾದರೆ, ಬುದ್ಧಿಯು ಹೀಗೆ ಹೇಳುತ್ತದೆ, ಈತನು ಉದ್ಯೋಗ ಏಕೆ ಮಾಡುವದಿಲ್ಲ, ಆಲಸ್ಯವುಳ್ಳವನೇಕೆ ಆದನು, ಇಂಥ ಮನುಷ್ಯನಿಗೆ ಸಹಾಯ ಏಕೆ ಮಾಡಬೇಕು, ಇದರಿಂದ ಜಗತ್ತಿನಲ್ಲಿ ಆಲಸ್ಯತನವು ಬೆಳೆಯುವದರಿಂದ ನಾವು ಉದ್ಯೋಗವನ್ನು ಹೆಚ್ಚಿಸಬೇಕಲ್ಲವೇ, ಆದಕಾರಣ ಈ ಮನುಷ್ಯನು ಸಹಾಯ ಹೊಂದಲಿಕ್ಕೆ ಯೋಗ್ಯನಲ್ಲ. ಇಂಥ ವಿಚಾರಗಳಿಂದ ಅಂತಃಕರಣದಲ್ಲಿ ಆ ಮನುಷ್ಯನನ್ನು ನೋಡಿ ಉದ್ಭವವಾದ ದಯೆಯು ಪ್ರಾಣವೇ ಹೋಗುತ್ತದೆ.

ಶಿವಾನುಭವ ವಾಚಕರೇ, ಇಂಥ ಪ್ರಸಂಗದಲ್ಲಿ ತಾವು ಬುದ್ಧಿಯ ಬೆನ್ನು ಹತ್ತಿ ಮೋಸ ಹೋಗಬೇಡಿರಿ. ಯಃಕಶ್ಚಿತವಾದ ಸ್ವಾರ್ಥದ ಬಲೆಗೆ ಬಿದ್ದು ದಯೆಯು ಅರ್ಥಾತ್ ಅಂತಃಕರಣದ ಕೊಲೆಯನ್ನು



ಅಂತಃಕರಣದ ಮಹತ್ವ

ಮಾಡುವದು ಯುಕ್ತವಲ್ಲ. ಅಗಾಧ ಬುದ್ಧಿಶಾಲಿಗೂ ಕೂಡಾ ಸ್ವಪ್ನದಲ್ಲಿ ಸಹ ಕಾಣಲಾರದಂಥ ಸ್ಥಾನಕ್ಕೆ ಮುಟ್ಟಿಸುವ ಸಾಮರ್ಥ್ಯವು ಅಂತಃಕರಣಕ್ಕೆ ಮಾತ್ರ ಇರುತ್ತದೆ. ಎಲ್ಲಿ ಪರಮಾತ್ಮನಿಗೂ ನಮಗೂ ಸಂದರ್ಶನವಾಗುತ್ತದೆಯೋ ಆ ಸ್ಥಾನಕ್ಕೆ ಬುದ್ಧಿಯು ಎಂದಿಗೂ ಹೋಗಿ ಮುಟ್ಟುವದಿಲ್ಲ. ಆ ಅಧಿಕಾರವು ಕೇವಲ ಅಂತಃಕರಣಕ್ಕೆ ಮಾತ್ರ ಇರುತ್ತದೆ. ಅಂತಃಕರಣದ ಬೆಳವಣಿಗೆಯು ಉತ್ತಮ ರೀತಿಯಿಂದ ಸಾಗಿದರೆ, ಆತನು ಅತೀಂದ್ರಿಯ ಜ್ಞಾನವುಳ್ಳವನಾಗುವನು. ಬುದ್ಧಿಯಿಂದ ಭ್ರಮೆಯು ಬೆಳೆಯುತ್ತದೆ. ಅಂತಃಕರಣದಿಂದ ಜ್ಞಾನವು ಜಾಗ್ರತವಾಗುತ್ತದೆ. ನಾವು ನಮ್ಮವರೆನ್ನುವವರಿಗೆ ಅತ್ಯಂತ ಪ್ರೇಮದ ಮಾತುಗಳನ್ನು ಹೇಳುತ್ತೇವೆ. ಆಗ ಬುದ್ಧಿಯು ಎಲ್ಲಿ ಇರುತ್ತದೆ? ಯಾರ ಮೇಲೆ ನಮ್ಮ ನಿಜವಾದ ಪ್ರೇಮವಿರುತ್ತದೆಯೋ ಅವರಲ್ಲಿ ಇಂಥಾದ್ದು ಹೇಳಬೇಕು, ಇಂಥಾದ್ದು ಹೇಳಬಾರದು ಎಂಬ ವಿಚಾರವನ್ನು ನಾವು ಎಂದಿಗೂ ಮಾಡುವದಿಲ್ಲ. ಎಲ್ಲಿ ಬುದ್ಧಿ ಜಾಗ್ರತವಾಯಿತೋ ಅಲ್ಲಿ ಅದು ಪ್ರೇಮವನ್ನು ಛೇದಿಸುವ ಆಯುಧವೇ ಸರಿ. ಬುದ್ಧಿಯ ಕೆಲಸವು ಕೇವಲ ಕಾರ್ಯದ ನಿಶ್ಚಯವನ್ನು ಮಾಡುವದಾಗಿದೆ. ಅಂತಃಕರಣದ ಕೆಲಸವಾದರೋ, ಬುದ್ಧಿಯ ಆಚೇಕಡೆಗೆ ಹೋಗಿ ಪರಮೇಶ್ವರನ ದರ್ಶನ ಹೊಂದುವದಿರುತ್ತದೆ. ಬುದ್ಧಿಯ ತೇಜಸ್ಸು ನಮ್ಮ ನಿದರ್ಶನಕ್ಕೆ ಬರುವಂತೆ ಅಂತಃಕರಣದ ತೇಜಸ್ಸು ಬರುವದಿಲ್ಲ. ಏಕೆಂದರೆ ಬುದ್ಧಿಯು ರಜೋಗುಣ ಪ್ರಧಾನವಿರುವದರಿಂದ ಅದರ ತೇಜಸ್ಸು ಅಧಿಕ ಸ್ಪಷ್ಟವಾಗಿ ತೋರುತ್ತದೆ. ಅಂತಃಕರಣವು ಸಾತ್ವಿಕವಾಗಿರುವದರಿಂದ ಅದು ಅಂತರ್ಯವೃತ್ತಿಯುಳ್ಳದ್ದಿರುತ್ತದೆ. ಅಂತಃಕರಣದ ಬಾಲ್ಯ ಸ್ಥಿತಿಯಲ್ಲಿ ಅದರ ಗುಣವು ಮುಚ್ಚಿದಂತೆ ತೋರಿದರೂ, ಅದೇ ಅಂತಃಕರಣವು ಪೂರ್ಣ ತೇಜಸ್ಸಿನಿಂದ ಪ್ರಕಾಶಿಸಲಿಕ್ಕೆ ಹತ್ತಿತೆಂದರೆ, ನಮಗೆ ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳಲಿಕ್ಕೆ ಹತ್ತುತ್ತದೆ. ಇಲ್ಲಿಯ ವರೆಗೆ ಆಗಿಹೋದ ಸಾಧುಸಂತ ಶರಣರನ್ನು ನೋಡಿದರೆ, ಅವರಲ್ಲಿ ಬುದ್ಧಿ ತೇಜಸ್ಸಿಗಿಂತಲೂ ಅಂತಃಕರಣದ ತೇಜಸ್ಸುಳ್ಳವರೇ ಅಧಿಕರಾಗಿದ್ದಾರೆಂದು ಸ್ಪಷ್ಟ ಕಂಡುಬರುತ್ತದೆ. ಇಡೀ ಜಗತ್ತನ್ನು ಯಾರು ಪ್ರಕಾಶವುಳ್ಳದ್ದನ್ನಾಗಿ ಮಾಡಿದರೋ,

ಅವರು ಬುದ್ಧಿ ಬಲದ ಮೇಲೆ ಮಾಡಿದರೋ, ಅಥವಾ ಅಂತಃಕರಣದ ಬಲದ ಮೇಲೆ ಮಾಡಿದರೋ, ತಾವೇ ವಿಚಾರ ಮಾಡಬೇಕು. ಬುದ್ಧಿಶಾಲಿಯು ಒಂದು ಭಯಂಕರ ಕೆಲಸ ಮಾಡಲಿಕ್ಕೆ ಹಿಂದೆ ಮುಂದೆ ನೋಡಲಿಕ್ಕಿಲ್ಲ. ಆದರೆ ಅಂತಃಕರಣದ ಜಾಗ್ರತಿ ಹೊಂದಿದವರಾರಿರುವರೋ, ಅವರ ಕೈಯಿಂದ ಯಾವ ಭಯಂಕರ ಕಾರ್ಯವು ಇಂದಿನ ವರೆಗೆ ಆಗಿಲ್ಲ, ಮುಂದೆ ಆಗುವದು ಶಕ್ಯವಿಲ್ಲ.

ಅಂತಃಕರಣದ ಬೆಳವಣಿಯಿಂದ ಪರಮೇಶ್ವರನ ಪ್ರಾಪ್ತಿಯು.

ಪ್ರಯುಕ್ತ ಪರಮೇಶ್ವರನ ಪ್ರಾಪ್ತಿಯು ನಮಗೆ ಬೇಕಾಗಿದ್ದರೆ ಬುದ್ಧಿ ಬೆಳೆಯುವದರ ಕಡೆಗೆ ನಾವು ಹೆಚ್ಚು ಲಕ್ಷ ಕೊಡದೆ ಅಂತಃಕರಣಧ ಬೆಳವಣಿಗೆಯ ಕಡೆಗೆ ಪೂರ್ಣ ಲಕ್ಷ ಕೊಡಬೇಕು. ನಾವು ಅಂತ್ಯದಲ್ಲಿ ಯಾವ ಸ್ಥಿತಿಯನ್ನು ಹೊಂದಬೇಕಾಗಿರುವದೋ ಅದು ಬುದ್ಧಿಯಿಂದ ಸಾಧ್ಯವಾಗುವಂತಿಲ್ಲ. ಅಂತಃಕರಣದಿಂದಲೇ ದೊರೆಯಬೇಕಾಗಿದೆ. ಒಬ್ಬ ಸತ್ಪುರುಷನು ಈ ವಿಷಯವಾಗಿ ಹೇಳುವದೇನಂದರೆ, ಎರಡನೆಯವರ ಕೊಲೆ ಮಾಡುವದರ ಸಲುವಾಗಿ ಬಂದೂಕು, ಕತ್ತಿ ಮೊದಲಾದ ಆಯುಧಗಳ ಅಪೇಕ್ಷೆ ಮಾಡಬೇಕಾಗುತ್ತದೆ. ಆದರೆ ಆತ್ಮಹತ್ಯೆ ಮಾಡಿಕೊಳ್ಳಬೇಕಾದರೆ ಒಂದು ಸೂಜಿಯು ಕೂಡಾ ಸಾಕಾಗುತ್ತದೆ. ಅದೇ ಪ್ರಕಾರವಾಗಿ ಯಾರಿಗೆ ಜಗತ್ತನ್ನು ಸುಧಾರಿಸುವದಿರುವದೋ ಅವರಿಗೆ ಬುದ್ಧಿ ಮೊದಲಾದ ಆಯುಧಗಳನ್ನು ಹಿಡಿಯಬೇಕಾಗುತ್ತದೆ. ಆದರೆ ಸ್ವತಃ ಜ್ಞಾನಿಯಾಗಲಿಕ್ಕೆ ಅತಏವ ಶಿವಾನುಭವಿಯಾಗಲಿಕ್ಕೆ ಯಾರ ಅಂತಃಕರಣವು ಪವಿತ್ರವಿರುವದೋ ಅವರಿಗೆ ಅದು ಸಾಧ್ಯವು. ಇಂಥವರೇ ಧನ್ಯರು, ಅವರೇ ಲಿಂಗಾಂಗ ಸಮರಸ ಜ್ಞಾನವುಳ್ಳವರು. ಅವರಿಗೆ ಶಿವನ ಪ್ರತ್ಯಕ್ಷ ದರ್ಶನವಾಗುವದು. ನಮ್ಮ ಅಂತಃಕರಣವು ಜಾಗ್ರತವಿಲ್ಲದಿದ್ದರೆ ಲೋಕದಲ್ಲಿ ನಿರ್ಮಾಣವಾದ ಸಕಲ ಶಾಸ್ತ್ರಗಳು ನಮ್ಮ ನಾಲಿಗೆಯ ಮೇಲೆ ಕುಣಿಯುತ್ತಿದ್ದರೂ, ನಮಗೆ ಮುಕ್ತಿ ರಾಜ್ಯದ ಸೀಮೆಯು ಸಹ ಕಾಣುವದಿಲ್ಲ. ಆದರೆ ಅಂತಃಕರಣವು ತೋರಿಸಿದ ಮಾರ್ಗದಿಂದ ನಾವು ನಡೆದದ್ದಾದರೆ, ಯೋಗ್ಯ ಸ್ಥಾನವನ್ನು ಸರಳ ರೀತಿಯಿಂದ ನಾವು ಮುಟ್ಟುತ್ತೇವೆ. ಬುದ್ಧಿಗೆ ಸ್ವಪ್ನದಲ್ಲಿ ಸಹ ಕಾಣಲಾರದ ವಸ್ತುವು ಅಂತಃಕರಣಕ್ಕೆ ಕಾಣಿಸುತ್ತದೆ. ಯಾವ ವಿಚಾರವು ಅಂತಃ



ಕರಣಕ್ಕೆ ಸರಿದೋರುವದೋ, ಅದನ್ನು ಯಾರ ಅಂಜಿಕೆಯಿಲ್ಲದೆಯೂ ಮಾಡುತ್ತ ಹೋಗಬೇಕು. ಒಂದು ಸತ್ಕಾರ್ಯ ಮಾಡಬೇಕೆಂದು ಅಂತಃಕರಣ ಪೂರ್ವಕವಾಗಿ ಇಚ್ಛೆಯಾದರೆ, ಬುದ್ಧಿಯು ಒಂದುವೇಳೆ ಅಡ್ಡ ಬರಬಹುದು. ಹೀಗೆ ಮಾಡೋಣದರಿಂದ ಇವರು ಸಿಟ್ಟಿಗೆ ಬರುತ್ತಾರೆ, ಅವರು ಮುನಿಸುಗೊಳ್ಳುತ್ತಾರೆ, ಮತ್ತೊಬ್ಬರಿಗೆ ಬೇಸರವಾಗುತ್ತದೆ, ಈ ಮೊದಲಾದ ವಿಚಾರಗಳನ್ನು ಬುದ್ಧಿಯು ನಮಗೆ ಹೇಳಲಿಕ್ಕೆ ಹತ್ತುತ್ತದೆ. ಇಂಥ ಪ್ರಸಂಗದಲ್ಲಿ ನಾವು ನಮ್ಮ ಕಿವಿಗಳನ್ನು ಕಿವುಡು ಮಾಡಲಿಕ್ಕೇಬೇಕು. ಅಂತಃಕರಣ ದರ್ಶಿತವಾದ ಮಾರ್ಗದಿಂದ ಹೋದದ್ದಾದರೆ, ನಮ್ಮ ಕೈಯಿಂದ ತಪ್ಪುಗಳು ಬಹಳ ಕಡಿಮೆಯಾಗುತ್ತವೆ. ಪವಿತ್ರ ಹೃದಯವು ಸ್ವಚ್ಛವಾದ ಕನ್ನಡಿಯಂತಿದೆ. ನಿರ್ಮಲವಾದ ಕನ್ನಡಿಯಲ್ಲಿ ಯಾವ ವಸ್ತುವಿನದಾದರೂ ಯೋಗ್ಯ ಪ್ರತಿಬಿಂಬವು ಹೇಗೆ ಬೀಳುತ್ತದೆಯೋ, ಹಾಗೆಯೇ ಶುದ್ಧ ಅಂತಃಕರಣದಲ್ಲಿ ಪರಮೇಶ್ವರನ ಪ್ರತಿಬಿಂಬವು ಯಥಾಸ್ಥಿತವಾಗಿ ಬೀಳುತ್ತದೆ. ಎಷ್ಟೇ ಬಾಹ್ಯಾಚಾರಗಳನ್ನು ಎಷ್ಟೇ ದೃಢವಾಗಿ ಮಾಡಿದರೂ, ಅವೆಲ್ಲವುಗಳು ಅಂತಃಕರಣದ ಶುದ್ಧಿಯ ಸಲುವಾಗಿಯೇ ಇರುತ್ತವೆ. ಚಿತ್ತವು ಶುದ್ಧವಾಯಿತೆಂದರೆ ಪರಮಾತ್ಮನ ಸ್ವರೂಪವು ತೋರಲನುವಾಗುತ್ತದೆ. ಜಗತ್ತಿನಲ್ಲಿ ಸತ್ಯ ಸ್ವರೂಪವೆಂದು ಯಾವದಿರುವದೋ ಆ ವಸ್ತುವು ತೀವ್ರವಾಗಿ ಶುದ್ಧಾಂತಃಕರಣದಲ್ಲಿ ಕಾಣಿಸಿಕೊಳ್ಳುತ್ತದೆ.

ಈ ಜಗತ್ತಿನೊಳಗಿನ ವಸ್ತುಗಳು ಯಾವ ಅಣು ಪರಮಾಣುಗಳಿಂದ ಉಂಟಾಗಿರುತ್ತವೆಯೋ, ಅದರ ಶೋಧ ಎಷ್ಟೋ ಯುಗಗಳ ಪೂರ್ವದಲ್ಲಿ ಯಾರು ಗೊತ್ತು ಹಚ್ಚಿದ್ದಾರೆಯೋ, ಆ ಮಹಾತ್ಮರು

ಹೃದಯ ಶುದ್ಧತೆಯಿಂದ ಅಣು ಪರಮಾಣುಗಳ ತಿಳಿವಳಿಕೆ.

ಈಗಿನವರಂತೆ ಸೂಕ್ಷ್ಮದರ್ಶಕಯಂತ್ರ, ದುರ್ಬೀನು ಮೊದಲಾದವುಗಳಿಂದ ಹಚ್ಚಿರುವರೇ? ಅವರು ಅವುಗಳನ್ನು ಕಣ್ಣಿನಿಂದ ಸಹ ನೋಡಿರುವದಿಲ್ಲ. ರಸಾಯನ ಶಾಲೆ ಎಂದರೇನು ಎಂಬುದು ಅವರಿಗೆ ಸ್ವಪ್ನದಲ್ಲಿ ಕೂಡಾ ಗೊತ್ತಿರಲಿಲ್ಲ. ಹೀಗಿದ್ದರೂ ಆ ಮಹನೀಯರು ಈ ಸರ್ವ ಜಗತ್ತಿನ ಶೋಧವನ್ನು ಯಾವುದರ ಆಶ್ರಯದಿಂದ ಕಂಡುಹಿಡಿದರು? ಆದರೆ ಅವರ ಶುದ್ಧಾಂತಃಕರಣದಲ್ಲಿ ಪರಶಿವನು ಉದಯವಾದ್ದರಿಂದ, ಅವರಿಗೆ ಅಗಮ್ಯವಾದಂಥಾದ್ದು

ಯಾವದೂ ಉಳಿಯಲಿಲ್ಲ. ಅವರು ತಮ್ಮ ಹೃದಯವನ್ನು ನಿರ್ಮಲ ಮಾಡಿದವರಿದ್ದರು. ಆ ಮಹರ್ಷಿಗಳಂತೆ ಮತ್ತು ಮಹಾನುಭಾವರಾದ ಶಿವಶರಣರಂತೆ ಹೃದಯ ಶುದ್ಧತೆಯನ್ನು ಮಾಡುವದು ನಮಗೆ ಅಶಕ್ಯವದೆಯೋ ?

**ಪವಿತ್ರ ಅಂತಃಕರಣದಿಂದ ಪರಮೇಶ್ವರನ ಸಾಕ್ಷಾತ್ಕಾರವು.**

ಪ್ರಪಂಚದಲ್ಲಿ ಸುಖದ ದಿವಸಗಳು ಎಂದಾದರೂ ಪ್ರಾದುರ್ಭವಿಸುವವಿದ್ದರೆ ಅವು ಶುದ್ಧಾಂತಃಕರಣದಿಂದಲೇ ಉತ್ಪನ್ನವಾಗುವವಿರುತ್ತವೆ. ಬುದ್ಧಿಯು ಎಷ್ಟು ವಿಶಾಲವಾದರೂ, ಅದು ಮನುಷ್ಯನ ಅಂಕಿತವಾದುದು. ಅಂತಃಕರಣ ವಿಸ್ತಾರವಾದರೆ ಅದು ಶಿವನ ಅಂಕಿತವು. ಮಾನವ ಜನ್ಮದ ಕರ್ತವ್ಯವಾದ ಈ ಶಿವಾನುಭವದ ವಿಚಾರ ಮಾಡುವದು ಅಥವಾ ಇದರ ಗೋಷ್ಠಿಯನ್ನಾಡುವದು ಅತಿಶಯ ಆದರ ಬುದ್ಧಿಯಿಂದುಂಟಾಗಿರಬೇಕು. ಪವಿತ್ರ ಮತ್ತು ಸಾದರ ಅಂತಃಕರಣದಿಂದ ಯಾರು ಸತ್ಯದ ಶೋಧ ಮಾಡುವರೋ ಅವರಿಗೆ ಸತ್ಯಸ್ವರೂಪನಾದ ಪರಶಿವನ ಸಾಕ್ಷಾತ್ಕಾರವಾಗುವದು. ಶಿವಾನುಭವವೆಂದರೆ ಚೇಷ್ಟೆಯು ಮತ್ತು ಮೌಜಿನ ಮಾತಲ್ಲ. ಸದಾ ಅತ್ಯಂತ ಪರಿಶ್ರಮದಿಂದ ಸಾಧನೆ ಮಾಡಿದರೆ, ಮತ್ತು ಪೂರ್ಣ ಆದರ ಬುದ್ಧಿಯಿಂದ ಪ್ರಯತ್ನ ನಡಿಸಿದರೆ ಶಿವಾನುಭವ ಮಂಟಪದಲ್ಲಿ ಸೇರಲು ಅಧಿಕಾರ ಬರುತ್ತದೆ. ವಿದ್ಯೆಯು ಬಲವತ್ತರದಿಂದ ಅದನ್ನು ಸೇರಬೇಕೆಂದರೆ ಪೂರ್ಣ ಮೋಸ ಹೋದಂತೆಯೇ ಸರಿ.

**ಶಿವಾನುಭವವು ಬುದ್ಧಿಗಮ್ಯವಲ್ಲ.**

ಕೇವಲ ಬುದ್ಧಿಯ ಬಲದಿಂದ ನಾವು ಶಿವಾನುಭವ ಸುಖ ಪಡೆಯುವ ಹಟ ತೊಟ್ಟರೆ ಏನಾಗುವದು ಎಂದರೆ ಬುದ್ಧಿಗೆ ಸ್ವಲ್ಪ ವ್ಯಾಯಾಮವಾದಂತಾಗಿ ಧಾರ್ಮಿಕ ಬೋಧೆಯಿಂದ ಜನರನ್ನು ಆಶ್ಚರ್ಯಗೊಳಿಸಬಹುದು. ಜನರಾದರೋ, ಅಹಾ ! ಈತನ ಜ್ಞಾನವೆಂತಹದೋ ಎಂದು ಅನ್ನಬಹುದು. ಜನರು ಅವನನ್ನು ಹೊಗಳಬಹುದು. ಆದರೆ ಅದೆಲ್ಲವೂ ಹೊಟ್ಟೆಬಟ್ಟೆಗಾಗಿರುತ್ತದಲ್ಲದೆ ನೆತ್ತಿಗಾಗಿರುವದಿಲ್ಲ. ಶರೀರ ವ್ಯಾಯಾಮದಿಂದ ಕ್ಷಣಮಾತ್ರ ಹೇಗೆ ಉತ್ಸಾಹ ಉಂಟಾಗುತ್ತದೆಯೋ, ಅದರಂತೆ ನಮಗೆ ಸ್ವಲ್ಪ ಬೌದ್ಧಿಕ ಉತ್ಸಾಹ ಉಂಟಾದೀತು. ಇದಕ್ಕಿಂ



ತಲೂ ಮುಂದೆ ನಮ್ಮ ಹೆಜ್ಜೆಯು ಹೋಗುವದಿಲ್ಲ. ಸತ್ಯವು ಸ್ವತಃ ಸಿದ್ಧ ವಸ್ತುವು. ಸೂರ್ಯನನ್ನು ತೋರಿಸಲಿಕ್ಕೆ ದೀವಟಿಗೆಯ ಉಪಯೋಗವು ಎಂದಿಗಾದರೂ ಬೀಳುತ್ತದೆಯೋ? ಈ ಸಂಬಂಧವಾದ ವಿವಾದವಾದರೂ ಉಂಟಾಗುತ್ತದೆಯೋ? ಇಲ್ಲ. ಸೂರ್ಯನ ಅಸ್ತಿತ್ವದ ಬಗ್ಗೆ ಬೆರಳು ಮಾಡಿ ತೋರಿಸುವದೇ ಸಾಕಾಗಿದೆ. ಅಲ್ಲಿ ವಾದವಿವಾದ ಬೇಡ. ಬುದ್ಧಿಚಾತುರ್ಯವೂ ಬೇಡ. ಪರಮಾತ್ಮನು ಸ್ವತಃ ಸಿದ್ಧನಿರೋಣದರಿಂದ, ಆತನ ದರ್ಶನವಾದುದೇ ಶಿವಾನುಭವದ ಸಿದ್ಧಿಯು: ಶುದ್ಧ ಮತ್ತು ಪವಿತ್ರ ಅಂತಃಕರಣ ಮತ್ತು ಉತ್ಕಟ ಪ್ರೇಮ ಇವುಗಳ ದೀಪವನ್ನು ಹೊತ್ತಿಸಿ, ನಾವು ಮಾರ್ಗಸ್ಥರಾದರೆ, ನಮ್ಮ ಹೃದಯವು ನಮಗೆ ಶಿವಾನುಭವದ ಸರಳ ಮಾರ್ಗವನ್ನು ತೋರಿಸಿ ಶಿವನೊಳಗೆ ಸಾಮರಸ್ಯ ಮಾಡಿಸುತ್ತದೆ.

**ಶಿವಾನುಭವವು ಇಂದ್ರಿಯಾತೀತವು**

ಶಿವಾನುಭವವು ಇಂದ್ರಿಯಗಳ ಆಚೆ ಕಡೆಗದೆ. ಅದು ನಮ್ಮ ಅತ್ಯಂತ ವಿಶಾಲವಾದ ಕಲ್ಪನೆಯ ಹೊರಗಿರುತ್ತದೆ. ಇಂದ್ರಿಯಗಳ ದ್ವಾರಾ ಪರಮಾತ್ಮನ ದರ್ಶನ ತೆಗೆದುಕೊಳ್ಳುವದು ಅಶಕ್ಯವದೆ. ಪರಮೇಶ್ವರನನ್ನು ಯಾರೂ ಈ ಚರ್ಮಚಕ್ಷುವಿನಿಂದ ನೋಡಿರುವದಿಲ್ಲ. ಇನ್ನು ಮುಂದೆಯಾದರೂ ಯಾರೂ ಕಾಣಲು ಶಕ್ಯವಿಲ್ಲ. ನಮ್ಮ ಕಲ್ಪನೆಯನ್ನು ಎಷ್ಟು ವಿಸ್ತಾರ ಮಾಡಿದರೂ, ಆದರಲ್ಲಿ ಜಗತ್ತಿನ ಕಲ್ಪನೆಯು ಇದ್ದೇ ಇರುತ್ತದೆ. ಇದು ಎಲ್ಲಿಯ ವರೆಗೆ ಇರುವದೋ ಅಲ್ಲಿಯ ವರೆಗೆ ವಿಶ್ವದ ಆಚೆಯ ಕಡೆಗೆ ಇರುವ ಪರಶಿವನ ದರ್ಶನವಾಗುವದು ಹೇಗೆ? ಶ್ರುತಿ ವಚನಾನುಸಾರವಾಗಿ “ ಯತೋವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ.” ಅಂದರೆ ಪರಶಿವನು - ಇಂದ್ರಿಯಾತೀತನು, ಕಲ್ಪನಾತೀತನು. ಯಾವ ಪ್ರಕಾರ ನಾವು ಇಂದ್ರಿಯದ್ವಾರಾ ಬಾಹ್ಯ ಕರ್ಮಗಳನ್ನು ಮಾಡುತ್ತೇವೆಯೋ, ಹಾಗೆಯೇ ಮನೋಮಯಾದಿ ಕೋಶಗಳಿಂದ ಅಂತಃಕರ್ಮ ಮಾಡುತ್ತಿರುತ್ತೇವೆ. ಪರಶಿವನು ಸರ್ವ ಕರ್ಮಗಳ ಆಚೆಯ ಕಡೆಗೆ ಇರುವದರಿಂದ ಮನೋಮಯಾದಿ ಕೋಶಗಳನ್ನು ದಾಟಲಿಕ್ಕೇಬೇಕು. ಇದರ ವಿನಹಾ ಶಿವಾನುಭವದ ಅನ್ಯ ಮಾರ್ಗವೇ ಇಲ್ಲ. ಇಲ್ಲಿಯ ವರೆಗೂ ಸಹಸ್ರಗಟ್ಟಲೆ ಜನರು ಆ ಪರಶಿವನ ಪ್ರತ್ಯಕ್ಷ ದರ್ಶನವನ್ನು ಹೊಂದಿದ್ದಾರೆ. ಈಗಲೂ ಯಾರಿಗೆ

ಆ ಪರಶಿವನ ದರ್ಶನವಾಗುವ ಇಚ್ಛೆ ಇರುವದೋ, ಅವರಿಗೂ ಸಂದರ್ಶಿಸುತ್ತಾನೆ. ಆದರೆ ಆತನ ದರ್ಶನವಾಗುವದಕ್ಕೆ ನಮ್ಮ ಇಂದ್ರಿಯಗಳೂ ಹಾಗೂ ಮನೋಮಯಾದಿ ಕೋಶಗಳೂ ಎಂದೂ ಉಪಯೋಗ ಬೀಳುವದಿಲ್ಲ. ಈ ಎಲ್ಲವುಗಳನ್ನು ದಾಟಿ ಆಚೆಯ ಕಡೆಗೆ ಹೋಗಬೇಕಾಗಿರುತ್ತದೆ.

ಇಲ್ಲಿಯ ವರೆಗೂ ಯುಗಾನುಯುಗದಿಂದ ನಾವು ಯಾವ ಕರ್ಮಗಳನ್ನು ಮಾಡುತ್ತ ಬಂದಿರುವೆವೋ, ಅವು ನಮಗೆ ಪಾಶರೂಪವಾಗಿ ಆ ಸಚ್ಚಿದಾನಂದ ಸ್ವರೂಪನಾದ ಪರಶಿವನಿಂದ ದೂರ ಇರಿಸಲ್ಪಟ್ಟಿರುವದಾಗಿರುವವು. ಪ್ರಯುಕ್ತ ಇಲ್ಲಿಯ ವರೆಗೂ

ಶಿವಾನುಭವಿಯು ಲಿಂಗರೂಪನು ಮತ್ತು ಲಿಂಗ ಭೋಗೋಪ ಭೋಗಿಯು.

ಮಾಡಿದ ವಿವೇಚನೆಯಂತೆ, ನಾವು ನಡಿಯಲಿಕ್ಕೆ ಹತ್ತಿದರೆ ಈ ಪಾಶವು ಸಾವಕಾಶವಾಗಿ ಬಿಚ್ಚಲು ಪ್ರಾರಂಭವಾಗಿ ಕಡೆಗೆ ಕಳಚಿ ಬಿದ್ದು ಹೋಗುವದು. ಆ ನಂತರ ನಾವು ಯಾವ ಸ್ಥಾನವನ್ನು ಮತ್ತು ಯಾವ ಸ್ಥಿತಿಯನ್ನು ಹೊಂದುತ್ತೇವೆಯೋ, ಆ ಸ್ಥಾನ ಆ ಸ್ಥಿತಿಗಳು ಇಲ್ಲಿಯ ವರೆಗೂ ಯಾರು ಜಾಗ್ರತಾವಸ್ಥೆಯಲ್ಲಾಗಲೀ ಸ್ವಪ್ನಾವಸ್ಥೆಯಲ್ಲಾಗಲೀ ಅಥವಾ ಸುಷುಪ್ತಾವಸ್ಥೆಯಲ್ಲಿಯಾಗಲೀ ಕಾಣಲಾರದಂಥವುಗಳೇ ಇರುತ್ತವೆ. ಆ ನಮ್ಮ ಸ್ಥಿತಿಯು ಈ ಅವಸ್ಥಾತ್ರಯದ ಆಚೆಯ ಕಡೆಗಿದೆ. ಆಗ ನಮ್ಮ ಸ್ಥಿತಿಯೇ ಬೇರೆಯಾಗುವದು. ನಮ್ಮ ಭಾಷೆ ರೀತಿ ನಡಾವಳಿಗಳೂ ಸಹ ವಿಚಿತ್ರತರವಾದವುಗಳಾಗುವವು. ಆಗ ಜಗತ್ತು ನಮ್ಮನ್ನು ಹುಚ್ಚನೆಂದು ಸಂಬೋಧಿಸಬಹುದು. ಕಲ್ಪನಾತೀತ ವಸ್ತುವಿನ ಕಲ್ಪನೆಯು ಪ್ರಪಂಚದ ಪ್ರಾಣಿಗಳಿಗೆ ಇರಲು ಹೇಗೆ ಶಕ್ಯವಾದೀತು? ಕಲ್ಪನಾತೀತ ಮನುಷ್ಯನು ಜಗತ್ತಿನ ದೃಷ್ಟಿಯಿಂದ ಹುಚ್ಚನಾಗಿ ಕಾಣಬಹುದು. ಇವರಲ್ಲಿ ಸಂಶಯವೇನು? ಆದ್ದರಿಂದಲೇ ಇಲ್ಲಿಯ ವರೆಗೆ ಆದ ಶಿವಶರಣರ ಚರಿತ್ರೆಗಳು ಅತಿ ವಿಚಿತ್ರತಮವಾಗಿರುವವು. ಇಂಥ ವಿಚಿತ್ರತಮವಾದ ಮತ್ತು ಸಕಲ ಸುಖಗಳ ನಿಧಿಯಾದ ಶಿವಾನುಭವವನ್ನು ಪಡೆಯುವದೇ ಪ್ರತಿ ಒಬ್ಬನ ಕರ್ತವ್ಯವಾಗಿದೆ. ಅದರೊಳಗೆ ವೀರಶೈವನಂತೂ ಶಿವಾನುಭವದ ಅನ್ವಯಾರ್ಥಕನೇ ಇದ್ದಾನೆ. ತನ್ನ



ಅಂಗದ ಪ್ರತಿ ಒಂದು ಅವಯವವನ್ನೂ ಬಾಹ್ಯಾಂತರ ಇಂದ್ರಿಯಗಳನ್ನೂ ಲಿಂಗರೂಪವಾಗಿಯೇ ಕಂಡು ತಾನೂ ಲಿಂಗರೂಪನಾಗಿ ಲಿಂಗ ಭೋಗೋಪಭೋಗಿಯಾಗಿ ಕಡೆಗೆ ಆ ಪರತರ ಪರಂಜ್ಯೋತಿ ಸ್ವರೂಪನಾದ ನಿರಂಜನ ಮಹಾಪ್ರಭುವಾಗುವದೇ ಶಿವಾನುಭವವು. ಇದನ್ನು ಮೇಲೆ ಹೇಳಿದ ಶುದ್ಧಾಂತಃಕರಣದಿಂದ ಸಾಧಿಸುವದೇ ಶಿವಾನುಭವದ ಸತ್ಯಮಾರ್ಗವು.

"ಲಿಂಗ ಸಹಿತ ನಡೆ, ಲಿಂಗ ಸಹಿತ ನುಡಿ, ಲಿಂಗ ಸಹಿತ ಸರ್ವೇಂದ್ರಿಯ ಸುಖವು॥ ಲಿಂಗಾಲಿಂಗಿತವಾಗಿಹ ಇಂಥಾ ಲಿಂಗಾಂಗಿಯೇ ಸಹಜ ॥ ೧ ॥

—ಶ್ರೀ ಬಂಥನಾಳ ಶಿವಯೋಗಿಗಳು.

## ಶಿವಾನುಭವದ ಅವಶ್ಯಕತೆ.

ಬರಿದೆ ಭ್ರಮೆಯೊಳು ಬಿದ್ದು ಕೆಡಬೇಡವೆಲೆ ಮನುಜ ।
ಪರವಸ್ತುವನು ಮರೆದು ಲೌಕಿಕವ ನಂಬಿ ॥ (ಸರ್ಪಭೂಷಣ)

ಅಧ್ಯಾತ್ಮಿಕ ಉನ್ನತಿಯ ಅವಶ್ಯಕತೆ.

ಅನಂತ ರೂಪವಾಗಿರುವ ಈ ವಿಶ್ವದಲ್ಲಿ, ಪರ್ಯಾಲೋಚಿಸಿದರೆ ಮಾನವ ಜನ್ಮವೇ ಸರ್ವೋತ್ಕೃಷ್ಟವಾದುದೆಂದು ಸಿದ್ಧವಾಗುವದು. ಮಾನವನಿಗೆ ತನ್ನ ಜನ್ಮದ ಯೋಗ್ಯತೆಯು ಎಂತಹದೆಂಬುದು ಗೊತ್ತಾದರೇನೇ ಸಾತ್ವಿಕ ವೃತ್ತಿಯ ವಿಕಾಸವೂ, ಎಲ್ಲ ಜೀವಿಗಳಲ್ಲಿ ಸಮತೆಯೂ, ಅಹಂಭಾವದ ಅಭಾವವೂ, ಕರ್ತವ್ಯದ ಜಾಗ್ರತೆಯನ್ನು ಸ್ಥಿರಗೊಳಿಸುವ ಮನೋ-ನಿಗ್ರಹವೂ ಮುಂತಾದುವು ಅವನಲ್ಲಿ ತಲೆದೋರಲು ಅನುವಾಗುವದು. ಆತ್ಮವಿಶ್ವಾಸವನ್ನು ಜೊತೆಗೊಳಿಸಿ ಆತ್ಮೋದ್ಧಾರದ ನಿಲುಕಡೆಗೆ ಒಯ್ದು ಮುಟ್ಟಿಸತಕ್ಕದಾದ ಅಧ್ಯಾತ್ಮಿಕ ಉನ್ನತಿಯನ್ನು ಪ್ರತಿಯೊಬ್ಬನೂ ಪಡೆಯಬೇಕಾದುದು ಅತ್ಯಾವಶ್ಯಕವಾದ ಆದ್ಯ ಕರ್ತವ್ಯವು. ಇಷ್ಟೇ ಅಲ್ಲ, ಮನುಷ್ಯನು ತನ್ನ ಜನ್ಮದ ಯೋಗ್ಯತೆಯನ್ನು ಎಲ್ಲಿಯ ವರೆಗೆ ತಿಳಿದವನಾಗಿರುವನೋ ಅಲ್ಲಿಯ ವರೆಗೂ ಅವನು ಕಲಿತವನೂ ಶರೀರದಿಂದ ಗಟ್ಟಿಮುಟ್ಟನೂ ಮನೋನ್ನತೆಯುಳ್ಳವನೂ ಆಗಿದ್ದರೂ ಸಹ, ಆ ವಿದ್ವತ್ತೆ, ಗಟ್ಟಿಮುಟ್ಟತನ, ಉನ್ನತಿಗಳಿಗೆ ಅಧ್ಯಾತ್ಮ ಜ್ಞಾನದ ಜೋಡು ಇಲ್ಲವಾದುದರಿಂದ ಅವನು ಏಕಾಂಗಿಯಂತಲೇ ಹೇಳಿಸಿಕೊಳ್ಳಲ್ಪಡುತ್ತಾನೆ. ಜಗತ್ತಿನಲ್ಲಿ ಒಟ್ಟಿಗೆ ನೋಡಿದರೆ ವ್ಯವಹಾರಿಕ ಕೃತ್ಯಗಳನ್ನು ಮಾಡುವದಿಷ್ಟೇ ಮನುಷ್ಯನ ಉಚ್ಚತಮ ಧ್ಯೇಯವಾಗಿರುವದೆಂತಲೂ ಹೇಳಲಿಕ್ಕೆ ಬರುವ ಹಾಗಿಲ್ಲ. ಎಂತಹ ಬಿಕ್ಕಟ್ಟಿನ ಪ್ರಸಂಗವು ಬಂದೊದಗಿದರೂ ಮನಸ್ಸು ಚಂಚಲವಾಗದ ಹಾಗೆ ಮಾಡಿ ಅಧ್ಯಾತ್ಮಿಕ ಉನ್ನತಿಯಿಂದ ಮನಸ್ಸಿಗೆ ಪೂರ್ಣ ಶಾಂತಿಯನ್ನು ಒದಗಿಸಿಕೊಡಲು ಶಕ್ಯವದೆ. ಇಂಥ ಶಾಂತಿಯು ಕೇವಲ ವ್ಯವಹಾರದಿಂದ ಉಂಟಾಗಲಾರದು.



ಅಧ್ಯಾತ್ಮಿಕ ಉನ್ನತಿಯಿಂದ ಮನಸ್ಸಿನ ಶಾಂತಿಯು.

ಹಂಸದ ಚಂಚೂಪುಟವು ಹಾಲು-ನೀರುಗಳನ್ನು ಬೇರ್ಪಡಿಸುತ್ತಿರುವಂತೆ, ಅಧ್ಯಾತ್ಮಿಕ ಸಂಸ್ಕಾರ ವಿಶಿಷ್ಟವಾದ ಮನೋವೃತ್ತಿಯು ವಿಶ್ವದೊಳಗಣ ಸಾರಾಸಾರವನ್ನು ವಿಂಗಡಿಸುವದು. ಅಧ್ಯಾತ್ಮ ಉನ್ನತಿಯ ಹಾದಿಯನ್ನೇ ಅರಿಯದುದಾದ ಮನವು ಸಮಾಧಾನವನ್ನು ಹೊಂದದೆ ಬಿಸಿಲ್ಗುದುರೆಯನ್ನು ನೀರೆಂದು ತಿಳಿದು ಕೋಟಲೆಗೊಳ್ಳುವನಂತೆ, ಅಸಾರ ರೂಪಗಳಾದ ವಸ್ತುಗಳ ಹಂಬಲದಿಂದ ಬಹಳವಾಗಿ ಬಳಲುವದು. ನೀರು ಹಸರು, ಕೆಂಪು ಮೊದಲಾದ ಬೇರೆಬೇರೆಗಳಾದ ಬಣ್ಣಗಳ ಸಂಸರ್ಗ ಮೂಲಕ ಆಯಾಯ ರೂಪುಗಳನ್ನು ಪಡೆಯುವಂತೆ ಮನುಷ್ಯನ ಇಚ್ಛೆಯು ಮೊದಲು ಶುದ್ಧವಾಗಿರುವದು. ಅದು ಬಹಿರ್ಮುಖವಾಗಿ ಹೊರಗಣ ಬೇರೆಬೇರೆಗಳಾದ ವಿಷಯಗಳನ್ನವಲಂಬಿಸಿ ವನಿತೇಚ್ಛೆ ಧನೇಚ್ಛೆ ಮುಂತಾದ ಹೆಸರುಗಳನ್ನು ಪಡೆಯುವದು. ಬಾಹ್ಯ ವಿಷಯಗಳ ಹಂಬಲವುಳ್ಳ ಮನಸ್ಸು ಯಾವಾಗಲೂ ನಾನಾವಿಧ ಕಲ್ಪನೆಗೊಳಗಾಗಿ ನಿಜವಾದ ಶಾಂತಿಯನ್ನು ಪಡೆಯದೆ ಕೊರಗುತ್ತಿರುವದು. ಆದರೆ ಸಾರಭೂತವೆನಿಸುವ ಅಧ್ಯಾತ್ಮಿಕ ವಿಷಯದ ಕಡೆಗೆ ಹೊರಳಿದ ಅಂತರ್ಯ ವೃತ್ತಿಯುಳ್ಳದಾದ ಮನಸ್ಸಾದರೋ ಶೀವ್ರವಾಗಿ ಸುಖ-ಶಾಂತಿಯನ್ನು ಹೊಂದುವದು. ಇಷ್ಟೇ ಅಲ್ಲ, ಅಧ್ಯಾತ್ಮಿಕ ವಿಷಯದಲ್ಲಿ ವಿಶೇಷವಾಗಿ ಆಸಕ್ತಿಯುಳ್ಳದಾದ ಚಿತ್ತವೃತ್ತಿಗೆ ಇಂಥಾದ್ದೇ ಇಷ್ಟೇ ಲಾಭವಾಗುವದೆಂದು ಹೇಳಲಿಕ್ಕೆ ಬರುವದಿಲ್ಲ. ಆದರೆ ಅದನ್ನು ಸಾಧಿಸದಿರುವದರಿಂದ ಮಾತ್ರ ಅಪರಿಮಿತ ಹಾನಿಯಾಗುವದು. ನಾನು ಯಾರು, ಎಲ್ಲಿಂದ ಬಂದೆನು, ನಾನು ಈ ವಿಧವಾಗಿ ಜನ್ಮವನ್ನೆತ್ತಿ ಸಂಸ್ಕೃತಿ ಪ್ರವಾಹದೊಳು ಬಿದ್ದು ಹರಿದು ಹೋಗುತ್ತಿರಲು ಕಾರಣವೇನು, ಕಡೆಗೆ ನಾನು ಎಲ್ಲಿಗೆ ಹೋಗಬೇಕಾಗಿರುವದು, ದಿನಾಲೂ ಮಾನಸಿಕ ಶಾರೀರಿಕ ಕರ್ಮಗಳನ್ನು ಮಾಡಲೇಬೇಕಾದುದೆಂಬ ಕೋಟಲೆಯು ನನ್ನ ಬೆಂಬಿಡದಿರಲು ಕಾರಣವೇನಿರಬಹುದು, ಇದೆಲ್ಲದರ ನಿಯಂತ್ರತ್ವವು ಯಾರ ಕಡೆಗಿರುವದು, ಅವನು ಇದೆಲ್ಲವನ್ನೂ ಮಾಡುವುದರಲ್ಲಿ ಹೇತುವೇನಿರಬಹುದು, ಮುಂತಾದುದರ ವಿಚಾರವಿಲ್ಲದವನು ಮನುಷ್ಯಕೋಟಿಯಲ್ಲಿ ಪರಿಗಣಿಸಲ್ಪಡುತ್ತಿರುವವನಾದರೂ

ಮಾನವ ಜನ್ಮದ ಯೋಗ್ಯತೆಯನ್ನರಿಯದವನಾದುದರಿಂದ ಅವನು ಒಂದು ತರದ ಪಶುವೆಂತಲೇ ಹೇಳಿಸಿಕೊಳ್ಳಲ್ಪಡುತ್ತಾನೆ. ಮನುಷ್ಯಜನ್ಮದ ಮಹತ್ವವನ್ನರಿದು, ಅದರಿಂದ ಸಾಧಿಸತಕ್ಕದ್ದು ಮುಖ್ಯವಾದುದು ಯಾವುದು ಎಂಬೀ ಮುಂತಾದ ವಿಚಾರಪರಾಯಣನಾದವನಿಗೆ ಆಧ್ಯಾತ್ಮಿಕ ಜ್ಞಾನದಿಂದ ಈ ಮೇಲೆ ತೋರಿಸಲ್ಪಟ್ಟ ಎಲ್ಲದರ ಜಿಜ್ಞಾಸೆಯು ತೃಪ್ತವಾಗಿ, ಆ ಮೂಲಕ ವಿಶಿಷ್ಟತರವಾದ ಮಾನಸಿಕ ಹಾಗೂ ಶಾರೀರಕ ಸ್ವಾಸ್ಥ್ಯವು ಲಭಿಸುವದು.

**ಆಧ್ಯಾತ್ಮಿಕ ಜ್ಞಾನವುಳ್ಳವನನ್ನು ಪ್ರಪಂಚವು ಬಾಧಿಸಲಾರದು.**

ಈಶ್ವರ ವಿಷಯಕವಾದ ಜ್ಞಾನದಿಂದ ಸಾಮಾನ್ಯವಾಗಿ ತೋರುತ್ತಿರುವ ಕ್ಷುಲ್ಲಕ ಪದಾರ್ಥಗಳಲ್ಲಿಯೂ ಸಹ ಎಷ್ಟು ಅಲೌಕಿಕತ್ವವು ತುಂಬಿದೆಯೆಂತಲೂ ಈ ನಾಮ ರೂಪಾತ್ಮಕ ವಿಶ್ವಪ್ರಪಂಚ ನಿರ್ಮಾಣದಲ್ಲಿ ಅವನು ತೋರಿಸಿದ ಕೌಶಲ್ಯವು ಎಷ್ಟು ವಿಚಿತ್ರವಾಗಿರುವದೆಂತಲೂ ಇವೇ ಮೊದಲಾದ ಪರಮೇಶ್ವರನ ಅಗಾಧವಾದ ಸಾಮರ್ಥ್ಯದ ಬಗ್ಗೆ ಮನುಷ್ಯನ ಬುದ್ಧಿವೃತ್ತಿಯು ಕುಂಠಿತವಾಗುವದಲ್ಲದೆ ತನ್ನಲ್ಲಿ ಅಹಂಮನ್ಯತೆಯು ಅಡಗಿ ಸಾರ್ವತ್ರಿಕವಾಗಿ, ಉಚ್ಚತಮವೂ ಸಾತ್ವಿಕವೂ ಆದ ಭಾವನೆಯು ಉಂಟಾಗುವದು. ಮನುಷ್ಯನಿಗೆ ಒಮ್ಮೆ ಈ ತರದ ಆಧ್ಯಾತ್ಮಿಕ ದೃಷ್ಟಿಯು ಪ್ರಾಪ್ತವಾಯಿತೆಂದರೆ ಅವನ ಒಲವೇ ಬೇರೆಯಾಗುತ್ತದೆ. ಈಶನಿರ್ಮಿತವಾದ ಈ ಪ್ರಪಂಚವು ಅಧ್ಯಾತ್ಮಭಾವನೆಯುಳ್ಳವನನ್ನು ಬಾಧಿಸಲಾರದು. ಪ್ರಪಂಚವು ಅಂದರೆ ನಾಮರೂಪಾತ್ಮಕ ವಿಸ್ತಾರವು ಆತ್ಮಾನಾತ್ಮ ವಿವೇಕವುಳ್ಳವನಿಗಾದರೂ ಶರೀರಾದಿ ಪ್ರಪಂಚವಿರುವದಿಲ್ಲವೆಂತಲ್ಲ, ಆದರೂ ಅವನು ನಾಮರೂಪಾತ್ಮಕಗಳಾದ ಶರೀರಾದಿ ಆ ಅನಾತ್ಮ ಪದಾರ್ಥಗಳಲ್ಲಿ ನಾನು ನನ್ನದು ಎಂಬ ಅಹಂಕಾರ ಮಮಕಾರರಹಿತನಾಗಿರುವದರಿಂದ ಬಾಧಕವಿಲ್ಲ. ಆತ್ಮಾನಾತ್ಮ ವಿವೇಕಶೂನ್ಯನಿಗಾದರೋ ಆ ಶರೀರಾದಿ ಪ್ರಪಂಚವು ಬಾಧಕವಾಗಿರುವದು. ಆದ್ದರಿಂದಲೇ ಅಧ್ಯಾತ್ಮಸಂಸ್ಕಾರ ವೃತ್ತಿಯುಳ್ಳವನು ಯಾವಾಗಲೂ ತನ್ನಲ್ಲಿ ವಿವೇಕವು ಜಾಗರೂಕವಾಗಿರುವದರಿಂದ ಧೈರ್ಯವುಳ್ಳವನೂ ಸಮಾಧಾನಿಯೂ ಆಗಿರುತ್ತಾನೆ.



**ಸಂಸಾರಿಗೆ ಶಾಂತಿಯು ಇರಲಾರದು.**

ದೇಹ ಮುಂತಾದ ಅನಾತ್ಮ (ಅಸಾರ) ಪದಾರ್ಥಗಳಲ್ಲಿ ನಾನು ನನ್ನದು ಎಂಬ ತಾದಾತ್ಮ್ಯ ಬುದ್ಧಿಯುಳ್ಳವನಾದರೋ ಪ್ರಪಂಚ ಮೋಹಿ ಎನಿಸುತ್ತಾನೆ. ಇಂತಹ ಮನುಷ್ಯನೇ ಸಂಸಾರಿಯು.. ಸಂಸಾರಿಯೇ ಬದ್ಧನು. ಸಂಸಾರಿ ಎನಿಸುವ ಜೀವನಿಗೆ ಎಂದೂ ಶಾಂತಿಯೇ ಇಲ್ಲ. ಯಾಕಂದರೆ ಪ್ರಾಪಂಚಿಕ ವಿಷಯಗಳ ಮೇಲಣ ಮೋಹವು ಆತ್ಮನ ಸಾಹಜಿಕವಾದ ಶಾಂತಿಗೆ ಪ್ರತಿಬಂಧಕವಾಗಿದೆ. ಆದ್ದರಿಂದಲೇ ಬಲ್ಲವರು "ಮೋಹವೇ ಸಂಸೃತ ದುಃಖಕ್ಕೆ ಬೀಜ"ವೆಂದು ಹೇಳುತ್ತಾರೆ. ಇದರಿಂದ ವನಿತಾದಿ ಪ್ರಾಪಂಚಿಕ ವಿಷಯಗಳು ಬಂಧಕಗಳಲ್ಲ; ಅವುಗಳ ಮೇಲಿನ ಮೋಹವೇ ಜೀವನ ಸಂಸಾರದೆಡೆಯಾಟಕ್ಕೆ ಹೇತುವೆಂಬುದು ಸಿದ್ಧವಾಗುವದು. ಹೊರಗೆ ತೋರಿಕೆಗೆ ಮಾತ್ರ ಹೆಂಡತಿ, ಮಕ್ಕಳು, ಮನೆ ಮುಂತಾದವುಗಳನ್ನು ಬಿಟ್ಟು ಬಿಡಾಡಿಗಳಾಗಿ ತಿರುಗಾಡುವವರೆಲ್ಲ ಇತೋ ಭ್ರಷ್ಟಃ ತತೋ ಭ್ರಷ್ಟಃ ಎಂಬಂತಾಗಲು ವಿಷಯಗಳಲ್ಲಿಯ ಮನೋಗತ ವ್ಯಾಮೋಹವನ್ನು ಬಿಡದಿರುವಿಕೆಯೇ ಕಾರಣವೆಂದು ಹೇಳಬಹುದು. "ಮನ ವಿರಕ್ತಿಗೆ ಮುಕ್ತಿಯಲ್ಲದೆ ತನು ವಿರಕ್ತಿಗೆ ಇಲ್ಲ." ಎಂಬಂತೆ ವಿಷಯಗಳ ಮೋಹವನ್ನಳಿಯದವರು ಅಡವಿಯಲ್ಲಿ ಏಕಾಂಗಿಗಳಾಗಿರುತ್ತಿದ್ದರೂ ಅಶುದ್ಧಚಿತ್ತರಾಗಿಯೇ (ಸಂಸಾರಿಗಳಾಗಿಯೇ) ಇರುತ್ತಾರೆ. ಮನೆಗಳಲ್ಲಿ ಮಡದಿ, ಮಕ್ಕಳು ಮುಂತಾದವರಿಂದೊಡಗೂಡಿ ಪ್ರಪಂಚವನ್ನು ಮಾಡುತ್ತಿದ್ದರೂ ಅಧ್ಯಾತ್ಮಸಂಸ್ಕಾರ ವಿಶೇಷದಿಂದ ವ್ಯಾಮೋಹರಹಿತರಾಗಿರುವವರು ಶುದ್ಧಾಂತಃಕರಣಿಗಳೂ ಜೀವನ್ಮುಕ್ತರೂ ಆಗಿರುತ್ತಾರೆ.

**ವಿಷಯಗಳು ಸುಖಕ್ಕೆ ಸಾಧನಗಳಲ್ಲ.**

ಮೋಹವು ತೊಲಗಬೇಕಾದರೋ ಒಂದು ಬಗೆಯ ದೋಷದೃಷ್ಟಿಯು ಬೇಕು; ಅಂದರೆ ಯಾವ ವಿಷಯದಲ್ಲಿ ನಮಗೆ ಮೋಹವಿರುವದೋ ಅದು ಸುಖಕ್ಕೆ ಸಾಧನವೆಂಬ ಭಾವನೆ ಇರದ ಹೊರತು ಸಂಭವಿಸದು; ಅದೇ ವಿಷಯವೇ ನಮಗೆ ಪ್ರತಿಕೂಲವಾಗಿ ದುಃಖಕ್ಕೆ ಸಾಧನವೆಂದು ಯಾವಾಗ ತಿಳಿಯಲ್ಪಡುವದೋ ಆಗಳೇ ಆ ವಿಷಯದಲ್ಲಿ ಮೋಹಕ್ಕೆ ವಿರುದ್ಧವಾದ ದ್ವೇಷರೂಪ ದೋಷ ದೃಷ್ಟಿಯುಂಟಾಗುವದು. ಪ್ರತಿಯೊಂದು ವಿಷಯವು ಯಾವಾಗಲೂ ಸುಖಕ್ಕೇನೇ

ಸಾಧನವಾಗಿರುವದೆಂದು ಹೇಳಲಾಗುವದಿಲ್ಲ; ಇಷ್ಟೇ ಅಲ್ಲ, ಜಗತ್ತಿನಲ್ಲಿ ಆನಂದನಿಧಿಯಾದ ಪರಶಿವನ ಹೊರತು ಉಳಿದ ಯಾವ ವಿಷಯುಗಳಾದರೂ ಅನಿತ್ಯ, ಜಡ, ದುಃಖರೂಪಗಳಾದುದರಿಂದ ಅವುಗಳೆಲ್ಲವೂ ಸುಖರೂಪಗಳೂ ಅಲ್ಲ, ಸುಖಕ್ಕೆ ಸಾಧನಗಳಂತೂ ಅಲ್ಲವೇ ಅಲ್ಲ. ಹಾಗಾದರೆ, ವಿಷಯುಗಳು ಸುಖರೂಪಗಳಾಗದಿದ್ದರೆ ಹೋಗಲಿ, ಸುಖಕ್ಕೆ ಸಾಧನಗಳೂ ಆಗಲಾರವೆ? ಹಾಗಲ್ಲದ ಪಕ್ಷದಲ್ಲಿ, ದೊಡ್ಡ ದೊಡ್ಡ ಪಂಡಿತರೆನಿಸಿಕೊಳ್ಳುವ ಭೌತಿಕ ಸುಖವಾದಿಗಳು ದಡ್ಡರೇನು? ಅಂದರೆ ಅವರಿಗೆ ನಾವು ದಡ್ಡರೆಂದು ಹೇಳಲಾರೆವು. ಆದರೆ ವಿಷಯುಗಳೇ ಸುಖಕ್ಕೆ ಸಾಧನಗಳೆಂದು ಅವರು ಹಟ ಹಿಡಿದರೆ ಮಾತ್ರ ಅವರನ್ನು, ಮಳಲನ್ನು ಗಾಣದಲ್ಲಿ ಸುರುವಿ ಅದರಿಂದ ಎಣ್ಣೆಯುನ್ನು ಪಡೆದು ಹಣವನ್ನು ಗಳಿಸಿ ಸುಖಿಯಾಗುವೆನೆಂಬ ಅರೆಮರುಳನ ಜೋಡಿಗೆ ಕುಳ್ಳಿರಿಸದಿರಲಾರೆವು. ತುಷ್ಯತು ದುರ್ಜನ ನ್ಯಾಯುದಂತೆ, ವಿಷಯುಗಳಿಂದ ಸುಖವುಂಟೆಂದೊಪ್ಪಿದರೂ, ತನ್ಮೂಲಕ ಈ ಜಗತ್ತಿನಲ್ಲಿ ಯಾವನು ತಾನೇ ಕೃತಾರ್ಥನಾಗಿದ್ದಾನೆ? ಹಾಗೂ, ವಿಷಯು ಸುಖವು ಹಂಗಿನದು. ಆದರೆ ವಿಷಯುಗಳು ಮತ್ತು ಅವುಗಳನ್ನುಪಭೋಗಿಸಲಿಕ್ಕೆ ಇಂದ್ರಿಯಾದಿಗಳು ಸರಿಯಾಗಿ ಇದ್ದರೇನೇ ಅಲ್ಲವೆ ಅವುಗಳನ್ನು ದೂರ ಮಾಡುವದು? ಹಾಗಿದ್ದರೂ ಮನುಷ್ಯನ ಮನಸ್ಸು ಯಾವಾಗಲೂ ಒಂದೇ ತರದ ಒಂದೇ ವಿಷಯುದ ಇಚ್ಛೆಯುಳ್ಳದ್ದಾಗಿಯೂ ಅದೊಂದನ್ನೇ ತನಗೆ ಸುಖಸಾಧನವಾದುದನ್ನಾಗಿ ನಂಬುವದೇ? ವಿಷಯುಗಳಾದರೂ ಆ ತರದ ವಿಶ್ವಾಸಕ್ಕೆ ಪಾತ್ರಗಳಾಗಿವೆಯೋ? ಈ ದಿವಸ ಯಾವ ವಿಷಯುವು ಸುಖಸಾಧನವಾದುದೆಂದು ತಿಳಿಯಲ್ಪಡುತ್ತಿರುವದೋ ಮರುದಿವಸವೇ ಇಷ್ಟೇ ಅಲ್ಲ ಮರುಗಳಿಗೆಯಲ್ಲಿಯೇ ಅದೇ ವಿಷಯುವು ತನಗೆ ದುಃಖವನ್ನುಂಟುಮಾಡುವದಾಗಿ ಮೋಹವಿದ್ದೆಡೆಯಲ್ಲಿ ದೋಷ ದೃಷ್ಟಿಯು ಬಂದು ಕುಳಿತುಕೊಳ್ಳುವದು. ಹೀಗೆಯೇ, ವಿಷಯುಗಳು ನಿಯತಗಳಾದ ಸುಖಸಾಧನಗಳೆಂದು ಯಾವನೂ ಸಿದ್ಧಮಾಡಲಾರನು.

ಗುದ್ದಿಸಿಕೊಳ್ಳುವದೊಂದು ಸುಖಸಾಧನವೇ? ಅಲ್ಲ; ಆದರೂ, ವಾತರೋಗಿಯು ಅದನ್ನೊಪ್ಪುವನು. ಹಾಗೆಯೇ, ಸ್ವಸ್ವರೂಪದ (ಪರಮಾತ್ಮನ) ಜ್ಞಾನವಿಲ್ಲದವರು ಅಂದರೆ ಅಜ್ಞಾನವೆಂಬ ರೋಗವುಳ್ಳವರು ಕಷ್ಟಕರಗಳಾದ ವಿಷಯುಗಳನ್ನೇ ಸುಖಸಾಧನಗಳೆಂದು



ಹೇಳುತ್ತಿರುವದು ಆಶ್ಚರ್ಯವಲ್ಲ. ಅಜ್ಞಾನವೆಂದರೆ— ಅನಿತ್ಯ, ಅಶುಚಿ, ದುಃಖಮಯುಗಳಾದ ವಿಷಯುಗಳಲ್ಲಿ ನಿತ್ಯ, ಶುಚಿ, ಸುಖಮಯು ಭಾವನೆಯು; ಈ ಭಾವನೆಯೇ ಮೋಹರೂಪವಾಗಿರುವದು.

ವಿಷಯು ಭೋಗದಿಂದ ಶಾಂತಿಯುಂಟಾಗದು.

ಅಸ್ತಿಗತ ಜ್ವರವು, ಅರುಚಿ ಬಾಯಾರಿಕೆ ಮೊದಲಾದ ವಿಕಾರಗಳಿಂದ ತಿಳಿಯಲ್ಪಡುತ್ತಿರುವಂತೆ. ಮನುಷ್ಯನ ಮನೋಗತವಾದ ವಿಷಯು ವ್ಯಾಮೋಹವು ಪ್ರತಿಕೂಲಾನುಕೂಲಗಳ ಸಂದರ್ಭಗಳಲ್ಲಿ ರಾಗ-ದ್ವೇಷಾದಿಗಳ ಮೂಲಕ ಅರಿಯಲ್ಪಡುತ್ತದೆ. ಆ ಜ್ವರ ರೋಗ ಪೀಡಿತನ ಬಾಯಾರಿಕೆಯು ಅವನು ಬೇಡಿದ ಹಾಗೆಲ್ಲ ನೀರನ್ನು ಕೊಡುತ್ತ ಹೋದರೇನೇ ಅವನಿಗೆ ಸುಖವುಂಟಾಗುವದೆಂದು ಹೇಳುವದು ಮೂಢತನವು. ಹಾಗೆಯೇ ಆತ್ಮನನ್ನು ಅಂಟಿಕೊಂಡಿರುವ ಅಜ್ಞಾನ (ಮೋಹ) ರೂಪವಾದ ಅಸ್ಥಿಗತ ಜ್ವರ ನಿವೃತ್ತಿಗೆ ಉಪಾಯವಾವುದೋ ಅದನ್ನು ಯೋಜಿಸದೆ ವಾಸನಾರೂಪ ಬಾಯಾರಿಕೆಯನ್ನು ಕಳೆಯುವದಕ್ಕೆಂದು ಮನಸ್ಸು ಬೇಡಿದ ಹಾಗೆಲ್ಲ ವಿಷಯುಗಳೆಂಬ ನೀರುಗಳನ್ನು ಒದಗಿಸಿ ಕೊಡಲು ವಾಸನಾರೂಪ ಬಾಯಾರಿಕೆಯು ಮತ್ತಿಷ್ಟು ಹೆಚ್ಚಾಗುತ್ತಲೇ ನಡೆಯುವದೆಂಬ ಸಂಗತಿಯು ಸರ್ವಾನುಭವ ಸಿದ್ಧವಾಗಿರುವದು. ಇದೇ ಮಾತನ್ನು ಶ್ರೀಕೃಷ್ಣನು ಸಹ – 'ಮನದ ವಾಸನೆಯು' ಎಷ್ಟು ವಿಷಯುಗಳನ್ನು ಉಪಭೋಗಿಸಿದರೂ ಶಾಂತವಾಗುವದಿಲ್ಲ; ಮತ್ತೇನೆಂದರೆ, ಉರಿಯಲ್ಲಿ ತುಪ್ಪವನ್ನು ಸುರುವಿದರೆ ಅದು ಹೇಗೆ ಮತ್ತಿಷ್ಟು ಧಗಧಗಿಸುವದೋ ಹಾಗೆಯೇ ಹೆಚ್ಚಾಗುವದೆಂದು ನುಡಿದಿದ್ದಾನೆ.

ವಿಷಯು ವಾಸನೆಯೆಂಬ ಪಿಶಾಚಗ್ರಸ್ತರಾಗಿರುವ ಸಹಸ್ರಾಧಿಪನೇನು, ಸಾಹುಕಾರನೇನು, ಸಾರ್ವಭೌಮನೇನು, ಇಂದ್ರನೇನು, ಬ್ರಹ್ಮನೇನು, ಯಾರಿಗೂ ನಿಶ್ಚಿಂತತೆಯೂ (ಶಾಂತಿಯೂ) ನಿಜಾನಂದವೂ ಇಲ್ಲವೇ ಇಲ್ಲ. ಆದರೆ ವಿರತಿಯಿಂದಿತರ ಸಂಪದ ಸುಖಮುಂಟೇ? ಎಂದು ನಿಜಗುಣಾರಾಧ್ಯನು ಹೇಳುತ್ತಿರುವ ಮೇರೆಗೆ, ವಿಷಯು ವ್ಯಾಮೋಹವಿಲ್ಲದಾತನೇ ಅಚ್ಚಸುಖಿಯು. ಇದಕ್ಕೆ ವಿಪರೀತವಾಗಿ, ಹೊಟ್ಟೆತುಂಬ ಕೂಳನುಂಡು ಕಣ್ಣತುಂಬ ನಿದ್ದೆಮಾಡಿ, ಸುಸಿಲಾಟ ಮೊದಲಾದುದ

ರಲ್ಲಿ ಕಾಲಕಳೆಯುವದೇ ಅಚ್ಚಸುಖವೆಂಬುದಾಗಿ ಬಡಬಡಿಸುವ ಹುಚ್ಚು ಮನುಜರೀಗ ಹೆಚ್ಚಾಗುತ್ತಲಿದ್ದಾರೆ. ಮನವೆಳಸಿದ ವಿಷಯಗಳನ್ನು ಮನವಾರೆ ಉಪಭೋಗಿಸಲು ಅನುಕೂಲಗಳಾದ ಸಾಧನ ಸಾಮುಗ್ರಿಗಳು ಎಲ್ಲಿ ನೋಡಿದಡಲ್ಲಿ ಹೇಗೆ ಬೇಕೋ ಹಾಗೆ ದೊರೆಯುತ್ತಿರುವ ಈಗಿನ ಕಾಲವೇ ಸುಧಾರಿಸಿದ ಕಾಲವಂತೆ! ಹಿಂದಿನ ಕಾಲದ ಹಿಂದುಗಳ ಮಿದುಡು ಮುದಡವಾಗಿದ್ದಿತಂತೆ!! ಅಯ್ಯೋ ಅಜ್ಞಾನವೇ !!!

ಗುಡ್ಡವನ್ನೆಲ್ಲ ತೋಡಿ ಕಡೆಗೆ ಒಂದು ಇಲಿಯನ್ನು ಸಂಪಾದಿಸಿದನೆಂಬ ಗಾದೆಯ ಮಾತಿನ ಹಾಗೆ, ನೆಲ-ನೀರು-ಬೆಂಕಿ-ಗಾಳಿ ಮುಂತಾದ ಜಡ ಪದಾರ್ಥಗಳನ್ನೆಲ್ಲ ಮಥಿಸಿ ವಿಷಯೋಪಭೋಗದ

**ವಿಷಯೋಪಭೋಗವು ನಿಜಸುಖವಲ್ಲ.**

ಎಷ್ಟು ಸಾಮುಗ್ರಿಗಳನ್ನು ಹೆಚ್ಚಿಸಿದರೂ ಕಡೆಗೆ ಅದರಿಂದ ಸುಖಾಭಾಸ ಮಾತ್ರ ದೊರೆದಂತಾಗುವದಲ್ಲದೆ ನಿಜವಾದ ಸುಖವು ಲಭಿಸುವದುಂಟೇ? ವಿಷಯಜನ್ಯಸುಖಾಭ್ಯಾಸಕ್ಕೂ ನಿರ್ವಿಷಯ ರೂಪವಾದ ನಿಜಾನಂದಕ್ಕೂ ಪೂರ್ವ-ಪಶ್ಚಿಮ ಹುಣ್ಣಿವೆ-ಅಮಾವಾಸ್ಯೆಗಳಿರುವಷ್ಟು ವ್ಯತ್ಯಾಸವಿದೆ. ರೋಗಿಯ ಎದುರಿಗೆ ಅಪಥ್ಯ ಪದಾರ್ಥಗಳನ್ನು ಇರಿಸಿದ್ದರೆ, ಮೊದಲೆ ಬಾಯಿ ಸಪೆಗೆಳೆಸುವ ಅವನು ಅವುಗಳನ್ನು ತಿನ್ನದಿರುವನೇ? ತಿಂದಕೂಡಲೇ ರೋಗವು ಮತ್ತಿಷ್ಟು ಉಲ್ಬಣವಾಗದಿರುವದೇ? ಹಾಗೆಯೇ. ವಿಷಯಗಳಲ್ಲಿ ಪ್ರವರ್ತಿಸುವದೇ ಸ್ವಾಭಾವಿಕವಾದ ಮನೋವೃತ್ತಿಯುಳ್ಳ ಜೀವಿಗಳಿಗೆ ಅವರಿಷ್ಟ ಪ್ರಕಾರ ವಿಷಯಸುಖ ಸಾಧನಗಳನ್ನು ಕಲ್ಪಿಸಿ ಕೊಟ್ಟ ಹಾಗೇ ಅವರ ಸಂಸೃತಿ ರೋಗವು ಉಲ್ಬಣವಾಗುವದಲ್ಲದೆ ನಿಜಾನಂದಕ್ಕೆ ಎರವಾಗಿರುವರಲ್ಲವೇ? ಇದರಿಂದ ಭೌತಿಕ ಸುಖವಾದಿಗಳನ್ನು 'ಸ್ವಯಂ ನಷ್ಟಃ ಪರಾನ್ನಾಶಯತಿ' ಎಂಬ ನಾಣ್ಣುಡಿಗೆ ಗುರಿಯಾದರೆಂಮ ಹೇಳಬಾರದೇಕೆ? ಈಗಾದರೋ ಎಲ್ಲರೂ ವಿಮಾನದಲ್ಲಿ ಕುಳಿತು ವಿಹರಿಸುವ ಕಾಲವು; ಮುಂದೆ ಇದಕ್ಕಿಂತಲೂ ಮಿಗಲಾದ ವ್ಯಾವಹಾರಿಕ ಸೌಕರ್ಯಗಳೂ ಒದಗಿಸಲ್ಪಡುವವಾದರೂ ಅಷ್ಟ ಮಾತ್ರದಿಂದಲೇ ಜೀವಿಗಳು ತೃಪ್ತರಾಗುವದಕ್ಕೆ ಬದಲು ಅದಕ್ಕಿಂತಲೂ ಹೆಚ್ಚಿನ ಸೌಕರ್ಯಗಳನ್ನು ಕಂಡುಹಿಡಿಯುವದಕ್ಕಾಗಿ ಈಗಿನಂತೆಯೇ ಹೆಣಗಾಡುವವರಾಗಿ, ಮತ್ತು



ಅಚ್ಚ ಸುಖದ ಹಾದಿಯನ್ನೇ ಬಿಟ್ಟು ಬಹು ವಿಧವಾದ ಕೋಟಲೆಗೊಳಗಾಗಿ ಬಳಲುವರೆಂಬ ಭವಿಷ್ಯವನ್ನು ಈಗಲೇ ಧಾರಾಳವಾಗಿ ಹೇಳಲು ಅಡ್ಡಿಯೇನು?

ಹೂವು, ಗಂಧ, ಹೆಣ್ಣು ಮುಂತಾದ ವಿಷಯಜನ್ಯ ಸುಖವನ್ನೇ ಮುಖ್ಯವಾದ ಧ್ಯೇಯವಾಗಿಟ್ಟುಕೊಂಡಿರುವವರು, ಕೇವಲ ಸ್ವಾರ್ಥಿಗಳಾಗಿ ವ್ಯವಹರಿಸುತ್ತಾರೆ. ಇವರು ತಮ್ಮ ವಿಷಯೋಪಭೋಗಕ್ಕೆ ತುಸು

**ವಿಷಯಾಸಕ್ತರು ಸ್ವಾರ್ಥಿಗಳಾಗಿ ಕಂಗೆಡುತ್ತಾರೆ.**

ವಾದರೂ ಕೊರತೆ ಬರಬಾರದೆಂಬ ಹೇತುವಿನಿಂದ ಹಗಲಿರುಳೆನ್ನದೇ ಆ ಬಗ್ಗೆ ಬಹು ಶ್ರಮ ಪಟ್ಟು ಸ್ವ ಕಾರ್ಯವನ್ನೇ ಸಾಧಿಸಿಕೊಳ್ಳುತ್ತಾರೆ. ಇಂಥವರಿಗೆ ಪಾರಮಾರ್ಥಿಕ ವಿಚಾರವೆಂದರೆ ಸ್ವಪ್ನೇಪಿ ಪರಿಚಯವಿರುವದಿಲ್ಲ; ಅಥವಾ ಯಾರಾದರೂ ತದ್ವಿಷಯಕವಾಗಿ ಒಂದೆರಡು ಮಾತುಗಳನ್ನು ಪ್ರಸ್ತಾಪಿಸಿದರೆ ಅದನ್ನು ಇವರು ಕಿವಿಯಲ್ಲಿ ಸಹ ಹಾಕಿಕೊಳ್ಳುವದಿಲ್ಲ. ಅಕಸ್ಮಾತ್ತಾಗಿ ಕಿವಿಗೆ ಬಿದ್ದರೂ ಈ ವಿಷಯಾಂಧರು— ಅದರಲ್ಲೇನಿದೆ ಗೊಡ್ಡು ವೇದಾಂತ? ಬಿಡು, ಆ ಮಾತಿನಿಂದ ನಮಗೇನು? ಎಂದು ಮೊದಲಾಗಿ ಹೀಯಾಳಿಸಿ ಬಿಡುವರು. ಇಷ್ಟೇ ಅಲ್ಲ; ವೇದಾಂತವೆಂದರೆ— ದುಡಿಯಲಾರದ ಸೋಮಾರಿಗಳೂ, ವ್ಯವಹಾರಿಕ ಜ್ಞಾನವಿಲ್ಲದ ಮುದಡರೂ ಏನೇನೋ ಭಾವಿಸಿಕೊಂಡು ಬರೆದಿಟ್ಟಿರುವ ಕೆಲಸಕ್ಕೆ ಬಾರದ ಮಾತುಗಳೇ ಸರಿ, ಎಂಬುದಾಗಿ ಬರಹದಿಂದ ಹುಲುಬುಗೊಳಿಸುತ್ತಲೂ ಇದ್ದಾರೆ. ಆರ್ಯ ಸಂಸ್ಕೃತಿಗೆ ದೂರರಾಗಿರುವವರ ಈ ತರದ ನುಡಿಗಳು ಹೊರಡುವದು ಸಾಹಜಿಕವಾದುದೇ ಸೈ; ಆದರೆ ಯಾರಿಗೆ ಪರಮ ಪುರುಷಾರ್ಥವೇ (ಪಾರಮಾರ್ಥಿಕ ಸುಖ, ಮೋಕ್ಷ) ತಮ್ಮ ಮುಖ್ಯವಾದ ಗುರಿಯಾಗಿದ್ದಿತೋ ಅಂತಹ ಆರ್ಯರ ವಂಶೀಯರೆಂದು ಹೇಳಿಸಿಕೊಳ್ಳಲ್ಪಡುತ್ತಿರುವವರು ಸಹ ವಿಷಯಾಸಕ್ತತೆಯಿಂದ ಕಂಗೆಟ್ಟು ಕಂಗಾಲರಾಗಿ ತಾವು ಯಾರೆಂಬುದರ ಪರಿವೆಯಿಲ್ಲದೆ ಮನಬಂದಂತೆ ವ್ಯವಹರಿಸಲುದ್ಯುಕ್ತರಾಗಿಹುದಾದರೋ, ಎಮ್ಮೆಯ ಕರದ ಜತೆಯಿಂದ ಆಕಳ ಕರವೂ...... ಎಂಬ ಗಾದೆಯ ಮಾತನ್ನು ನೆನಪಿಗೆ ತಂದುಕೊಡುವದಿಲ್ಲವೇ? ಈ ಮೇಲೆ ಉದಹರಿಸಲ್ಪಟ್ಟಿರುವ ಕನ್ನಡಿಗ ಸಂತನ ನುಡಿಯಂತೆ, ಅಚ್ಚ ಸುಖವು ದೊರೆಯುವ ಹಾದಿಯನ್ನೇ ಬಿಟ್ಟು ಲೌಕಿಕ (ಬಾಹ್ಯ) ವಿಷಯಗಳ

ಬೆನ್ನು ಹತ್ತಿ ಅವುಗಳಿಂದಲೇ ನಮಗೆ ಸುಖವುಂಟೆಂದು ನಂಬಿ ಹಗಲಿರುಳು ಹಲವು ಹುನ್ನಾರದಲ್ಲಿ ತೊಡಗಿ ತಳಮಳಿಸುವವರ ಬಾಳು ಭ್ರಮೆ ಮೂಲಕವಾದುದೇ ಸೈ.

ಮಿತಿಮೀರಿದ ವಿಷಯವಾಸನಾರೂಪ ಪ್ರವಾಹಕ್ಕೆ ಬಿದ್ದಿರುವ ಈಗಿನ ಕಾಲದ ಜನದ ಸ್ಥಿತಿಯು, ನೆರೆ ಬಂದು ಹರಿಯುವ ಹೊಳೆಯ ಸೆಳವಿಗೆ ಸಿಲ್ಕಿದವನ ಹಾಗಿರುವದು. ವೃಕಾಗ್ನಿಯೆಂಬ ದೋಷ ದೂಷಿತವಾದ ಉದರವುಳ್ಳವನಿಗೆ ಹಸಿವು ಹಿಂಗದಿರುವಂತೆ, ವಿಷಯವಾಸನಾ ದೋಷ ದೂಷಿತ ವೃತ್ತಿಯುಳ್ಳವರಿಗಾದರೂ ತೃಪ್ತಿಯೆಂಬುದು ಎಂದೂ ಇಲ್ಲ. ದೇವಾಸುರರೊಂದುಗೂಡಿ ಜಲಮಥನ ಮಾಡಿದರೂ ಸಹ ಅವರ ಪ್ರಯತ್ನಕ್ಕೆ ಸರಿಯಾಗಿ ಕೆಲವು ವಿಷಯೋಪಭೋಗ ಸಾಮಗ್ರಿಗಳು ದೊರೆತವು; ಆದರೂ ಅವರು ಅಷ್ಟಕ್ಕೇ ಹಿಂದಕ್ಕೆ ಸರಿಯದೆ ಮತ್ತೂ ಕಡಲನ್ನು ಕಡೆದುದರಿಂದ ಕಡೆಗೆ ವಿಷ (ದುಃಖ) ರೂಪ ಫಲವನ್ನು ಹೊಂದಿ ಕಂಗೆಟ್ಟು ಕಂಗಾಲಾಗಿ ಹೋದರಲ್ಲವೇ? ಹಾಗೆಯೇ, ಜಡಗಳೂ ಅನಿತ್ಯಗಳೂ ಆದ ಅಸಾರರೂಪ ಅನಾತ್ಮ ಪದಾರ್ಥಗಳ ಮಥನಾಸಕ್ತರಾಗಿ ತೃಪ್ತಿ ಪಡೆಯದೆ ದಿನದಿನಕ್ಕೆ ಹೆಚ್ಚಾಗಿ ವಿಷಯೋಪಭೋಗ ಸಾಮಗ್ರಿಗಳನ್ನೇ ಕಂಡು ಹಿಡಿಯಲು ಯತ್ನ ಮಾಡುತ್ತಿರುವವರ ಗಡಿಬಿಡಿಯ ಗದ್ದಲದ ಸದ್ದು ಇಂದಿಲ್ಲ ಮುಂದೆ ಕೆಲವೆಡೆಯಲ್ಲಿಯಾದರೂ ಕ್ರಮೇಣ ಅಡಗಬಹುದು. ಆಗಾದರೂ, ಓಹೋ ನಾವು ಹಾದಿಯನ್ನೇ ತಪ್ಪಿದ್ದೇವೆ ಎಂದು ಎಚ್ಚತ್ತು ಅಚ್ಚ ಸುಖದ ಕಡೆಗೆ ಹೊರಳದಿರಲಾರರು.

ಮುಂದಿನ ಮಾತು ಮುಂದೆ. ವಾಚಕರೇ! ನೀವು ಯಾರು? ಈಗ ನಿಮ್ಮ ಕೈಯ್ಯಲ್ಲಿ ಏನಿರುವದು? ನೀವು ಮನುಷ್ಯರು; ನಿಮ್ಮ ಮನಸ್ಸಿನ ಒಲವನ್ನು ಪಾರಮಾರ್ಥಿಕ (ಸತ್ಯ) ಸುಖದ ಕಡೆಗೆ

ಶಿವಾನುಭವದಿಂದಲೇ ನಿಜ ಸುಖವು.

ಹೊರಳಿಸಿ, ನಿಮ್ಮ ಆತ್ಮೋನ್ನತಿಯನ್ನು ಪಡೆಯುವದು ನಿಮ್ಮ ಕೈಯ್ಯಲ್ಲಿದೆ. ಇದು ನಿಜವೋ? ಅಥವಾ ನೀವು ಯಾರು? ಅನಿತ್ಯ, ಅಶುಚಿ, ದುಃಖರೂಪ ಅನಾತ್ಮ ವಿಷಯಗಳಿಗೆ ಹೇಸಿ, ಮನುಷ್ಯ ಜನ್ಮವನ್ನು ಸಾರ್ಥಕಗೊಳಿಸಲುದ್ಯುಕ್ತರಾದ ಮುಮುಕ್ಷುಗಳ



ಲ್ಲವೇ? ಅದು ಹೇಗೆಂದರೆ— ಈಗ ನಿಮ್ಮ ಕೈಯಲ್ಲಿ ಏನಿದೆ, 'ಶಿವಾನುಭವ' ಎಂಬ ಸದ್ಗ್ರಂಥವಿದೆಯಲ್ಲವೇ? ಇದು ನಿಮ್ಮ ಅಂತರಂಗದೊಳಗಣ ಅಚ್ಚ ಸುಖದ (ಪರವಸ್ತುವಿನ) ಪ್ರಾಪ್ತಿಯ ಬಯಕೆಯನ್ನು ತೋರ್ಪಡಿಸುತ್ತಿದೆಯಲ್ಲವೇ? ಶಿವನೇ ಪರವಸ್ತುವು, ತದ್ವ್ಯತಿರಿಕ್ತವಾದುದೆಲ್ಲವೂ ಅಶಿವಾತ್ಮಕವಾದುದು; ಅಂದರೆ— ಶಿವನು ಅಚ್ಚ ಸುಖದ ನಿಧಿಯು; ನಿಜಾನಂದ ರೂಪನಾದ ಶಿವನ ಸಾಕ್ಷಾತ್ಕಾರ ಅಂದರೆ— ಅನುಭವವು; ಇಂತಪ್ಪ ಶಿವನ ಅನುಭವ (ಶಿವಾನುಭವ) ದಿಂದಲೇ ನೀವು ನಿಜವಾದ ಸುಖವನ್ನು ಹೊಂದಿ ನಿತ್ಯ ಶಾಂತರೆನಿಸುವಿರಿ. ಛಾಂದೋಗ್ಯದಲ್ಲಿ ತ್ರಿಲೋಕ ಸಂಚಾರಿಯೆಂದು ಸುಪ್ರಸಿದ್ಧನಾದ ನಾರದನು ಎಲ್ಲ ಕಡೆಯಲ್ಲಿಯೂ ಯಾವದರಿಂದಲೂ ನಿಜಸುಖ ಶಾಂತಿಯನ್ನು ಪಡೆಯದೆ ಕೊನೆಗೆ ಶ್ರೀನಂದಿಕೇಶ್ವರನ ಶಿಷ್ಯನೂ ತನಗೆ ಅಣ್ಣನೂ ಆದ ಸನತ್ಕುಮಾರನ ಬಳಿಗೆ ಹೋಗಿ, ಎಲೈ ಅಚ್ಚ ಸುಖಿಯೇ ನನಗಾದರೂ ನಿಜಾನಂದವೂ ಶಾಶ್ವತವಾದ ಶಾಂತಿಯೂ ದೊರೆಯಲು ಉಪಾಯವೇನು? ಎಂದು ಬಿನ್ನಹ ಮಾಡಿಕೊಳ್ಳಲು, ಆಗ ಆ ಅನುಪಮಾನಂದಾಬ್ಧಿಯು - "ಅಯ್ಯಾ ನಾರದನೇ, ಯಾವ ಪರವಸ್ತುವುಂಟೋ ಅದುವೇ ನಿಜಾನಂದ ರೂಪವಾದುದು; ಅದಕ್ಕಿಂತ ಬೇರೆಯಾದುದೆಲ್ಲವೂ ಅತೃಪ್ತಿಕರವಾದುದಾದ್ದರಿಂದ ಅನಿತ್ಯವೂ ದುಃಖರೂಪವೂ ಆಗಿರುವದು. ನೀನು ನಿಜವಾದ ಆನಂದವನ್ನು ಪಡೆದು ನಿತ್ಯ ತೃಪ್ತನಾಗುವ ಒಳ್ಳೇ ಹಂಬಲವುಳ್ಳವನಾಗಿರುವ ಪಕ್ಷದಲ್ಲಿ, ಈಗಳೇ ಪರವಸ್ತುವಿನ ಸಾಕ್ಷಾತ್ಕಾರ (ಶಿವಾನುಭವ) ದ ಕಡೆಗೆ ನಿನ್ನ ಮನೋವೃತ್ತಿಯನ್ನು ಹೊರಳಿಸು. ಹಾಗೂ ಅದು ಲಭಿಸುವ ಬಗ್ಗೆ ಯೋಗ್ಯವಾದ ಯತ್ನವನ್ನೂ ಮಾಡುವವನಾಗು; ಅಂದರೆ ಮಾತ್ರ ನಿಜ ಸುಖ ಶಾಂತಿಯನ್ನು ಹೊಂದಬೇಕೆಂಬ ನಿನ್ನ ಮನೋರಥವು ಕೈಗೂಡುವದು ಮತ್ತು ಅದರಿಂದ ನೀನು ಕೃತಾರ್ಥನಾಗುವಿ ಎಂದು ಮುಂತಾಗಿ ಬೋಧಿಸಿರುವನು.

ಜಗತ್ತಿನಲ್ಲಿಯಾದರೋ ಯಾವಾಗಲೂ ಪ್ರತಿಯೊಂದು ಪ್ರಾಣಿಯೂ ಸುಖವನ್ನೇ ಬಯಸುವದಲ್ಲದೆ ದುಃಖವೆಂಬುದು ಲೇಶವಾದರೂ ಬೇಡ; ಆದರೆ, ಆ ಸುಖವೆಂಬುದಾದರೋ ಎಂದೂ ಕೆಡದಿರುವಂತಹದಾಗಿರ

**ಶಿವಯೋಗಾಚರಣೆಯಿಂದ ಶಿವಾನುಭವವು ಸಾಧ್ಯವು.**

ಬೇಕು, ಎಂಬುದೇ ಸುಖಾಭಿಲಾಷಿಗಳಾದ ಸರ್ವರ ಮನೋಗತಾಭಿಪ್ರಾಯವಾಗಿದೆ. ಆದರೂ ಬಯಕೆಗನುಸಾರವಾದ ಸಾಧನ ಪ್ರವೃತ್ತಿಯಿರಬೇಕಾದುದು ನ್ಯಾಯವಲ್ಲವೆ? ಸಾಧ್ಯಕ್ಕೆ ಪ್ರತಿಕೂಲವಾದ ಸಾಧನದಿಂದ ಮನೋರಥವು ಫಲಿಸುವದುಂಟೆ? ವಿಜಾಪುರದಿಂದ ಮೂಡಣಕ್ಕಿರುವ ತಾಳೀಕೋಟೆಗೆ ಹೋಗಬೇಕೆಂಬ ಬಯಕೆಯುಳ್ಳಾತನು ಪಡುವಣಕ್ಕಿರುವ ಪ್ರತಿಕೂಲವಾದ ಅಥಣಿಯ ಹಾದಿಯನ್ನು ಅನುಸರಿಸಿ ನಡೆದರೆ ಅವನ ಮನೋರಥವು ಈಡೇರುವದೇ? ಹಾಗೆಯೇ, ನಿಜ್ಜ ಸುಖದ ಬಯಿಕೆಯೇನೋ ಎಲ್ಲರಿಗೂ ಇದ್ದೇ ಇರುವದು ಸಾಹಜಿಕವು. ಆದರೆ ಅದರ ಹಾದಿಯನ್ನೇ ತಪ್ಪಿ ನಡೆಯುವದಾದರೆ 'ಕಲ್ಪಕೋಟಿಶತೈರಪಿ' ಯಾವನಿಗೂ ಅದು ಲಭಿಸದೆಂಬುದು ಸಿದ್ಧಾಂತವು. ಅದು ಕಾರಣವೇ, ನಿತ್ಯ ತೃಪ್ತಿಯ ಹಂಬಲವುಳ್ಳ ಅಸ್ಮಾದಾದಿ ಜೀವಿಗಳಲ್ಲಿ ಯಾರಾದರೂ ಸರಿಯೇ; ಹಿಂದೆ-ಇಂದು-ಮುಂದೆ, ಎಂದಾದರೂ ನಿತ್ಯಾನಂದ ಘನವೆನಿಸುವ ಪರವಸ್ತು ಸಾಕ್ಷಾತ್ಕಾರ (ಶಿವಾನುಭವ) ವನ್ನು ಪಡೆಯಲೇಬೇಕು; ಆ ಬಗ್ಗೆ ಯತ್ನ ಮಾಡುವ ಬಗೆ ಯಾವುದೆಂದರೆ ಅವಿಚಾರ ರಮಣೀಯಗಳಾದ ಅನಾತ್ಮ ಪದಾರ್ಥಗಳ ವ್ಯಾಮೋಹವನ್ನು ಮೆಲ್ಲಮೆಲ್ಲಗೆ ಬಿಡಲೇಬೇಕು; ಈ ತರದ ಅನುಸಂಧಾನಾತ್ಮಕ ವ್ಯಾಸಂಗಕ್ಕೆ ಸಂಬಂಧಪಟ್ಟ ಶ್ರವಣ ಮನನ ನಿಧಿ ಧ್ಯಾಸಗಳೂ ಕರಣತ್ರಯದಲ್ಲಿ ತದ್ವಿಷಯಕವಾದ ಭಕ್ತಿ ವ್ರತ ಅರ್ಚನ ಧ್ಯಾನ ಜ್ಞಾನಗಳೆಂಬ ಶಿವಯೋಗಾಚರಣಗಳೂ ಅನುಷ್ಠಿಸಲ್ಪಡುತ್ತಲೇ ಇರಬೇಕು. ಅಂತು, ಕಾಲತ್ರಯದಲ್ಲಿ ಯಾರಿಗಾದರೂ ಶಿವಾನುಭವದ ಅವಶ್ಯಕತೆಯುಂಟು.

— ಶ್ರೀ ವಿದ್ಯಾವಾಚಸ್ಪತಿ ಶಂಭುಲಿಂಗ ಸ್ವಾಮಿಗಳು
ಹಿರೇಮಠ, ವಿಜಾಪುರ.

# ಜೀವನದ ಗುರಿ.

ಸಾಮಾನ್ಯ ಮನುಷ್ಯನ ಜೀವನವು ವಿಷಯೇಂದ್ರಿಗಳನ್ನವಲಂಬಿಸಿ ಸುಖ ದುಃಖಗಳೊಡನೆ ಕೂಡಿರುವುದು. ಕಲಾಮಂದಿರದ ವಿನೋದಗಳೂ ಚಲನಚಿತ್ರದ ನಟಿಯರ ಹಾವಭಾವ ವಿಲಾಸಗಳೂ ಅವನನ್ನು ಸುಖಜೀವನದ ಕಡೆ ಎಳೆಯುತ್ತವೆ. ತನ್ನ ಸುತ್ತ ಮುತ್ತಣ ಚಿತ್ತಾಕರ್ಷಕವಾದ ಸನ್ನಿವೇಶಗಳು ಅವನನ್ನು ಹೊರಗಿನ ಸುಖದ ಕಡೆಗೆಯೇ ಪ್ರೇರಣೆ ಮಾಡುತ್ತವೆ. ಇಂತಹ ಸುಖವನ್ನು ಮನುಷ್ಯನು ಎಷ್ಟೋ ಅನುಭವಿಸಿದರೂ ಅವನಿಗೆ ಶಾಂತಿ ಸಮಾಧಾನಗಳು ದೊರೆಯಲಾರವು. ಆದುದರಿಂದ ಈ ಪರಿಯ ಸುಖವನ್ನು ತೊಲಗಿಸಿ ಚಿರಂತನವಾದ ನಿತ್ಯ ಸುಖವನ್ನು ಅವನಿಗೆ ಒದಗಿಸುವದಕ್ಕಾಗಿ ಶಿವಾನುಭವ ಸಂಘ, ತತ್ವಜ್ಞಾನ ಮಂದಿರ, ಇವೇ ಮೊದಲಾದ ನಿಲಯಗಳ ಅವಶ್ಯಕತೆಯು ಎಷ್ಟು ಹೇಳಿದರೂ ತೀರದು. ಮನುಷ್ಯನಿಗೆ ಶರೀರ ಪೋಷಣೆಗೆ ಆಹಾರ ಹೇಗೆ ಅವಶ್ಯಕವೋ ಹಾಗೆ ಅವನ ಚಪಲವಾದ ಮನಸ್ಸಿಗೆ ಒಂದು ನಿಲುಗಡೆಯೂ ಅವನ ಬುದ್ಧಿಗೆ ಒಂದು ವಿಚಾರವೂ ಅತ್ಯವಶ್ಯಕವಾದುವು. ಅದಲ್ಲದೆ ಮನುಷ್ಯನು ಪ್ರಪಂಚದಲ್ಲಿ ಏಕ ಕಾಲದಲ್ಲಿ ಅನೇಕ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಶರೀರ, ಮನಸ್ಸು, ಇಂದ್ರಿಯ, ಬುದ್ಧಿ ಇವೆಲ್ಲಕ್ಕೂ ಒಂದೊಂದು ವೃತ್ತಿಯನ್ನು ನೇಮಿಸುವ ಹೊಣೆಗಾರಿಕೆ ಅವನ ಮೇಲೆ ಬೀಳುತ್ತಿದೆ. ಆದುದರಿಂದ ಮನುಷ್ಯನು ತನ್ನ ಬಾಳಿನ ಗುರಿ ಇಂತಹುದೆಂದು ನಿಶ್ಚಯಿಸಿಕೊಂಡು ಆ ಗುರಿಯನ್ನು ಮುಟ್ಟಲು ಪ್ರಯತ್ನಿಸಬೇಕು.

**ಚಿರಂತನ ನಿತ್ಯ ಸುಖವನ್ನು ಹೊಂದುವದು**

ಪಶು ಪಕ್ಷಿಗಳು ಇಂದ್ರಿಯ ಸುಖವನ್ನು ಮಾತ್ರ ಅವಲಂಬಿಸುವ ಗುರಿಯುಳ್ಳವುಗಳಾಗಿವೆ. ನಿತ್ಯ ಸುಖವನ್ನು ಪಡೆಯಲು ವಿಚಾರ ಶಕ್ತಿಯನ್ನೂ ವಿವೇಕವನ್ನೂ ದೇವರು ಅವುಗಳಿಗೆ ಅನುಗ್ರಹಿಸಿಲ್ಲ. ಇನ್ನು ದೇವತೆಗಳಿಗೂ ಜೀವನದ ಗುರಿಯ ಅವಶ್ಯಕತೆ ಇಲ್ಲ. ಅವರು ಇಲ್ಲಿ ಮಾಡಿದ ಪುಣ್ಯ ಕರ್ಮಗಳ ಫಲವನ್ನು ಸ್ವರ್ಗದಲ್ಲಿ ಸುಖವಾಗಿ ಅನುಭವಿಸಿ ಪುಣ್ಯ ತೀರಿದ

**ಮನುಷ್ಯರಲ್ಲಿಯ ಮೂರು ಬಗೆಗಳು**

ಮೇಲೆ ಭೂಮಿಗೆ ಇಳಿಯಬೇಕಾಗುತ್ತದೆ. ಆದುದರಿಂದ ಜೀವನದ ಗುರಿಯೆಂಬುದು ಮುಖ್ಯವಾಗಿ ಮನುಷ್ಯನಿಗೇ ಸಂಬಂಧಿಸಿದೆ. ಅವನು ರಾಕ್ಷಸನಂತೆ ಹೀನ ಕೃತ್ಯವನ್ನು ಮಾಡಿ ಕೆಳಗೆ ಇಳಿದರೂ ಇಳಿಯಬಹುದು. ಅಮರನಂತೆ ಉತ್ತಮನೂ ಪವಿತ್ರನೂ ಆಗಬಹುದು. ಕ್ರೂರತನದಿಂದಲೂ, ದೌರ್ಜನ್ಯದಿಂದಲೂ, ಹಿಂಸೆಯಿಂದಲೂ, ವಿಧಿ ನಿಷೇಧಗಳ ನಿಯಮವಿಲ್ಲದೆ ಸ್ವೇಚ್ಛೆಯಿಂದ ವರ್ತಿಸುತ್ತ, ಪಶುವಿಗಿಂತ ಕೆಳಗೆ ಇಳಿಯಲೂ ಬಹುದು. ಅನ್ಯರಿಗೆ ತೊಂದರೆ ಕೊಡದೆ ತನ್ನ ಜೀವನವನ್ನು ಚೆನ್ನಾಗಿ ಸಾಗಿಸಿಕೊಂಡು ಸ್ವಾರ್ಥವನ್ನು ಕಡಿಮೆ ಮಾಡಿ ಪರಹಿತದಲ್ಲಿ ನಿರತನಾಗಿ ಬಾಳುತ್ತಿದ್ದರೆ ಒಳ್ಳೆಯ ಮನುಷ್ಯನೂ ಆಗಬಹುದು. ಯಾರ ಗೊಡವೆಗೂ ಹೋಗದೆ ಯಾರಿಗೂ ಒಳ್ಳೆಯದನ್ನೂ ಮಾಡದೆ, ಕೆಡಕನ್ನೂ ಮಾಡದೆ, ತನ್ನಷ್ಟಕ್ಕೆ ತಾನು ಜೀವಿಸಿಕೊಂಡು ಇರುವವನು ಸಾಮಾನ್ಯ ಜೀವಿ. ಆದರೆ ತನ್ನ ಜೀವ ಹೇಗಾದರೂ ನಡೆಯುವದೆಂದು ಅದಕ್ಕೆ ಅಷ್ಟು ಗಮನಿಸದೆ ಇತರರಿಗಾಗಿ ದುಡಿಯುವವನು ಮಹಾ ಪುರುಷನೆನಿಸಿಕೊಳ್ಳುತ್ತಾನೆ. ಹೀಗೆ ಅನ್ಯರಿಗಾಗಿ ಬಾಳುವುದನ್ನು ಅಭ್ಯಾಸ ಮಾಡುತ್ತ ಬಂದರೆ ಅವನ ಜೀವನದ ಅಂತಸ್ತು ಮೇಲಕ್ಕೆ ಹೋಗುತ್ತದೆ. ಅದರಿಂದ ಅವನ ಹೃದಯವು ವಿಶಾಲವಾಗುತ್ತದೆ. ಅವನ ಮನಸ್ಸಿನಲ್ಲಿ ಕ್ಷುದ್ರ ವಿಚಾರಗಳಿಗೆ ಎಡೆ ಇರುವದಿಲ್ಲ. ಅವನನ್ನು ಪ್ರಪಂಚದಲ್ಲಿ ಮಹನೀಯನೆಂದೂ ಇಂತಹ ದೊಡ್ಡ ಮನೋಭಾವವೂ ಉತ್ತಮ ಸ್ಥಿತಿಯೂ ಇನ್ನೂ ಹೆಚ್ಚು ಬಲಿತರೆ ಅವನನ್ನು ದೇವನೆಂದೂ ಜನರು ಕರೆಯುತ್ತಾರೆ. ಹೀಗೆ ಮನುಷ್ಯರಲ್ಲಿಯೇ ಮೂರು ಬಗೆಯವರು ಇರುತ್ತಾರೆ. ಇವರಲ್ಲಿ ಸಾಮಾನ್ಯ ಜೀವಿಗಳು ಮಹನೀಯತೆಯನ್ನೂ ದೇವತ್ವವನ್ನೂ ಪಡೆಯಲು ಯತ್ನಿಸಬೇಕು. ಇಂತಹ ಉತ್ತಮ ಸ್ಥಿತಿಯನ್ನು ಪಡೆಯಬೇಕೆಂಬ ಆದರ್ಶವನ್ನು ಗುರಿಯನ್ನಾಗಿ ಇಟ್ಟುಕೊಂಡು ಅವರು ಮುಂದುವರಿಯಬೇಕು. ಇಂತಹ ಜನರೇ ಲೋಕದಲ್ಲಿ ಹೇರಳವಾಗಿರುವದರಿಂದ ಮುಖ್ಯವಾಗಿ ಅವರೇ ಜೀವನದ ಗುರಿಯನ್ನು ತಿಳಿದುಕೊಳ್ಳಬೇಕು.

ಜೀವನದ ಗುರಿಯನ್ನು ಉಪನಿಷತ್ಕಾರರು ಹೀಗೆಯೇ ನಿರ್ದೇಶಿಸಿರುವರು. ಬೇಟೆಯವನು ಒಂದು ಹಣ್ಣನ್ನು ಗುರಿಯಾಗಿಟ್ಟುಕೊಂಡು, ಸ್ಥಿರ ಚಿತ್ತನಾಗಿ, ದೃಷ್ಟಿ ಚಾಂಚಲ್ಯವಿಲ್ಲದೆ ನಿಂತು, ಅದನ್ನು ಹೊಡೆ



**ಆತ್ಮಚಿಂತನೆಯಿಂದ ಆತ್ಮಬಲವನ್ನು ಹೆಚ್ಚಿಸುವದು.**

ದರೆ, ತನ್ನ ಬಯಕೆಯನ್ನು ಪಡೆಯುವನು. ಒಂದು ಊರಿಗೆ ಹೊರಟವನು ನೇರವಾಗಿ ಊರ ದಾರಿಯನ್ನು ಹಿಡಿದರೆ, ನಿರ್ದಿಷ್ಟ ಸ್ಥಳವನ್ನು ಸೇರಿ ಹೇಗೆ ಸುಖಿಯಾಗುವನೋ, ಹಾಗೆ ಮನುಷ್ಯನು ಜೀವನದಲ್ಲಿ ಬ್ರಹ್ಮವೆಂಬ ಗುರಿಯನ್ನು ಇಟ್ಟುಕೊಂಡು, ತನ್ನ ಅಮೋಘವಾದ ಆಯುಷ್ಯವನ್ನು ವ್ಯರ್ಥ ಮಾಡದೆ ಬಹಳ ಜಾಗರೂಕತೆಯಿಂದ ದುಡಿಯುತ್ತ, ಜೀವನದ ವ್ಯವಸ್ಥಿತವಾದ ಸ್ಥಾನವನ್ನು ಮುಟ್ಟಬೇಕಾದುದು ಅವನ ಕರ್ತವ್ಯವೆಂದು ಭಾವಿಸಬೇಕು. ಆಹಾರದಂತೆ ಎಲ್ಲರಿಗೂ ಜ್ಞಾನದ ಅವಶ್ಯಕತೆಯುಂಟು. ಆಹಾರವನ್ನು ಅಪೇಕ್ಷಿಸದೆ ಇರುವ ಮನುಷ್ಯನೇ ಇಲ್ಲ. ಹಾಗೆಯೇ ಆತ್ಮನ ಚಿಂತನೆಯನ್ನು ಬೆಳಸಿಕೊಂಡು ತನ್ನ ಯೋಗ್ಯತೆಯನ್ನೂ ವಿಚಾರಪರತೆಯನ್ನೂ ಹೆಚ್ಚಿಸಿಕೊಳ್ಳುವುದು ತನ್ನ ಜೀವನಕ್ಕೆ ಸಂಬಂಧಪಟ್ಟದ್ದು. ಇದಕ್ಕೆ ಶುಭ ಕಾಲ ಮೊದಲಾದುದನ್ನು ನೋಡುವ ಪಂಚಾಂಗ ನಿಯಮ ಬೇಕಿಲ್ಲ. ಜೀವಿತವೆಂಬುದು ಚಂಚಲವಾಗಿರುವಾಗ ಧರ್ಮವನ್ನು ತಿಳಿಯಲು ಅಶುಭ ವೇಳೆ ಎಂಬುದು ಉಂಟೇ? ಮೃತ್ಯುವು ವಿಘ್ನಕಾರಕನಾಗಿ ತನ್ನ ಬಳಿಯಲ್ಲಿ ಕಾದಿಕೊಂಡಿರುವಾಗ ಬಹುಕಾಲ ಬದುಕುವೆನೆಂಬ ನಂಬಿಕೆಯಾದರೂ ಎಲ್ಲಿ ಬಂದೀತು? ತನ್ನ ಶರೀರಕ್ಕೋಸ್ಕರ ಸ್ಥಿತಿಗನುಸಾರವಾಗಿ ಪುಷ್ಟಿಕರವಾದ ಆಹಾರವನ್ನು ಉಪಯೋಗಿಸಿ ಶಾರೀರಕ ಬಲವನ್ನು ಹೆಚ್ಚಿಸಿಕೊಳ್ಳುವಂತೆ ವಿಚಾರವನ್ನು ಮಾಡಿ ಆತ್ಮನ ಬಲವನ್ನು ಎಲ್ಲರೂ ಹೆಚ್ಚಿಸಿಕೊಳ್ಳಬೇಕು.

ಮನುಷ್ಯನ ಜೀವನವು ಎರಡು ವಿಧವಾಗಿದೆ. ಒಂದು ಹೊರಗಿನದು ಮತ್ತೊಂದು ಒಳಗಿನದು. ನಮ್ಮ ಹೊರಗಿನ ಜೀವನವು ಸುಖಮಯವಾಗಿ ಶಾಂತವಾಗಿ ಇರುವಂತೆ ಮಾಡಿಕೊಳ್ಳದಿದ್ದರೆ, ಒಳಗಿನ ಜೀವನವು ನಿರ್ಮಲವೂ ಪವಿತ್ರವೂ ಆಗಲಾರದು.

**ದೇಹದ ಅವಶ್ಯಕತೆ.**

ನಮ್ಮ ಬಹಿರ್ಜೀವನವು ಸಂತೋಷವಾಗಿ ನಡೆಯಲು ಹಲವು ಸಾಧನಗಳನ್ನು ಏರ್ಪಡಿಸಿಕೊಳ್ಳುತ್ತೇವೆ. ತತ್ವವನ್ನು ಹೇಳಿಕೊಳ್ಳುತ್ತ ಕುಳಿತರೆ, ಸಂಸಾರ ನಿರಾತಂಕವಾಗಿ ಮುಂದುವರಿಯುವದಿಲ್ಲ. ಶರೀರ ಕಶ್ಮಲವಾದುದೆಂದೂ, ಇಂದ್ರಿಯಗಳು ಅನರ್ಥಕಾರಿಗಳೆಂದೂ, ವಿಷಯಗಳು ದುಷ್ಪ್ರೇರಕಗಳೆಂದೂ

ನಾವು ಶಾಸ್ತ್ರ ಹೇಳುತ್ತೇವೆ. ಇಂದ್ರಿಯಗಳು ನಿಂದ್ಯಗಳೆಂದೂ ಪರಿತ್ಯಾಜ್ಯಗಳೆಂದೂ ಶಾಸ್ತ್ರಜ್ಞರು ಎಲ್ಲರಿಗೂ ಬೋಧಿಸುತ್ತಾರೆ. 'ಮನುಜ ಶರೀರವಿದೇನು ಸುಖ' 'ಸುಡಲೀ ದೇಹವ' ಎಂದು ಬಾಯಲ್ಲಿ ಹೇಳುವುದು ಮತ್ತು ಬೋಧಿಸುವುದು ಸುಲಭ. ಆದರೆ ಹಾಗೆ ಹೇಳಿದವರು ಯಾರಾದರೂ ಒಬ್ಬರು ತಮ್ಮ ದೇಹವನ್ನು ಸುಟ್ಟುಕೊಂಡಿರುವರೇ? ಯಾರೂ ಇಲ್ಲ. ಸುಡಲಿಕ್ಕೆ ಅವರ ಇಷ್ಟವೇ? ಈ ದೇಹ ಎಲ್ಲಿಯ ವರೆಗೆ ಇರಬೇಕೋ ಅಲ್ಲಿಯ ವರೆಗೆ ಅದು ಇದ್ದೇ ಇರುತ್ತದೆ. ಅದರ ಆರೈಕೆಯನ್ನ ನಾವು ಮಾಡಲೇಬೇಕು. ಈ ಶರೀರಕ್ಕೂ ನಾವು ದ್ರೋಹ ಮಾಡಬಾರದು. ಶರೀರ ಇರುವ ವರೆಗೆ ಅದರ ಎಚ್ಚರ ನಮಗಿರುವ ವರೆಗೆ ಹೊರಗಣ ಸುಖ ನಮಗೆ ಆವಶ್ಯಕ. 'ದೇಹವಿಲ್ಲದಿರ್ದೊಡೆ ಪ್ರಾಣಕ್ಕಾಶ್ರಯವುಂಟೆ?' ಕನ್ನಡಿ ಇಲ್ಲದಿದ್ದರೆ ತನ್ನ ಮುಖವ ಕಾಣಬಹುದೆ? ಇಂತಹ ದೇಹ ತುಚ್ಛವಾದುದೆಂದು ಭಾವಿಸಬಹುದೇ? ಇಂದ್ರಿಯಗಳು ದುಷ್ಟವೆಂದೂ ಶರೀರವು ಹೇಯವೆಂದೂ ಶಾಸ್ತ್ರದಲ್ಲಿ ಹೇಳಿರಬಹುದು. ಇಂತಹ ಶಾಸ್ತ್ರವನ್ನು ಓದಿದ ಮೇಲಾದರೂ ದೇಹೇಂದ್ರಿಯಗಳನ್ನು ಆತ್ಮನಿಂದ ಹೊರದೂಡಲು ಸಾಧ್ಯವೇ? ಎಂದಿಗೂ ಇಲ್ಲ. ಶಾಸ್ತ್ರದಲ್ಲಿ ಇಂತಹ ಭಾಗವನ್ನು ಓದಿದವನಿಗೆ ತನ್ನ ಬಾಳಿನಲ್ಲಿ ಆಯಾ ಸುಖ-ಶಾಂತಿಗಳು ದೊರೆಯುವದಿಲ್ಲ. ಅವನಿಂದ ಇತರರ ಬಾಳಿನಲ್ಲಿಯೂ ಬೆಳಕು ಪ್ರಸಾಶವಾಗುವಂತಿಲ್ಲ. ವಾಗ್ಜಾಲದಿಂದ ಜನರನ್ನು ಮಾತಿನಲ್ಲಿ ಸಿಕ್ಕಿಸಿ ತನ್ನ ಜಾಣ್ಮೆಯನ್ನು ತೋರಿಸಲು ಶಾಸ್ತ್ರ ಅವನಿಗೆ ಸಾಧಕವಾಗುತ್ತದೆ.

**ಇಂದ್ರಿಯಗಳ ಸದುಪಯೋಗವನ್ನು ಮಾಡುವುದು.**

ಶಾಸ್ತ್ರ ನಮ್ಮ ಮೇಲೆ ಸವಾರಿ ಮಾಡುವಂತಾಗಬಾರದು. ನಾವು ಅದರ ಮೇಲೆ ಸವಾರಿ ಮಾಡಬೇಕೇ ಹೊರತು ಅದು ನಮ್ಮನ್ನು ಕುದುರೆಯನ್ನಾಗಿ ಮಾಡಿಕೊಳ್ಳಲು ಅವಕಾಶ ಕೊಡಬಾರದು. ನಾವು ಅದನ್ನು ನಮ್ಮ ಆಧೀನ ಮಾಡಿಕೊಳ್ಳಬೇಕು. ಅದು ನಮಗೆ ಪ್ರಗತಿ ಪಥವನ್ನು ಹೊಂದಲು ಒಂದು ಮಾರ್ಗದರ್ಶಿಯಾಗಿರಬೇಕು. ಆನೇಕರು ಜೀವನದಲ್ಲಿ ಹತಾಶರಾದುದರಿಂದ, ಇಂದ್ರಿಯಗಳ ಬಲೆಗೆ ಬಿದ್ದು ನರಳುವಂತಾದುದರಿಂದ, ಇಂದ್ರಿಯಗಳು ದುಷ್ಟವೆಂದು ಶಾಸ್ತ್ರದಲ್ಲಿ ಹೇಳಿದ್ದಾರೆ. ಅವೇ ಇಂದ್ರಿಯಗಳು ಸನ್ಮಾರ್ಗದಲ್ಲಿ ನಿಯುಕ್ತಗಳಾದರೆ ಅವುಗಳಿಂದಲೇ ನಮ್ಮ ಪ್ರಗತಿಯುಂಟಾಗುತ್ತದೆ. ಹೀಗೆ ಜನರ ಅನುಭವ ಮೊದಲು, ಆಮೇಲೆ ಶಾಸ್ತ್ರ ಹುಟ್ಟಿತು. ಇದು ತತ್ವ ಜೀವನದ ಪ್ರಗತಿಗಾಗಿ, ಮೇಲ್ಮೆಗಾಗಿ. ಸುಮ್ಮನೆ ಹೇಳಿಕೊಂಡಿರುವ ವಿಚಾರವಲ್ಲ. ಈಗ ನಾವು ಎಷ್ಟು ವಿಚಾರ ಮಾಡಿದರೂ, ಏನೊಂದೂ ಇಲ್ಲದವರಾಗಿ, ಪ್ರಾಪಂಚಿಕವಾಗಿಯೂ ಪಾರಮಾರ್ಥಿಕವಾಗಿಯೂ ದರಿದ್ರರಾಗಿ ಉಳಿದಿದ್ದೇವೆ. ನಮ್ಮಲ್ಲಿ ಹಿಂದೆ ಅನೇಕ ತತ್ವಜ್ಞಾನಿಗಳೂ ಶಿವಾನುಭವಿಗಳೂ ಆಗಿ ಹೋಗಿದ್ದಾರೆ. ಅವರು ಸತ್ತು ಬದುಕಿದ್ದಾರೆ. ತಮ್ಮ ಬಾಳಿನಲ್ಲಿ ಬೆಳಕನ್ನು ಕಂಡು ಅವರು ನಿತ್ಯ ಜೀವಿಗಳಾಗಿದ್ದಾರೆ. ಆತ್ಮ ಜ್ಯೋತಿಯ ಆವಶ್ಯಕತೆಯನ್ನು ಅವರು ಜಗತ್ತಿಗೆ ಸಾರಿದ್ದಾರೆ. ಆದರೂ ಅದನ್ನೆಲ್ಲ ಮರೆತು ನಾವು ಗಾಢಾಂಧಕಾರದಲ್ಲಿ ಅಲೆಯುವಂತಾಗಿದೆ. ನಾವು ಬದುಕಿ ಸತ್ತಿರುವಂತಾಗಿದೆ. ಹಿಂದಿನವರು ತೋರಿಸಿ ಕೊಟ್ಟ ಸನ್ಮಾರ್ಗ ನಮಗೆ ಮಾಯವಾಗಿದೆ. ಅವರು ಹಾಕಿದ ಮೇಲ್ಪಂಕ್ತಿ ನಮಗೆ ಈಗ ನಿಷ್ಪ್ರಯೋಜನ ಸ್ಥಿತಿಯಲ್ಲಿ ಉಳಿದಿದೆ. ಹಿಂದಿನವರು ದೇಹವನ್ನು ಅಲ್ಲಗಳೆಯುತ್ತಿರಲಿಲ್ಲ. ವ್ಯಕ್ತಿಯನ್ನು ತುಚ್ಛವೆಂದು ಭಾವಿಸಿರಲಿಲ್ಲ. ಭೋಗವನ್ನು ದುಃಖಪ್ರದವೆಂದು ಜರಿಯುತ್ತಿರಲಿಲ್ಲ. ದೇಹಕ್ಕೆ ತಮ್ಮಿಂದ ಎಷ್ಟು ಸೇವೆ ಸಲ್ಲಬೇಕೋ ಅಷ್ಟನ್ನು ಒಮ್ಮನಸ್ಸಿನಿಂದ ಸಲ್ಲಿಸಿದವರು ಅವರು. ಆದರೆ ಆ ದೇಹ ಪೋಷಣೆಯಲ್ಲಿಯೇ ಮೈಮರೆತವರಲ್ಲ. ಆತ್ಮಶುದ್ಧಿ, ಪರಿಪೂರ್ಣತೆಗಾಗಿ ದುಡಿದು ಅವುಗಳನ್ನು ಪಡೆದವರು ಅವರು. ಆದರೆ ನಾವು ಒಳಜೀವನವನ್ನು ಮರೆತು, ಹೊರಗಿನ ಭೋಗ ವಿಲಾಸಗಳಲ್ಲಿಯೇ ಲೀನರಾಗಿದ್ದೇವೆ. ಅವುಗಳನ್ನು ಪಡೆಯುವದಕ್ಕಾಗಿ ನಮ್ಮ ಸರ್ವಸ್ವವನ್ನು ಅರ್ಪಿಸಿ ದಾಸರಾಗಿದ್ದೇವೆ. ಅಲ್ಪ ಸುಖಕ್ಕಾಗಿ ಬಡಿದಾಡುತ್ತಿದ್ದೇವೆ. ಹೆಚ್ಚು ಶ್ರಮದಿಂದ ಅಲ್ಪ ಫಲವನ್ನು ಪಡೆಯುತ್ತೇವೆ. ದೊಡ್ಡ ಸುಖಕ್ಕೆ ಹೆಣಗಾಡುವದನ್ನು ಬಿಟ್ಟು, ಶಾರೀರಕ ಭೋಗವೇ ಜೀವನ ಸರ್ವಸ್ವವೆಂದು ನಂಬಿ ಅದಕ್ಕೆ ಗುಲಾಮರಾಗಿದ್ದೇವೆ. ಭೋಗವೂ ಕೂಡ ನಿಂದ್ಯವಲ್ಲ. ಅದು ಅಪರಿಹಾರ್ಯ. ಅದನ್ನು ಜರಿಯುವ ಕಠಿಣವಾದ ಮಾರ್ಗವೂ ನಮಗೆ ಬೇಕಿಲ್ಲ. ಯಾಕೆಂದರೆ ಶರೀರಕ್ಕೆ ಸಂಬಂಧವಿಲ್ಲದೆ, ಅಂತಃಕರಣಕ್ಕೆ ಸೋಂಕಿಲ್ಲದೆ, ನಾವು ಜೀವಿಸುವಂತಿಲ್ಲ.

ಈ ಕಶ್ಮಲವಾದ ದೇಹದೊಳಗೆಯೇ ಚೈತನ್ಯವೊಂದು ಸೇರಿಕೊಂಡಿದೆ. ಇಂದ್ರಿಯಗಳೊಡನೆ ನಾವು ವ್ಯವಹರಿಸಬೇಕಾಗಿದೆ. ಅದನ್ನು ನಾವು ಬಳಸಲೇ ಬೇಕು. ಆತ್ಮವನ್ನು ಇಂದ್ರಿಯಗಳಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ. ಅವು ಕೆಟ್ಟವೆಂದು ತಿಳಿದು ಅವನ್ನು ಕಿತ್ತು ಹಾಕುವದು ಅಸಾಧ್ಯ. ಯಾವುದು ನಮ್ಮನ್ನು ದುರ್ಮಾರ್ಗಕ್ಕೆ ಸೆಳೆಯುವುದೆಂದು ಶಾಸ್ತ್ರ ಹೇಳುತ್ತದೆಯೋ, ಯಾವುದು ನಮ್ಮ ಆತ್ಮದ ಉಚ್ಛ್ರಾಯ ಸ್ಥಿತಿಗೆ ದೊಡ್ಡ ಆಡಚಣೆಯಾಗುವುದೋ, ಅಂತಹದನ್ನೇ ನಮ್ಮ ಉತ್ಕರ್ಷಕ್ಕೆ ಪ್ರಬಲವಾದ ಸಾಧನವಾಗುವಂತೆ ಮಾಡುವ ಭಾವನೆಯನ್ನು ನಾವು ಸಂಪಾದಿಸಿಕೊಳ್ಳದೆ ನಮ್ಮ ಅಶಕ್ತತೆಯನ್ನು ಅವುಗಳ ಮೇಲೆ ಹಾಕುವದು ಯಾವ ನ್ಯಾಯ?

ಮನುಷ್ಯನು ಮನೆಯವರಲ್ಲಿ ವಿರೋಧ ಭಾವವನ್ನು ಮಾಡಿಕೊಂಡರೆ, ಆ ಮನೆಯಲ್ಲಿ ವಾಸ ಮಾಡುವುದು ಹೇಗೆ ಅವನಿಗೆ ನರಕವಾಗುವದೋ, ಹಾಗೆ ಇಂದ್ರಿಯಗಳೊಡನೆ ಬಾಳುತ್ತ, ಅವುಗಳನ್ನು ಕೆಟ್ಟವೆಂದು ಭಾವಿಸಿದರೆ ನಾವೇ ಕೆಡುವ ಸ್ಥಿತಿಗೆ ಬರುತ್ತೇವೆ. ಬಾಳುವೆ ಕೆಟ್ಟು ಹೋದರೆ ಅದನ್ನು ಸರಿಪಡಿಸಿಕೊಳ್ಳಬೇಕು. ಆದರೆ ಅದು ಅಂಥದು ಇಂಥದು ಎಂದು ಅದನ್ನು ಬಾಯಿಗೆ ಬಂದಂತೆ ಬಯ್ಯುತ್ತ ಕುಳಿತರೆ ವ್ಯವಹಾರ ಹೇಗೆ ಸಾಧ್ಯ? ಶರೀರದಿಂದ ಕೆಲವು ವ್ಯವಹಾರಗಳು ಅತ್ಯವಶ್ಯಕ. ಸಂಸಾರವೇ ದುಃಖವೆಂದು ಹೇಳುವುದು ಮಾತಿನಲ್ಲಿ ಉಳಿಯುತ್ತದೆಯೇ ಹೊರತು ಅನುಭವದಲ್ಲಿ ನಿಲ್ಲುವದಿಲ್ಲ. ಬಾಯಲ್ಲಿ ಹೇಳುವುದು ವೇದಾಂತ, ಕೈಯ್ಯಲ್ಲಿ ಮಾಡುವುದು ಅನ್ಯಾಯ. ಹೀಗೆ ನಡೆ-ನುಡಿ ಬೇರೆಯಾದರೆ, ಯಾರಿಂದ ಯಾರಿಗೂ ಯಾವ ಸುಖವೂ ಆಗಲಾರದು. "ಕಾಯವೆಂಬ ವನಿತೆಗೆ ಜೀವನೆಂಬ ಗಂಡ" ನಿರುವಲ್ಲಿ ಶರೀರಾತ್ಮಗಳು ಎಂತಹ ಪ್ರಣಯ ಸಂಬಂಧದಲ್ಲಿ ಸೇರಿಕೊಂಡಿರುವವು? "ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ರಾಗ, ದ್ವೇಷ ಎನಿಪ ಒಡಲರೆ ಬ್ರಹ್ಮನಾನೆಂಬ ಬರಿಯ ವಾಗದ್ವೈತದಲ್ಲಿ ಫಲವಿಲ್ಲ. ನಂಬು ಸುಖ ಸಾಗರವನರಿ". ಅದ್ವೈತವು ಮಾತಿನ ವಿಷಯವಲ್ಲ, ಬರಿಯ ಬುದ್ಧಿಯ ವಿಷಯವಲ್ಲ. ಅದು ಅನುಭವದ ವಿಷಯ. ಆದುದರಿಂದ ಯೋಗ್ಯವಾದ ದಾರಿಯಲ್ಲಿ



ಕಾಮಾದಿಗಳನ್ನು ನಿಯೋಗಿಸಿ ಅವುಗಳಿಂದಲೇ ನಮ್ಮ ಶ್ರೇಯಸ್ಸನ್ನು ಸಾಧಿಸಬೇಕು.

ಜೀವನ ಯಾತ್ರೆಯನ್ನು ನಡಿಸುವಾಗ ಹೊರಗಣ ಸುಖಕ್ಕಾಗಿ ನಾವು ಅನೇಕ ಮಾರ್ಗಗಳನ್ನೂ ಸನ್ನಿವೇಶಗಳನ್ನೂ ಕಲ್ಪಿಸಿಕೊಳ್ಳುತ್ತೇವೆ. ಇದಕ್ಕಾಗಿಯೇ ಯಾವುದಾದರೂ ಒಂದು ಉದ್ಯೋಗದಲ್ಲಿ ನಿರತರಾಗಿರುತ್ತೇವೆ.

ಇಂದ್ರಿಯ ನಿಗ್ರಹದ ಅವಶ್ಯಕತೆ.

ಇಂತಹ ಕಾಯಕವನ್ನು ಮಾಡುವಲ್ಲಿ ದುರ್ನಿರೋಧಗಳಾದ ಇಂದ್ರಿಯಗಳನ್ನು ನಿಗ್ರಹಿಸುವದು ಅತ್ಯಾವಶ್ಯಕ. ಇದರ ಜತೆಗೆ ಅವನ್ನು ಸನ್ಮಾರ್ಗದ ಕಡೆ ಪ್ರೇರಿಸುವ ಶಕ್ತಿ ಸಾಮರ್ಥ್ಯಗಳನ್ನು ನಾವು ಅಭ್ಯಾಸದಿಂದ ಪಡೆಯಬೇಕು. ಇಂದ್ರಿಯಗಳನ್ನು ಸುವ್ಯವಸ್ಥೆಯಿಂದ ನಡಿಸಿದರೆ ಅವು ಶರೀರವನ್ನು ಮಕ್ಕಳಂತೆ ಪೋಷಿಸುತ್ತವೆ. ಶರೀರ ಪೋಷಣೆಗಾಗಿ ನಾವು ಕಲ್ಪಿಸಿಕೊಂಡ ಆಸ್ತಿ-ಪಾಸ್ತಿಗಳು ಬಲಿಷ್ಠರಾದ ಹಗೆಗಳಿಂದ ನಮ್ಮ ಕೈತಪ್ಪಿ ಹೋಗಬಹುದು. ಅವುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಹಗೆಗಳೊಡನೆ ಪ್ರತಿಭಟಿಸಲು ನಾವು ಸಮರ್ಥರಿರಬೇಕು. ಹೊರಗೊಂದು ಪ್ರಪಂಚವನ್ನು ನಾವು ಗಳಿಸಿದಂತೆ, ಒಳಗೂ ನೂತನ ಪ್ರಪಂಚ ಒಂದನ್ನು ಕಲ್ಪಿಸಿಕೊಳ್ಳಬೇಕು.

ಅಂತರಂಗ ಪ್ರಪಂಚದ ಸಾಧನೆ.

ಅಲ್ಲಿಯೂ ಸತ್ಯ, ಸೌಂದರ್ಯ, ನಿರೀಹ, ನಿರಭಿಮಾನತೆ, ಶಾಂತಿ ನಿಸ್ಪೃಹತೆ ಇವುಗಳನ್ನು ಸಾಧಿಸಿಕೊಳ್ಳಬೇಕು. ಇಂತಹವನ್ನು ಒಳಗೆ ಪಡೆದವರೇ ನಿಜವಾಗಿ ಲೋಕದಲ್ಲಿ ಶ್ರೀಮಂತರು. ಹೊರಗಿನ ಸಂಪತ್ತು ಎಂದಾದರೂ ಹೋಗಬಹುದು. ಒಳಗಿನ ಸೌಂದರ್ಯ ಯಾರಿಂದಲೂ ಅಪಹರಿಸಲ್ಪಡುವುದಿಲ್ಲ. ಇದು ಎಂತಹ ಕಠಿಣವಾದ ಮನಸ್ಸನ್ನಾದರೂ ತನ್ನ ಕಡೆಗೆ ಸೆಳೆಯದೆ ಇರದು. ಕಾಯದ ಸೌಂದರ್ಯಕ್ಕಾಗಿ ನಾವು ಯಾರನ್ನೂ ಪ್ರೀತಿಸುವುದಿಲ್ಲ. ಶುದ್ಧಾತ್ಮನಾದವನನ್ನು ನೋಡಿದರೆ ನಮ್ಮ ಜೀವನ ಪವಿತ್ರವಾಗುತ್ತದೆ. ಅವನು ಕಾಮನಂತೆ ಸುಂದರನಲ್ಲದಿದ್ದರೂ, ನಾವು ಆವನೊಡನೆ ಮಾತನಾಡಲು ಸಂಬಂಧ ಬೆಳೆಸಲು ತವಕಪಡುತ್ತೇವೆ. "ಕಾಯ ಕರ್ರನೆ ಕಂದಿದರೇನಯ್ಯ ಕಾಯ ಮಿರ್ರನೆ ಮಿಂಚಿದರೇನಯ್ಯ. ಚನ್ನಮಲ್ಲಿಕಾರ್ಜುನನೊಲಿಸುವ ಕಾಯ ಎಂತಾ

ದರೇನಯ್ಯ” ಎಂದು ಮಹಾದೇವಿಯಕ್ಕನು ಹೇಳುತ್ತಾಳೆ. ಹೊರಗಿನ ಸೌಂದರ್ಯಕ್ಕೆ ಮನಸೋತವರು ಮೋಹಿತರು. ಅವರು ತಾವೂ ಕೆಡುವರಲ್ಲದೆ ಇತರರನ್ನೂ ಕೆಡಿಸುವರು. ಒಳಜೀವನದಲ್ಲಿ ಯಾರು ಬೆಳಕನ್ನು ಕಂಡಿರುವರೋ ಅವರು ಎಲ್ಲರಿಗೂ ದರ್ಶನೀಯರೂ ವಂದನೀಯರೂ ಆಗಿ ಅವರು ಮುಟ್ಟಿದ ಪದಾರ್ಥವು ಪವಿತ್ರವಾಗುವುದು. ಅವರು ನಡೆದ ದಾರಿ ಶುದ್ಧವಾಗುವುದು. ಎಲ್ಲರನ್ನು ಆಕರ್ಷಿಸುವಂತಹ ಉದಾತ್ತವಾದ ಶಕ್ತಿ ಅವರಲ್ಲಿ ಇದೆ. ನಿಶ್ಚಲವಾದ, ಸಹಜವಾದ, ನಿರರ್ಗಳವಾದ ಪ್ರೇಮ ಅವರದು. ಅವರ ಅಮೃತವಾಣಿ ಎಲ್ಲರನ್ನೂ ಆನಂದಸಾಗರದಲ್ಲಿ ಮುಳುಗಿಸುವುದು. ಅವರ ಜೀವನ ಎಲ್ಲರ ಮೇಲೂ ಪ್ರಭಾವವನ್ನು ಬೀರುತ್ತದೆ. ಅವರಲ್ಲಿ ಅಂತಹ ದೊಡ್ಡತನವಿರುವದರಿಂದಲೇ ನಾವು ಅವರಿಗೆ ತಲೆಬಾಗಿಸುತ್ತೇವೆ. ಆದುದರಿಂದಲೇ ಮಹಾತ್ಮಾ ಗಾಂಧಿಯವರು ಜಗತ್ಪೂಜ್ಯರಾಗಿದ್ದಾರೆ. ಹೆಚ್ಚು ಬೆಳಕು ಕಡಿಮೆ ಬೆಳಕನ್ನು ತನ್ನ ಒಳಗೆ ಮಾಡಿಕೊಳ್ಳುವುದು ಸ್ವಭಾವ. ಹಾಗೆ ಮಹಾತ್ಮರು ತಮ್ಮೊಳಗೆ ಇತರರನ್ನು ಆಕರ್ಷಿಸುವರು. ಪರಮಾತ್ಮನ ಅನುಗ್ರಹವನ್ನು ಹೆಚ್ಚು ಪಡೆದವರೇ ಧನ್ಯರು. ಕಾಯಕದಲ್ಲಿಯೇ ನಿರ್ಲಿಪ್ತನಾಗಿ ಒಳಗೆ ಅಡಗಿರುವ ಪರಮಾತ್ಮನನ್ನು ಕಣ್ಣಾರೆ ನೋಡಿದ ಕೃತಕೃತ್ಯರು ಅವರು. ಇಲ್ಲಿಯೇ ಪರಸುಖವನ್ನು ಅಳವಡಿಸಿಕೊಂಡ ಪುಣ್ಯಾತ್ಮರು ಅವರು.

ದೇಹವನ್ನು ಭೋಗದ ಕಡೆಗೆ ತಿರುಗಿಸದೆ ಪ್ರಸಾದ ರೂಪವನ್ನಾಗಿ ಮಾಡುವುದು.

ಕಾಯವೆಂಬುದು ಹೊಲಸಲ್ಲ. ಅದು ಒಳ್ಳೆಯ ಕೆಲಸ ಮಾಡಲಿಕ್ಕಾಗಿಯೇ ಬಂದಿದೆ. ಅದನ್ನು ‘ಪ್ರಸಾದ ಕಾಯ’ ವನ್ನಾಗಿ ಮಾಡುವ ಶಕ್ತಿಯನ್ನು ಮನುಷ್ಯನು ಪಡೆಯಬೇಕು. ದೇವರನ್ನು ಒಲಿಸಲು ಬಂದಿರುವ ಈ ಕಾಯವನ್ನು ಭೋಗದ ಕಡೆಗೆ ತಿರುಗಿಸಿದರೆ ಅದನ್ನು ನಾವೇ ಕೆಡಿಸಿದಂತಾಗುತ್ತದೆ. ಅಷ್ಟರಲ್ಲಿಯೇ ತೃಪ್ತರಾಗದೆ, ನಿಜವಾದ ಪರತತ್ವವನ್ನು ತಿಳಿಯಲಿಕ್ಕೆ ಯತ್ನಿಸಬೇಕು. ಹೀಗೆ ಮಾಡದೆ ಹೋದರೆ ನಮ್ಮ ಜೀವನವನ್ನೇ ವ್ಯರ್ಥ ಮಾಡಿಕೊಳ್ಳುತ್ತೇವೆ. ಭೋಗವು ನಮಗೆ ಸ್ವಾಭಾವಿಕವಾಗಿ ಜೀವನ ವ್ಯವಹಾರಕ್ಕೆ ಸಂಬಂಧಿಸಿದ್ದು. ಇದು ಅವಶ್ಯವಾಗಿ



ಬೇಕು. ಇದೇ ಭೋಗವನ್ನು ಒಳ್ಳೇ ವ್ಯವಸ್ಥೆಯಿಂದ ನಡಿಸಿದರೆ ಅದೇ ಯೋಗವೆನಿಸುತ್ತದೆ ಭೋಗ ಮಿತಿಮೀರಿದರೆ ನಮ್ಮ ಬಾಳು ನಿರರ್ಥಕವಾಗುತ್ತದೆ ಉಪಯೋಗಿಸುವ ಕ್ರಮವನ್ನು ನಾವು ಕಲಿಯದೆ, ನಮ್ಮ ತಪ್ಪನ್ನು ಹೊರಗಿನ ವಸ್ತುಗಳ ಮೇಲೆ ಹಾಕುವುದು ತಿಳಿಗೇಡಿತನವೇ ಸರಿ ಭೋಗವೆಂಬುದು ಜನ್ಮಕ್ಕೆ ಗಂಟು ಬಿದ್ದಿರುವ ವಿಷಯದ ತೃಪ್ತಿ. ತಾಯಿಯ ಗರ್ಭದಲ್ಲೇ ಶಿಶುವಿಗೆ ಆಹಾರ ಬೇಕು. ಅನ್ನದ ರಸಪಿಂಡವಾಗಿ ಬೆಳೆದು, ಎದೆ ಹಾಲು ಹಣ್ಣಿನ ರಸ ತಿಂದು ದೊಡ್ಡವರಾಗಿ ಬೆಳೆದು ಸಾಯುವ ವರೆಗೂ ಆಹಾರವನ್ನು ಅಪೇಕ್ಷಿಸುತ್ತೇವೆ. ತಿನ್ನದೆ ಉಣ್ಣದೆ ದೊಡ್ಡವರಾಗಲು ಯಾರಿಂದಲೂ ಶಕ್ಯವಿಲ್ಲ. ಆಹಾರದ ಅವಶ್ಯಕತೆ ನಿಜವಾಗಿ ಜೀವನಿಗೆ ಕೊನೆಯ ವರೆಗೂ ಇದೆ. ಇದರಂತೆಯೇ ವಿಷಯಗಳು ಇವೆ. ಇವನ್ನು ನಿಂದಿಸುತ್ತ ಕುಳಿತರೆ, ನಮಗೆ ಈ ಪ್ರಪಂಚದಲ್ಲಿ ಅವಕಾಶವೇ ದೊರೆಯದು. ಆದರೆ ಅವುಗಳನ್ನು ಪ್ರಸಾದ ರೂಪವಾಗಿ ಭಾವಿಸಿದರೆ, ಆ ವಿಷಯಗಳೇ ನಮ್ಮ ಮೇಲ್ಮೆಯನ್ನು ಸಾಧಿಸುತ್ತವೆ. (ಈಶಾವಾಸ್ಯಮಿದಂ ಸರ್ವಂ) ಶರೀರ ಹೊಲಸಾದರೂ ಅದರಲ್ಲಿ ಆನಂದ ರೂಪನಾದ ಆತ್ಮನಿಲ್ಲವೇ? ಮಣ್ಣಿನಿಂದ ಮಾಡಿದ ಗಣಪತಿ ಪೂಜ್ಯನಾಗುವದಿಲ್ಲವೇ? ರಕ್ತ ಮಾಂಸಗಳಲ್ಲಿಯೇ ಶಕ್ತಿಯೊಂದು ಹಾಸುಹೊಕ್ಕಾಗಿ ಸೇರಿಕೊಂಡಿರುತ್ತದೆ. ಕಣ್ಣು ಹೊರಗಿನ ಸೌಂದರ್ಯವನ್ನು ನೋಡಿ ಮೋಹಿತವಾಗುವಂತೆ, ಅದಕ್ಕಿಂತ ನೂರ್ಮಡಿ ಮಿಗಿಲಾದ ಆಂತರಿಕ ಸೌಂದರ್ಯವನ್ನು ನೋಡಿ ಆನಂದ ಪರವಶವಾಗುವಂತೆ ಮಾಡಲು ತನ್ನಿಂದ ಸಾಧ್ಯವಿಲ್ಲವೆ? “ಕಂಗಳು ತಪ್ಪಿ ನೋಡಿದರೆ ಮಾರಿ. ನಾಲಿಗೆ ತಪ್ಪಿ ನುಡಿದರೆ ಮಾರಿ. ದೇವರ ನೆನಹು ಮರೆದರೆ ಮಾರಿ.” ಎಂದು ಬಸವೇಶ್ವರನು ಹೇಳಿದ್ದಾನೆ. ಹೀಗೆ ನಿಜವಾದ ಮಾರಿ ನಮ್ಮಲ್ಲಿಯೇ ಇದೆ. ಅದನ್ನು ತಪ್ಪಿಸುವದಕ್ಕಾಗಿ ಕಣ್ಣು ಒಳಗಿನ ದೇವರನ್ನು ನೋಡುವಂತೆ ಮಾಡುವುದು ನಮ್ಮ ಕರ್ತವ್ಯ ಅದರಂತೆ ಮನ ನಾಲಿಗೆಗಳಲ್ಲಿ ಒಂದು ವ್ಯವಸ್ಥೆಯನ್ನು ನಾವು ಏರ್ಪಡಿಸಿಕೊಂಡಿಲ್ಲ ಇವುಗಳನ್ನು ಒಳ್ಳೆಯ ರೀತಿಯಲ್ಲಿ ನಡೆಸುತ್ತ ಹೋದರೆ, ನಮ್ಮ ಒಳ ಜೀವನದಲ್ಲಿ ಒಂದು ಬಗೆಯ ಶಾಂತಿಯು ದೊರೆಯುತ್ತದೆ ಇವು ಮೂರು ಅಂಗಗಳ ಮೇಲೆ ತನ್ನ ಆಡಳಿತೆಯನ್ನು ನಡಿಸಲು ಶಕ್ತಿಯಿಲ್ಲದವನು ಹೊರಗಿನ ವಿಶಾಲವಾದ

ಪ್ರಪಂಚವನ್ನು ನಡೆಸಲಿಕ್ಕೆ ಆಗುತ್ತದೆಯೇ? ಎಂದಿಗೂ ಆಗದು. ಸರಿಯಾಗಿ ತಿಳಿದು ಉಪಯೋಗಿಸಿದರೆ ಎಲ್ಲವೂ ರಸವಾಗುತ್ತದೆ. ಸುವ್ಯವಸ್ಥಿತವಾದರೆ ಜೀವನವೇ ಸ್ವರ್ಗ. ಅವ್ಯವಸ್ಥಿತವಾದರೆ ಅದೇ ನರಕವಾಗುತ್ತದೆ. ಏನನ್ನು ನೋಡಬೇಕು, ಏನನ್ನು ಕೇಳಬೇಕು, ಏನನ್ನು ಭಾವಿಸಬೇಕು ಎಂಬುದನ್ನೇ ತಿಳಿಯದವನು ಜೀವನದ ಗುರಿಯನ್ನು ಸಾಧಿಸುವದಾದರೂ ಹೇಗೆ?

" ನೋಡದ ಕಣ್ಣೇಕೆ? ಸಲೆ ಕೇಳದ ಕರ್ಣವುದೇಕೆ? ಭಕ್ತಿಯಿಂ
ಪಾಡದ ಬಾಯದೇಕೆ? ಪೆಸರ್ಗೊಳ್ಳದ ಜಿಹ್ವೆಯದೇಕೆ? ಪೂಜೆಯಿಂ।
ಮಾಡದ ಕೈಗಳೇಕೆ? ನೆರೆ ಸೋಂಕದ ದೇಹವುದೇಕೆ? ಕೂಡಿಯ
ಳ್ಳಾಡ ಚಿತ್ತವೇಕೆನಗೆ ಹಂಪೆಯ ಲಿಂಗವೇ ನಿರ್ಮ್ಮಳಕ್ಕರಿಂ ॥

ಎಂಬ ಮಹಾಕವಿ ಹರಿಹರನ ದಿವ್ಯೋಕ್ತಿಯಂತೆ ಕರಣಂಗಳನ್ನು ಇಂತಹ ಉತ್ತಮವಾದ ಕಡೆಗೆ ಪ್ರೇರಿಸುವುದಕ್ಕಿಂತಲೂ ಬೇರೆ ಉಪಾಯವುಂಟೇ? ಇವಕ್ಕಿಂತಲೂ ಬೇರೆ ಭೋಗ ಬೇಕೇ? ಇದಕ್ಕಿಂತಲೂ ಮಿಗಿಲಾದ ಸುಖವುಂಟೇ?

ಭೋಗವನ್ನು ಬಿಡೆಂದು ಯಾರೂ ಹೇಳುವದಿಲ್ಲ. ಅದನ್ನು ವ್ಯವಸ್ಥೆಯಿಂದ ಅನುಭವಿಸಿದರೆ, ಅದರಿಂದ ವರ್ಚಸ್ಸು, ವೀರ್ಯ, ಆಯುಷ್ಯ ಮೊದಲಾಗಿ ಎಲ್ಲವೂ ಅಭಿವೃದ್ಧಿಯಾಗುತ್ತವೆ. ಯಾವ ಶರೀರದಿಂದ ಭೋಗವನ್ನು ಅನುಭವಿಸುತ್ತೇವೆಯೋ ಆ ಶರೀರದಿಂದಲೇ ಯೋಗವನ್ನು ಪಡೆಯಬಹುದು. ಮನಸ್ಸನ್ನು ಸಮಾಧಿಯಲ್ಲಿ ಇರಿಸಬೇಕಾದರೆ, ಈ ಶರೀರವನ್ನು ಬೇರ್ಪಡಿಸಬೇಕಾಗಿಲ್ಲ. ಈ ಶರೀರದಿಂದಲೇ ಒಳ್ಳೆಯದನ್ನು ಮಾಡಿಸಬೇಕು. ಇದರೊಡನೆ ಚಿತ್ತವನ್ನು ಕಲಿಸಬೇಕು, ಬೆರಸಬೇಕು. ಈ ರೀತಿಯಲ್ಲಿಯೇ ತನ್ನನ್ನು ತಾನು ತಿಳಿಯಬೇಕು. ಇಂತಹದೊಂದು ಯೋಗಾವಸ್ಥೆಯನ್ನು ಪಡೆಯಲು ಕಾಡಿಗೆ ಹೋಗಬೇಕಾಗಿಲ್ಲ. ಇದಕ್ಕೆ ನಿರ್ಜನ ಪ್ರದೇಶದ ಅವಶ್ಯಕತೆ ಇಲ್ಲ. ಇಲ್ಲಿಯೇ ಇದ್ದು ಭೋಗವನ್ನು ಪಡೆಯುವಂತೆ ಯೋಗವನ್ನು ಪಡೆಯಬೇಕು. ಪ್ರಪಂಚದ ನಡುವೆ ಇದ್ದು, ಅದಕ್ಕೆ ಸಿಲುಕದೆ,

ಶರೀರದಿಂದ ಯೋಗವನ್ನು ಹೊಂದುವದು.

236.
1847



ಪ್ರಪಂಚದಲ್ಲಿಯೇ ಯೋಗವನ್ನು ಹೊಂದುವುದು.

ಎಲ್ಲವನ್ನು ಸಾಧಿಸುವ ಶಕ್ತಿಯನ್ನು ಅಭ್ಯಾಸದಿಂದ ಪಡೆಯಬೇಕು. ಪ್ರಪಂಚವನ್ನೆಲ್ಲ ಕಟ್ಟಿಕೊಂಡು ತನ್ನ ಆತ್ಮವನ್ನೇ ಮರೆಯುವುದಾದರೆ, ಮನುಷ್ಯನಿಗೆ ಆಗುವ ಫಲವಾದರೂ ಏನು? ತನ್ನನ್ನು ಉದ್ಧಾರ ಮಾಡಿಕೊಳ್ಳುವುದಕ್ಕಾಗಿ, ತಾನು ಎಲ್ಲರನ್ನೂ ತೊರೆದು ಅಡವಿಗೆ ಹೋಗಿ ತಪಸ್ಸನ್ನಾಚರಿಸಿದರೆ, ಅದರಿಂದ ತನಗೆ ಯೋಗ ಸಿದ್ಧಿಯಾದರೂ, ಲೋಕದ ಸ್ತುತಿ-ನಿಂದೆಗಳು, ಹಾನಿ-ವೃದ್ಧಿಗಳ ನಡುವೆ ಬಾಳಲೇಬೇಕಾಗುತ್ತದೆ. ಆಗ ಕಾಡಿನಲ್ಲಿ ಅವನು ಪಡೆದಿದ್ದ ವಿರಕ್ತಿ ಲೋಕದ ಇಂಥ ದ್ವಂದ್ವಗಳ ಮಾಯಾ ಜಾಲಕ್ಕೆ ಸಿಕ್ಕಿ ಚೂರು ಚೂರಾಗುವಂತಹ ದುರವಸ್ಥೆಗೆ ಬರಬಹುದು. ಮಾನವನು ಭೂಮಿಯಲ್ಲಿ ಅವತರಿಸಿರುವುದು ಕಾಡಿನಲ್ಲಿ ವಾಸ ಮಾಡುವುದಕ್ಕಲ್ಲ. ಭೂಮಿಯಲ್ಲಿಯೇ ಇದ್ದು ಎಲ್ಲವನ್ನೂ ನ್ಯಾಯವಾಗಿ ಧರ್ಮದಿಂದ ಅನುಭವಿಸಿ, ತಾನು ಬದುಕಿರುವಾಗಲೇ ಮುಕ್ತಿ ಸುಖವನ್ನು ಅನುಭವಿಸುತ್ತ, ತನ್ನ ಜೀವನದಲ್ಲಿ ಪರಿಪೂರ್ಣತೆಯನ್ನು ಪಡೆದುಕೊಂಡು, ಹಾಗೆಯೆ ತನ್ನಂತೆ ಕಷ್ಟಪಡುತ್ತಿದ್ದ ಜೀವಿಗಳನ್ನು ಸಂಕಟದಿಂದ ಉದ್ಧಾರ ಮಾಡುವುದಕ್ಕಾಗಿ ಅವನು ಇಲ್ಲಿ ಬಂದಿರುವುದು. ಇದನ್ನು ಮರೆತು ತಾನು ಸರ್ವಸಂಗ ಪರಿತ್ಯಾಗ ಮಾಡಿದರೆ ಅದರಿಂದ ಯಾರಿಗೇನು ಪ್ರಯೋಜನವಾಗುವದು? ಈ ರೀತಿಯಲ್ಲಿ ಯಾವನು ಮಾಡುವನೋ ಅವನ ಆತ್ಮೋತ್ಕರ್ಷತೆಯ ವಿಷಯದಲ್ಲಿ ಯಾರಿಗೂ ಅಷ್ಟು ನಂಬಿಕೆ ಇರದು. ಪ್ರಪಂಚವೆಂಬ ಕರ್ಮಕ್ಷೇತ್ರದಲ್ಲಿ ಇದ್ದು, ದುಡಿದು " ಈಜಬೇಕು " ಶತ್ರುಗಳನ್ನು ಜಯಿಸಬೇಕು. ' ಭೋಗಿಸಬೇಕು ' ' ಯೋಗಿಸಬೇಕು ' ' ತ್ಯಾಗಿಸಬೇಕು ' " ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ " ಹೀಗೆ ಇಲ್ಲಿ ಅನರ್ಹರಾದವರು ಮತ್ತೆ ಎಲ್ಲಿ ತಾನೆ ಅರ್ಹರಾಗಬಲ್ಲರು? ಇಲ್ಲಿ ಹುಟ್ಟಿರುವಾಗ ತನ್ನ ಮೇಲ್ಮೆಗೆ ಏನಾದರೂ ಮಾಡಿಕೊಳ್ಳದೆ ವ್ಯರ್ಥವಾಗಿ ಕಾಲ ಕಳೆಯುವ ಸೋಮಾರಿಗಳನ್ನು ಉದ್ಧಾರ ಮಾಡಲು ಯಾರಿಗೆ ತಾನೇ ಸಾಧ್ಯವಾದೀತು? ಶರೀರವನ್ನು ದಂಡಿಸದೆ, ಕೃಷಿ ಮಾಡದೆ, ಲೋಕಾಭಿರಾಮನಾಗಿ ತಿರುಗುವವನಿಗೆ ಯಾವನು ತಾನೇ ಸಹಾಯ ಮಾಡು

ಪ್ರಪಂಚವೆಂಬ ಕರ್ಮಕ್ಷೇತ್ರದಲ್ಲಿ ಶ್ರಮಿಸಬೇಕು.

ವನು? ಹುಟ್ಟಿದ್ದಕ್ಕೆ ಚನ್ನಾಗಿ ಬಾಳಬೇಕು. ಬಾಳಬೇಕಾದರೆ ತಪಸ್ಸು ಮಾಡಬೇಕು, ತಪಸ್ಸೆಂದರೆ ಎಲ್ಲರನ್ನೂ ತೊರೆದು ಆಶ್ರಮದಲ್ಲಿ ವಾಸ

ಇಂದ್ರಿಯಗಳನ್ನು ವ್ಯವಸ್ಥೆಗೊಳಿಸುವುದೇ ತಪಸ್ಸು.

ಮಾಡುವುದಲ್ಲ. ಇಂದ್ರಿಯಗಳನ್ನು ವ್ಯವಸ್ಥೆಗೊಳಿಸುವದೇ ತಪಸ್ಸು. ಮಾತಿನಲ್ಲಿ ಮೌನವನ್ನವಲಂಬಿಸಿ ಬಂದವರೊಡನೆ ಲೇಖನದಲ್ಲಿ ವ್ಯವಹಾರ ನಡೆಸುವುದು ತಪಸ್ಸಲ್ಲ. ಅಶನದ ವ್ಯವಹಾರಗಳನ್ನು ತೊರೆದು ಸದ್‌ವ್ಯವಹಾರಗಳಲ್ಲಿಯೇ ನಾಲಿಗೆಯನ್ನೂ ಮನಸ್ಸನ್ನೂ ನಿಯೋಗಿಸುವುದೇ ಪರಮ ತಪಸ್ಸು; ಮನಸ್ಸು ತುಂಬಿಯಂತೆ ಅನೇಕ ಕಡೆಗೆ ಅದು ಹಾರುವದನ್ನು ತಪ್ಪಿಸಿ ಒಂದು ವ್ಯವಸ್ಥೆಯಿಂದ ಕಾರ್ಯಕ್ಷೇತ್ರದಲ್ಲಿ ಅದು ಧುಮುಕುವಂತಿರಬೇಕು. ನಾಲಿಗೆಯನ್ನು ತನ್ನ ಆಧೀನದಲ್ಲಿಟ್ಟುಕೊಂಡು, ಅವಶ್ಯವಿದ್ದರೆ ತನ್ನ ಅಭಿಪ್ರಾಯವನ್ನು ತಿಳಿಸುವಂತಾಗಬೇಕು. ಹೀಗೆ ಕರಣಗಳನ್ನು ಉಪಯುಕ್ತವಾಗಿ ಉಪಯೋಗಿಸಿದರೆ, ಶರೀರವು ಲಘುವಾಗಿಯೂ, ಆರೋಗ್ಯವು ದೃಢವಾಗಿಯೂ ನಮ್ಮ ಧ್ಯೇಯ ಸಾಧನೆಗೆ ಅನುಕೂಲವಾಗಿಯೂ ಇರುತ್ತದೆ. ಇದರಿಂದ ಮನಸ್ಸು ಸಮಾಧಿಯನ್ನು ಅನಾಯಾಸವಾಗಿ ಪಡೆಯಬಹುದು.

ಯೋಗಿಗೆ ಸ್ವಾರ್ಥವಿಲ್ಲ.

ಇಂತಹ ಯೋಗದಿಂದ ಮನುಷ್ಯನಿಗೆ ಉತ್ತಮವಾದ ಸ್ಥಿತಿ ಬರುತ್ತದೆ. ಆಗ ಅವನು ಕಷ್ಟ-ನಿಷ್ಠುರಗಳಿಗೆ ಹೆದರುವದಿಲ್ಲ. ಹೊಗಳಿದರೆ ಹಿಗ್ಗುವುದಿಲ್ಲ. ತೆಗಳಿದರೆ ಕುಗ್ಗುವುದಿಲ್ಲ. ಅವನಿಗೆ ಯಾರ ಹಂಗೂ ಇರುವುದಿಲ್ಲ. ಅವನು ಬಾಳುತ್ತಿರುವುದು ಇತರರಿಗಾಗಿ. ತನ್ನಲ್ಲಿ ಸ್ವಾರ್ಥ ಲೇಶವೂ ಇರುವುದಿಲ್ಲ. ದೀನಾನಾಥರ ಯಾತನೆಯನ್ನು ತಪ್ಪಿಸಬೇಕೆಂಬ ಇಚ್ಛೆಯಿಂದ ಲೋಕದಲ್ಲಿ ವ್ಯವಹರಿಸುತ್ತಾನೆ. ಇಂಥವನೇ ಪರಮಯೋಗಿಯೆನಿಸುವನು. ಅವನಲ್ಲಿ ಸಹನೆ, ಶಾಂತಿ-ದಾಂತಿಗಳು ತುಂಬಿ ತುಳುಕುತ್ತವೆ. ಸದ್ಗುಣಗಳು ಭೋರ್ಗರೆಯುತ್ತವೆ. ಸಾಮಾನ್ಯ ಜನರಂತೆ ಅವನು ಪ್ರಾಪಂಚಿಕ ಸುಖವನ್ನು ಅನುಭವಿಸುತ್ತಿದ್ದರೂ, ಅವನ ಮನೋಭಾವವೇ ಬದಲಾವಣೆ ಹೊಂದಿರುವುದರಿಂದ ಅವನು ಅನುಭವಿಸುವ ಸುಖವೇ ಪ್ರಸಾದ ರೂಪವಾಗಿ ಅವನ ಅವನತಿಗೆ ಕಾರಣವಾಗದೆ, ಆತ್ಮೋನ್ನತಿಗೆ ಸಾಧಕವಾಗುತ್ತದೆ. ಹೀಗೆ ವಿಷಯಸುಖ



ವನ್ನನುಭವಿಸುತ್ತಿರುವ ಕಾಲದಲ್ಲಿ ಒಬ್ಬನ ಯೋಗ್ಯತೆಯು ಎಲ್ಲರಿಗೂ ವ್ಯಕ್ತವಾಗುವಂತೆ, ಕಾಡಿನಲ್ಲಿ ವಾಸ ಮಾಡುವುದರಿಂದ ಅಷ್ಟು ಪ್ರಕಟವಾಗುವುದಿಲ್ಲ. ಒಬ್ಬನ ಮಹತ್ವವು ರಂಗಭೂಮಿಯಲ್ಲಿ ಚೆನ್ನಾಗಿ ತೋರುವಂತೆ ತೆರೆಯೊಳಗೆ ತೋರುವುದಿಲ್ಲ. ಸ್ತುತಿ-ನಿಂದೆಗಳನ್ನು ಕೇಳಿ ಅವನ ಮನಸ್ಸು ಯಾವ ಕಡೆ ನಿಲ್ಲುವುದೋ ಅದನ್ನು ನೋಡಿ ಅವನ ಶ್ರೇಷ್ಠತೆಯನ್ನು ಅರಿಯಬೇಕು. ಅಂಥವನೇ ಮಹಾನುಭಾವನೆನಿಸುವನು. ಎಲ್ಲರೂ ಹಾಗೆ ಆಗಲಿಕ್ಕೆ ಯತ್ನಿಸಬೇಕು. ಬಾಹ್ಯ ವಸ್ತುಗಳಿಂದ ಮನುಷ್ಯನು ದೊಡ್ಡವನಾಗುವುದಿಲ್ಲ. ಅಂತರಂಗದಲ್ಲಿ ಅವನು ಸಂಪಾದಿಸಿದ ವಸ್ತುಗಳಿಂದ ಅವನು ನಮಗೆ ಪೂಜ್ಯನೂ, ಗುರುವೂ, ಜ್ಯೋತಿಯೂ, ವಿಭೂತಿಯೂ ಆಗುವನು. ಇಂತಹ ಮಹಾಪುರುಷನು ಯಾವ ಜಾತಿಯಲ್ಲಿಯೇ ಅವತರಿಸಲಿ, ಅವನಿಂದಲೇ ಲೋಕಕ್ಕೆ ಕಲ್ಯಾಣವೂ, ಶಾಂತಿಯೂ ಆಗಬೇಕಾಗಿದೆ. ಇಂತಹ ಮಹಾತ್ಮರು ಎಷ್ಟೋ ಜನರು ಈಗಲೂ ಇದ್ದಾರೆ. ಅವರು ಸಾಧಿಸಿ ಪಡೆದ ಮೇಲಿನ ಅಂತಸ್ತನ್ನು ಸಂಪಾದಿಸುವುದೇ ಜೀವನದ ಗುರಿ. ದುರ್ಗುಣಗಳನ್ನು

ಸದ್ಗುಣಗಳನ್ನು ಒಳಗೂ ಹೊರಗೂ ತೋರುವುದೇ ಜೀವನದ ಗುರಿ.

ಖಂಡಿಸಿ ಸದ್ಗುಣಗಳನ್ನು ಒಳಗೂ ಹೊರಗೂ ತೋರುವಂತಹ ಒಂದು ಉತ್ತಮೋತ್ತಮ ಸ್ಥಿತಿಯನ್ನು ಪಡೆಯುವುದೇ ಜೀವನದ ಧ್ಯೇಯ. ಅಂತಹ ಸದ್ಗುಣಗಳನ್ನು ಆಚರಣೆಯಲ್ಲಿ ತರುವಂತಹ ಆದರ್ಶ ಸ್ಥಿತಿಯನ್ನು ಪಡೆಯುವುದೇ ಬಾಳಿನ ಗುರಿ. ಇಂತಹ ಗುರಿಯನ್ನು ಸಾಧಿಸಲು ಉತ್ತಮವಾದ ಕಾರ್ಯಕ್ಷೇತ್ರವು ಪ್ರಪಂಚವು. ಈ ಕ್ಷೇತ್ರವು ತಪೋವನವಲ್ಲ; ಸ್ವರ್ಗವಲ್ಲ. ಜನರಲ್ಲಿಯೇ ಇದ್ದು ಕಾರ್ಯ ಮಾಡುತ್ತ ದಿವ್ಯ ಜ್ಯೋತಿಯ ದರ್ಶನ ಹೊಂದಿ, ಧ್ಯೇಯವನ್ನು ಸಾಧಿಸಲು ಅನುಕೂಲ ಮಾಡುವುದೇ ಇಂತಹ ಯೋಗಿಗಳ ಉಚ್ಚ ಧ್ಯೇಯವು.

ಇಂತಹ ಯೋಗಿಗೆ ವಿಶ್ವವೇ ಕುಟುಂಬವಾಗುತ್ತದೆ. ಅವನ ಪ್ರೇಮ ಸರ್ವ ವ್ಯಾಪಕವೂ ವಿಶಾಲವೂ ಆಗುತ್ತದೆ. ನೀಚ ಭಾವನೆ ಅವನಿಂದ ದೂರ ಸರಿಯುತ್ತದೆ. ತಾನು ಆತ್ಮಜ್ಞಾನವನ್ನು ಪಡೆದು,

**ಯೋಗಿಯು ವಿಶ್ವಕುಟುಂಬಿಯು**

ಅಷ್ಟಕ್ಕೆ ತೃಪ್ತನಾಗದೆ, ಅಸಂಖ್ಯಾತರಾದ ಅಜ್ಞರಿಗೆ ಕೃಪೆ ಮಾಡುವನು. ಒಬ್ಬನು ಜ್ಞಾನಿಯಾಗಿ ಅನೇಕರು ಅಜ್ಞಾನಿಗಳಾಗಿ ಉಳಿದರೆ, ಅವನಿಂದ ಫಲವಿಲ್ಲ. ಯಾವನು ದೇಹೇಂದ್ರಿಯಗಳಲ್ಲಿ ಒಂದು ಸದ್ಭಾವನೆಯಿಂದ, ಒಂದು ವ್ಯವಸ್ಥೆಯಿಂದ ಸಹಕರಿಸಿ ತನ್ನ ಆತ್ಮದ ಪೂರ್ಣ ಉಚ್ಛ್ರಾಯ ಸ್ಥಿತಿಯನ್ನು ಪಡೆಯುವನೋ ಹಾಗೆ ಅದನ್ನು ಪಡೆದು ಎಲ್ಲರಲ್ಲಿಯೂ ಹರಡುವನೋ ಅಂಥವನೇ ಲೋಕದಲ್ಲಿ ಸತ್ಪುರಷನು. ಸಾಮಾನ್ಯ ಜೀವಿಗಳೂ ಕೂಡ ಇಂತಹ ಸತ್ಪುರುಷರಾಗಲು ಪ್ರಯತ್ನಪಡಬೇಕು. ಪ್ರಯತ್ನಪಟ್ಟರೆ ಅವನಿಗೆ ದಾರಿ ತಾನಾಗಿಯೇ ತೋರುತ್ತದೆ. ಮಾರ್ಗದರ್ಶಕವೂ ಸಾಧನಗಳೂ ತಾವಾಗಿಯೇ ಅವನಿಗೆ ದೊರೆಯುತ್ತವೆ. ದಿವ್ಯ ಸ್ವರೂಪವನ್ನು ತಿಳಿಯಲು ಎಲ್ಲರೂ ಭಾಗಿಗಳಾದುದರಿಂದ ತನ್ನಂತೆ ಇತರರು ಎಂದು ಭಾವಿಸಿ ಅವರ ಮೇಲ್ಮೆಯನ್ನು ಸಾಧಿಸಲು ಬ್ರಹ್ಮಜ್ಞಾನಿಯು "ಕಾಯೇನ ವಚಸಾ ಮನಸಾ" ಪ್ರಯತ್ನಪಡಬೇಕು. ತಾನು ಮುಕ್ತನಾದರೆ ಸಾಲದು. ಎಲ್ಲರಿಗೂ ಆಹಾರದ ಅವಶ್ಯಕತೆ ಹೇಗೆ ಇದೆಯೋ ಹಾಗೆ ಪರಮೋತ್ತಮ ಸ್ಥಿತಿಯನ್ನು ಜೀವಿತ ಕಾಲದಲ್ಲಿಯೇ ಪಡೆಯುವುದು ಎಲ್ಲರ ಆಜನ್ಮಸಿದ್ಧವಾದ ಹಕ್ಕು. ಇಂತಹದೊಂದು ಉತ್ಕರ್ಷತೆಯನ್ನು ಪಡೆಯುವುದಕ್ಕಾಗಿಯೇ ದೇವತೆಗಳು ಭೂಮಿಯಲ್ಲಿ ಅವತರಿಸುತ್ತಾರೆ. ಪುನರ್ಜನ್ಮವನ್ನು ತಪ್ಪಿಸಿಕೊಂಡು

**ಪುನರ್ಜನ್ಮವನ್ನು ತಪ್ಪಿಸಲು ಮನುಷ್ಯ ಜನ್ಮವು ಸಹಾಯಕವು.**

ನಿತ್ಯ ಸುಖವನ್ನನುಭವಿಸುವಂತಹ ಉತ್ತಮೋತ್ತಮವಾದ ಅವಸ್ಥೆ ಸಂಭವಿಸಿವುದಾದರೆ ಮನುಷ್ಯನಿಗೆಯೇ ಹೊರತು ಇತರ ಪ್ರಾಣಿಗಳಿಗೆ ಸಾಧ್ಯವಿಲ್ಲ. ಆದುದರಿಂದಲೇ ಮಾನವ ಜನ್ಮ ದುರ್ಲಭವಾದುದೆಂಬ ಭಾವನೆ ಸರ್ವ ವಿದಿತವಾಗಿದೆ. ಇಂತಹ ಸದವಕಾಶವನ್ನು ವ್ಯರ್ಥ ಮಾಡಿಕೊಳ್ಳದೆ ಎಲ್ಲರೂ ಪರಂಜ್ಯೋತಿಯ ಅನುಭವವನ್ನು ಪಡೆದುಕೊಳ್ಳಬೇಕು. ಹಾಗೆ ಪಡೆದವರು ತಟಸ್ಥರಾಗಿರದೆ, ಅರಿಯದವರಿಗೆ ಅದರ ಪರಿಚಯವನ್ನು ಮಾಡಿಕೊಡಲು ಪ್ರಯತ್ನ ಮಾಡಬೇಕು. ತತ್ವವನ್ನು ಸಾಕ್ಷಾತ್ಕರಿಸಿಕೊಂಡವರು ಅಷ್ಟರಲ್ಲಿಯೇ ತೃಪ್ತರಾಗಿ ನಿಂತರೆ, ಅವರ ಜೀವನ ಪರಿಪೂರ್ಣವಾಗಲಾರದು.



ಇಂತಹ ದಿವ್ಯ ಜ್ಯೋತಿಯ ದರ್ಶನವಾಗುವದು ಈ ಶರೀರದಲ್ಲಿ. ಮನೆಯಲ್ಲಿ ವಾಸ ಮಾಡುವವನು ತಾನು ಶುದ್ಧನೆಂದೂ, ಪವಿತ್ರನೆಂದೂ, ಚೈತನ್ಯನೆಂದೂ ತಿಳಿದು ತನ್ನ ಸುತ್ತ-ಮುತ್ತಣ ಸನ್ನಿವೇಶವೂ

**ಶರೀರದಿಂದಲೇ ಧರ್ಮ ಸಾಧನೆಯು**

ಮನೆಯೂ ಅಪವಿತ್ರವೆಂದೂ ಅಶುಭವೆಂದೂ ಜಡವೆಂದೂ ಜರಿಯುತ್ತ ಕುಳಿತರೆ ಆಗುವದಿಲ್ಲ. ಹಾಗೆ ಈ ಶರೀರದಲ್ಲಿ ಅಪವಿತ್ರ ಭಾವನೆಯನ್ನು ಕಲ್ಪಿಸಬಾರದು. ಈ ಶರೀರದಿಂದಲೇ ಎಲ್ಲ ಧರ್ಮಗಳನ್ನು ಸಾಧಿಸಬೇಕು, ಗಳಿಸಬೇಕು. ಇದರಲ್ಲಿ ಭೋಗವೂ ಬೇಕು; ಯೋಗವೂ ಬೇಕು; ತ್ಯಾಗವೂ ಬೇಕು. ಆದುದರಿಂದಲೇ ಈ ದೇಹವನ್ನು ಭೋಗಾಂಗ ಯೋಗಾಂಗ ತ್ಯಾಗಾಂಗ ಎಂದು ಕರೆಯುತ್ತಾರೆ. ಈ ಶರೀರವನ್ನು ಹೊಂದಿರುವವರು ಎಲ್ಲರೂ ಭೋಗಿಗಳೂ ಯೋಗಿಗಳೂ ತ್ಯಾಗಿಗಳೂ ಆಗಬೇಕು. ಹಾಗಾದರೆಯೇ ಜೀವನವು ಪರಿಪೂರ್ಣವಾಗುವುದು. ಇಂತಹ ಜೀವಿಗಳಲ್ಲಿ ಯಾರು ಹೆಚ್ಚೂ ಅಲ್ಲ, ಯಾರು ಕೀಳೂ ಅಲ್ಲ, ಯಾರು ಉತ್ಕೃಷ್ಟರೂ ಅಲ್ಲ, ನಿಕೃಷ್ಟರೂ ಅಲ್ಲ. ಎಲ್ಲರಲ್ಲಿಯೂ ಮಹಾತ್ಮರಾಗುವ ದಿವ್ಯ ಶಕ್ತಿಯಿದೆ ಕೆಲವರು ಬೇಗನೆ ಅಂತಹ ಉತ್ತಮ ಸ್ಥಿತಿಯನ್ನು ಪಡೆಯಬಹುದು. ಮತ್ತೆ ಕೆಲವರು ಕೊಂಚ ನಿಧಾನವಾಗಿ ಆ ಸ್ಥಿತಿಯನ್ನು ಪಡೆಯುವರು. ಹೀಗೆ ಭೋಗ ಯೋಗ ತ್ಯಾಗಗಳನ್ನು ಸಮನ್ವಯ ಮಾಡಿಕೊಂಡು, ಏರು-ಪೇರುಗಳಿಗೆಡೆಗೊಡದೆ ಜೀವನವನ್ನು ನಡೆಸುತ್ತ ಬಂದರೆ, ಜೀವ ಬ್ರಹ್ಮೈಕ್ಯ ರೂಪವಾದ ಲಕ್ಷ್ಯವನ್ನು ಎಲ್ಲರೂ ಸಾಧಿಸಬಹುದು.

ಈ ಗುರಿಯನ್ನು ಸಾಧಿಸಲು ಹೆಣ್ಣೂ ಗಂಡೂ ಎಲ್ಲರೂ ಪ್ರಯತ್ನಪಟ್ಟರೆ ಅವರೆಲ್ಲರಿಗೂ ಸಾಧ್ಯ. ಕೆಲವು ಸ್ವಾಮಿಗಳಿಗೂ ಶಾಸ್ತ್ರಿಗಳಿಗೂ ಮಾತ್ರವೇ ಇದು ಸಾಧ್ಯವೆಂದು ಯಾರೂ ಭಾವಿಸಕೂಡದು. ಪ್ರತಿ

**ಪ್ರಗತಿ ಮಾರ್ಗದಲ್ಲಿ ನಡೆಯುವುದೇ ಜೀವನದ ಪರಿಪೂರ್ಣತೆ**

ಯೊಬ್ಬನಿಗೂ ಹೊರಗೆ ಕಾಣುವಂತೆ ಒಳಗಿನದೂ ಒಂದು ಜೀವನವು ಇದೆ. ಹೊರಗಿನದು ಒಳಗಿನದು ಎಲ್ಲವನ್ನು ಹೊಂದಿಸಿಕೊಂಡು ಒಂದಕ್ಕೊಂದು ಸಮನ್ವಯವಾಗುವಂತೆ ಪ್ರಗತಿ ಮಾರ್ಗದಲ್ಲಿ ಮುಂದುವರೆದರೆ ನಮ್ಮ ಜೀವನವು ಪರಿಪೂರ್ಣ

ವಾಗುವುದು. ಇಂತಹದೊಂದು ಹೆಚ್ಚಿನ ಸ್ಥಿತಿಗೆ ಹೋಗಬೇಕಾದರೆ ಹೊಟ್ಟೆ-ಬಟ್ಟೆಯ ಪ್ರಶ್ನೆಯನ್ನು ಸರಿಪಡಿಸಿಕೊಳ್ಳುವುದು ಮೊದಲನೆಯ ಕೆಲಸವಿದೆ. ಹೊರಗೆ ಸ್ವಚ್ಛ ಮಾಡದೆ, ಕುಂದು-ಕೊರತೆಗಳನ್ನು ಸರಿಪಡಿಸಿಕೊಳ್ಳದೆ, ರೋಗ-ರುಜೆಗಳನ್ನು ನೆಟ್ಟಗೆ ಮಾಡಿಕೊಳ್ಳದೆ ಹೋದರೆ ಆತ್ಮನನ್ನು ಸಮಾಧಿಯಲ್ಲಿರಿಸಲು ಕಷ್ಟವಾಗುತ್ತದೆ. ಆ ಕಾಲದಲ್ಲಿ ನಾವು ಒಳಗೆ ಪರೀಕ್ಷೆ ಮಾಡಲು ಹವಣಿಸಿದರೆ ಹೊರಗಿನ ಉಪಟಳಗಳು ನಮ್ಮನ್ನು ತಪ್ಪು ದಾರಿಗೆ ಎಳೆಯುತ್ತವೆ. ಕೆಲವು ಕಠಿಣ ಪ್ರಶ್ನೆಗಳು ಜೀವನವನ್ನು ಚೂರು ಮಾಡುತ್ತವೆ. ಹೊರಗೆ ಕೃತ್ರಿಮತೆ, ಅಸೂಯೆಗಳು ನಟನವಾಡುತ್ತಿರುವಾಗ, ನಿಜವಾದ ಸೌಹಾರ್ದ್ರ, ಪ್ರೇಮಗಳು ಹೇಗೆ ಬರುತ್ತವೆ? ಹೊರಗೆ ಶುದ್ಧಿಯಿದ್ದರೆ ಒಳಗೆ ಶಾಂತಿ ದೊರೆಯುತ್ತದೆ. ಆಗ ಮಾನವನು ಆತ್ಮಾರಾಮನಾಗುವನು. ಈ ರೀತಿಯಾಗಿ, ಹೊರಗೂ ಒಳಗೂ ಒಂದು ವ್ಯವಸ್ಥೆಯನ್ನು ಸಾಮೂಹಿಕತೆಯನ್ನು ಏರ್ಪಡಿಸಿಕೊಂಡ ಉತ್ತಮ ರೀತಿಯಲ್ಲಿ ಬಾಳುವುದು ಯಾರು ತಾನೇ ಮಾಡಬಾರದ ಕೆಲಸ?

ನಮಗೆ ಭೋಗ-ವಿಲಾಸಗಳು ಹೆಚ್ಚಿದ ಹಾಗೆಲ್ಲ ಸಾವಿನ ದುಃಖವು ಹೆಚ್ಚುತ್ತದೆ. ಅದು ಎಲ್ಲರಿಗೂ ನಿಷ್ಪಕ್ಷಪಾತವಾಗಿ ಸಂಬಂಧಿಸಿದ್ದು. ಹುಟ್ಟು ಬಾಳು ಸಾವುಗಳು ಬಹಳ ಕಠಿಣವಾದ ಪ್ರಶ್ನೆಗಳು. ಇವು ಯಾರ ಹಿಡಿತಕ್ಕೂ ಸಿಕ್ಕಿಲ್ಲ. ಅದರಲ್ಲಿಯೂ ಸಾವು ಎಂತಹುದೆಂದು ಅರಿಯುವುದು ಬಹಳ ಕಷ್ಟ. ಕೊನೆಯ ದಿವಸ ಹೇಗೆ ಬರುತ್ತದೆ, ಅದಕ್ಕೆ ಹೇಗೆ ತಯಾರಿರಬೇಕು, ಎಂಬುದು ಬಹಳ ಕ್ಲೇಶಕರವಾದ ಸಮಸ್ಯೆ. ಇದನ್ನು ಯಾರೂ ಬಗೆ ಹರಿಸಿಲ್ಲ. ಆದರೂ ಸಾವು ಯಾರಿಗೂ ತಪ್ಪಿದ್ದಲ್ಲ. ಅದು ಎಂದಾದರೂ ಒಂದು ದಿನ ನಮ್ಮ ಬಳಿ ಬಂದೇ ಬರುತ್ತದೆ. ನಾವು ಸಿದ್ಧವಾಗಿದ್ದರೂ ಅದು ನಮ್ಮನ್ನು ಒಯ್ದೇ ಒಯ್ಯುತ್ತದೆ. ಬೇಡವೆಂದರೂ ಅದು ನಮ್ಮನ್ನು ಬಿಡುವುದಿಲ್ಲ. ಆ ಸಾವನ್ನು ಸಂತೋಷದಿಂದ ಅಪ್ಪಿಕೊಳ್ಳುವುದು ಎಲ್ಲರಿಗೂ ಸಾಧ್ಯವಿಲ್ಲ. ಆದರಿಂದ ಆಗುವ ವ್ಯಥೆ ಅಷ್ಟಿಷ್ಟೆಂದು ಹೇಳತೀರದು. ಮರಣ ಕಾಲದಲ್ಲಿ ಸಾಮಾನ್ಯರಿಗೆ ಇಷ್ಟು ಯಾತನೆ ಸಂಭವಿಸಿದರೂ, ತಿಳಿದಂತಹ

ಸಾವಿನ ವ್ಯಥೆಯನ್ನು ದೂರಮಾಡುವುದು



ಯೋಗಿಗಳಿಗೆ ಅದರ ನೋವು ತೋರುವುದಿಲ್ಲ. ಆದುದರಿಂದಲೇ ಶರಣರ ಮಹತ್ವ ಮರಣದಲ್ಲಿ ತಿಳಿಯುವುದೆಂದು ವಿಶ್ರುತವಾಗಿದೆ. ಮರಣವೆಂಬುದು ಭೀತಿಯ ವಸ್ತುವೆಂದು ಜನರ ಮನಸ್ಸಿನ ಮೇಲೆ ಒಂದು ಭಾವನೆ ಬಂದು ಹೋಗಿದೆ. ಅದಕ್ಕೆ ಸಿದ್ಧರಾಗಲು ಪ್ರತಿಯೊಬ್ಬನು ತನ್ನ ಬಾಳುವೆಯನ್ನು ಮೊದಲಿನಿಂದಲೂ ಹಸನ ಮಾಡಿಕೊಳ್ಳಬೇಕು. ಜೀವನವನ್ನು ಹದಗೊಳಿಸಿ ಸ್ವಚ್ಛ ಮಾಡಿಕೊಂಡಿದ್ದರೆ, ಮರಣವನ್ನು ಸಂತೋಷದಿಂದ ಆಲಿಂಗಿಸಿಕೊಳ್ಳುವ ಧೈರ್ಯ ಮಾನವನಿಗೆ ಬರುತ್ತದೆ. 'ಅಹಂ ಬ್ರಹ್ಮಾಸ್ಮಿ' ಎಂದು ಕುಳಿತರೆ ಸಾವಿನ ಸಮಸ್ಯೆ ಬಗೆಹರಿಯುವುದಿಲ್ಲ. ಕೆಳಗಿನವರನ್ನು ತುಳಿದು ನಾವು ಮುಂದೆ ಹೋಗಬೇಕೆಂಬ ಮಹತ್ವಾಕಾಂಕ್ಷೆಯಿಂದ ಕೆಲವು ಕಾಲ ಮಾತ್ರ ನೂಕಬಹುದು. ಆದರೆ ಹೀಗೆ ಹೇಳುವ ಮಾತು ಬಹುಕಾಲ ನಿಲ್ಲುವುದಿಲ್ಲ. ಸಾವನ್ನು ಹರ್ಷದಿಂದ ಅಪ್ಪಿಕೊಳ್ಳುವಂತಹ ಎದೆಗಾರಿಕೆಯನ್ನು ನಾವು ಪಡೆಯಬೇಕು. ಒಂದು ತತ್ವದ ಸಾಕ್ಷಾತ್ಕಾರಕ್ಕಾಗಿ, ಅಖಂಡಾನಂದಕ್ಕಾಗಿ, ಅನುಪಮ ಶಾಂತಿಗಾಗಿ ಹೋರಾಡುವುದು ಎಲ್ಲರಿಗೂ ಸಂಬಂಧಿಸಿದ ವಿಚಾರ. ಇಂತಹ ಹೋರಾಟದಲ್ಲಿಯೇ, ತ್ಯಾಗ ಭೋಗ ಯೋಗ ಸಮನ್ವಯದಿಂದ ಬಾಳುತ್ತ ಯಾರು ತನ್ನ ಜೀವನದಲ್ಲಿ ಒಳಗೂ ಹೊರಗೂ ಶಾಂತಿ ಆನಂದ ಸೌಖ್ಯಗಳನ್ನು ಅನುಭವಿಸುತ್ತಿರುವರೋ ಅವರಿಗೆ ಸಾವು ಬಂದರೆ ಸಂತೋಷವಲ್ಲವೇ? ಅಂಥವರು ಸಾವನ್ನು ತಪ್ಪಿಸಿಕೊಳ್ಳಲು ಬಯಸುವರೆ? ಎಂದಿಗೂ ಇಲ್ಲ.

ತನ್ನ ಶರೀರದಲ್ಲಿ ಅವಯವಗಳನ್ನು ವ್ಯವಸ್ಥೆಯಿಂದ ಇಟ್ಟಿದ್ದರೆ ತನಗೆ ಹೇಗೆ ಒಂದು ಬಗೆಯ ಸುಖವುಂಟೋ ಹಾಗೆ ಒಂದು ಮನೆಯಲ್ಲಿ ಹೆಂಡತಿ ಮಕ್ಕಳು ಎಲ್ಲರನ್ನೂ ಒಂದು ವ್ಯವಸ್ಥೆಯಿಂದ ಇರಿಸಿದರೆ ಅದರಿಂದ ಎಲ್ಲರಿಗೂ ನೆಮ್ಮದಿಯುಂಟಾಗುತ್ತದೆ. 'ಹೆಂಗಸು ರಾಕ್ಷಸಿ' ಎಂದು ಹೇಳುತ್ತ ಹೋದರೆ ಅದರಿಂದ ತನಗೆ ಶಾಂತಿ ಸೈರಣೆಗಳು ದೊರೆಯುತ್ತವೆಯೇ? ಎಲ್ಲರನ್ನೂ ನಿಂದಿಸುತ್ತ, ಎಲ್ಲದರಲ್ಲಿಯೂ ದೋಷಗಳನ್ನು ಕಂಡು ಹಿಡಿಯುತ್ತ ಹೋದರೆ, ತನಗಾಗಿ ಉಳಿಯುವ ಗುಣಾಂಶವಾದರೂ ಯಾವುದು? ಇನ್ನು ಕುಟುಂಬ ಜೀವನದಲ್ಲಿಯೂ, ಜನಾಂಗ ಜೀವನದಲ್ಲಿಯೂ ಒಂದು ವ್ಯವಸ್ಥೆಯನ್ನು ಏರ್ಪಡಿಸುವು

ಕುಟುಂಬ ಜೀವನದಲ್ಲಿ ಸುವ್ಯವಸ್ಥೆ.

ಪಾದರೂ ಹೇಗೆ? ಹೀಗೆ ಜೀವಿತ ಕಾಲದಲ್ಲಿ ತನ್ನ ಮೇಲ್ಮೆಗೆ ಏನೂ ಮಾಡಿಕೊಳ್ಳದೆ, ಏನನ್ನೂ ಸಾಧಿಸಿಕೊಳ್ಳದೆ, ಪಾಗದ್ವೈತದಲ್ಲಿ ಕುಳಿತವನು ಮುಕ್ತನಾಗುವುದಾದರೂ ಹೇಗೆ? ಹಿಂದೆ ಎಷ್ಟೋ ಜನ್ಮಗಳಲ್ಲಿ ಹುಟ್ಟಿ, ನರಕಯಾತನೆಗಳನ್ನು ಅನುಭವಿಸಿದಂತೆ ಮುಂದೆಯೂ ಅನೇಕ 'ಬಾರದ ಭವಂಗಳಲ್ಲಿ' ಹುಟ್ಟಿ ವಿಷಕ್ರಿಮಿಯಂತೆ ಅಲ್ಪ ಸುಖಕ್ಕೆ ಹಾತೊರೆಯುವ ನಾಯಿಯಂತಾಗುವದಲ್ಲ ಅವನ ಬಾಳು! ಇಂತಹ ವಿಷಾದಕ್ಕೆ ಅವಕಾಶ ಕೊಡದೆ, ಮಾನವನು ತನ್ನ ಬಾಳನ್ನು ನಿರ್ಮಲ ಮಾಡಿಕೊಂಡು, ಸಾಯುವ ಮುಂದೆ ನಗುವಂತಾಗಬಾರದೇ? ಅಳುತ್ತಲೂ ಸಾಯಬೇಕು; ನಗುತ್ತಲೂ ಸಾಯಬೇಕು. ಸಾವು ನಮ್ಮ ಹಕ್ಕು. ಎಷ್ಟು ಕಾಲ ಬದುಕಿದರೂ ಮರಣ ನಮ್ಮನ್ನು ಬಿಡುವುದಿಲ್ಲ. ಎಂತಹ ಚಕ್ರವರ್ತಿಯಾದರೂ ಒಂದು ದಿನ ಮೃತ್ಯುಪಾಶಕ್ಕೆ ಸಿಕ್ಕಲೇಬೇಕು. ಕಾಲಚಕ್ರದಿಂದ ಪಾರಾಗಲು ಯಾರಿಂದಲೂ ಸಾಧ್ಯವಿಲ್ಲ. ಮರಣದ ಮುಂದೆ ನಮ್ಮ ಹೊಣೆಗಾರಿಕೆ ಏನೂ ನಡೆಯುವುದಿಲ್ಲ. ಇಂದ್ರಿಯಗಳನ್ನು ನಿಂದಿಸಿದಂತೆ ಮರಣವನ್ನು ನಿಂದಿಸಿದರೆ, ಅದು ನಮಗೆ ಕನಿಕರವನ್ನು ತೋರಿಸುತ್ತದೆಯೋ? ಎಂದಿಗೂ ಇಲ್ಲ. ಪ್ರಪಂಚದ ಆಶ್ರಯಕ್ಕೆ ಬಂದು ನಿಂತು ಬಡಿದಾಡುತ್ತ ಇರುವಾಗ್ಗೆ ನಾವು ಜ್ಞಾನಿಗಳೆಂದು ಅಹಂಕಾರ ಪಡುತ್ತ, ಕೆಳಗಿನವರು ಆತ್ಮಜ್ಞಾನಕ್ಕೆ ಅನರ್ಹರೆಂದು ಅವರನ್ನು ಹಿಂದಕ್ಕೆ ಒತ್ತಿದರೆ ನಮಗೆ ಬರುವ ಪುಣ್ಯವಾದರೂ ಏನು? ಪುರುಷಾರ್ಥವಾದರೂ ಯಾವುದು? ಈ ಹೊಣೆಗಾರಿಕೆಯನ್ನು ಬಿಟ್ಟು, ನಿಷ್ಕಲರಾಗಿ ಹೊರಗಿನ ಮತ್ತು ಒಳಗಿನ ಜೀವನವನ್ನು ಹೊಂದಿಸಿಕೊಂಡು ಬಾಳುವುದನ್ನು ಕಲಿಯಬಾರದೆ?

**ಮರಣಕೋಸರ ಭೀತಿ ಇರಕೂಡದು**

ಸೃಷ್ಟಿಯು ಕಾರ್ಯದಂತೆ ಪ್ರಳಯವೂ ಆಗಲಿಕ್ಕೆ ಬೇಕು. ನಾವು ಹುಟ್ಟಿಬಂದಂತೆ ಸಾಯಲೂ ಬೇಕು. ಇದಕ್ಕೆ ಏತಕ್ಕೆ ಚಿಂತಿಸಬೇಕು? ನಾವು ಹುಟ್ಟಿರುವುದು ಒಳ್ಳೆಯದಕ್ಕೆಂದು ಭಾವಿಸುತ್ತೇವೆ. ಹಾಗೆಯೇ ಸಾಯುವದು ಒಳ್ಳೆಯದಕ್ಕೆಂದು ಭಾವಿಸಬೇಡವೆ? ಚೆನ್ನಾಗಿ ಬಾಳುತ್ತ, ಚೆನ್ನಾಗಿ ಸತ್ತರೆ ಪುನಃ ತಾಯಿಯ ಗರ್ಭದಲ್ಲಿ ಹುಟ್ಟಿ ಯಾತನೆಯನ್ನು ಅನುಭವಿಸುವ ದುರ್ಯೋಗವೇ ಬರುವುದಿಲ್ಲ. ಜೀವನು ನಿರಾಕಾರವಾದ ಪರಬ್ರಹ್ಮನಲ್ಲಿ ಬಯಲಾಗುವ ಸುಯೋಗ



ವನ್ನು ಮರಣವು ದೊರಕಿಸುವಾಗ ಇದಕ್ಕೇತಕ್ಕೆ ವ್ಯಸನಪಡಬೇಕು? ಬೇರೆ ಜನ್ಮದಲ್ಲಿ ಪಡೆಯಲಿಕ್ಕಾಗದ ಉತ್ತಮವಾದ ಆದರ್ಶವನ್ನು ಸಾಧಿಸುವುದಕ್ಕಾಗಿಯೇ ಈ ಮಾನವ ಜನ್ಮವನ್ನು ಪಡೆದಿದ್ದೇವೆ. ಇದರಲ್ಲಿ ಹೊಂದಬೇಕಾದ ಫಲವನ್ನು ಹೊಂದಿ, ನಗುತ್ತ ಹೊರಡಲಿಕ್ಕೂ ಸಿದ್ಧವಾಗಿರಬೇಡವೆ? ಹುಟ್ಟಿದ್ದು ಸಾರ್ಥಕವಾದ ಮೇಲೆ, ಸಾಧಿಸುವ ಕೆಲಸವಾದರೂ ಏನಿರುತ್ತದೆ? ಆಗ ಹೊರಡುವುದನ್ನು ಎದುರು ನೋಡುತ್ತಿರಬೇಡವೆ? ಯಾರು ಜೀವನವನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೋ ಅವರು ಹುಟ್ಟಿದ ಮೇಲೆ ಏನನ್ನು ಪಡೆಯಬೇಕೋ ಅದನ್ನು ಪಡೆಯದೆ ವ್ಯರ್ಥವಾಗಿ ಕಾಲ ಕಳೆಯುತ್ತಾರೆ. ಇವರು ಹೇಡಿಗಳೂ, ದುರಹಂಕಾರಿಗಳೂ ಆಗಿ ಸಾವಿಗೆ ಗುಲಾಮರಾಗಿ ನರಳಬೇಕಾಗುವುದು. "ಇಲ್ಲಿ ಹುಟ್ಟಲು ಒಂದು ಘನವಾದ ಉದ್ದೇಶವಿದೆ. ಅದನ್ನು ಪಡೆದುಕೋ; ನೀನು ಪಡೆದು, ಇತರರಿಗೆ ಅದನ್ನು ಸಾಧಿಸಲು ಸಹಾಯ ಮಾಡು. ಇದಕ್ಕಾಗಿಯೇ ನಿನಗೆ ಈ ಜನ್ಮ ದೊರೆತಿರುವುದು. ಈ ರೀತಿಯ ನಿಃಸ್ವಾರ್ಥ ಜೀವನದಿಂದ ಸಂತೋಷವಾಗಿ, ಇರುವಾಗ ಮರಣ ಬಂದರೆ, ಅದನ್ನು ನಗುಮೊಗದಿಂದ ಅಪ್ಪಿಕೋ. ಇದಕ್ಕೇತಕ್ಕೆ ಯೋಚನೆ ಮಾಡಬೇಕು?" ಎಂಬ ಮಹಾತ್ಮರ ಉಪದೇಶ ವಾಕ್ಯಗಳು ನಮ್ಮ ಜೀವನದ ಉತ್ತಮ ಸ್ಥಿತಿಯ ಸಾಧನೆಗೆ ಎಷ್ಟು ಸಹಾಯಕಗಳಾಗಿವೆ! ವಸ್ತುಸ್ಥಿತಿ ಹೀಗಿರುವಲ್ಲಿ, ಸಾವು ಅಂತಹದು, ಇಂತಹದು ಎಂದು ಏಕೆ ವರ್ಣಿಸಬೇಕು? ಯಾರು ನಿರಹಂಕಾರ ವೃತ್ತಿಯಿಂದ ಉತ್ತಮ ರೀತಿಯಲ್ಲಿ ಬಾಳಲಿಕ್ಕೆ ಕಲಿತಿರುವರೋ, ಅವರು ನಗುತ್ತ ಸತ್ತರೆ, ಮುಕ್ತರಾದರೆಂದು ಹೇಳಲಿಕ್ಕೆ ಏನು ಅನುಮಾನ? ಯಾರಿಗೆ ಭಾವದಲ್ಲಿ ವೈರಾಗ್ಯ ಹುಟ್ಟಿದೆಯೋ ಅಂಥವರು ಭೋಗೋಪಭೋಗಗಳ ಮಧ್ಯದಲ್ಲಿ ಸೇರಿದ್ದರೂ, ಶರೀರದ ವ್ಯಾಮೋಹವಿಲ್ಲದವರಾಗಿ, ಇಂತಹ ಉತ್ಕರ್ಷಾವಸ್ಥೆಯನ್ನು ಪಡೆದು ಧನ್ಯರಾಗುವರೆಂಬಲ್ಲಿ ಸಂದೇಹವೇನು? ಚಕ್ರವರ್ತಿಯಾಗಲಿ ಭಿಕ್ಷುಕನಾಗಲಿ ಯಾರನ್ನೂ ನಾವು ಸಾವಿನಿಂದ ಉಳಿಸಿಕೊಳ್ಳುವಂತಿಲ್ಲ. ಎಂತಹ ಗೌಪ್ಯ ಸ್ಥಳದಲ್ಲಿ ಅವರನ್ನು ಬಚ್ಚಿಟ್ಟರೂ ಅವರಿಗೆ ಸಾವು ತಪ್ಪದು. ಇದನ್ನು ಅರಿತು, ಧೀರರೂ ಪವಿತ್ರರೂ ಆಗಿ ಬಾಳುತ್ತ, ನಮಗಾಗಿ ಕಾದಿರುವ ನಿತ್ಯಸುಖದೆಡೆಗೆ ಕರೆದೊಯ್ಯುವ ಸಾವಿನ ಬರವನ್ನು ನಿರೀಕ್ಷಿಸುವಂತಹ

ಈ ಸುಯೋಗವು ಎಲ್ಲರಿಗೂ ಲಭಿಸಿತೆಂದು ಯಾರು ತಾನೇ ಅಪೇಕ್ಷಿಸುವುದಿಲ್ಲ? ಇದನ್ನು ನಮ್ಮ ದೃಢತೆಯು ಕಾಲದಲ್ಲಿಯೇ ಸಂಪಾದಿಸಿಕೊಳ್ಳಬೇಕು.

ನಮ್ಮ ಜೀವನವೇ ಒಂದು ತತ್ವ. ಇದರಲ್ಲಿ ಯಾವುದೂ ಬೇಕಿಲ್ಲದ ಭಾಗವಿಲ್ಲ. ಪ್ರತಿಯೊಂದು ಒಳ್ಳೆಯದಕ್ಕೂ ಬರುತ್ತದೆ; ಕೆಟ್ಟದಕ್ಕೂ ಬರುತ್ತದೆ. ಯಾವುದು ನಮಗೆ ಕೆಟ್ಟದೆಂದು ತೋರುತ್ತದೆಯೋ ಅದರೊಳಗೆಯೇ ನವಚೈತನ್ಯವು ಹಾಸುಹೊಕ್ಕಾಗಿ ಸೇರಿಕೊಂಡಿದೆ. ಕಟ್ಟಿಗೆಯಲ್ಲಿ ಬೆಂಕಿ ಹೇಗೆ ಸುಡದ ಹಾಗೆ ಸೇರಿಕೊಂಡಿದೆಯೋ, ಹಾಲಿನಲ್ಲಿ ತುಪ್ಪವು ವಾಸನೆಯಿಲ್ಲದೆ ಕಾಣದೆ ಹೇಗೆ ಸೇರಿದೆಯೋ, ಬೀಜದೊಳಗೆ ವೃಕ್ಷವು ಹೇಗೆ ಅಂತರ್ಭಾವವಾಗಿದೆಯೋ, ಕಬ್ಬಿನೊಳಗೆ ಬೆಲ್ಲವು ಹೇಗೆ ಸೇರಿಕೊಂಡಿದೆಯೋ, ಹಾಗೆ ನಮ್ಮ ಶರೀರದಲ್ಲ ನಿಗೂಢವಾಗಿ ಇರುವ ಪರಮಾತ್ಮನನ್ನು "ಭಾವಿಸಿ, ತಿಳಿದು ಮಥಿಸಿ, ಪ್ರಯೋಗಾಂತರದಿಂ ಪ್ರಸನ್ನತೆಯಂ ಮಾಡಿಕೊಂಡು" ತದನುಭಾವಿಯಾಗಿ ಇರುವುದೇ ಪರಮ ಕಾರ್ಯವು. ಹೀಗೆ ತನ್ನ ಜೀವನವನ್ನು ಉತ್ತಮಗೊಳಿಸಿಕೊಳ್ಳುವುದೇ ಸಂಸಾರವೆನಿಸುವುದು. ಕರಣಾದಿಗಳನ್ನು ಸನ್ಮಾರ್ಗದಲ್ಲಿ ಉಪಯೋಗಿಸಿದರೆ ಅವುಗಳೇ ನಮ್ಮ ಉತ್ತಮವಾದ ಪ್ರಗತಿಗೆ ಸಾಧನವಾಗುವವು. ಆಗ ಪ್ರಪಂಚವೇ ಸಾರವುಳ್ಳದ್ದಾಗುವುದು. "ಸಮ್ಯಕ್ ಸಾರೋ ವಿದ್ಯತೆ ಯಸ್ಮಿನ್ ಸಹ ಸಂಸಾರ" ಹೀಗೆ ಸುವ್ಯವಸ್ಥಿತವಾದ ಸಂಸಾರದಲ್ಲಿಯೇ ನರಕಯಾತನೆಯನ್ನನುಭವಿಸುವನು. ಅರಿದರೆ ಜ್ಞಾನಿಯಾಗಿ ಮುಕ್ತನಾಗುವನು. ಅರಿಯದಿರ್ದೊಡೆ ಮಲಾವೃತನಾಗಿ ವಿಕಾರಿಯಾಗುವನು. ಚಂಚಲವಾದ ಮನಸ್ಸನ್ನು ಸರಿಯಾದ ಕಡೆ ನಿಯೋಗಿಸಿದರೆ ಮುಕ್ತನಾಗುವನು. ಅದರಿಚ್ಛೆಯಂತೆ ತಾನು ಹೋದರೆ ತಾನೇ ಹಾಳಾಗುವನು. ಅದರ ಮೇಲೆ ಅಧಿಕಾರ ನಡೆಸಲು ಶಕ್ತಿಯನ್ನು ಪಡೆದರೆ ಧನ್ಯನಾಗುವನು. ಅದಕ್ಕೆ ತಾನು ಗುಲಾಮನಾಗುವ ಬದಲು ತನಗೇ ಅದು ದಾಸನಾಗುವುದು.

ಜೀವನವನ್ನು ಉತ್ತಮಗೊಳಿಸುವುದೇ ಸಂಸಾರ.

ಹೀಗೆ ಈ ಕಾಯದಲ್ಲಿಯೇ ಬ್ರಹ್ಮಾನಂದ ಸುಖವನ್ನನುಭವಿಸುವ ಶಕ್ತಿಯನ್ನು ಮನುಷ್ಯನು ಪಡೆಯಬೇಕು. ಇದೇ ನಮ್ಮ ಧ್ಯೇಯ.



ಇದಕ್ಕಾಗಿ ಪ್ರತ್ಯೇಕ ಸಾಧನೆಯು ಅವಶ್ಯಕತೆಯೂ ಇಲ್ಲ. ನಾವು ಹೋಗುವ ದಾರಿಯಲ್ಲಿಯೇ, ನಾವು ಜೀವಿಸುವ ಕ್ರಮದಲ್ಲಿಯೇ, ನಿಜತತ್ವವನ್ನು ತಿಳಿದು ಒಕ್ಕಲಿಗನು ಹೊಲವನ್ನು ಹಸನ ಮಾಡುವಂತೆ ನಮ್ಮ ಕಾಯವನ್ನು ಶುದ್ಧ ಮಾಡಿಕೊಂಡು ಪವಿತ್ರ ಭಾವನೆಯಿಂದ ಜೀವನವನ್ನು ಸಾಗಿಸಬೇಕು. ಇದೇ ಯೋಗವೆನಿಸುತ್ತದೆ. "ಸಮತ್ವಂ ಯೋಗ ಉಚ್ಯತೆ" ಭೂಮಿಯಲ್ಲಿ ಬೀಜ ಬಿತ್ತಿವಾಗ, ಕಸವು ಸ್ವಾಭಾವಿಕವಾಗಿ ಬರುತ್ತದೆ. ಕಸವಿದೆಯೆಂದು ಫಲವನ್ನು ಬೀಸಾಡುತ್ತೇವೆಯೆ? ಎಂದಿಗೂ ಇಲ್ಲ. ಹಾಗೆ ಆತ್ಮನ ವಿಶಾಲತೆಯನ್ನು ಉತ್ಕರ್ಷತೆಯನ್ನು ಪಡೆಯುತ್ತ ಹೋದ ಹಾಗೆಲ್ಲ ದೋಷಗಳೇ ಗುಣಗಳಾಗಿ ಮಾರ್ಪಡುತ್ತ ಕೆಟ್ಟದ್ದೇ ಒಳ್ಳೆಯದಾಗುತ್ತದೆ. ನೀಚವಾದ ವಸ್ತುವೇ ಉಚ್ಚವಾಗುತ್ತದೆ. ಇಂದ್ರಿಯಗಳೇ ಸತ್ಪ್ರಜೆಗಳಾಗುತ್ತವೆ. ಇಂತಹ ಆತ್ಮ ರಾಜ್ಯವನ್ನು ಪಡೆದುಕೊಂಡವನೇ ಧನ್ಯನು. ಶಾಂತಿ ಸಮೃದ್ಧಿಗಳಿಂದ ಕೂಡಿದ ಇಂತಹ ರಾಜ್ಯದಲ್ಲಿ ಬಾಳುವುದೆಂದರೆ ಎಷ್ಟು ಆನಂದ! ಇತರರನ್ನು ತನ್ನಂತೆ ಪ್ರೀತಿಸುವ ದೊಡ್ಡತನ ಎಷ್ಟು ಹೆಚ್ಚುವುದು! ಮಾನವನ ದೊಡ್ಡಸ್ತಿಕೆ ಇರುವುದು ಇಂತಹ ಶುದ್ಧವಾದ ಅಂತರಂಗ ಜೀವನದಲ್ಲಿ. ಹೊರಗಿನ ಆಕಾರದಲ್ಲಲ್ಲ. ಅವನ ಮಹತ್ವವು ಸತ್ವದಲ್ಲಿ ಇರುವುದೇ ಹೊರತು ಬಾಹ್ಯೋಪಕರಣಗಳಲ್ಲಿಲ್ಲ. ಉಡಿಗೆ-ತೊಡಿಗೆಗಳಲ್ಲಿಲ್ಲ. ಹೊರಗಿನ ಸೌಂದರ್ಯದಲ್ಲಿಲ್ಲ. ಇಂತಹ ಒಳ ಸೌಂದರ್ಯವನ್ನು ನೋಡುವ ಮತ್ತು ಪಡೆಯುವ ಶಕ್ತಿಯನ್ನು ಎಲ್ಲರೂ ಸಂಪಾದಿಸಿಕೊಳ್ಳಬೇಕು ಒಳಸೌಂದರ್ಯವನ್ನು ನೋಡಲು ದುರ್ಬಲರಿಂದಾಗುವದಿಲ್ಲ. ಹೊರಗಣ್ಣಿಗೆ ಕಾಣದೆ ಇರುವ ಒಂದು ಮಹಾನುಭಾವತೆ ದೊಡ್ಡವರಲ್ಲಿ ಇದೆ. ಅದು ಎಲ್ಲಿಂದಲೋ ಬಂದು ಅವರಲ್ಲಿ ಸೇರಿಕೊಳ್ಳುವದಿಲ್ಲ. ಅವರೂ ನಮ್ಮ ಹಾಗೆಯೇ ದುಡಿದು ಅದನ್ನು ಸಂಪಾದಿಸಿಕೊಳ್ಳುತ್ತಾರೆ. ಅದನ್ನು ಎಲ್ಲರೂ ಪಡೆದುಕೊಂಡರೆ, ಒಬ್ಬರಿಗೊಬ್ಬರಿಗೆ ಪ್ರೀತಿ-ಅನುರಾಗ ಸದ್ಭಾವನೆಗಳು ಹುಟ್ಟುವವು. ದುಷ್ಟವಾದ ಆಸುರೀ ಭಾವನೆಗಳು ಮಾಯವಾಗುವವು. ಮಾನವನ ಅಂತಸ್ತು ದೇವತ್ವಕ್ಕೆ ಏರುವುದು. ಆಗ ಭೂಮಿಯೇ ಸ್ವರ್ಗವಾಗುವುದರಲ್ಲಿ ಸಂದೇಹವೇನು? ಪ್ರಜೆ

ಕಾಯದಲ್ಲಿ ನಿತ್ಯ ಸುಖವನ್ನನುಭವಿಸುವುದೇ ಜೀವನದ ಗುರಿ, ಇದೇ ಯೋಗ.

ಗಳೆಲ್ಲರೂ ಶುದ್ಧ ಜೀವಿಗಳಾದರೆ, ದೇಶದಲ್ಲಿ ಶಾಂತಿ ಸಮಾಧಾನಗಳು ನೆಲಿಸುವವು. ಮಣ್ಣಿನಲ್ಲಿ ಒರಟು ಕೆಲಸ ಮಾಡುವವನ ಮೊದಲ್ಗೊಂಡು ಬುದ್ಧಿಯ ಚುರುಕಿನ ಕೆಲಸ ಮಾಡುವವನ ವರೆಗೂ ಈ ಪ್ರಪಂಚದಲ್ಲಿ ಸ್ಥಳವುಂಟು. ಆದರೆ ಒಬ್ಬನು ಅರ್ಹನೆಂದೂ ಮತ್ತೊಬ್ಬನು ಅನರ್ಹನೆಂದೂ ಭಾವಿಸಬಾರದು. ಎಲ್ಲರಲ್ಲಿಯೂ ಆತ್ಮ ವಿಕಾಸವನ್ನು ಪಡೆಯುವ ಶಕ್ತಿಯಿದೆ. ಅದನ್ನು ಪಡೆಯಲು ಒಬ್ಬನಿಗೆ ಅನುಕೂಲಗಳು ಹೆಚ್ಚು ಇರಬಹುದು. ಇನ್ನೊಬ್ಬನಿಗೆ ಕಡಿಮೆ ಇರಬಹುದು. ಅವನಿಗೂ ಇವನಿಗೂ ವ್ಯತ್ಯಾಸ ಇಷ್ಟೇ; ಈ ಕಾರಣದಿಂದಲೇ ಯಾರನ್ನೂ ಅನರ್ಹರೆಂದು ಜರಿಯಲಾಗುವದಿಲ್ಲ. ಒಳ್ಳೆಯ ಸನ್ನಿವೇಶವನ್ನು ಕಲ್ಪಿಸಿದರೆ, ಎಲ್ಲರೂ ಯೋಗ್ಯತೆಯನ್ನು ಪಡೆಯುವರು. ಎಲ್ಲರೂ ಹುಟ್ಟಿ ಬಂದಿರುವುದು ತಾಯಿಯ ಗರ್ಭದಿಂದಲೇ. ಎಲ್ಲರೂ ಒಂದು ಘನವಾದ ಉದ್ದೇಶನನ್ನು ಸಾಧಿಸಲೋಸುಗವೇ ಇಲ್ಲಿಗೆ ಬಂದಿರುವುದು. ಹೀಗಿರುವಲ್ಲಿ ಒಬ್ಬರಿಗೊಬ್ಬರಿಗೆ ದ್ವೇಷಾಸೂಯೆಗಳು, ಕ್ರೋಧಾವೇಶಗಳೇಕೆ? ತಾನು ಮಾಡಬೇಕಾದ ಕೆಲಸವನ್ನು ತಾನು ಮಾಡದೆ, ಅದನ್ನು ಮರೆತು ತನ್ನ ತಪ್ಪನ್ನು ಇತರರ ಮೇಲೆ ಹೊರಿಸುವುದು ಯಾವ ನ್ಯಾಯ? ಎಳೆಯಲಾರದ ಎತ್ತು ಮೆಳೆಯ ಮೇಲೆ ಬೀಳುವ ಹಾಗೆ, ತನ್ನ ಪ್ರಗತಿ ಸಾಧನೆಯನ್ನು ಮರೆತು, ಕುಹಕಗಳಲ್ಲಿ ಕಾಲ ಕಳೆದರೆ, ಅವನಿಗೆ ಸದ್ಗತಿಯುಂಟೇ? ಎಂದಿಗೂ ಇಲ್ಲ. ಎಲ್ಲರೂ ವಿಷಯಗಳಲ್ಲಿ ಬಾಳುತ್ತಿರುವಾಗ, ಇವರಲ್ಲಿ ಉಚ್ಚ-ನೀಚ ಭಾವಗಳೆಲ್ಲಿ ಬಂದೀತು? ಹೆಣ್ಣು-ಹೊನ್ನುಗಳು ಮಾಯೆಯೆಂದೂ ಅವುಗಳೇ ನಮ್ಮ ಅಪನತಿಗೆ ಮೂಲವೆಂದೂ ಹೇಳುವವರು. ಯಾರಾದರೂ ಅವುಗಳನ್ನು ಬಿಟ್ಟಿರುವರೆ? ಯಾರೂ ಇಲ್ಲ. ಹಾಗೆ ಹೇಳುತ್ತ, ಅವುಗಳನ್ನು ಬಯಸುವುದು ನಮ್ಮ ತಪ್ಪಲ್ಲವೆ? "ಅವುಗಳ ಮೇಲಣ ನಮ್ಮ ಆಶೆ ಮಾಯೆಯೆಂದು ತಿಳಿಯಬೇಡವೆ? ಅವುಗಳನ್ನೇ ಸನ್ಮಾರ್ಗದಲ್ಲಿ ಉಪಯೋಗಿಸಿದರೆ ಅವಕ್ಕಿಂತ ಹಿತಚಿಂತಕರು ನಮಗೆ ಮತ್ತೆ ಯಾರಿರುವರು? ಹೆಣ್ಣು ಕೆಟ್ಟದ್ದು, ಹೊನ್ನು ಕೆಟ್ಟದ್ದು ಎಂಬ ಅಪವಾದವನ್ನು ಅವುಗಳ ಮೇಲೆ ನಾವು ಹೊರಿಸಿದರೆ ನಾವು ಸುಖವಾಗಿ ಬದುಕಬಹುದೆ? ಹೆಣ್ಣಿನಲ್ಲಿ ಹುಟ್ಟಿ ಬೆಳೆದು ಹೆಣ್ಣು ಕೆಟ್ಟದ್ದು ಹೇಗೆ? ಹೊನ್ನನ್ನಾದರೂ ಬೇಡವೆನ್ನುವವರು ಯಾರು? ಇವುಗಳಿಗೆಲ್ಲ ನಾವು ಸೋತು



ಹೋಗಿ ಅವನ್ನೇ ಕೆಟ್ಟವೆಂದು ಹೇಳುವ ಧಾರ್ಷ್ಟ್ಯವು ಎಷ್ಟು ನಿಂದ್ಯವೋ ಯೋಚಿಸಿ ನೋಡಿರಿ. ಇನೆಲ್ಲವನ್ನೂ ಜಾಣತನದಿಂದ ವ್ಯವಸ್ಥಿತ ಮಾರ್ಗದಲ್ಲಿ ಉಪಯೋಗಿಸುತ್ತ, ತನ್ನನ್ನು ಉದ್ಧಾರ ಮಾಡಿಕೊಂಡು, ಸಾಮಾನ್ಯ ಜೀವಿಗಳ ಉದ್ಧಾರಕ್ಕಾಗಿ ತ್ಯಾಗ ಮಾಡುವುದನ್ನು ಕಲಿತರೆ ಅವರೇ ಮಹಾಪುರುಷರು. ಇದೇ ಜೀವನದ ಗುರಿಯು.

– ಶ್ರೀ ಮಹದೇವ ಸ್ವಾಮಿಗಳು ಸರ್ಪಭೂಷಣಮಠ,
ಬೆಂಗಳೂರು.

---

# ಶಿವಯೋಗ ಅಥವಾ ಲಿಂಗಾನುಸಂಧಾನ.

## ೧

## ಶಿವಯೋಗ.

*ಪರವಸ್ತುವಿನ ನೆಲೆಯು ಲಿಂಗಾನುಸಂಧಾನಿಗೆ ಸುಲಭವು.*

ವೀರಶೈವ ವಚನಕಾರರು ಅನೇಕ ಕಡೆಗೆ ತಮ್ಮ ಉಕ್ತಿಗಳಲ್ಲಿ ಯೋಗಾಭ್ಯಾಸವನ್ನು ಅಲ್ಲಗಳೆದಿದ್ದೇನೋ ನಿಜ. ಆದರೆ ವೈದಿಕ ಧರ್ಮದ ಮೇಲಿನ ಅಸೂಯೆಯಿಂದೇನೂ ಅವರು ಹಾಗೆ ಮಾಡಿರುವದಿಲ್ಲ. ಯೋಗಮಾರ್ಗಕ್ಕಿಂತಲೂ ಅಧಿಕವಾದ ಲಿಂಗಾನುಸಂಧಾನದ ಮಾರ್ಗವನ್ನು ಪ್ರಸ್ಥಾಪಿಸುವದಕ್ಕಾಗಿಯೂ ಪಂಡಿತ-ಪಾಮರರೆಲ್ಲರಿಗೆ ಅನ್ವಯಿಸುವಂಥ ಷಟ್‌ಸ್ಥಲ ಮಾರ್ಗವನ್ನು ನೆಲೆಗೊಳಿಸುವದಕ್ಕಾಗಿಯೂ ಕ್ಲೇಶಕರವಾದ ಯೋಗಮಾರ್ಗವನ್ನು ಅವರು ಅಲ್ಲಗಳೆದಿರುವರು. ಸುಲಭ ಮಾರ್ಗವು ಕೈಸಾರಿರುವಾಗ ಯೋಗದ ದುಸ್ತರ ಮಾರ್ಗವನ್ನು ಅನುಸರಿಸುವದು ಜಾಣತನದ ಲಕ್ಷಣವಲ್ಲವೆಂದು ಅವರ ಅಭಿಪ್ರಾಯವು. ಅವರು ಹೀಗೆ ಅಭಿಪ್ರಾಯಪಟ್ಟಿರುವದು ಯೋಗಾಭ್ಯಾಸಕ್ಕೆ ಸ್ವಲ್ಪೂ ಯೋಗ್ಯತೆ ಇಲ್ಲವೆಂತಲ್ಲ. ಯೋಗದಿಂದಲೇನೂ ಸಾಧಿಸುವದಿಲ್ಲವೆಂತಲೂ ಅಲ್ಲ. ಆದರೆ ವೀರಶೈವರ ಷಟ್‌ಸ್ಥಲಾತ್ಮಕವಾದ ಲಿಂಗಾನುಭವ ಮಾರ್ಗವು ಯೋಗ ಮಾರ್ಗಕ್ಕಿಂತಲೂ ಹೆಚ್ಚು

ಯೋಗ್ಯತೆಯುಳ್ಳದ್ದೂ ಸುಲಭವಾದದ್ದೂ ಇದ್ದು ಅದನ್ನು ಬಿಟ್ಟು ಬಿರುಸಾದ ಯೋಗ ಮಾರ್ಗವನ್ನೇಕೆ ಅವಲಂಬಿಸಬೇಕೆಂಬುದೇ ಅವರ ಉದ್ದೇಶವಾಗಿದೆ. ಇದಲ್ಲದೆ ಲಿಂಗಾನುಭವವಿಲ್ಲದ ಯೋಗವು ಬಹು ವಿರಸವಾದುದೆಂದು ಅವರು ಪ್ರಸ್ತಾಪಿಸಿರುವರು. ಯೋಗದಿಂದ ಮನುಷ್ಯನು ಚಿರಾಯುವುಳ್ಳವನೂ ಬಲಶಾಲಿಯೂ ಸಮಾಧಿಸ್ತನೂ ಆಗಬಹುದು. ಅವನು ಎಷ್ಟೋ ಸಿದ್ಧಿಗಳನ್ನು ಪಡೆಯುಬಹುದು. ಆದರೆ ಪರವಸ್ತುವಿನ ನೆಲೆಯು ಇಂಥ ಕೇವಲ ಯೋಗ ಮಾರ್ಗದಿಂದ ಲಭಿಸುವದಿಲ್ಲೆಂದು ನಮ್ಮ ಶಿವಶರಣರು ವಿಶದಪಡಿಸಿದ್ದಾರೆ.

ವಚನಕಾರರು ಯೋಗ ಮಾರ್ಗವನ್ನು ನಿರಾಕರಿಸಿ ಇಂಥ ಲಿಂಗಾನುಸಂಧಾನದ ಮಾರ್ಗವನ್ನು ಎತ್ತಿ ಹಿಡಿದ ಪ್ರಸ್ತಾಪವು ಶೂನ್ಯ ಸಂಪಾದನೆಯಲ್ಲಿ ಬಂದಿದೆ. ನಮ್ಮಲ್ಲಿ ಸಿದ್ಧರಾಮೇಶ್ವರರೆಂಬ ಶಿವಯೋಗಿಗಳು ಯೋಗಾಭ್ಯಾಸದಲ್ಲಿ ಬಹು ಬಲ್ಲಿದರಾಗಿದ್ದರು. ಶ್ರೀ ಅಕ್ಕಮಹಾದೇವಿಯೂ ಸಹ ಯೋಗ ಮಾರ್ಗದಲ್ಲಿ ಮುಂದುವರಿದಿದ್ದಳು. ಮುಂದೆ ಅವರೀರ್ವರು ಬಸವೇಶ್ವರ ಸನ್ನಿಧಿಯಲ್ಲಿ ತ್ರಿಲಿಂಗಗಳ ರೀತಿಯನ್ನು ತಿಳಿದುಕೊಂಡು ತಮ್ಮ ಯೋಗ ಸಾಧನೆಗಳನ್ನು ಲಿಂಗಾನುಭವದ ತಳಹದಿಯ ಮೇಲೆ ಕಟ್ಟಲಾರಂಭಿಸಿದರು. ಶೂನ್ಯ ಸಂಪಾದನೆಯ ೩ ನೆಯ ಸಂಪಾದನೆಯಲ್ಲಿ ಶ್ರೀ ಪ್ರಭುದೇವರು ಸಿದ್ಧರಾಮ ಶಿವಯೋಗಿಗಳ ಯೋಗ ಮಾರ್ಗವನ್ನು ಖಂಡಿಸಿ ಲಿಂಗಾಂಗಿ ಮಾರ್ಗವನ್ನುಪದೇಶಿಸಿದ್ದಾರೆ. ಆದರೆ ೧೦ ನೆಯ ಸಂಪಾದನೆಯಲ್ಲಿ ಬಸವಣ್ಣ ಚನ್ನಬಸವಣ್ಣನವರು ಯೋಗ ಜ್ಞಾನಗಳಿಗಿಂತಲೂ ಅಧಿಕವಾದ ಲಿಂಗಾನುಸಂಧಾನದ ಮಾರ್ಗವನ್ನು ಅರ್ಥಾತ್ ಇಷ್ಟಲಿಂಗದ ಮಹತ್ವವನ್ನು ಸಿದ್ಧರಾಮೇಶ್ವರರಿಗೆ ಅರುಹಿ ಅವರಿಗೆ ಲಿಂಗಧಾರಣೆಯನ್ನು ಮಾಡಿದ್ದಾರೆ. ವಾಚಕರು ಆ ಸಂಗತಿಗಳನ್ನು ಓದಿ ತಿಳಿದುಕೊಳ್ಳಬಹುದು. ಉದಾಹರಣೆಗಾಗಿ ಇಲ್ಲಿ ಕೆಲವು ವಚನಗಳನ್ನು ಕೊಡಲಾಗಿದೆ.

**ಯೋಗ ಸಾಧನೆಗೆ ಲಿಂಗಾನುಸಂಧಾನವೇ ತಳಹದಿಯು.**

“ ನವನಾಳದ ಸುಳುಹ ತಿಳಿದೆನೆಂಬುದು ಯೋಗವಲ್ಲ. ಐವತ್ತೆರಡಕ್ಷರದ ಶಾಸನವ ತಿಳಿದು ನೋಡಿ ಹೃದಯಕಮಲದ ಕರ್ಣಿಕೆಯಲ್ಲಿ



ಸಿಕ್ಕಿದೆನೆಂಬುದು ಯೋಗವಲ್ಲ. ಬಹಿರಂಗವೆಂಬರೆ ಕ್ರಿಯಾರಹಿತ, ಅಂತರಂಗವೆಂಬರೆ ವಾಙ್ಮನಾತೀತ. ಗುಹೇಶ್ವರನೆಂಬ ಲಿಂಗವು ಷಡುಚಕ್ರದ ಮೇಲಿಲ್ಲ ಕಾಣಾ ಸಿದ್ಧರಾಮಯ್ಯ. ” ( ಶೂನ್ಯ ಸಂಪಾದನೆಯ ಪುಟ ೬೩ )

“ ಸ್ವಸ್ಥ ಪದ್ಮಾಸನದಲ್ಲಿ ಕುಳ್ಳಿರ್ದು ನೆಟ್ಟೆಲುವ ಮುರಿದು ನಿಷ್ಠೆಯಿಂದ ಹಿಂದಣ ಬಟ್ಟೆಯ ತೆಗೆದು ಅಮೃತವನುಂಡಿಹೆನೆಂಬವರ ಕೇಡಿಂಗೆ ಕಡೆಯಿಲ್ಲ. ಅತ್ಯತಿಷ್ಠದ್ದಶಾಂಗುಲವೆಂಬ ಶ್ರುತಿಯ ನೋಡಲು ಮುಟ್ಟ ನೆಲೆಗೊಳಿಸುವ ಠಾವುಂಟೇ ? ಸ್ಥಾನಮಾನವೆಂಬ ಮಾತಿಂಗೆ ದೂರವಾದ ಘನವ ಬ್ರಹ್ಮರಂಧ್ರದಲ್ಲಿ ಕಂಡೆನೆಂದರೆ ಕಾಣಬಹುದೇ ? ನಮ್ಮ ಗುಹೇಶ್ವರ ಲಿಂಗವು ಕಲ್ಪಿತಕ್ಕೆ ದೂರ ಕೇಳಾ ಸಿದ್ಧರಾಮಯ್ಯ ” ( ಶೂನ್ಯ ಸಂಪಾದನೆಯ ಪುಟ ೬೩ )

“ ಗುರು ತೋರಿದ ಲಿಂಗವು ಮನ ಸಾಹಿತ್ಯವಾಗಿರಲು. ಪವನ ಭೇದದಿಂದ ಅರಿದೆನೆಂದರೆ ಅದೇ ದ್ರೋಹ. ಈಡಾ, ಪಿಂಗಳ, ಸುಷುಮ್ನ ನಾಳದಿಂದ ಅರಿದಿಹೆನೆಂದರೆ ಕೂಡಲ ಸಂಗಮದೇವರು ಮೂಗ ಕೊಯ್ಯದೆ ಬಿಡುವನೇ ? ” ( ಶೂನ್ಯ ಸಂಪಾದನೆ ಪುಟ ೧೪೯ )

“ ಕಾಯಾನುಭಾವಿಗಳು ಕಾಯದಲ್ಲಿ ಮುಕ್ತರು. ಜೀವಾನುಭಾವಿಗಳು ಜೀವದಲ್ಲಿ ಮುಕ್ತರು. ಪ್ರಾಣಾನುಭಾವಿಗಳು ಪ್ರಾಣದಲ್ಲಿ ಮುಕ್ತರು ಪವನಾನುಭಾವಿಗಳು ಪವನದಲ್ಲಿ ಮುಕ್ತರು. ಲಿಂಗಾನುಭಾವಿಗಳಿಗೆಂತು ಸರಿಯೆಂಬೆ ? ನಿರವಯ ಸ್ವಯಂ ಜ್ಯೋತಿಯಾಗಿಪ್ಪರು ಲಿಂಗದಲ್ಲಿ ಕೂಡಲ ಚೆನ್ನಸಂಗಮದೇವಾ ನಿಮ್ಮ ಶರಣರು. ” ( ಶೂನ್ಯ ಸಂಪಾದನೆ ಪುಟ ೧೪೯ )

ಈ ವಚನಗಳಿಂದ ಯೋಗಕ್ಕಿಂತಲೂ ಲಿಂಗಾನುಸಂಧಾನವು ಅಥವಾ ಇಷ್ಟಲಿಂಗದ ಅರಿಕೆಯು ಹೆಚ್ಚಾಗಿರುತ್ತದೆಂದೂ ಪರವಸ್ತುವು ಲಿಂಗಾಂಗ ಮಾರ್ಗಕ್ಕೆ ಸಾಧ್ಯವಲ್ಲದೆ ಯೋಗ ಮಾರ್ಗಕ್ಕೆ ಸಾಧ್ಯವಲ್ಲವೆಂದೂ ಹೇಳಿಕೊಟ್ಟಂತಾಯಿತು. ಭಗವದ್ಗೀತೆಯಲ್ಲಾದರೂ ಭಕ್ತಿಮಾರ್ಗವು ಸರ್ವೋತ್ಕೃಷ್ಟವಾದುದೆಂದೇ ಪರಿಗಣಿಸಲಟ್ಟಿರುವದಲ್ಲವೇ ? ಆಸನ ಪ್ರಾಣಾಯಾಮಾದಿಗಳಿಂದ ದೇಹ ಬಲ ಆಯುರಾರೋಗ್ಯಗಳು ವರ್ಧಿಸುವದೇನೋ ನಿಜ. ಆದರೆ ಪರವಸ್ತುವಿನ ನೆಲೆಯು ಭಕ್ತಿ

**ಪರವಸ್ತುವು ಲಿಂಗಾಂಗ ಮಾರ್ಗಕ್ಕೆ ಸಾಧ್ಯವು**

ಮಾರ್ಗಕ್ಕಲ್ಲದೆ ಯೋಗ ಮಾರ್ಗಕ್ಕೆಂದಿಗೂ ಸಾಧ್ಯವಲ್ಲವೆಂಬುದೇ ಭಗವದ್ಗೀತೆಯ ತತ್ವವಾಗಿದೆ. ನಮ್ಮ ಶಿವಶರಣರು ಹಾಗೆಯೇ ಭಾವಿಸಿ ತಮ್ಮ ಶಿವಾನುಭವ ಸಿದ್ಧಾಂತವನ್ನು ನೆಲೆಗೊಳಿಸಿದ್ದಾರೆ.

ಶರೀರವು ಯಂತ್ರವಿದ್ದು ಕೆಲವು ನಿಯಮಗಳಿಗೆ ಬದ್ಧವಾಗಿರುವದರಿಂದ ಯೋಗ ಶಾಸ್ತ್ರವು ಇಂದ್ರಿಯ ವ್ಯಾಪಾರಗಳನ್ನು ನಿಯಂತ್ರಿಸುವದರಿಂದ ಅದು ಹಿತಕಾರಿ ಎಂದು ಬಹು ಜನರ ತಿಳಿವಳಿಕೆ ಇದೆ.

ಯೋಗಮಾರ್ಗದಿಂದ ನಿಜಾನಂದವು ದೊರಕದು.

ಶರೀರವು ಯಂತ್ರವಾಗಿದ್ದರೂ ಶರೀರಿಯು ಮಾತ್ರ ಯಂತ್ರವಲ್ಲ. ಆತನಲ್ಲಿ ಜೀವಕಳೆಯಿದೆ, ಮನಸ್ಸಿದೆ, ಆತ್ಮವಿದೆ. ಯಂತ್ರದಂತೆ ಶರೀರದ ಇಂದ್ರಿಯಗಳನ್ನು ದುಡಿಸುವದಷ್ಟೇ ಅವನ ಅಂತಿಮ ಧ್ಯೇಯವಲ್ಲ. ಯಂತ್ರದ ದುಡಿತದಿಂದುಂಟಾಗುವ ಯಾಂತ್ರಿಕಾನಂದದಲ್ಲಿ ಸೊಬಗು ಸೌಂದರ್ಯವಿಲ್ಲ. ಆ ಆನಂದವು ರಸಭರಿತವಾದುದಲ್ಲ. ಆಸನ ಪ್ರಾಣಾಯಾಮಗಳಿಂದ ಸಮಾಧಿಸ್ಥಿತಿಗೇರಿ ಆನಂದ ಪಡೆದರೆ ಅದು ಬರೇ ಕಷ್ಟಕರವಾದ ಆನಂದವು. ಸುಖಕರವಾದ ಆನಂದವಲ್ಲ. ಯಂತ್ರಕ್ಕಿಂತಲೂ ಎಷ್ಟೋ ಪಟ್ಟು ಮಿಗಿಲಾದ ಜೀವನ ಸೌಂದರ್ಯ, ಭಕ್ತಿ, ಅಧ್ಯಾತ್ಮಜ್ಞಾನ ಮುಂತಾದವುಗಳಲ್ಲಿ ಆನಂದವು ಪರಿಪೂರ್ಣವಾಗಿರುವದು; ರಸಭರಿತವಾಗಿರುವದು.

ವ್ಯಾಯಾಮ ಮಾಡಿದ ಮನುಷ್ಯನ ಅವಯವಗಳು ಕೋಣನಂತೆ ಕೊಬ್ಬಲು, ಆತನು ತನ್ನ ತುಂಬಿದ ಮೈ-ಕೈಗಳನ್ನು ನೋಡಿ ಆನಂದಿಸಬಹುದು. ಆದರೆ ಈ ಆನಂದವು ತಾಮಸೀ ಆನಂದವಲ್ಲದೆ ಸಾತ್ವಿಕಾನಂದವಲ್ಲ. ಅದೇ ಮೇರೆಗೆ ಹಠಯೋಗ ಸಾಧನೆಯಿಂದ ಕಷ್ಟತರವಾದ ಸುಖವು ಲಭಿಸಿದರೂ ಅದು ಕಷ್ಟವೇ ಹೊರತು ನಿಜ ಸುಖವಲ್ಲ. ಇಂದ್ರಿಯಗಳನ್ನು ಬಲಾತ್ಕಾರದಿಂದ ನಿಗ್ರಹಿಸಿ ಪ್ರಾಣಾಯಾಮವನ್ನು ಅಭ್ಯಾಸಿಸಿ ಆಯುಷ್ಯವನ್ನು ಬೆಳೆಯಿಸಿಕೊಳ್ಳಬಹುದು, ರೋಗಗಳನ್ನು ಸಹ ಕಳೆದುಕೊಳ್ಳಬಹುದು. ಆದರೆ ಮನುಷ್ಯನ ಜೀವನದ ಗುರಿಯು ಇಷ್ಟೇ ಅಲ್ಲ. ಚಿದಾನಂದವನ್ನು ಹೊಂದುವದೇ ಅವನ ಅಂತಿಮ ಧ್ಯೇಯವು.



ಕಟುತರವಾದ ಔಷಧದಿಂದ ಒಬ್ಬನ ರೋಗವು ಗುಣವಾಗುತ್ತದೆಂದು ತಿಳಿಯಿರಿ. ಅದೇ ರೋಗವು ಅಮೃತದಂಥ ಮಧುರವಾದ ಬೇರೊಂದು ಔಷಧದಿಂದ ಗುಣವಾಗುತ್ತಿದ್ದ ಪಕ್ಷದಲ್ಲಿ ಜಾಣರಾದವರು ಕಟುತರವಾದ ಔಷಧವನ್ನು ಬಿಟ್ಟು ಮಧುರವಾದ ಔಷಧವನ್ನಾಶಿಸುವದು ಸ್ವಾಭಾವಿಕವಾಗಿದೆ. ಅದರಂತೆ ಕಹಿಯಾದ ಔಷಧವನ್ನು ಅಲ್ಲಗಳೆಯುವದೂ ಸಹಜವು. ಅದೇ ಮೇರೆಗೆ ಯೋಗಾಭ್ಯಾಸದಿಂದ ಕೊನೆಗೆ ಆನಂದ ದೊರೆಯುತ್ತಿದ್ದರೆ ಅದು ಕಹಿ ಔಷಧದಿಂದ ದೊರೆತ ಹಾಗೆ. ಲಿಂಗಾನುಸಂಧಾನದಿಂದ ಆನಂದವು ಲಭಿಸುತ್ತಿದ್ದರೆ ಅದು ಸಿಹಿ ಔಷಧದಿಂದುಂಟಾದ ಸುಖದ ಹಾಗೆ. ವೀರಶೈವರು ಇಂಥ ಮಾರ್ಗದವರಾದುದರಿಂದ ಆರಂಭದಲ್ಲಿಯೂ ಪರ್ಯವಸಾನದಲ್ಲಿಯೂ ಸರಸವಾಗಿರುವ ಲಿಂಗಾನುಭವಕ್ಕೇನೇ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು ಆರಂಭದಲ್ಲಿ ಕಷ್ಟಕರವಾಗಿ ಅಂತ್ಯದಲ್ಲಿ ಸುಖಕರವಾಗಿರುವ ಯೋಗಮಾರ್ಗಕ್ಕೆ ಅಷ್ಟೇನೂ ಮಹತ್ವವನ್ನು ಕೊಡದಿದ್ದುದು ಆಶ್ಚರ್ಯವಲ್ಲ. ಇದರಿಂದ ವೈದಿಕ ಮತದ ಬಗ್ಗೆ ವೀರಶೈವ ವಚನಕಾರರು ತಪ್ಪು ತಿಳುವಳಿಕೆಯುಳ್ಳವರಾಗಿದ್ದರೆಂದು ಸಿದ್ಧವಾಗುವದಿಲ್ಲ. ಅವರು ತಮ್ಮ ಸದಸದ್ವಿವೇಕಕ್ಕೆ ಸತ್ಯವೆನಿಸಿದ ತತ್ವಗಳನ್ನು ಅನುಭವಿಸಿ ನುಡಿದಿದ್ದಾರೆ. ಅವರ ಮೇಲೆ ಹೀಗೆ ಆರೋಪ ಮಾಡುವದು ಅನುಚಿತವೆಂದೇ ನಮ್ಮ ಅಭಿಪ್ರಾಯವು.

ಯೋಗಕ್ಕಿಂತಲೂ ಲಿಂಗಾನುಭವವು(ಲಿಂಗಾನುಸಂಧಾನವು)ಸುಲಭವಾದ ಮಾರ್ಗವಾದುದರಿಂದ ಅವರು ಅದರ ಕಡೆಗೆ ಪಂಡಿತ-ಪಾಮರರ ದೃಷ್ಟಿಯನ್ನು ತಿರುಗಿಸಿದರು. ಯೋಗ ಜ್ಞಾನ ಮಾರ್ಗಗಳಿಗಿಂತಲೂ ಇಂಥ ಮಾರ್ಗವೇ ಅಧಿಕವಾಗಿರುವದೆಂಬ ಬಗ್ಗೆ ಶೂನ್ಯ ಸಂಪಾದನೆಯಲ್ಲಿ "ಶ್ರೀ ಸಿದ್ಧರಾಮಯ್ಯನ ಗುರು ಕರುಣೆ" ಎಂಬ ಭಾಗದಲ್ಲಿ ಬಹು ಸಯುಕ್ತಿಕವಾಗಿ ವಿವೇಚಿಸಿದ್ದಾರೆ. ವಾಚಕರು ಅದನ್ನು ನೋಡಬಹುದು.

ಲಿಂಗಾನುಸಂಧಾನವು ಸುಲಭ ಮಾರ್ಗ.

ಯೋಗ ಮಾರ್ಗವು ಅಲ್ಪ ಸಂಖ್ಯಾಕ ಜನರಿಗೆ ಬಹು ಪ್ರಯಾಸದಿಂದ ಸಾಧ್ಯವಾಗುವಂತಹದು. ಆದರೆ ವೀರಶೈವರ

ಲಿಂಗಾನುಸಂಧಾನವು ಬಹುಜನರಿಗೆ ಸಾಧ್ಯವಾದಂತಹದು. ಯೋಗವೃಕ್ಷದ ಫಲಗಳಿಗಿಂತಲೂ ಅದರ ಫಲಗಳು ಹೆಚ್ಚು ಮಧುರತರವಾಗಿವೆ.

ವೀರಶೈವರು ಲಿಂಗಾನುಭವದ ತಳಹದಿಯ ಮೇಲೆ ತಮ್ಮ ಶಿವಯೋಗ ಸಾಮ್ರಾಜ್ಯವನ್ನು ಸ್ಥಾಪಿಸಿರುವರು. ಲಿಂಗ ಭಕ್ತಿಯ ಮಥನದಿಂದಲೇ ಜ್ಞಾನವೆಂಬ ನವನೀತವನ್ನು ಅವರು ತೆಗೆದಿರುವರು.

ಶಿವಯೋಗಕ್ಕೆ ಲಿಂಗಾನುಭವವೇ ತಳಹದಿಯು.

ಇಷ್ಟಲಿಂಗವೆಂಬುವದೇ ಇಂಥ ಭಕ್ತಿಯ ಕುರುಹು. ಪ್ರಾಣಲಿಂಗವೇ ಯೋಗದ ಚಿಹ್ನ. ಭಾವಲಿಂಗವೇ ಜ್ಞಾನದ ತಿರುಳು. ಭಕ್ತಿಯಿಲ್ಲದ ಯೋಗ ಯಂತ್ರದ ದುಡಿತದಂತೆ ನೀರಸವಾದುದು. ಅದರಂತೆ ಭಕ್ತಿಯಿಲ್ಲದ ಜ್ಞಾನವು ಮಾತಿನ ಬ್ರಹ್ಮವು; ಸುಮ್ಮನೆ ತಲೆಯನ್ನು ಕೆರೆದುಕೊಂಡು ಚಟಪಟಿಸುವ ಬುದ್ಧಿವಂತಿಕೆಯು. ಆದರೆ ಶಿವಶರಣರ ಭಕ್ತಿಯುಕ್ತವಾದ ಲಿಂಗಾನುಭವದಲ್ಲಿ ಒಂದು ತರಹದ ಕಳೆಯಿದೆ, ಜೀವಾಳವಿದೆ, ಸ್ವಾರಸ್ಯವಿದೆ. ಅವರ ಯೋಗವು ಶಿವಯೋಗವು. ಅರ್ಥಾತ್ ಇಷ್ಟಲಿಂಗದಲ್ಲಿ ಸಮರಸ ಭಾವವನ್ನು ಹೊಂದುವಿಕೆಯು. ಆದುದರಿಂದ ವಚನಕಾರರು ಶಿವಯೋಗವನ್ನು ಹೊಗಳಿ ಅಷ್ಟಾಂಗಯೋಗವನ್ನು ತೆಗಳಿದ್ದಾರೆ.

— ೨ —

## ‘ ಹಠಯೋಗವೋ ಶಿವಯೋಗವೋ ? ’

ಮೇಲಿನ ವಿಚಾರಗಳಿಗೆ ಕೆಲವರು ಹೀಗೆ ಪ್ರಶ್ನೆ ಮಾಡಬಹುದು:— “ ವೀರಶೈವರು ಹಠಯೋಗ ಸಾಧನವನ್ನೇಕೆ ಮಾಡಬಾರದು ? ಹಠಯೋಗಕ್ಕೂ ಶಿವಯೋಗಕ್ಕೂ ಏನು ಭೇದವಿದೆ? ಶಿವಯೋಗವೆಂದರೆ ಹಠಯೋಗದ ಒಂದು ಪರ್ಯಾಯದ ಶಬ್ದವಲ್ಲವೇ ? ಪ್ರಾಣಲಿಂಗಾನುಸಂಧಾನವೆಂದರೆ ಯೋಗಾಭ್ಯಾಸವಲ್ಲದೆ ಮತ್ತೇನು ? ಪ್ರಾಣಲಿಂಗಿಸ್ಥಳದಲ್ಲಿ ಯೋಗವು ಸಮಾವೇಶವಾಗುವದಿಲ್ಲವೇ ಹೇಗೆ ? ಈ ಪ್ರಶ್ನೆಗಳಿಗೆ ಸರಿಯಾದ ಉತ್ತರವು ಮೇಲೆ ಧ್ವನಿತವಾಗುತ್ತಿದ್ದರೂ ಅದನ್ನು ಇನ್ನಿಷ್ಟು ವಿಸ್ತಾರವಾಗಿ ಸ್ಪಷ್ಟೀಕರಿಸುವದು ಯುಕ್ತವಾಗಿ ತೋರಿದರಿಂದ ಹಾಗೆ ಮಾಡಲು ಪ್ರಯತ್ನಿಸುತ್ತೇನೆ.

ವೀರಶೈವರು ಹಠಯೋಗಿಗಳಲ್ಲ, ಶಿವಯೋಗಿಗಳು. ಹಠಯೋಗ ಮಾಡೇ ತೀರುತ್ತೇವೆಂದು ಹಠ ಸಾಧಿಸುವವರಿಗೆ ಬೇಡವೆಂದು ಯಾರೂ



ಆಗ್ರಹ ಮಾಡುವದಿಲ್ಲ. ಹಠಯೋಗವು ವೀರಶೈವರಿಗೆ ಗ್ರಾಹ್ಯವೇ, ಅಗ್ರಾಹ್ಯವೇ, ಎಂಬುದಿಷ್ಟೇ ಪ್ರಶ್ನೆ. ಅಗ್ರಾಹ್ಯವೆಂಬುದೇ ಅದಕ್ಕೆ ಉತ್ತರ. ಅದು ಹೇಗೆಂದರೆ:— ಹಠಯೋಗವು ಈಗಿನ ಹೊಸ ಪದ್ಧತಿಯ ಡ್ರಿಲ್ಲಿನ ಮಾದರಿಯದಾಗಿರುತ್ತದೆ. ಬೆನ್ನು ಹುರಿಯು ಮಣಿಯೋಣ, ಎದೆಯು ಮುದುಡೋಣ, ತೋಳುಗಳು ವಕ್ರವಾಗೋಣ ಮುಂತಾದವುಗಳು ಸಂಭವಿಸಬಾರದೆಂದು ಡ್ರಿಲ್ ಶಿಕ್ಷಕರು ವಿದ್ಯಾರ್ಥಿಗಳಿಗೆ ಸೆಟಸಿ ನಿಲ್ಲುವದಕ್ಕೂ ಕುಳ್ಳಿರುವುದಕ್ಕೂ ಕಲಿಸುವದುಂಟು. ಈ ಮಾದರಿಯ ವ್ಯಾಯಾಮ ಪಾಠಗಳನ್ನು ಹಠಯೋಗದ ಆಸನಗಳಿಗೆ ಹೋಲಿಸಬಹುದು. ಉಸುರಾಡಿಸುವ ವ್ಯಾಯಾಮವನ್ನು ಪ್ರಾಣಾಯಾಮಕ್ಕೆ ಹೋಲಿಸಬಹುದು. ಬಾಲಕರು ಕಣ್ಣುಗಳನ್ನು ಅರಳಿಸಿ ಮೇಲೆ ಕೆಳಗೆ ಎಡಬಲಕ್ಕೆ ನೋಡಿ ದೃಷ್ಟಿಯನ್ನು ತೀಕ್ಷ್ಣಗೊಳಿಸುವಂತೆ ಹಠಯೋಗದಲ್ಲಿ ನಾಸಿಕಾಗ್ರದಲ್ಲಿ ದೃಷ್ಟಿಯನ್ನಿರಿಸಿ ಏಕಾಗ್ರತೆಯನ್ನು ಪಡೆಯಬಹುದು. ಒಟ್ಟಿನ ಮೇಲೆ ಹಠಯೋಗವು ಡ್ರಿಲ್ಲಿನಂತೆ ಇಂದ್ರಿಯಗಳನ್ನು ಒಂದು ವ್ಯವಸ್ಥಿತ ಸ್ವರೂಪದಲ್ಲಿಟ್ಟುಕೊಳ್ಳುವ ಸಾಧನವು. ಅದರಿಂದ ಶರೀರ ಇಂದ್ರಿಯಗಳಲ್ಲಿ ಒಂದು ಪ್ರಕಾರದ ಶಿಸ್ತೂ ಕ್ರಮಬದ್ಧತೆಯೂ ಉಂಟಾಗಬಹುದು. ಆದರೆ ವೀರಶೈವರಿಗೆ ಈ ಪ್ರಕಾರದ ಸಾಧನವೇನೂ ಮುಖ್ಯವಲ್ಲ. ಅದು ಗೌಣವು. ಗೌಣವಾದದ್ದನ್ನು ಬಿಟ್ಟರೂ ನಡೆಯುತ್ತದೆ. ಆದರೆ ಮುಖ್ಯವಾದದ್ದನ್ನು ಬಿಟ್ಟರೆಂದಿಗೂ ನಡೆಯಲಾರದು. ಹ್ಯಾಗಾದರೆ ಆ ಮುಖ್ಯವಾದ ಸಾಧನವಾವುದು ?

ಹಠಯೋಗ ಮತ್ತು ಶಿವಯೋಗ ಇವುಗಳಲ್ಲಿಯ ಭೇದ.

ವೀರಶೈವರು ಇಷ್ಟಲಿಂಗ ಪೂಜೆ ಮಾಡುವಾಗ ಆಸನ ಹಾಕಿಕೊಂಡು ಸೆಟೆದು ಕುಳಿತು ಶ್ವಾಸವನ್ನು ಬಿಗಿ ಹಿಡಿದು ಏಕಾಗ್ರತೆಯಿಂದ ಲಿಂಗ ನಿರೀಕ್ಷಣೆ ಮಾಡುತ್ತಿರುವದರಿಂದ ಅದು ಯೋಗವಲ್ಲವೇ ? ಎಂದು ಕೆಲವರು ಕೇಳಬಹುದು. ಅದು ಯೋಗದ ಛಾಯೆಯೇನೋ ನಿಜ. ಆದರೆ ಬರೀ ಹಾಗೆ ಕುಳ್ಳಿರುವದಷ್ಟೇ ವೀರಶೈವ ಧರ್ಮದ ಲಕ್ಷಣವಲ್ಲ. ನಮ್ಮಲ್ಲಿ ಕಣ್ಣು ಅರಳುವದು ಮುಖ್ಯವಲ್ಲ. ಹೃದಯವರಳಬೇಕು. ಪರಮಾತ್ಮನಲ್ಲಿ ತಾದಾತ್ಮ್ಯ, ತಲ್ಲೀನತೆ, ಪರವಶತೆ ಅಥವಾ

ಶಿವಯೋಗವು ಪರಮಾತ್ಮನಲ್ಲಿ ತಲ್ಲೀನತೆಯು.

ಸಮರಸ ಭಾವವನ್ನು ಹೊಂದಿ ಸುಖಿಸಬೇಕು. ಇದೇ ಶಿವಯೋಗವು. ಇದೇ ಮುಖ್ಯವಾದುದು. ಇದು ನಮಗೆ ಸಾಧಿಸಿದರೆ ಸಾಕು ನಾವು ಹೇಗೆ ಕುಳಿತರೂ ಸರಿಯೇ. ಹೇಗೆ ನೋಡಿದರೂ ಸರಿಯೇ. ಆಸನ ಏಕಾಗ್ರ ದೃಷ್ಟಿಗಳು ಲಿಂಗದಲ್ಲಿ ಈ ತರಹದ ಭಾವನೆಯನ್ನು ಹುಟ್ಟಿಸಲು ಸಹಾಯಕಾರಿಗಳಾಗುತ್ತಿದ್ದರೆ ಅವು ನಮಗೆ ಬೇಕು. ಲಿಂಗಕ್ಕೆ ಪತ್ರಿ ಪುಷ್ಪಗಳನ್ನೇರಿಸುವದಷ್ಟೇ ನಮ್ಮ ಅರ್ಚನೆಯಲ್ಲ. ಆ ಪತ್ರಿ ಪುಷ್ಪಗಳಿಂದ ಲಿಂಗವನ್ನು ಅಂದ ಚಂದ ಮಾಡುವದಷ್ಟೇ ಅಲ್ಲ; ಅದರಲ್ಲಿ ಹೃದಯವು, ಮನಸ್ಸು, ಅರಳಿ ನಲಿದಾಡುವದೇ ಮುಖ್ಯ ಅರ್ಚನೆಯು. ಆದರೆ ಬರೀ ಲಿಂಗವನ್ನು ನೋಡಿ ನಾವು ಆನಂದ ಪರವಶರಾಗುತ್ತಿದ್ದರೆ ನಮಗೆ ಪತ್ರಿ ಪುಷ್ಪಗಳ ಹಂಗು ಬೇಡ. ಅದರಂತೆ ಆಸನ ಏಕಾಗ್ರ ದೃಷ್ಟಿಗಳಿಲ್ಲದೆ ನಮ್ಮ ಮನಸ್ಸು ಇಷ್ಟ ಲಿಂಗದಲ್ಲಿ ಸಮರಸ ಹೊಂದುತ್ತಿದ್ದರೆ, ನಮಗೆ ಆಸನ ದೃಷ್ಟಿಗಳ ಹಂಗು ಬೇಡ. ಇದೇ ಶಿವಯೋಗದ ರಹಸ್ಯವು. ಶಿವಯೋಗಕ್ಕೆ ಆಸನ ಪ್ರಾಣಾಯಾಮಾದಿಗಳು ಗೌಣವಾದವುಗಳೇ ಹೊರತು ಮುಖ್ಯವಲ್ಲ. ಆದರೆ ಹಠಯೋಗಕ್ಕೆ ಅವು ಮುಖ್ಯವಾದವುಗಳು. ಇದೇ ಹಠಯೋಗ ಶಿವಯೋಗಗಳಲ್ಲಿರುವ ವ್ಯತ್ಯಾಸವು.

ಹಠಯೋಗವು ಬಾಹ್ಯ ಇಂದ್ರಿಯಗಳ ಸಹಾಯದಿಂದ ಸಿದ್ಧಿಯನ್ನು ಪಡೆಯುವ ಸಶಾಸ್ತ್ರೀಯ ಕ್ರಮವು. ಆದರೆ ಶಿವಯೋಗವು ಅಂತರಂಗವನ್ನು ಕ್ಕಿಸುವಕಲೆಯು. ಸಶಾಸ್ತ್ರೀಯವಾಗಿ ಮಾಡುವದೆಲ್ಲವೂ ಯಂತ್ರದ ಕೆಲಸದಂತೆ ವಿರಸವಾಗಿರುತ್ತದೆ. ಆದರೆ ಕಲಾಯುಕ್ತವಾಗಿ ಮಾಡುವ ಕಾರ್ಯದಲ್ಲಿ ಸೌಂದರ್ಯ ಸ್ವಾರಸ್ಯಗಳು ತುಂಬಿ ತುಳುಕುತ್ತವೆ. ಆದುದರಿಂದ ಶಿವಯೋಗವು ಹಠಯೋಗದ ಪರ್ಯಾಯ ಶಬ್ದವೆಂದು ಭಾವಿಸಲಿಕ್ಕೆ ಬರಲಾರದು.

ಶಿವಯೋಗವು ಅಂತರಂಗವನ್ನು ಕ್ಕಿಸುವ ಕಲೆಯು

ಶಿವಶರಣರ ಪ್ರಾಣ ಲಿಂಗಾನುಸಂಧಾನವು ಯೋಗಾಭ್ಯಾಸವಲ್ಲ. ಹಠಯೋಗವು ಮನುಷ್ಯನ ನಾಭಿಯ ಕೆಳಗೆ ಮೂಲಾಧಾರ ಚಕ್ರದಲ್ಲಿ ಸರ್ಪನಂತೆ ಸುತ್ತಿಕೊಂಡು ಕುಳಿತಿರುವ ಕುಂಡಲಿನಿ ಶಕ್ತಿಯನ್ನು ಆಸನ ಪ್ರಾಣಾಯಾಮಾದಿಗಳಿಂದ ಹೊಡೆದೆಬ್ಬಿಸಿ ಅದನ್ನು ಷಟ್ಚಕ್ರಗಳೊಳಗಿಂದ ಹಾಯಿಸಿ ಶಿರಸ್ಸಿನಲ್ಲಿರುವ ಸಹಸ್ರದಲ ಕಮಲಕ್ಕೆ ಅಡರಿಸಿ,



ಸಮಾಧಿ ಸ್ಥಿತಿಯನ್ನು ಪಡೆಯಬೇಕೆಂಬ ಹಠವುಳ್ಳದ್ದಾಗಿದೆ. ಪ್ರಾಣಲಿಂಗಾನುಸಂಧಾನವು ಇಂಥ ಕಷ್ಟಕರವಾನ ಹಠವನ್ನೇನೂ ಸಾಧಿಸಲಿಕ್ಕೆ ಹೋಗುವದಿಲ್ಲ. ಆದರೆ ಇಷ್ಟಲಿಂಗದ ಮೂಲಕ ಮಾಟ ನೋಟ ಕೂಟ ಭಕ್ತಿಯಿಂದ ಮನವೆಲ್ಲ ಲಿಂಗದಲ್ಲಿ ತಲ್ಲೀನವಾಗಿರುವದೇ ಪ್ರಾಣಲಿಂಗಾನುಸಂಧಾನವು. ರಸಭರಿತವಾದ ಕಾವ್ಯವನ್ನೋದುವ ಸಹೃದಯನೊಬ್ಬನು ಆ ರಸವು ತನ್ನಂತರಂಗಕ್ಕೆ ಮುಟ್ಟಲು ಅಂದರೆ ತನ್ನನ್ನು ತಾನು ಮುಟ್ಟಲು ತದೇಕಧ್ಯಾನಾಸಕ್ತನಾಗುವಂತೆ ಸಾಕಾರವಾದ ಇಷ್ಟಲಿಂಗದಲ್ಲಿ ಭಕ್ತಿಯನ್ನಳವಡಿಸಿ ವೀರಶೈವನು ನಿರಾಕಾರವಾದ ಆನಂದ ಲಹರಿಯಲ್ಲಿ ತೇಲಾಡುವನು. ಇದೇ ಪ್ರಾಣಲಿಂಗಾನುಸಂಧಾನವು. ಅದು ಅನುಭಾವಿಗಳುಣ್ಣುವ ಸೊಗಸಿನ ಸವಿಯೂಟವು.

ಷಟ್‌ಸ್ಥಲಗಳಲ್ಲಿ ಪ್ರಾಣಲಿಂಗಿ ಸ್ಥಳವಿರುವದೇನೋ ನಿಜ. ಆದರೆ ಈ ಸ್ಥಳವು ಮೇಲೆ ಹೇಳಿದ ಯೋಗ ಮಾರ್ಗಕ್ಕೇನೂ ಸಂಬಂಧ ಪಟ್ಟಿರುವದಿಲ್ಲ. 'ಸಾವಧಾನದೊಳಗಣ ಸ್ವಾನ ಭವದಿಂ ಪ್ರಾಣಲಿಂಗಿಯಾಗಿ' ಎಂದು ಪ್ರಭುದೇವರು ಪ್ರಾಣಲಿಂಗಿಸ್ಥಳದ ಲಕ್ಷಣವನ್ನು ಹೇಳಿದ್ದಾರೆ. ಸ್ವಾನ ಭವವು ಷಡ್ವಿಧ ಭಕ್ತಿಗಳಲ್ಲೊಂದಾಗಿದೆ. ಈ ಭಕ್ತಿಯ ಸಹಾಯದಿಂದ ಪ್ರಾಣವೇ ಲಿಂಗ, ಲಿಂಗವೇ ಪ್ರಾಣವೆಂಬ ಅನುಭಾವವು ಉಂಟಾಗುವದೇ ಪ್ರಾಣಲಿಂಗಿ ಸ್ಥಳದ ಮುಖ್ಯ ಲಕ್ಷಣವು. ಈ ಪ್ರಾಣಲಿಂಗಿ ಸ್ಥಿತಿಯು ರೇಚಕ, ಪೂರಕ, ಕುಂಭಕ ಇತ್ಯಾದಿಗಳಿಂದುಂಟಾಗಿರುವದಿಲ್ಲ. ಆದರೆ ಅನುಕ್ರಮವಾಗಿ ಭಕ್ತಿಗೆ ಸಂಬಂಧಪಟ್ಟ ವಿಶ್ವಾಸ, ನಿಷ್ಠೆ, ಸಾವಧಾನ ಭಕ್ತಿಗಳಿಂದುದ್ಭವಿಸಿರುತ್ತದೆ. ಆದುದರಿಂದ ಪ್ರಾಣಲಿಂಗಿ ಸ್ಥಳವು ಯೋಗಾಭ್ಯಾಸಕ್ಕೆ ಸಂಬಂಧಿಸಿದ್ದೆಂದು ತಿಳಿಯುವದು ತಪ್ಪು.

ಪ್ರಾಣಲಿಂಗಿಸ್ಥಲ ಮತ್ತು ಯೋಗಾಭ್ಯಾಸ.

ಇಷ್ಟಲಿಂಗವಿಲ್ಲದೆ ಬರೀ ಯೋಗಾಭ್ಯಾಸದ ಬಲದಿಂದ ಪ್ರಾಣಲಿಂಗದರಿವು ನನಗಾಯಿತ್ತೆಂದು ಸಿದ್ಧರಾಮಯ್ಯದೇವರು ನುಡಿದ ಕಾಲಕ್ಕೆ ಪ್ರಭುದೇವರು ಆ ಮಾತಿಗೆ ಉತ್ತರ ಕೊಟ್ಟದ್ದೇನಂದರೆ—"ಶೂನ್ಯಕ್ಕೆ ತಲೆ ವಾರಸಿಕ್ಕದಿರೋ. ವಸ್ತು ಭ್ರೂಮಧ್ಯದಲುಂಟೆಂದು ಭ್ರಮಿಸದಿರೋ. ವಸ್ತು ಬ್ರಹ್ಮರಂಧ್ರದಲುಂಟೆಂದು ಹೊಲಬುಗೆಡದಿರೋ. ವಸ್ತುವಿನ ನಿಜವ ಕಾಂಬಡೆ ಎನ್ನ ಸದ್ಗುರು ಅನಿಮಿಷ ದೇವರಂತೆ ನಿನ್ನ ಕರ

ಇಷ್ಟಲಿಂಗದಿಂದ ಪ್ರಾಣಲಿಂಗದರಿವು.

ಸ್ಥಲದಲ್ಲಿ ಲಿಂಗವ ನಿಶ್ಚಯಿಸಿಕೊಂಡು ನಮ್ಮ ಗುಹೇಶ್ವರ ಲಿಂಗದಲ್ಲಿ ನಿಬ್ಬೆರಗಾಗೋ ಸಿದ್ಧರಾಮಯ್ಯ. ನಿನಗೆ ಅಂತರ್ಲಕ್ಷ್ಯಾನು ಸಂಧಾನ ಧ್ಯಾನದಿಂದ ವಸ್ತುವ ಕಂಡಿಹೆನೆಂದರೆ ಸಾಧ್ಯವಾಗದು ನೋಡಾ" ಆದುದರಿಂದ ಪ್ರಾಣಲಿಂಗಿಗೆ ಇಂಥ ಲಿಂಗಾನುಸಂಧಾನವೇ ಮುಖ್ಯವಲ್ಲದೆ ಹಠಯೋಗವೇನೂ ಕಾರಣವಲ್ಲ. ವೀರಶೈವರ ಯೋಗವು ಶಿವಯೋಗವು. ಅದು ಅಷ್ಟಾಂಗಯುಕ್ತವಾದ ಹಠಯೋಗವಲ್ಲ.

೩

## « ಶಿವಯೋಗವು ಚಿತ್ತವೃತ್ತಿ ನಿರೋಧವೇ ? »

"ಯೋಗಶ್ಚಿತ್ತವೃತ್ತಿ ನಿರೋಧಃ" ಎಂದು ಅಷ್ಟಾಂಗ ಯೋಗವನ್ನು ಪರಾಮರ್ಶಿಸುವವರು ಹೇಳಿದ್ದಾರೆ. ಆದರೆ ವೀರಶೈವರ ಶಿವಯೋಗವು ಚಿತ್ತವೃತ್ತಿ ನಿರೋಧವಲ್ಲ; ಇಂದ್ರಿಯ ನಿಗ್ರಹವಲ್ಲ; ಆದರೆ ಅದು ಮನಸ್ಸಿನ ಪ್ರವೃತ್ತಿಗಳನ್ನು ಸದ್ವಿಷಯಗಳ ಕಡೆಗೆ ಹೊರಳಿಸುವದು ಇದೆ. ಮಾನಸ ಶಾಸ್ತ್ರದಲ್ಲಿ *Sublimation* (ಸ್ವಭಾವವನ್ನು ಉದಾತ್ತಗೊಳಿಸೋಣ) ವೆಂದು ಯಾವುದಕ್ಕೆ ಕರೆಯುತ್ತಾರೆಯೋ ಅದೇ ಶಿವಯೋಗವೆಂದು ನಾವು ಹೇಳಬಹುದು. ಅದರಂತೆಯೇ *Repression* ಅಥವಾ *Suppression* (ಮನಃಪ್ರವೃತ್ತಿಯನ್ನು ಕುಗ್ಗಿಸೋಣ) ವೆಂದು ಯಾವುದಕ್ಕೆ ಹೇಳುವರೋ ಅದೇ ಅಷ್ಟಾಂಗ ಯೋಗವೆಂದು ಹೇಳಬಹುದು. ಆದರೆ ಮನಸ್ಸಿನ ಪ್ರವೃತ್ತಿಯನ್ನು ಹೀಗೆ ಬಲಾತ್ಕಾರದಿಂದ ಕುಗ್ಗಿಸಿ ನಿರ್ಬಂಧದಲ್ಲಿಟ್ಟರೆ ಅದು ನಮ್ಮ ಮೇಲೆ ಸಿಟ್ಟಿಗೆದ್ದು ಒಂದಿಲ್ಲೊಂದು ದಿನ ಸೇಡು ತೀರಿಸಿಕೊಳ್ಳದೆ ಬಿಡುವದಿಲ್ಲ. ಅಡವಿಯಲ್ಲಿರುವ ಒಂದು ಹುಲಿಯನ್ನು ಹಿಡಿದು ತಂದು ಅದಕ್ಕೆ ಹೊಡೆದು ಬಡೆದು ಬೆದರಿಕೆ ಹಾಕಿ ಅದು ನಮಗೆ ಕಡಿಯದಂತೆ ನಮ್ಮ ಅಂಕಿತದಲ್ಲಿಟ್ಟುಕೊಳ್ಳಬಹುದು. ಆದರೆ ಆ ಹುಲಿಯು ಬೆದರಿಕೆಯಿಂದ ಮಾತ್ರ ನಮ್ಮ ಸ್ವಾಧೀನವಾಗಿರುವದೇ ಹೊರತು ತಪೋವನದ ಹುಲಿಯಂತೆ ಅಂತರಂಗದ ಪ್ರೇಮದಿಂದಲ್ಲ. ಒಂದಾನೊಂದು ದಿನ ನಾವು ಮೈಮರೆತು ನಿಂತಾಗ ಆ ಹುಲಿಯು ನಮ್ಮನ್ನು ಹಿಚುಕಿ ಕೊಂದು ಹಾಕಬಹುದು. ಕಾಮವಾಸನೆಗೆಳಸುವ ಮನಸ್ಸನ್ನು ಬಗ್ಗುಬಡಿಯಬೇಕೆಂದು ಅಡವಿಗೆ

**ಶಿವಯೋಗವು ಚಿತ್ತವೃತ್ತಿ ನಿರೋಧವಲ್ಲ.**



ಓಡಿಹೋದರೇನು ? ಸ್ತ್ರೀಯರ ಮುಖಾವಲೋಕನ ಮಾಡದಿದ್ದರೇನು ? ಆಸನ ಪ್ರಾಣಾಯಾಮಾದಿಗಳ ಸಹಾಯದಿಂದ ಹರಿದಾಡುವ ಮನವನ್ನು ತಡೆದರೇನು ? ನದಿಗೆ ಒಡ್ಡು ಹಾಕಿ ಗಟ್ಟಿ ಮಾಡಿದರೂ ಅದು ಒಂದಿಲ್ಲೊಂದು ದಿನ ತನ್ನ ಬಲವಾದ ಪ್ರವಾಹದ ಸೆಳವಿನಿಂದ ಒಡ್ಡನ್ನು ಹಾರಿ ಹೊಡೆದು ಪುನಃ ಮುಂದಕ್ಕೆ ಸಾಗುವದೇ ಅದರ ಧರ್ಮವು ಹೇಗೋ ಹಾಗೆಯೇ ತಪಸ್ಸು, ಆತ್ಮಸಂಯಮನ, ಸ್ತ್ರೀ-ಪುರುಷರ ಸಮಾಜದಿಂದ ದೂರಾಗಿರೋಣ ಮುಂತಾದ ನಾನಾತರದ ಕಷ್ಟಕರವಾದ ವ್ರತಗಳನ್ನಾಚರಿಸಿ ಮನಸ್ಸಿನ ಓಘವನ್ನು ತಡೆದರೂ ಒಂದಿಲ್ಲೊಂದು ದಿನ ಅದು ತನ್ನ ಸ್ವಭಾವದಂತೆ ವಿಷಯಾದಿಗಳ ಕಡೆಗೆ ಹರಿದು ಹೋಗಲೇಬೇಕು ಇದಕ್ಕೆ ಉದಾಹರಣೆಗಳೇನೂ ಕಡಿಮೆಯಿಲ್ಲ. ಗಡ್ಡ-ಜಟೆಗಳನ್ನು ಬಿಟ್ಟು ಮಹಾ ಉಗ್ರ ತಪಸ್ಸನ್ನಾಚರಿಸಿದ ಯೋಗಿಯ ಮನವೆಲ್ಲ ಏತರ ಮೇಲೆ ಇದೆ ಎಂಬುದನ್ನು ಸರ್ವಜ್ಞ ಕವಿಯು ಹೇಳಿದ ಮಾತು ಸುಳ್ಳಲ್ಲ. ಅಭ್ಯಾಸದಿಂದ ಇಂದ್ರಿಯನಿಗ್ರಹ ಮಾಡಿ ವನಸ್ಸಿನಿಂದ ಪವಿತ್ರರಾಗಿರುವೆವೆಂದು ಹೇಳುವ ಡಂಭಕರಿಗೆ ಅವರು ನಿಜವಾಗಿ ಎಷ್ಟು ಪವಿತ್ರರಾಗಿರುವರೆಂಬದಕ್ಕೆ ಕೊನೆಗೆ ಅವರ ಮನವೇ ಸಾಕ್ಷಿ. 'ಜನರೇನು ಬಲ್ಲರು ಒಳಗಾಗೋ ಕೃತ್ಯವ ಮನವರಿಯದ ಕಳ್ಳತನವಿಲ್ಲವಲ್ಲ.' ಎಂಬ ಸರ್ಪಭೂಷಣ ಶಿವಯೋಗಿಗಳ ಪದವು ಅವರ ಸ್ಮೃತಿಪಥಕ್ಕೆ ಬರಲಿ.

ಇಂದ್ರಿಯ ಪ್ರವೃತ್ತಿಯನ್ನು ತಡೆಯುವದರಿಂದ ನಮಗೆ ನಿಜಸುಖವು ದೊರೆಯಲಾರದು. ಅದರಂತೆಯೇ ಇಂದ್ರಿಯಗಳನ್ನು ವಿಷಯಗಳ ಕಡೆಗೆ ಯಥೇಚ್ಛವಾಗಿ ಹರಿಯಬಿಟ್ಟರೂ ಪರಸುಖವು ದೊರೆಯದು.

**ಇಂದ್ರಿಯ ಪ್ರವೃತ್ತಿಯು ಸದ್ವಿಷಯಗಳ ಕಡೆಗೆ ಇರಬೇಕು.**

ಅಂದ ಮೇಲೆ ನಾವು ನಿಜಸುಖವನ್ನು ಸಾಧಿಸಬೇಕಾದರೆ ಹೇಗೆ ಮಾಡಬೇಕು ? ಇಂದ್ರಿಯ ಪ್ರವೃತ್ತಿಯನ್ನು ಅಲ್ಲದ ವಿಷಯಗಳ ಕಡೆಗೆ ಎಳಿಸದಂತೆ ಸದ್ವಿಷಯಗಳ ಕಡೆಗೆ ಹರಿಯಗೊಡಬೇಕು. ಹಾಗೆ ಮಾಡಿದರೆ ಇಂದ್ರಿಯ ನಿಗ್ರಹ ಮಾಡಿದಂತಾಗಲಿಲ್ಲ. ಮನಸ್ಸನ್ನು ಕುಗ್ಗಿಸಿದಂತಾಗಲಿಲ್ಲ. ಆದರೆ ಹರಿದಾಡುವ ಪ್ರವಾಹಕ್ಕೆ ಮೂಲದಿಂದ ಕೂಡಿದ ಕೆಡಕು ಸ್ಥಳದ ಕಡೆಗೆ ದಾರಿಯನ್ನು ಕೊಡದೆ

ಶುಚಿರ್ಭೂತವಾದ ಭೂಮಿಯ ಕಡೆಗೆ ಅದರ ದಿಶೆಯನ್ನು ತಿರುಗಿಸಿದಂತೆ ಆಗುತ್ತದೆ. ಹಾಗೆಯೇ ಪರಧನ, ಪರಸ್ತ್ರೀ, ಅಭಕ್ಷ ಭಕ್ಷಣ, ಅಪಾನ ಪೇಯ ಮುಂತಾದ ದುರ್ವ್ಯಸನಗಳ ಕಡೆಗೆ ಹರಿದು ಹೋಗುವ ಮನಸ್ಸನ್ನು ಸದ್ವಿಷಯಗಳ ಕಡೆಗೆ ಹೊರಳಿಸುವದೇ ಶಿವಯೋಗವು. ಹಾಗೆ ಮಾಡುವವರೇ ಶಿವಯೋಗಿಗಳು. ಅನ್ನ ಧನಗಳ ಕಡೆಗೆ ಮನಸ್ಸಾಗುವದೇನೋ ದೇಹದ ಸಹಜ ಸ್ವಭಾವವು. ಆದರೆ ಆ ಸ್ವಾಭಾವಿಕ ಆಶೆಗಳನ್ನು ತಡೆಯಬೇಕೆಂದು ನಾವು ಉಪವಾಸ, ವೈರಾಗ್ಯ ವ್ರತಗಳನ್ನಾಚರಿಸಬಾರದು. ಪರಾನ್ನ ಪರದ್ರವ್ಯಗಳಿಗೆ ತಿರುಕರಂತೆ ನಾವು ಆಶೆ ಮಾಡಬಾರದು. ನಾಗರಿಕ ಸಮಾಜದಲ್ಲಿ ಹಾಗೆ ಮಾಡುವುದು ಹೇಯವು. ಆದುದರಿಂದ ಅನ್ನ ದ್ರವ್ಯಗಳನ್ನು ನಾವು ಸತ್ಕಾಯಕದಿಂದ ಗಳಿಸಿ ಸುಖಿಸಬೇಕು. ಕಾಯಕವೇ ಕೈಲಾಸ. ನಮ್ಮ ಶಿವಶರಣರು ತಿರುಕರಂತೆ ಒಬ್ಬರ ಮನೆಯ ಅನ್ನಕ್ಕಾಗಲಿ ದುಡ್ಡಿಗಾಗಲಿ ಆಶೆ ಮಾಡಲಿಲ್ಲ. ಸ್ವಂತ ಪರಿಶ್ರಮದಿಂದ ದುಡಿದು ದುಡ್ಡು ಗಳಿಸಿ ಉಂಡುಟ್ಟು ಸುಖಿಸುತ್ತಿದ್ದರು. ಸತ್ಕಾರ್ಯಕ್ಕೆ ದಾನ-ಧರ್ಮಗಳನ್ನು ಮಾಡುತ್ತಿದ್ದರು. ಇದೇ ಶಿವಯೋಗವು. ಸ್ತ್ರೀಯರ ಕೂಟಕ್ಕೆ ಮನಸ್ಸಾಗುವದೇನೋ ಮಾನವ ಸ್ವಭಾವವು. ತುರಗ ಬ್ರಹ್ಮಚಾರಿಗಳಂತೆ "ಇಲ್ಲದಕೆ ಒಲ್ಲ ಸರ್ವಜ್ಞ' ಎಂಬಂತೆ ಇಂದ್ರಿಯ ನಿಗ್ರಹಿಯಾದರೂ ಒಳಗೊಳಗೆ ಸ್ತ್ರೀಯರಿಗೋಸ್ಕರ ಕೊರಗುತ್ತ ಬಹಿರಂಗದಲ್ಲಿ ಮಹಾ ವಿರತಿಯುಳ್ಳಾತನೆಂದು ಹೇಳುವದೇನೂ ತಕ್ಕುದಲ್ಲ. ಇಂಥವನು ತನಗೆ ಯೋಗ್ಯಳಾದ ಪತ್ನಿಯನ್ನು ಲಗ್ನ ಮಾಡಿಕೊಂಡು ಸುಖಿಸಬೇಕು. ಇಲ್ಲವೆ ಸ್ತ್ರೀಕೂಟವನ್ನು ತ್ಯಜಿಸಿ ಇಷ್ಟಲಿಂಗದಲ್ಲಿ ಮನಃಕೂಟವುಳ್ಳವನಾಗಬೇಕು. ಲಿಂಗ ಧ್ಯಾನವುಳ್ಳವನಾಗಿ ಆದರಲ್ಲಿಯೇ ತನ್ನ ಪ್ರೇಮವನ್ನಳವಡಿಸಿ ತಾನೇ ಸತಿಯಾಗಿ ಲಿಂಗವೇ ಪತಿಯೆಂದು ಸಮರತಿ ಸುಖವನ್ನು ಪಡೆಯಬೇಕು. ಕಾಮವಾಸನೆಯನ್ನಳಿಯಲಿಕ್ಕೆ 'ಶರಣಸತಿ ಲಿಂಗಪತಿ' ಭಾವವು ಸರ್ವೋತ್ಕೃಷ್ಟವಾದುದು. ಇಷ್ಟಲಿಂಗ ಪೂಜೆಯು ಅದಕ್ಕಾಗಿಯೇ ಏರ್ಪಟ್ಟಿದೆ. ನಮ್ಮ ಶಿವಶರಣರು ಕುಟುಂಬಿಗಳಾಗಿದ್ದರು. ಅವರು "ಶರಣಸತಿ ಲಿಂಗಪತಿಯೆಂಬ" ಪವಿತ್ರ ಭಾವನೆಯಿಂದಲೇ ತಮ್ಮ ಲಿಂಗ ಸುಖವನ್ನು ಹೊಂದಿದರು. ಇದೇ ಅಲ್ಲವೇ ನಿಜವಾದ ಶಿವಯೋಗವು? ಅನ್ಯರ ಹೆಣ್ಣುಮಕ್ಕಳನ್ನು ಕಾಮಭಾವದಿಂದ ನೋಡದೆ



ಪೂಜಾ ಭಾವನೆಯಿಂದ ಅವರನ್ನು ಕಾಣಬೇಕು. ಕೆಲವರು ಹೆಣ್ಣು ಮಾಯೆಯೆಂದೂ ರಕ್ಕಸಿಯೆಂದೂ ಕರೆದು ಹೆಣ್ಣಿಗೆ ಅಂಜಿ ಕಾನನವನ್ನು ಸೇರಿರುವರು. ಆದರೆ ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನನೆಂದು ನಮ್ಮ ಶಿವಶರಣರು ಭಾವಿಸಿರುವರು. ನಾಗರಿಕರಾಗಿದ್ದುಕೊಂಡು ಇಂಥ ಶಿವಯೋಗವನ್ನು ಅನುಭವಿಸುವದನ್ನು ಬಿಟ್ಟು ಅಂಜಿ ಅರಣ್ಯಕ್ಕೇಕೆ ಓಡಿ ಹೋಗಬೇಕು?

ಅಭಕ್ಷ್ಯ ಭಕ್ಷಣ ಅಪೇಯಪಾನಗಳ ಕಡೆಗೆ ನಮ್ಮ ಮನಸ್ಸಂಟಾಗುತ್ತಿದ್ದರೆ ಆ ಮನಸ್ಸನ್ನು ಪ್ರಸಾದ ಪಾದೋದಕಗಳೆಂಬ ಪವಿತ್ರ ವಿಷಯಗಳ ಕಡೆಗೆ ತಿರುಗಿಸಬೇಕು. ಇಂಥ ಅನಾಚಾರಗಳನ್ನು ಮಾಡುವದಿಲ್ಲೆಂದು ಶಪಥಗಳನ್ನೇಕೆ ಮಾಡಬೇಕು? ಮಾಡಿದ್ದರೆ ಮಾಡಿದ್ದು ತಪ್ಪಾಯಿತೆಂದು ಪ್ರಾಯಶ್ಚಿತ್ತಗಳನ್ನೇಕೆ ತೆಗೆದುಕೊಳ್ಳಬೇಕು? ನಮ್ಮ ಶಿವಶರಣರು ಶುದ್ಧ ಶಾಕಾಹಾರಿಗಳಾಗಿ ಅನ್ಯ ಸಂಸರ್ಗವನ್ನು ಬಿಟ್ಟು ಮಾಂಸಾಹಾರ, ಮಾದಕ ವಸ್ತುಗಳ ಸೇವನೆ, ಇಂಥವುಗಳಿಂದ ದೂರಾಗಿ ತಾವು ಭೋಗಿಸುವ ವಸ್ತುಗಳನ್ನು ಪ್ರಸಾದ ರೂಪ ಮಾಡಿ ಅನುಭವಿಸಿ ಕೆಡಕು ಮಾರ್ಗವನ್ನು ಬಿಟ್ಟರು. ಇದೇ ಶಿವಯೋಗವೆನಿಸಿಕೊಳ್ಳುವದು.

**ಶಿವಯೋಗವು ಚಿತ್ತವೃತ್ತಿ ಪವಿತ್ರೀಕರಣವು.**

ಶಿವಯೋಗವು ನಿಷೇಧ ನಿವೃತ್ತಿ ಇವುಗಳಿಂದ ಕೂಡಿದುದಲ್ಲ. ಅದಕ್ಕೆ ವಿಧಿ ಪ್ರವೃತ್ತಿ ಮಾರ್ಗಗಳು ಮೂಲಾಧಾರಗಳು. ವೀರಶೈವ ಧರ್ಮವು ಇಂಥ ಭಕ್ತಿಯ ತಳಹದಿಯ ಮೇಲೆ ಕಟ್ಟಲ್ಪಟ್ಟಿದೆ. ಈ ಭಕ್ತಿಯು ಪ್ರವೃತ್ತಿಯ ದ್ಯೋತಕವು. ಇದು ಅವನಲ್ಲಿ ಪ್ರಗತಿಯನ್ನುಂಟು ಮಾಡುತ್ತದೆ. ಭಕ್ತಿ ಎಂಬುದಕ್ಕೆ ಬೇಕೆಂಬ ದುರಾಶೆಯಿಲ್ಲ. ಬೇಡೆಂಬ ಹಠವಿಲ್ಲ. ಪರಿಶುದ್ಧ ಹಾಗು ನಿಷ್ಕಾಮ ಭಕ್ತಿಯದು. ನಿಷ್ಕಾಮ ಭಕ್ತಿಯಿಂದ ಜಗತ್ತಿನ ಸದ್ವ್ಯವಹಾರಗಳನ್ನೆಲ್ಲ ನಮ್ಮ ಶಿವಶರಣರು ಜರುಗಿಸಿದರೂ ಅವರ ಅಂತರಾತ್ಮವು ಯಾವಾಗಲೂ ಪರಶಿವನ ಪರಂಧಾಮದಲ್ಲಿ ನೆಲಿಸಿರುತ್ತದೆ. ನಮ್ಮ ಶಿವಯೋಗಿಗಳು "ಲೋಕದೊಳಗಿದ್ದೂ ಇಲ್ಲದ ಮಹಿಮರು." ನಮ್ಮವರು ಉದಾಸೀನ

(*Passive*) ಸ್ವಭಾವದವರಲ್ಲ. ಆದರೆ ಚಟುವಟಿಕೆಯುಳ್ಳವರೂ (*Active*) ಉತ್ಪಾದಕ ಶಕ್ತಿಯುಳ್ಳವರೂ (*Creative*) ಆಗಿರುವರು. ಶಿವಯೋಗವು ಚಿತ್ತವೃತ್ತಿ ನಿರೋಧವಲ್ಲ; ಚಿತ್ತವೃತ್ತಿ ಪವಿತ್ರೀಕರಣವು.

೪

## ‘ ಶಿವಯೋಗವು ಮನುಷ್ಯತ್ವವೋ ದೇವತ್ವವೋ? ’

ಶಿವಯೋಗಿಗಳು ನಿಜವಾಗಿ ಮನುಷ್ಯರೇ ಅಹುದು. ಆದರೂ ಅವರು ತಮ್ಮ ಅಲೌಕಿಕವಾದ ಗುಣಧರ್ಮಗಳಿಂದ ದೇವರಂತೆ ಮನ್ನಿಸಲ್ಪಡುತ್ತಾರೆ. ಅದ್ವಿತೀಯರಾದ ವಿಭೂತಿಗಳನ್ನು ದೇವರೆಂದು ಭಾವಿಸುವದು ನಮ್ಮ ಹಿಂದೂ ದೇಶದ ಸಾಂಪ್ರದಾಯವಾಗಿದೆ. ಆದರೆ ಅಸಂಬದ್ಧವಾದ ಗುಣಾರೋಪಣ ಮಾಡಿ ಅವರನ್ನು ದೇವರೆಂದು ತಿಳಿಯುವದು ಮಾತ್ರ ಶುದ್ಧ ತಪ್ಪು.

ಶಿವಯೋಗಿಗಳು ಅಲೌಕಿಕ ಪುರುಷರಲ್ಲ.

ಶಿವಯೋಗಿಗಳೆಂಬವರು ಮುಗಿಲ ಮೇಲಿಂದಿಳಿದು ಬಂದಿಲ್ಲ. ಕಲ್ಲು, ಮಣ್ಣು, ಕಿವಿ, ಮೂಗು, ತೊಡೆಗಳಲ್ಲಿ ಹುಟ್ಟಿ ಬಂದಿಲ್ಲ. ಅದರಂತೆಯೇ ಶಿಲೆಯಲ್ಲಿ ಐಕ್ಯತೆ ಹೊಂದಿಲ್ಲ. ಪರಶಿವನೇ ಶಿವಯೋಗಿಗಳಾಗಿ ಭೂಮಿಗವತರಿಸಿಲ್ಲ. ಅವರ ಜನನ ಜೀವನ ಮರಣಗಳೇನೂ ಪ್ರಕೃತಿ ವಿರುದ್ಧವಾಗಿರುವದಿಲ್ಲ. ಶಿವಯೋಗಿಗಳು ನಮ್ಮಂತೆಯೇ ಮನುಷ್ಯರು. ನಮ್ಮಂತೆಯೇ ಅವರಿಗೆ ಹಸಿವೆ ನೀರಡಿಕೆಗಳಾಗುವದುಂಟು. ಕಾಮ-ಕ್ರೋಧಾದಿ ವಿಕಾರಗಳೂ ಉಂಟು. ಸಾಮಾನ್ಯ ಮನುಷ್ಯರು ಆಚರಿಸುವ ನಿತ್ಯ ವ್ಯವಹಾರಗಳನ್ನು ಅವರೂ ಆಚರಿಸುವರು. ಮನುಷ್ಯರಾಗಿ ಹುಟ್ಟಿದ ಬಳಿಕ ಮನುಷ್ಯತ್ವದ ಸಾಮಾನ್ಯ ಧರ್ಮಗಳು ಅವರಲ್ಲಿ ಉಂಟೇ ಉಂಟು. ಅವು ಅವರಲ್ಲಿಲ್ಲವೆನ್ನುವದು ಮೂರ್ಖತನವು. ಅವು ಇಲ್ಲದಿದ್ದರೆ ಅವರು ಮನುಷ್ಯರಾಗಿಯೇ ಹುಟ್ಟುತ್ತಿರಲಿಲ್ಲ. ಅವರೇನೂ ಪಿಶಾಚಿಗಳಂತೆ ಒಮ್ಮೆ ಕಣ್ಣಿಗೆ ತೋರಿ ಮತ್ತೊಮ್ಮೆ ಕಣ್ಮರೆಯಾಗಿ ಹೋಗುವವರಲ್ಲ. ಆದುದರಿಂದ ಶಿವಯೋಗಿಗಳು ಭೂತಗಳಲ್ಲ, ಭೂತೇಶರೂ ಅಲ್ಲ, ಆದರೆ ಅವರು ಮನುಷ್ಯರೆಂಬ ಮಾತನ್ನು ಎಲ್ಲರೂ ಒಪ್ಪಬೇಕಾದ ಸಂಗತಿಯು.



ಶಿವಯೋಗಿಗಳು ಜನ್ಮತಃ ಮನುಷ್ಯರಾದರೂ ತಮ್ಮಲ್ಲಿರುವ ಲೋಕೋತ್ತರ ಗುಣಗಳ ಮೂಲಕ ಜನರಿಂದ ದೇವರಂತೆ ತಿಳಿಯಲ್ಪಡುತ್ತಾರೆ. ಆದರೆ ಅವರು ತಮಗೆ ಜನರು ಶಿವಯೋಗಿಗಳೆನ್ನಬೇಕೆಂದು ನಿಶಾನೆಯನ್ನೇರಿಸಿಕೊಂಡು ಹೊರಟಿಲ್ಲ.

ಶಿವಯೋಗಿಗಳು ಲೋಕೋತ್ತರ ಗುಣಗಳುಳ್ಳವರು

ಜನರು ಅವರ ಗುಣಧರ್ಮಗಳಿಗೆ ಅಚ್ಚರಿಗೊಂಡು ಅವರ ಬಗ್ಗೆ ಭಕ್ತಿಯು ಹೆಚ್ಚಾಗಿ “ಶಿವಯೋಗಿಗಳು ದೇವರಂತೆ ಇದ್ದಾರೆ. ಪರಶಿವನಂತೆ ಇದ್ದಾರೆ.” ಎಂಬ ಉಪಮೆಯ ವಾಕ್ಯಗಳನ್ನು ಮೊದಲು ನುಡಿಯಹತ್ತಿದರು. ಬರಬರುತ್ತ ಈ ಉಪಮೆಯು ಸೀಮೆಯನ್ನು ಮೀರಿ ರೂಪಕವಾಗಿ “ಶಿವಯೋಗಿಗಳು ಸಾಕ್ಷಾತ್ ಪರಶಿವನೇ” ಆಗಿದ್ದಾರೆ. ಅದರಂತೆಯೇ ಅವರು ಮಾಡಿದ ಲೋಕೋತ್ತರ ಕಾರ್ಯಗಳು ಮೊದಲು ಉತ್ಪ್ರೇಕ್ಷೆಯಾಗಿದ್ದು ಕೊನೆಗೆ ಅತಿಶಯೋಕ್ತಿಗಳಾದವು. ಈ ಅತಿಶಯೋಕ್ತಿಗಳಿಗೆ ಜನರು ಪೊವಾಡಗಳೆಂದು ಹೆಸರಿಟ್ಟಿದ್ದಾರೆ ಉದಾಹರಣಾರ್ಥ “ಶಿವಯೋಗಿಗಳು ಆ ದುಷ್ಟ ಮನುಷ್ಯನನ್ನು ನೋಡಿದಾಕ್ಷಣವೇ ಸುಟ್ಟು ಬೂದಿಯಾದನು.” ಈ ವಾಕ್ಯವು ಮೊದಲು “ಶಿವಯೋಗಿಗಳು ಆ ದುಷ್ಟ ಮನುಷ್ಯನನ್ನು ನೋಡಿದ ಕೂಡಲೆ ಆತನು ಸುಟ್ಟು ಭಸ್ಮವಾದನೋ ಏನೋ ಎಂಬಂತೆ ಕಾಂತಿಹೀನನಾದನು.” ಎಂಬರ್ಥದ ಉತ್ಪ್ರೇಕ್ಷೆಯಿದ್ದು ಬರಬರುತ್ತ ಮೇಲೆ ಕಾಣಿಸಿದ ಅತಿಶಯೋಕ್ತಿಯಾಗಿದೆ ಇದು ನಿಜವೆಂದೇ ತಿಳಿದು ಜನರು “ಅಹಾ! ಶಿವಯೋಗಿಗಳು ಎಂಥ ಮಹಿಮರಪ್ಪಾ! ಆ ದುಷ್ಟನನ್ನು ದೃಷ್ಟಿಮಾತ್ರದಿಂದ ಸುಟ್ಟು ಬೂದಿ ಮಾಡಿದರಂತೆ ನಿಜವಾಗಿಯೂ ಅವರು ಪೊವಾಡ ಪುರುಷರು.” ಎಂದು ನುಡಿಯಲಾರಂಭಿಸಿದರು. ಈ ಮೇರೆಗೆ ಅತಿಶಯೋಕ್ತಿಯು ಪೊವಾಡವಾಗಿದೆ.

ದೇವರು ಎಂಥವನು? ಎಲ್ಲಿರುವನು? ಎಂಬುದೇ ತಿಳಿಯದಂಥ ಪಾಮರರಾದ ನಾವು ಮೊದಮೊದಲು ನಿಸರ್ಗ ರೂಪಗಳನ್ನು, ಆನಂತರ ಕಲ್ಲು ಧಾತುಗಳ ಮೂರ್ತಿಗಳನ್ನು, ಬರಬರುತ್ತ ಮನುಷ್ಯ ವರ್ಗದ ಗುಣಧರ್ಮಗಳನ್ನು ಮೀರಿದ ಮಹಾಪುರುಷರನ್ನು, ದೇವರೆಂದು ಭಾವಿಸಿ ಪೂಜಿಸಹತ್ತಿದ್ದೇವೆ. ಹೀಗಾಗಿ ಶಿವಯೋಗಿಗಳು ನಮಗೆ ಮನುಷ್ಯರಾಗಿ ಕಾಣದೆ ದೇವರಾಗಿ ಕಾಣಹತ್ತಿದ್ದಾರೆ. ಶಿವಯೋಗವು ಮನುಷ್ಯತ್ವವಾಗದೆ ದೇವತ್ವವಾಗಿದೆ.

ಶಿವಯೋಗಿಗಳನ್ನು ನಾವು ಹೆಚ್ಚಿನವರೆಂದು ಕರೆದರೂ ಅವರೇನೂ ಸ್ವತಃ ಹೆಚ್ಚಿನವರೆಂದು ತಮ್ಮಷ್ಟಕ್ಕೆ ತಾವೇ ಹೊಗಳಿಕೊಂಡಿಲ್ಲ. ಹಾಗೆ ಹೊಗಳಿಕೊಂಡಿದ್ದರೆ ಅವರು ನಮ್ಮ ಪಾಲಿಗೆ ದೇವರಾಗುತ್ತಿದ್ದಿಲ್ಲ.

**ಶಿವಯೋಗಿಗಳಲ್ಲಿ ಆತ್ಮಪೌರುಷವಿಲ್ಲ.**

ಮನುಷ್ಯರೇ ಆಗುತ್ತಿದ್ದರು. ಬಸವಣ್ಣನವರು "ಎನಗಿಂತ ಕಿರಿಯರಾರಿಲ್ಲ, ಶಿವಭಕ್ತರಿಗಿಂತ ಹಿರಿಯರಾರಿಲ್ಲ." ಎಂದು ವಿನಯೋಕ್ತಿಗಳನ್ನಾಡಿ ಆಚರಿಸಿ ತೋರಿಸಿದ್ದರಿಂದಲೇ ಅವರು ನಮಗೆ ದೇವರಾಗಿದ್ದಾರೆ. ದೇವರೆಂದರೆ ವಿಶ್ವವನ್ನು ನಿರ್ಮಾಣ ಮಾಡಿ ಅದನ್ನು ಆಳುವ ದಿವ್ಯ ಶಕ್ತಿ ಎಂಬರ್ಥದಿಂದ ನಾವು ಶಿವಯೋಗಿಗಳನ್ನಾಗಲಿ, ಬಸವಾದಿ ಪ್ರಮಥರನ್ನಾಗಲಿ ಕರೆಯುವದಿಲ್ಲ. ದೇವರೆಂದರೆ ಮಹಾ ವಿಭೂತಿಗಳು. ಸಾಮಾನ್ಯ ಮನುಷ್ಯ ವರ್ಗಕ್ಕೆ ಮೀರಿದವರು ಇಷ್ಟೇ ಅರ್ಥ.

ಈಗ ನಮ್ಮ ಸಮಾಜದಲ್ಲಿ ಯಾವ ಯೋಗ್ಯತೆಯೂ ಇಲ್ಲದ ಅನೇಕ ವ್ಯಕ್ತಿಗಳು ತಮ್ಮಷ್ಟಕ್ಕೆ ತಾವೇ ಹೆಚ್ಚಿನವರೆಂದು ತಮ್ಮ ಬೆನ್ನು ಚಪ್ಪರಿಸಿಕೊಳ್ಳುವದು ವಿಷಾದ ಸಂಗತಿಯಾಗಿದೆ. ಅವರು ತಮ್ಮ ಸ್ವರೂಪ

**ಶಿವಯೋಗಿಯು ವಿಶ್ವಕುಟುಂಬಿಯು**

ಹಾನಿಯನ್ನು ಮಾಡಿಕೊಳ್ಳುವದಲ್ಲದೆ ಶಿವಯೋಗಿ, ಶಿವಶರಣರೆಂಬ ಹೆಸರುಗಳಿಗೆ ಕಲಂಕ ಹಚ್ಚುವರು. ಇಂಥವರು ಮನುಷ್ಯ ವರ್ಗದ ಸಾದಾ ಪ್ರಾಣಿಗಳೇ ಹೊರತು ದೇವಾಂಶ ಸಂಭೂತರಲ್ಲ. ನಾ ಹೆಚ್ಚು ನೀ ಹೆಚ್ಚೆಂದು ಹೊಗಳಿಸಿಕೊಳ್ಳುವಂಥ ಅತಿರಥ ಮಹಾರಥರು ಶಿವಯೋಗಿಗಳೇ ? ಜಗದ್ಗುರು ಜಗದಾಚಾರ್ಯರೆಂದು ಜಯಭೇರಿಯನ್ನು ಹೊಯ್ಸುವವರು ಶಿವಯೋಗಿಗಳೇ ? ಸ್ವಾರ್ಥಕ್ಕಾಗಿ ಮಠಪೀಠಾಧಿಕಾರಗಳಿಗೆ ಹಂಬಲಿಸುವವರು ಶಿವಯೋಗಿಗಳೇ ? ಛೇ, ಅಲ್ಲ. ಆದರೆ "ಸರ್ವಲೋಕೋಪಕಾರಾಯ ಯೋ ದೇವಃ ಪರಮೇಶ್ವರಃ। ಚರತ್ಯತಿಥಿ ರೂಪೇಣ ನಮಸ್ತೇ ಶಿವಯೋಗಿನೇ"॥ ಎಂಬಂತೆ ಯಾವಾತನು ಸರ್ವಲೋಕದ ಉಪಕಾರಾರ್ಥವಾಗಿ ಜಗತ್ತಿನಲ್ಲಿ ಅತಿಥಿಯಾಗಿ ಸಂಚರಿಸುವನೋ ಆತನೇ ಶಿವಯೋಗಿಯು. ಆತನು ವಿಶ್ವಕುಟುಂಬಿಯು. ಆತನಿಗೆ ಯಾವ ಮಠಾಧಿಕಾರದ ಹಂಗೂ ಇರುವದಿಲ್ಲ.



ಮಠ-ಪೀಠಾದಿಗಳು ಮುನಸಿಪಾಲಿಟಿ ಲೋಕಲಬೋರ್ಡುಗಳಂತೆ ಸಂಸ್ಥೆಗಳು. ಹಿಂದಕ್ಕೆ ಈ ಮಠ-ಪೀಠಗಳ ಆಧೀನದಲ್ಲಿ ಶಿಕ್ಷಣ, ಧರ್ಮವಿಧಾನ, ನ್ಯಾಯ ತೀರಿಸೋಣ, ಸಮಾಜದಲ್ಲಿ ಸ್ವಚ್ಛತೆ-ಆರೋಗ್ಯ

**ಮಠಾಧಿಕಾರಿಗಳ ಸುಧಾರಣೆ.**

ಗಳನ್ನಿಡೋಣ, ಅನಾಥಾಲಯ, ಉಚಿತ ಶಿಕ್ಷಣಗಳ ಏರ್ಪಾಡು ಮುಂತಾದ ಉಪಯುಕ್ತ ಕಾರ್ಯಗಳಿದ್ದವು. ಆದರೆ ಈ ಕಾರ್ಯಗಳನ್ನೆಲ್ಲ ಈಗ ಬೇರೆ ಬೇರೆ ಸಂಸ್ಥೆಗಳು ಆಕ್ರಮಿಸಿ ಬಿಟ್ಟಿರುತ್ತವೆ. ಉದಾಹರಣಾರ್ಥವಾಗಿ ಶಿಕ್ಷಣವನ್ನು ಶಾಲಾ ಸಂಸ್ಥೆಗಳೂ ಸ್ಥಾನಿಕ ಬೋರ್ಡುಗಳೂ ಆಕ್ರಮಿಸಿರುತ್ತವೆ. ಸ್ವಚ್ಛತೆ ಆರೋಗ್ಯಗಳನ್ನು ಮುನಸಿಪಾಲಟಿಗಳು ನೋಡಿಕೊಳ್ಳುತ್ತವೆ. ನ್ಯಾಯ ತೀರಿಸುವ ಕೆಲಸವು ಸರಕಾರದ ಆಧೀನವಾಗಿದೆ. ಅನಾಥಾಲಯ ಉಚಿತ ಶಿಕ್ಷಣಗಳ ವ್ಯವಸ್ಥೆಯನ್ನು ತರುಣ ಸಂಘ, ಫ್ರೀ ಬೋರ್ಡಿಂಗ ಮೊದಲಾದ ಸಂಸ್ಥೆಗಳು ಕೈಕೊಂಡಿವೆ. ಈಗ ಸದ್ಯಕ್ಕೆ ಮಠ-ಪೀಠಗಳ ಸ್ವಾಧೀನದಲ್ಲಿ ಉಳಿದದ್ದೆಂದರೆ ಧಾರ್ಮಿಕ ವಿಧಾನವೊಂದೇ. ಉದಾಹರಣಾರ್ಥವಾಗಿ ದೀಕ್ಷೆ, ಲಿಂಗಧಾರಣ, ಶುದ್ಧೀಕರಣ, ಜನನ-ಮರಣ ವಿವಾಹಾದಿ ಸಂಸ್ಕಾರ ಇವೇ ಮೊದಲಾದ ಧಾರ್ಮಿಕ ಕಾರ್ಯಗಳಷ್ಟೇ ಅವುಗಳ ವಶದಲ್ಲಿರುವವು. ಆದರೆ ಈಗಿನ ಶಾಸ್ತ್ರೀಯ ಯುಗದಲ್ಲಿ ಅವುಗಳಿಗೆ ಅಷ್ಟು ಪ್ರಾಶಸ್ತ್ಯವಿಲ್ಲ. ಅವುಗಳಲ್ಲಿ ಸುಧಾರಣೆ ಬೇಕು. ಸುಧಾರಿಸದೆ ಹೋದರೆ ಸುಶಿಕ್ಷಿತರು ಅವುಗಳಿಗೆ ಹಾಸ್ಯ ಮಾಡುತ್ತಾರೆ. ಮಾಡಹತ್ತಿದ್ದಾರೆ. ಅಶಿಕ್ಷಿತರು ಮಾತ್ರ ಅವುಗಳಿಗೆ ದಾಸರಾಗಿರುತ್ತಾರೆ. ಈ ಧಾರ್ಮಿಕ ವಿಧಾನಗಳಲ್ಲಿ ಸುಧಾರಣೆ ಆಗದೆ ಹೋದರೆ ಅವು ಕ್ರಮೇಣ ಲೋಪವನ್ನು ಹೊಂದಬಹುದು. ಇಲ್ಲವೆ ಯಂತ್ರದಂತೆ ನಡೆಯಬಹುದು. ಆದರೆ ಅವು ಮುಂದೆ ಸಮಾಜಕಾರ್ಯ ಮಾಡದೆಇರುವ ಮಠ ಪೀಠಾಧಿಕಾರಿಗಳ ವಶದಲ್ಲಿ ಮಾತ್ರ ಉಳಿಯಲಿಕ್ಕಿಲ್ಲ.

ಶಿವಯೋಗಿಗಳಾದವರು ಸ್ವಾನುಭಾವಿಗಳೂ, ಲಿಂಗಾನುಸಂಧಾನಿಗಳೂ, ಷಟ್‌ಸ್ಥಲ ಜ್ಞಾನಿಗಳೂ, ಲೋಕಸಂಗ್ರಹ ತತ್ಪರರೂ ಆಗಬೇಕು. ನುಡಿದಂತೆ ನಡೆಯುವ ಇಂಥ ಮಹಾ ವಿಭೂತಿಗಳು ಕಾಲಕಾಲಕ್ಕೆ

**ಶಿವಯೋಗಿಗಳು ಸ್ವಾನುಭಾವಿಗಳು**

ಭಕ್ತರಲ್ಲಿಯೂ, ಗುರುಗಳಲ್ಲಿಯೂ, ವಿರಕ್ತರಲ್ಲಿಯೂ ಹುಟ್ಟಿದ್ದಾರೆ. ಅವರನ್ನು ಎಲ್ಲ ಮನುಷ್ಯರು ಜಾತಿ ಮತಭೇದವಿಲ್ಲದೆ ಮಹಾ ವಿಭೂತಿಗಳೆಂದು ಮನ್ನಿಸುತ್ತಿದ್ದಾರೆ. ಅವರೇ ಜಗದ್ಗುರುಗಳು. ಅವರೇ ಜಗದಾಚಾರ್ಯರು. ಅವರೇ ಶಿವಶರಣ ಶಿವಯೋಗಿಗಳು. ಆದರೆ ಈಗಿನ ಕೆಲವು ನಾಮಧಾರಿ ಜಗದ್ಗುರುಗಳು – ಜಗದಾಚಾರ್ಯರು, ಸ್ವಾರ್ಥ ಪರಾಯಣತೆ, ಅಧಿಕಾರದ ಹೆಮ್ಮೆಗಳಿಂದ ನಿಜವಾದ ಶಿವಯೋಗಿಗಳಂತೆ ಸಮಾಜದಲ್ಲಿ ಸೋಗು ಹಾಕಿಕೊಂಡು ನಡೆಯುತ್ತಿದ್ದಾರೆ. ಅವರು ತಾವೇ ಮೂರ್ತಿಮಂತ ಪರಶಿವನೆಂದು ಹೊಗಳಿಕೊಳ್ಳುತ್ತಿದ್ದಾರೆ. ಸಾರಿಕೊಳ್ಳುತ್ತಿದ್ದಾರೆ. ಇದನ್ನು ನೋಡಿ ನಮಗೆ ಫಕ್ಕನೆ ಸ್ಟ್ಯುಅರ್ಟ ಮನೆತನದ ಜೇಮ್ಸನೆಂಬ ಇಂಗ್ಲಿಷ ರಾಜನ ನೆನಪಾಗುತ್ತದೆ. ಆತನು ಹೇಳುತ್ತಿದ್ದುದೇನೆಂದರೆ "ಅರಸನು ದೇವಾಂಶ ಸಂಭೂತನು. ದೇವರೇ ಅರಸನನ್ನು ಭೂಲೋಕವನ್ನಾಳಲು ಕಳಿಸುತ್ತಾನೆ. ಮನುಷ್ಯರು ಅರಸನನ್ನು ಮಾಡುವದಿಲ್ಲ ಅರಸನ ಮಾತೇ ಕಾಯಿದೆಯು. ಬೇರೆ ಕಾಯಿದೆಯೆಂಬುದಿಲ್ಲ." ಈ ಮೇರೆಗೆ 'ನ ವಿಷ್ಣುಃ ಪೃಥ್ವೀಪತಿಃ' ಎಂಬ ತತ್ವವನ್ನು ಸಾರಿದ ಆ ರಾಜನನ್ನು ಕೊನೆಗೆ ಪ್ರಜೆಗಳು ಕಿತ್ತೊಗೆದು ಬೇರೆ ರಾಜನನ್ನು ಗಾದೆಯ ಮೇಲೆ ಕುಳ್ಳಿರಿಸಿ ಮನುಷ್ಯರೇ ಅರಸನನ್ನು ಮಾಡುತ್ತಾರೆಂಬ ಮಾತನ್ನು ನಿದರ್ಶನ ಮಾಡಿಕೊಟ್ಟರು. ಆದರಂತೆಯೇ ಮಠ–ಪೀಠಾಧಿಕಾರಿಗಳನ್ನು ದೈವದವರೇ ಮಾಡುತ್ತಾರೆಂಬ ಮಾತು ನಮ್ಮ ಮಠ–ಪೀಠಾಧಿಕಾರಿಗಳಿಗೆ ಹೊಳೆದರೆ ಸಾಕು. ಅವರು ಪರಶಿವನ ಅವತಾರಿಗಳೆಂಬ ಮಾತು ಅಲ್ಲಿಗೇ ನಿಂತುಹೋಗುತ್ತದೆ.

ಶಿವಯೋಗಿಗಳು ತಮ್ಮ ತಮ್ಮ ಬಲದಿಂದ ಆಗುತ್ತಾರೆ. ಮಠಪೀಠಾಧಿಕಾರಿತ್ವವು ಲೌಕಿಕತ್ವವು. ಆದರೆ ಶಿವಯೋಗವು ದೇವತ್ವವು.

— ಕಲ್ಯಾಣಪ್ಪ ಬ್ಯಾಳಿ

# ಶಿವಾನುಭವದ ಸಾಮಾನ್ಯ ಸ್ವರೂಪ.

ಯೋಗದ ತತ್ವಗಳು ಮತ್ತು ಅದರ ಅಭ್ಯಾಸವು ಹಿಂದೂ ಧರ್ಮದಲ್ಲಿ ಒಂದು ಮಹತ್ವದ ವಿಶಿಷ್ಟ ಭಾಗವಾಗಿದ್ದು ಅದರ ಉದ್ದೇಶವು ಚಂಚಲವಾದ ಚಿತ್ತವೃತ್ತಿಯನ್ನು ಸ್ಥಿರಗೊಳಿಸಿ ಮನುಷ್ಯನ ಆಧ್ಯಾತ್ಮಿಕ ಹಾದಿಯಲ್ಲಿರುವ ಆತಂಕಗಳನ್ನು ದೂರಪಡಿಸಿ ಅವನಲ್ಲಿ ಶುದ್ಧ ಸಾತ್ವಿಕವೃತ್ತಿಯನ್ನು ಹುಟ್ಟಿಸಿ ಅವನಿಗೆ ಮೋಕ್ಷಸ್ಥಿತಿಯನ್ನು ತೀವ್ರವಾಗಿ ತಂದುಕೊಡುವುದೇ ಇರುತ್ತದೆ. ಇದರ ತತ್ವಗಳ ಮೂಲಕ ಮಾನಸಿಕ ಶಕ್ತಿಯ ವಿಕಾಸವನ್ನು ಮೇಲ್ಕಂಡ ದೃಷ್ಟಿಯಿಂದ ಹೇಗೆ ಮಾಡಬೇಕೆಂಬುದನ್ನು ತಿಳಿಯಬಹುದು. ಈ ಮಹತ್ವದ ವಿಷಯವನ್ನು ನಮ್ಮ ಪೂರ್ವಜರು ಚೆನ್ನಾಗಿ ಪರಿಶೋಧಿಸಿ ಅನೇಕ ಗೂಢ ವಿಷಯಗಳನ್ನು ಕಂಡುಹಿಡಿದದ್ದನ್ನು ಈಗಿನ ಪಾಶ್ಚಿಮಾತ್ಯ ಮಾನಸಿಕ ಶಾಸ್ತ್ರಾಭ್ಯಾಸಿಗಳು ಸಹ ಒಪ್ಪಿಕೊಳ್ಳಹತ್ತಿದ್ದಾರೆ. ಮತ್ತು ಈಗಿನವರು ಮಾಡುತ್ತಿದ್ದ ಅನೇಕ ಮಾನಸಿಕ ಅದ್ಭುತ ಕೌಶಲ್ಯಗಳು ಈ ತತ್ವಗಳ ವ್ಯವಹಾರಿಕ ಪ್ರಯೋಗಗಳೇ ಎಂದು ಹೇಳಬಹುದು.

ಹಿಂದಿನ ಕಾಲದ ಶಿವಶರಣರು ಹಿಂದೂ ಧರ್ಮದ ಈ ತತ್ವಗಳನ್ನೇ ಅನುಸರಿಸಿ ಅವುಗಳನ್ನೊಳಕೊಂಡ ತಮ್ಮ ಒಂದು ವಿಶಿಷ್ಟ ಮಾರ್ಗವನ್ನು ಹುಡುಕಿರುವರು. ಇದಕ್ಕೆ ಷಟ್‌ಸ್ಥಲ ಮಾರ್ಗವೆಂಬ ಹೆಸರಿದೆ ಇದರಲ್ಲಿ ಅವರು ಯೋಗಶಾಸ್ತ್ರದ ಮುಖ್ಯ ತತ್ವಗಳನ್ನು ಸಂಪೂರ್ಣವಾಗಿ ಹೆಣೆದಿರುತ್ತಾರೆ.

ಷಟ್‌ಸ್ಥಲದಲ್ಲಿ ಆರು ವಿಭಾಗಗಳಿದ್ದು ಭಕ್ತಿಯೋಗ ಮತ್ತು ಕರ್ಮಯೋಗಗಳು ಮೊದಲನೆಯ ಎರಡು ವಿಭಾಗಗಳಾದ ಭಕ್ತ ಮತ್ತು ಮಹೇಶ್ವರ ಸ್ಥಲಗಳಲ್ಲಿ ಸೇರ್ಪಡೆಯಾಗಿರುತ್ತವೆ. ಈ ಎರಡೂ ಸ್ಥಲಗಳ ವೈಶಿಷ್ಟ್ಯಗಳು ಭಕ್ತಿ ಭಾವ ಮತ್ತು ಆಚರಣೆಯ ಶುದ್ಧತೆ ಇವುಗಳೇ ಇರುತ್ತವೆ. ಇವೆರಡೂ ಸ್ಥಲಗಳಿಗೆ ಸಂಬಂಧಿಸಿದ ಏಕೋತ್ತರ ಶತಸ್ಥಲಗಳಲ್ಲಿಯ ಸ್ಥಲಗಳನ್ನು ತೆಗೆದುಕೊಂಡರೆ, ಅವೆಲ್ಲವೂ ಭಕ್ತಿ ಮತ್ತು ಕರ್ಮಗಳನ್ನು ವಿಶೇಷವಾಗಿ ವಿವೇಚಿಸುತ್ತವೆಂಬದನ್ನು

ನಾವು ಸ್ಪಷ್ಟವಾಗಿ ಕಂಡು ಹಿಡಿಯಬಹುದು. ಈ ಸ್ಥಲಗಳು ಯಾವವೆಂದರೆ:— ಭಕ್ತಸ್ಥಲದಲ್ಲಿ ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿಯಸ್ಥಲ, ರುದ್ರಾಕ್ಷಿಯಸ್ಥಲ, ಪಂಚಾಕ್ಷರಿಯಸ್ಥಲ, ಭಕ್ತಸ್ಥಲ. ಆ ಮೇಲೆ ಉಭಯಸ್ಥಲ, ತ್ರಿವಿಧ ಸಂಪತ್ತಿಸ್ಥಲ, ಚತುರ್ವಿಧ ಸಾರಾಯಸ್ಥಲ, ಉಪಾಧಿ ಮಾಟಸ್ಥಲ, ನಿರುಪಾಧಿ ಮಾಟಸ್ಥಲ, ಮತ್ತು ಸಹಜ ಮಾಟಸ್ಥಲಗಳಿವೆ. ಹೀಗೆ ೧೫ ಸ್ಥಲಗಳಿದ್ದು, ಇವುಗಳಲ್ಲಿ ಮೊದಲನೆಯ ಒಂಬತ್ತು ಭಕ್ತಸ್ಥಲಕ್ಕೆ ಯೋಗ್ಯನನ್ನಾಗಿ ಮಾಡಲು ಅವಶ್ಯವಾದ ಸ್ಥಲಗಳಿದ್ದು, ಅವುಗಳ ಮುಂದಿನ ಸ್ಥಲಗಳು ಭಕ್ತನು ಹೇಗೆ ಆಚರಿಸಬೇಕೆಂಬುದನ್ನು ವಿವರಿಸುತ್ತವೆ. ಇವುಗಳಲ್ಲಿ ಕರ್ಮಯೋಗದ ತತ್ವಗಳಿರುತ್ತವೆ. ಮನುಷ್ಯನಲ್ಲಿ ಶ್ರೇಷ್ಠ ವೃತ್ತಿಯನ್ನು ಬಲಪಡಿಸಲು ಇವು ಕಾರಣಗಳಾಗುತ್ತವೆ

ಮಹೇಶ್ವರ ಸ್ಥಲಕ್ಕೆ ಸಂಬಂಧಪಟ್ಟ ಸ್ಥಲಗಳು ಒಂಬತ್ತು ಇವೆ. ಅವು ಯಾವವೆಂದರೆ:— ಮಹೇಶ್ವರಸ್ಥಲ, ಲಿಂಗನಿಷ್ಠಾಸ್ಥಲ, ಪೂರ್ವಾಶ್ರಯ ನಿರಸನಸ್ಥಲ, ವಾಗದ್ವೈತ ನಿರಸನಸ್ಥಲ, ಅಷ್ಟ ತನುಮೂರ್ತಿ ನಿರಸನಸ್ಥಲ, ಶಿವ ಜಗನ್ಮಯಸ್ಥಲ, ಭಕ್ತದೇಹಿಕ ಲಿಂಗಸ್ಥಲ, ಎಂದು ಇರುತ್ತವೆ. ಇವುಗಳು ಲಿಂಗನಿಷ್ಠೆಯನ್ನು ವಿವರಿಸುತ್ತವೆ ಹೀಗೆ ವಿವರಿಸುವಲ್ಲಿ ಜಗತ್ತು, ತಾನು ಮತ್ತು ಇತರರು ಇವೆಲ್ಲವರೊಡನೆ ಭಕ್ತನು ಹೇಗೆ ವ್ಯವಹರಿಸಬೇಕೆಂಬುದನ್ನು ಈ ಸ್ಥಲಗಳು ಸ್ಪಷ್ಟೀಕರಿಸುತ್ತವೆ.

ಹಠಯೋಗದ ವಿಷಯಗಳು ಪ್ರಾಣಲಿಂಗಿ ಸ್ಥಲದಲ್ಲಿ ಬರುತ್ತವೆ. ಪ್ರಾಣಲಿಂಗಿಸ್ಥಲದ ಉದ್ದೇಶವು ಪ್ರಾಣದಲ್ಲಿ ಲಿಂಗವನ್ನು ಸ್ಥಿರಪಡಿಸುವುದೇ ಇದ್ದು ಈ ವಿಷಯದಲ್ಲಿ ಮನುಷ್ಯನ ಅಂತರಂಗದ ವಿಕಾಸದ ಮಾರ್ಗವನ್ನು ಮತ್ತು ಅದರ ಶಕ್ತಿಯ ಹೆಚ್ಚಳಿಗೆಯನ್ನು ವೀರಶೈವ ಷಟ್ಸ್ಥಲ ಶಾಸ್ತ್ರಕಾರರು ಬಹು ಚನ್ನಾಗಿ ವಿವರಿಸುತ್ತಾರೆ. ಇದರಲ್ಲಿ ಮನುಷ್ಯನು ಲಿಂಗಧ್ಯಾನವನ್ನು ಹೇಗೆ ಮಾಡಬೇಕು, ಈ ಧ್ಯಾನದ ಮೂಲಕ ತನ್ನ ಅಂತರಂಗ ಶಕ್ತಿಗಳನ್ನು ಹೇಗೆ ಹೆಚ್ಚಿಸಬೇಕು, ಇವೇ ಮೊದಲಾದ ಮಹತ್ವದ ಗೂಢ ವಿಷಯಗಳು ಬರುತ್ತವೆ.

ಜ್ಞಾನಯೋಗ ಮತ್ತು ರಾಜಯೋಗದ ತತ್ವಗಳು ಶರಣ ಮತ್ತು ಐಕ್ಯಸ್ಥಲಗಳಲ್ಲಿ ಬರುತ್ತವೆ.



ಈ ಪ್ರಕಾರ ಈ ಎಲ್ಲ ಯೋಗಗಳು ಷಟ್ಸ್ಥಲ ಶಾಸ್ತ್ರದ ಬೇರೆ ಬೇರೆ ಭಾಗಗಳಲ್ಲಿ ಸಂಬಂಧಪಡುತ್ತವೆ. ಮತ್ತು ಈ ಷಟ್ಸ್ಥಲದ ತತ್ವಗಳ ಪ್ರಕಾರ ಇವೆಲ್ಲವುಗಳು ಪರಸ್ಪರ ಸಂಬಂಧಪಡುತ್ತ ಮನುಷ್ಯನ ಬಹಿರಂಗ ಮತ್ತು ಅಂತರಂಗಿಕ ಗುಣಗಳನ್ನು ವಿಕಾಸಪಡಿಸುವದರಲ್ಲಿ ಪರಿಣಮಿಸುತ್ತವೆ. ಈ ವಿಷಯಗಳನ್ನು ವೀರಶೈವಧರ್ಮ ಗ್ರಂಥಕಾರರು ಆಯಾ ಸ್ಥಲಗಳಲ್ಲಿ ಬಹು ಸ್ಪಷ್ಟವಾಗಿ ವಿವರಿಸುವದುಂಟು.

ಈ ಮೇರೆಗೆ ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗ ಮತ್ತು ರಾಜಯೋಗ ಇವುಗಳ ತತ್ವಗಳನ್ನು ವೀರಶೈವಧರ್ಮ ಶಾಸ್ತ್ರಕಾರರು ಅಂಗೀಕರಿಸಿದರೂ ಅವರು ಇವುಗಳೆಲ್ಲವೂ ಭವಕ್ಕೆ ಅಂದರೆ ಪ್ರಪಂಚಕ್ಕೆ ಎಳಿಸುವವೆಂದು ಅವರ ಮತವಿದೆ ಆದ್ದರಿಂದ ಅವರು ಈ ಸ್ಥಿತಿಯುಂಟಾಗಬಾರದೆಂದು ಲಿಂಗಾಂಗ ಸಾಮರಸ್ಯ ಭಾವವನ್ನು ತಂದುಕೊಡುವ ಶಿವಯೋಗಾಚರಣೆಯನ್ನು ಪ್ರಚಾರದಲ್ಲಿ ತಂದಿದ್ದಾರೆ. ಅವರು ಈ ಆಚರಣೆಯನ್ನೇ ತಮ್ಮ ಉಕ್ತಿಗಳಲ್ಲಿ ಬೋಧಿಸುತ್ತಾರೆ. ಅವರು ಲಿಂಗ ವಿರಹಿತವಾದ ಭೋಗ ಮಾರ್ಗಗಳನ್ನು ತಮ್ಮ ವಚನಗಳಲ್ಲಿ ಆಗಿಂದಾಗ್ಗೆ ಟೀಕಿಸುವದುಂಟು. ಈ ವಿಷಯವಾಗಿ ಪ್ರಸಿದ್ಧ ವಚನಕಾರರಾದ ತೋಂಟದ ಸಿದ್ಧಲಿಂಗೇಶ್ವರರು ತಮ್ಮ ಒಂದು ವಚನದಲ್ಲಿ ಹೇಳಿರುವದು ಹೇಗೆಂದರೆ: —

“ಲಂಬಿಕಾಯೋಗಿಗಳ ಡೊಂಬರಿಗೆ ಸರಿ ಎಂಬೆ. ಹಠಯೋಗಿಗಳ ಆಟಮಟಕಾರರೆಂದೆಂಬೆ. ಅಷ್ಟಾಂಗಯೋಗಿಗಳ ಕಷ್ಟಕರ್ಮಿಗಳೆಂಬೆ. ಪವನಯೋಗಿಗಳ ಪ್ರಪಂಚಿಗಳೆಂದೆಂಬೆ. ಲಯಯೋಗಿಗಳ ನಾಯಿಗಿಂತ ಕಡೆ ಎಂಬೆ. ಅದೇನು ಕಾರಣವೆಂದಡೆ ಲಯಯೋಗವೆಂಬುದು ನಾನಾದರ್ಶನದಲ್ಲಿ ವರ್ತಿಸುವುದಾಗಿ. ಅದನ್ನು ಶಿವಯೋಗಿಗಳು ಒಲ್ಲರು. ಮಂತ್ರಯೋಗವೆಂಬುದು ಸರ್ವರ ಸಂದೇಹಕ್ಕಿಕ್ಕಿ ಕೊಲ್ಲುತಿಪ್ಪುದು. ಅದೇನು ಕಾರಣವೆಂದಡೆ ಮಂತ್ರವೇ ಲಿಂಗ, ಲಿಂಗವೇ ಮಂತ್ರವೆಂದರಿದು ಲಿಂಗ ನೆನಹು ಸಂಬಂಧಿಸಿಕೊಳ್ಳಲರಿಯದೆ ಲಿಂಗವಿರಹಿತರಾಗಿ ಮಾಡುತಿರ್ಪರಾಗಿ ಅದನ್ನು ಅಂಗ ಲಿಂಗ ಸಂಬಂಧಿಗಳು ಮೆಚ್ಚರು ನೋಡಾ. ರಾಜಯೋಗವೆಂಬುದು ಗಾಜು ಗೋಜು ನೋಡಾ. ಅದನ್ನು

ಲಿಂಗವಿರಹಿತ ಜ್ಞಾತೃ ಜ್ಞೇಯ ಜ್ಞಾನವಾಗಿಪ್ಪುದರಿಂದ ಒಂದು ಲಿಂಗಾಂಗದ ಹೆಜ್ಜೆಯಲ್ಲ. ಅದುಕಾರಣ ಲಿಂಗನಿಷ್ಠರು ಮೆಚ್ಚರು. ಇದುಕಾರಣ ನಿಮ್ಮ ಶರಣರು ಲಿಂಗ ಪ್ರಾಣಿಗಳು, ಪ್ರಾಣಲಿಂಗ ಸಂಬಂಧಿಗಳು, ಪ್ರಸಾದಮುಕ್ತರು. ಈ ಮೂರು ಪ್ರಕಾರದಲ್ಲಿ ಕೂಡುತಿಪ್ಪರು ಶಿವಯೋಗಿಗಳು. ಅದುಕಾರಣ ನಿಮ್ಮ ಶರಣರು ಸ್ವಾನುಭಾವ ಜ್ಞಾನಶುದ್ಧ ಶಿವಯೋಗದಲ್ಲಿ ಸ್ವರೂಪ ಜ್ಞಾನಿಗಳು ಕಾಣಾ ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ. ”

ಶಿವಶರಣರ ಅಭಿಪ್ರಾಯವೇನೆಂದರೆ, ಈ ಬಗೆಯ ಯೋಗಗಳು ಮನುಷ್ಯನ ಶಕ್ತಿಯನ್ನು ಕೇವಲ ಪ್ರಪಂಚ ದೃಷ್ಟ್ಯಾ ಯಾವುದು ಶ್ರೇಷ್ಠವೋ ಅತ್ತಕಡೆಗೆ ಎಳೆಯುತ್ತವಾದ್ದರಿಂದ ಅವುಗಳು ಶಿವಯೋಗಕ್ಕೆ ಹೊರತಾದವುಗಳು. ಆದರೆ ಶಿವಯೋಗದ ಮುಖ್ಯ ಧ್ಯೇಯವು ಲಿಂಗಾನುಸಂಧಾನವು. ಅಂದರೆ ಲಿಂಗದ ಶಕ್ತಿ ಮತ್ತು ಅದರ ಪ್ರಭಾವವನ್ನು ಮನುಷ್ಯನ ಒಳಗೂ ಹೊರಗೂ ಬೀರಿ ಅದರಲ್ಲಿಯೇ ಅವನು ಕಡೆಗೆ ಲಯವಾಗುವಂತೆ ಮಾಡುವದೇ ಇರುತ್ತದೆ. ಇದರ ಮುಖ್ಯ ಸಾಧನೆಗಳ ಉದ್ದೇಶವು ಲಿಂಗದ ಕಳೆಯನ್ನು ಆಯಾ ಶಾರೀರಿಕ ಶಕ್ತಿಗಳಲ್ಲಿ ಬೆರಿಸಿ ಅವುಗಳ ಪ್ರಭಾವವನ್ನು ಹೆಚ್ಚಿಸುವದೇ ಇರುತ್ತದೆ. ಆದರೆ ಈ ಮಾರ್ಗವನ್ನು ಮೇಲ್ಕಂಡ ಯೋಗಸಾಧನೆಗಳು ಅರುಹಿಕೊಡದೆ ಅವು ಲಿಂಗವಿರಹಿತವಾಗಿ ಆಚರಿಸಲ್ಪಡುವವರಿಂದ ಅವು ಮನುಷ್ಯನನ್ನು ಸಂದೇಹಕ್ಕಿಕ್ಕುತ್ತವೆ. ಮತ್ತು ಅವನನ್ನು ಅವು ಭವದಲ್ಲಿ ಬೀಳಿಸುತ್ತವೆ ಎಂದು ಪ್ರಮಥರ ಉಕ್ತಿಗಳಿರುತ್ತವೆ.

ಈ ದೃಷ್ಟಿಯಿಂದ ಯೋಗಾಭ್ಯಾಸವನ್ನು ಖಂಡಿಸಿದ ಉಕ್ತಿಗಳು ವಚನಕಾರರಲ್ಲಿ ಅನೇಕವಿರುತ್ತವೆ. ಈ ಪ್ರಕಾರ ಈ ಅಭ್ಯಾಸವನ್ನು ನಿರಾಕರಿಸಿದವರು ವೀರಶೈವರು ಮಾತ್ರವಲ್ಲದೆ ಇನ್ನೂ ಅನೇಕರುಂಟು. ಬುದ್ಧದೇವನು ಪ್ರಪಂಚವನ್ನು ಉಪೇಕ್ಷಿಸಿ, ಪರಮಾತ್ಮನ ಮಾರ್ಗವನ್ನು ಶೋಧಿಸಬೇಕೆಂದು ಅನೇಕ ವರ್ಷ ತಪಸ್ಸು ಮಾಡಿದನು. ಆದರೆ ಅವನಿಗೆ ಅದರಲ್ಲಿ ಶಾಂತತೆಯು ದೊರೆಯದೆ ಹೋಯಿತು ಮತ್ತು ಕಡೆಗೆ ಅವನು ಆ ಮಾರ್ಗವನ್ನು ತ್ಯಜಿಸಿ ತನ್ನ ಬೌದ್ಧ ಧರ್ಮವನ್ನು ನೈತಿಕ ವಿಶಾಲ ತತ್ವಗಳ ಮೇಲೆ ಪ್ರಸ್ಥಾಪಿಸಿದನು. ಆಗ ಆ ಧರ್ಮವು ಬಹು ಜನ



ಸಮಾಜದಲ್ಲಿ ಬಹು ವಿಸ್ತಾರವಾಗಿ ಹಬ್ಬಿತು. ಹೀಗೆಯೇ ವೀರಶೈವರು ಯೋಗಾಭ್ಯಾಸವನ್ನು ನಿರಾಕರಿಸಿದ್ದುಂಟು. ಆದರೆ ಇದರಲ್ಲಿ ಅವರು ಯೋಗದ ದುರುಪಯೋಗವನ್ನು ನಿರಾಕರಿಸುವರೇ ಹೊರ್ತು ಅದರ ತತ್ವಗಳನ್ನು ನಿರಾಕರಿಸಿಲ್ಲ. ಅವರು ಅದರಲ್ಲಿ ಅಡಕವಾದ ಶ್ರೇಷ್ಠ ಮಾನಸಿಕ ಉನ್ನತಿಗೆ ಕಾರಣವಾಗುವ ಸಾಧನೆಗಳನ್ನು ಸ್ವೀಕರಿಸಿದ್ದಾರೆ. ಅವರು ಈ ಸಾಧನೆಗಳು ಶಿವಾನುಭವಕ್ಕೆ ಹೇಗೆ ಸಹಾಯಕಾರಿಗಳಾಗುವವೆಂಬುದನ್ನು ಕಂಡುಹಿಡಿದು ಆ ರೀತಿ ಷಟ್‌ಸ್ಥಲ ಮಾರ್ಗದ ರಚನೆಯನ್ನು ಅವರು ಮಾಡಿದ್ದಾರೆ. ಇದೇ ಶಿವಾನುಭವವು ಅಥವಾ ಶಿವಯೋಗವು.

ಯೋಗ ಸಾಧನೆಗಳು ಮನುಷ್ಯನ ಶಕ್ತಿಗಳನ್ನು ಪ್ರಬಲಗೊಳಿಸಿ ಅವನಲ್ಲಿ ಅದ್ಭುತ ಕಾರ್ಯಗಳನ್ನು ಮಾಡುವ ಶಕ್ತಿಯನ್ನು ಉಂಟು ಮಾಡುತ್ತಿರುವದು ಕಂಡುಬರುತ್ತದೆ. ಪಾಶ್ಚಿಮಾತ್ಯ ಮಾನಸ ಶಾಸ್ತ್ರಜ್ಞರು ಈ ಕಡೆಗೆ ತಮ್ಮ ಲಕ್ಷವನ್ನು ಹೊರಳಿಸಿ ಅವರೂ ಕೂಡ ತಮ್ಮ ಮನಸ್ಸಿನ ಪ್ರಾಬಲ್ಯದ ಮೂಲಕ ಅನೇಕ ಅದ್ಭುತಗಳನ್ನು ಮಾಡುವದುಂಟು. ಆದರೆ ಯೋಗಾಭ್ಯಾಸದ ಈ ಪ್ರಯೋಗಗಳನ್ನು ಶಿವಶರಣರು ತಮ್ಮ ಉಕ್ತಿಗಳಲ್ಲಿ ಶೀಘ್ರವಾಗಿ ಖಂಡಿಸಿರುವರು. ಈ ಬಗೆಯ ಅಮಾನುಷ ಶಕ್ತಿಗಳ ವಿಕಾಸಕ್ಕೆ ಅಜ್ಞ ಜನರು ಒಲಿದವರಾಗಿ ಅವುಗಳನ್ನು ಸಾಧಿಸಲಿಕ್ಕೆ ಅವರು ಪ್ರವೃತ್ತರಾಗುವದುಂಟು. ಇವರು ಈ ಉದ್ದಿಶ್ಯವಾಗಿ ತಮ್ಮ ಶರೀರವನ್ನು ಅನೇಕ ಬಾಧೆಗಳಿಗೆ ಒಳಗು ಮಾಡುತ್ತಾರೆ. ಹಾಗೂ ಅನೇಕ ವರ್ಷ ನಿರ್ಜನ ಪ್ರದೇಶಗಳಲ್ಲಿದ್ದು ತಪಸ್ಸನ್ನು ಆಚರಿಸುತ್ತಾರೆ. ಆದರೆ ಈ ಬಗೆಯ ಮಾರ್ಗವನ್ನು ಮತ್ತು ರೀತಿಯನ್ನು ವೀರಶೈವ ವಚನಕಾರರು ಬಹು ಸ್ಪಷ್ಟ ರೀತಿಯಿಂದ ನಿರಾಕರಿಸಿದ್ದಾರೆ. ಕರ್ನಾಟಕದಲ್ಲಿ ಪ್ರಸಿದ್ಧನಾದ ಗೋರಕ್ಷನು ಮೊದಲು ಈ ಮಾರ್ಗದಂತೆ ಆಚರಿಸಿ, ಅನೇಕ ಸಿದ್ಧಿಗಳನ್ನು ಪಡೆದುಕೊಂಡು ಕಡೆಗೆ ಅಲ್ಲಮ ಪ್ರಭುವಿನಿಂದ ಉಪದೇಶವನ್ನು ಹೊಂದಿ ಶಿವಯೋಗ ಮಾರ್ಗವನ್ನು ಅವಲಂಬಿಸಿದನು. ಅವನ ಕೆಲವು ವಚನಗಳು ಉಪಲಬ್ಧವಿದ್ದು ಅವುಗಳೊಂದರಲ್ಲಿ ಅವನು ಅನ್ನುವದೇನೆಂದರೆ:—

“ ರಸವಾದಂಗಳು ಕಲಿತಲ್ಲಿ ಲೋಹ ಸಿದ್ಧಿಯಿಲ್ಲದೆ ರಸಸಿದ್ಧಿಯಾದುದಿಲ್ಲ. ನಾನಾ ಕಲ್ಪಯೋಗ ಅದೃಶ್ಯಕರಣಂಗಳ ಕಲಿತಲ್ಲಿ

ಕಾಯಸಿದ್ಧಿಯಲ್ಲದೆ, ಆತ್ಮಸಿದ್ಧಿಯಾದುದುಂಟೇ? ನಾನಾ ವಾಗ್ವಾದಂಗಳಿಂದ ಘೋರ ಮಾತಿನ ಮಾಲೆಯಾಯಿತ್ತಲ್ಲದೆ, ಆತ್ಮ ವಿಹಿತವಾದುದಿಲ್ಲ. ನೀ, ನಾ, ಎಂದಲ್ಲಿ, ನೀನು ನಾನಾದೆಯಲ್ಲದೆ, ನಾನು ನೀನಾದುದಿಲ್ಲ. ಗೋರಕ್ಷಪಾಲಕ ಮಹಾಪ್ರಭುಸಿದ್ಧ ಸೋಮನಾಥಲಿಂಗ ನೀ ನಾನಾದೆಯಲ್ಲದೆ ಲೀಯ್ಯವಾಗಿ ನಾ ಆ ಲಿಂಗವೆಯಾದುದಿಲ್ಲ.”

ಈ ವಚನವು ಯೋಗಶಾಸ್ತ್ರ ಮತ್ತು ಶಿವಯೋಗ ಇವುಗಳಲ್ಲಿಯ ಅಂತರವನ್ನು ಬಹು ಚನ್ನಾಗಿ ವ್ಯಕ್ತಪಡಿಸುತ್ತದೆ. ಯೋಗಶಾಸ್ತ್ರದ ಅಭ್ಯಾಸದ ಮೂಲಕ ಕಾಯದ ಗುಣಗಳು ವೃದ್ಧಿಯನ್ನು ಹೊಂದಬಹುದು. ಅದರ ಮೂಲಕ ಅವನಲ್ಲಿ ಅನೇಕ ಶಕ್ತಿಗಳು ಬಲಗೊಳ್ಳಬಹುದು. ಆದರೆ ಇವೆಲ್ಲಕ್ಕೂ ಸ್ಥಾನವಾದ ಯಾವ ಆತ್ಮವೋ ಅದರ ಅಂತಿಮ ಧ್ಯೇಯವಾದ ಲಿಂಗಾಂಗ ಸಾಮರಸ್ಯವು ಮಾತ್ರ ಅವನಿಗೆ ದೊರಕಲಾರದು. ಮತ್ತು ಯೋಗಾಭ್ಯಾಸದ ಮೂಲಕ “ನೀನು ನಾನಾದೆಯಲ್ಲದೆ, ನಾನು ನೀನಾದುದಿಲ್ಲ” ಎಂದು ಗೋರಕ್ಷನು ಭಾವಗರ್ಭಿತವಾಗಿ ಇಂಥ ಯೋಗಾಭ್ಯಾಸದ ದುರುಪಯೋಗವನ್ನು ತನ್ನ ಮೇಲ್ಕಂಡ ವಚನದಲ್ಲಿ ಖಂಡಿಸಿರುತ್ತಾನೆ.

ಶಿವಯೋಗಾಭ್ಯಾಸವನ್ನು ನಡಿಸುವ ರೀತಿಯನ್ನು ವೀರಶೈವ ವಚನಕಾರರು ತಮ್ಮ ಅಸಂಖ್ಯ ವಚನಗಳಲ್ಲಿ ನುಡಿದಿರುವರು. ಮನುಷ್ಯನು ತನ್ನ ಪ್ರತಿ ಕ್ಷಣದ ನಡೆ, ನುಡಿ, ಕ್ರಿಯೆಗಳಲ್ಲಿ ಲಿಂಗದ ಪ್ರಕಾಶವನ್ನು ಹೊರಗೆಡಹುತ್ತ ವ್ಯವಹರಿಸುವುದೇ ನಿಜವಾದ ಯೋಗವಾಗಿದೆ. ಇದೇ ಶಿವಯೋಗವು ಅಥವಾ ಲಿಂಗಾನುಭವವು. ಬಾಹ್ಯ ಲೌಕಿಕ ಅದ್ಭುತ ಕ್ರಿಯೆಗಳಿಗೆ ಶಿವಶರಣರು ಮಹತ್ವವನ್ನಿತ್ತಿಲ್ಲ. ಕೇವಲ ಕರ್ಮಮಾರ್ಗದ ರೀತಿ ನಡೆಗಳಿಗೂ ಷೋಡಶ ಸಂಸ್ಕಾರಗಳಿಗೂ ಯಜ್ಞಯಾಗಾದಿ ಕರ್ಮಗಳಿಗೂ ಅವರು ಮಹತ್ವವನ್ನು ಕೊಟ್ಟಿಲ್ಲ ಬ್ರಾಹ್ಮಣ ಗ್ರಂಥಗಳು ಇಂಥ ಕರ್ಮಗಳಿಗೆ ವಿಶೇಷ ಮಹತ್ವವನ್ನು ಕೊಟ್ಟು ಅವುಗಳ ಸಂಖ್ಯೆಯನ್ನು ಬಹಳ ಬೆಳಿಸಿರುತ್ತವೆ. ಅವು ಯೋಗಾಭ್ಯಾಸದ ಅಲೌಕಿಕ ಸಿದ್ಧಿಗಳಿಗೆ ಬಹಳ ಮಹತ್ವವನ್ನು ಕೊಟ್ಟು ಜನರ ಮನಸ್ಸನ್ನು ಅವುಗಳ ಕಡೆಗೆ ಆಕರ್ಷಿಸಿರುತ್ತವೆ. ಹಾಗೆಯೇ ಶೈವರ ಆಗಮ ಗ್ರಂಥಗಳು ಮೂರ್ತಿ ಸ್ಥಾಪನೆಗೆ ಅತ್ಯಂತ ಮಹತ್ವವನ್ನು



ಕೊಟ್ಟು ಅವುಗಳ ಪೂಜಾದಿ ಕರ್ಮಗಳನ್ನೂ ಅವುಗಳಿಗೆ ಸಂಬಂಧಿಸಿದ ಅನೇಕ ಆಚಾರ-ವಿಚಾರಗಳನ್ನೂ ಬಹುವಾಗಿ ಬೆಳಿಸಿರುತ್ತವೆ. ಆದರೆ ಶಿವಶರಣರು ಈ ಬಗೆಯ ಬಾಹ್ಯ ವರ್ತನೆಗಳಿಗೆ ಮಹತ್ವವನ್ನು ಕೊಟ್ಟಿರುವದಿಲ್ಲ. ಅವರು ಮನುಷ್ಯನ ಮಾನಸಿಕ ಮತ್ತು ನೈತಿಕ ಜಾಗ್ರತೆಗೆ ಮಹತ್ವ ಕೊಟ್ಟಿದ್ದಾರೆ. ಈ ವಿಷಯವಾಗಿ ಬಸವೇಶ್ವರನ ಕಾಲದಲ್ಲಿ ಬಹಳ ಚರ್ಚೆಗಳಾಗುತ್ತಿದ್ದು ಇವುಗಳ ಪರಿಣಾಮವಾಗಿ ಕಲ್ಯಾಣದಲ್ಲಿ **ಶಿವಾನುಭವ ಮಂಟಪದ** ಸ್ಥಾಪನೆಯಾಯಿತು. ಈ ಮಂಟಪದಲ್ಲಿ ಪೂರ್ವದ ಶೈವರ ಧರ್ಮ ಆ ವರೆಗೆ ನಡೆದುಬಂದ ಶಿವಶರಣರ ನಡೆ ಮತ್ತು ವೈದಿಕ ಧರ್ಮ ಇವುಗಳಲ್ಲಿ ಶ್ರೇಷ್ಠ ತತ್ವಗಳಾವವೆಂಬುದು ವಿಮರ್ಶಿಸಲ್ಪಟ್ಟು ಅವುಗಳ ಮೇಲೆ ಶಿವಾನುಭವವು ಅಥವಾ ಶಿವಯೋಗವು ಅಥವಾ ಲಿಂಗಾನುಸಂಧಾನವು ಪ್ರಸ್ಥಾಪಿಸಲ್ಪಟ್ಟಿರುತ್ತದೆ.

ಈ ಶಿವಯೋಗವು ಷಟ್‌ಸ್ಥಲಾತ್ಮಕವಾಗಿರುತ್ತದೆ. ಇದರ ಪ್ರಕಾರ ದೇಹವನ್ನು ಕ್ಲೇಶಪಡಿಸುವ ಕಾರಣವಿಲ್ಲ. ಇಂದ್ರಿಯಗಳನ್ನು ಕಷ್ಟಪಡಿಸುವದು ಅನಾವಶ್ಯಕವು. ಮೊದಲು ನೈತಿಕ ಉನ್ನತಿ, ಅದರೊಡನೆ ಮಾನಸಿಕ ಉನ್ನತಿ, ಮತ್ತು ಜ್ಞಾನಾನುಭವದ ಮೂಲಕ ಭಾವೋನ್ನತಿ, ಇವುಗಳನ್ನು ಮನುಷ್ಯನು ತನ್ನಲ್ಲಿ ಉಂಟುಮಾಡಿಕೊಂಡು ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳನ್ನು ಉಜ್ವಲಗೊಳಿಸತಕ್ಕದ್ದು. ಇದು ಷಟ್‌ಸ್ಥಲಾಚರಣೆ, ಪಂಚಾಚಾರ, ಸಪ್ತಾಚಾರ, ಕಾಯಕ ಮತ್ತು ಪ್ರಸಾದಸೇವನೆ ಇವುಗಳ ಮೂಲಕ ಸಾಧ್ಯವಾಗುತ್ತದೆ. ಇದರಿಂದ ವೀರಶೈವರಲ್ಲಿ ಇಂದ್ರಿಯ ನಿಗ್ರಹ ಮಾಡುವದು ಅನಾವಶ್ಯಕವಾಗುತ್ತದೆ. ಇಂದ್ರಿಯ ನಿಗ್ರಹದ ವಿಷಯವಾಗಿ ಬಸವೇಶ್ವರನು ತನ್ನ ಒಂದು ವಚನದಲ್ಲಿ ಹೇಳಿರುವದೇನಂದರೆ:—

“ಇಂದ್ರಿಯ ನಿಗ್ರಹ ಮಾಡಿದರೆ ಹೊಂದುವವು ದೋಷಂಗಳು. ಮುಂದೆ ಬಂದು ಕಾಡುವವು ಪಂಚೇಂದ್ರಿಯಗಳು. ಸತಿ-ಪತಿ ರತಿ ಸುಖವ ಬಿಟ್ಟರೆ ಸಿರಿಯಾಳ ಚಂಗಳೆಯರು? ಸತಿ-ಪತಿ ರತಿ ಸುಖ ಭೋಗೋಪಭೋಗವ ಬಿಟ್ಟರೆ ಸಿಂಧು ಬಲ್ಲಾಳರು? ನಿಮ್ಮ ಮುಟ್ಟಿ ಪರಧನ–ಪರಸ್ತ್ರೀಗೆಳಸಿದಡೆ ನಿಮ್ಮ ಚರಣಕ್ಕೆ ದೂರ ಕೂಡಲ ಸಂಗಮದೇವಾ.”

ಹೀಗೆ ಶಿವಯೋಗ ಸಂಪನ್ನರಾದ ಶಿವಾನುಭವಿಗಳು ಇಂದ್ರಿಯದಮನ ಮಾಡಬೇಕೆಂದು ಅವುಗಳ ಹಿಂಸೆಯನ್ನು ಮಾಡದೆ ಪ್ರಸಾದ ರೂಪವಾಗಿ ಅವುಗಳ ಕಾರ್ಯಗಳನ್ನು ನೆರವೇರಿಸುತ್ತ "ಲಿಂಗ ಭೋಗೋಪಭೋಗಿ"ಗಳಾಗಿರತಕ್ಕದ್ದೆಂದು ಬೋಧಿಸಿದ್ದಾರೆ. ಈ ತತ್ವ ಅಥವಾ ಮಾರ್ಗವನ್ನು ಅನುಸರಿಸಿದ್ದರ ಮೂಲಕ ಅವರು ನೀತಿ, ಸದ್ವರ್ತನೆ ಇವುಗಳಿಗೆ ಉಚ್ಚ ಸ್ಥಾನವನ್ನು ಕೊಟ್ಟಿರುವರು. ಆದ್ದರಿಂದ ಜನರೊಡನೆ ಹೇಗೆ ಮನುಷ್ಯನು ವರ್ತಿಸಬೇಕು, ಇಂದ್ರಿಯಗಳ ವ್ಯಾಪಾರಗಳನ್ನು ಹೇಗೆ ಸಾಗಿಸಬೇಕು ಎಂಬುದನ್ನು ಅವರು ನಿರ್ಧರಿಸಬೇಕಾಯಿತು. ಈ ಕಾರಣ ವಚನಕಾರರು ತಮ್ಮ ವಚನಶಾಸ್ತ್ರದಲ್ಲಿ ನೈತಿಕ ಆಚರಣೆಗೆ ಮಹತ್ವದ ಸ್ಥಾನವನ್ನು ಕೊಟ್ಟಿರುತ್ತಾರೆ.

ಇಂಥ ನೈತಿಕಾಚಾರಯುಕ್ತ ಶಿವಯೋಗಾಚರಣೆಯ ಮೂಲಕ ಮನುಷ್ಯನ ಶಕ್ತಿಗಳು ತಾವಾಗಿಯೇ ಅವನಲ್ಲಿ ವಿಕಾಸ ಹೊಂದಹತ್ತುವವು. ಇದು ವಚನಕಾರರ ಅಭಿಪ್ರಾಯವು ಆದ್ದರಿಂದ ಸಾಧಕನು ಪ್ರಪಂಚವನ್ನು ಬಿಟ್ಟುಕೊಟ್ಟು ಅರಣ್ಯವಾಸಿಯಾಗಿ ಕಠಿಣ ತಪಸ್ಸನ್ನಾಚರಿಸುವದು ಅನಾವಶ್ಯಕವು. ಅವನು ಜಗತ್ತಿನಲ್ಲಿದ್ದುಕೊಂಡು ತನ್ನ ಕಾಯಕವನ್ನು ಸರಿಯಾಗಿ ನೆರವೇರಿಸುತ್ತ ಹೋಗಬೇಕು. ಮಹಾ ಜ್ಞಾನಿಯಾದ ಕಾಡಸಿದ್ಧೇಶ್ವರರು ಈ ವಿಷಯವಾಗಿ ಹೇಳಿರುವದೇನಂದರೆ:—

"ಇಂತಪ್ಪ ಭೇದವ ತಿಳಿಯದೆ ಪುರಾತನರ ವಚನವ ನೋಡಿ, ಕೇಳಿ ಹೊನ್ನು ಹೆಣ್ಣು ಮಣ್ಣನು ಬಿಟ್ಟು ಪ್ರಪಂಚ ಬಿಟ್ಟೆವು ಎಂಬಿರಿ. ಬಿಟ್ಟ ಪರಿಯ ಹೇಳಿರಯ್ಯ. ಹೊನ್ನಲ್ಲವೇ ಆತ್ಮನು? ಹೆಣ್ಣಲ್ಲವೇ ಮನಸ್ಸು? ಮಣ್ಣಲ್ಲವೇ ಪೃಥ್ವಿ ತತ್ವಾಂಶಿಕವಾದ ದೇಹವು? ಇಂತಪ್ಪ ತ್ರಿವಿಧ ಹೊನ್ನು, ಹೆಣ್ಣು, ಮಣ್ಣು, ಇವುಗಳನೆ ಒಳಗಿಟ್ಟುಕೊಂಡು ಬಾಹ್ಯದ ಹೊನ್ನು, ಹೆಣ್ಣು, ಮಣ್ಣನೆ ಬಿಟ್ಟರೆ ಬಿಟ್ಟಂತಾಯಿತ್ತೆ ಎಲಾ ಮರುಳು ಮಾನವರಿರಾ? ದೇಹವ ದಗ್ಧವ ಮಾಡಬೇಕೆಂದು ಅನ್ನ ಉದಕವ ಬಿಟ್ಟು ಅರಣ್ಯದಲ್ಲಿಗೆ ಹೋಗಿ ಕಂದ ಮೂಲ ಪರ್ಣಾಹಾರವ ಭಕ್ಷಿಸಿ ತನುವ ಒಣಗಿಸಿದರೇನು? ದೇಹ ದಗ್ಧವಾದಂತಾಯಿತ್ತೆ? ಆಗದು. ಹುತ್ತದ ಮೇಲೆ ಬಡಿದು ಸರ್ಪವ ಕೊಂದಂತಾಯಿತ್ತಲ್ಲದೆ ದೇಹ ದಗ್ಧವಾಗಲರಿಯದು. ಎಲೆ ಮರುಳು ಮಾನವರಿರಾ, ಅದೆಂತೆಂದೊಡೆ



ಶಿವಜ್ಞಾನೋದಯವಾಗಿ ಗುರುಕಾರುಣ್ಯವ ಪಡೆದು ಲಿಂಗಾಂಗ ಸಂಬಂಧಿಯಾದ ಶಿವಶರಣರ ದೇಹವು ಜ್ಞಾನಾಗ್ನಿಯಲ್ಲಿ ದಗ್ಧವಾಯಿತ್ತಲ್ಲದೆ ಉಳಿದ ಜೀವಾತ್ಮರ ದೇಹವು ದಗ್ಧವಾಗಲರಿಯದು. ದೇಹದ ಗುಣವ ಬಿಡಬೇಕೆಂಬರಿ. ಬಿಡಲಿಕ್ಕೇನು ಕಟ್ಟಿದ ಪಶುಗಳೇ? ಬಿಡಲಿಕ್ಕೇನು ಹಟ್ಟಿಯ ಕುರಿಗಳೇ? ಕಣ್ಣಿಗೆ ಕಾಣಿಸದ ಕೈಗೆ ಸಿಕ್ಕದ ಗುಣಂಗಳನು ಬಿಡಬೇಕೆಂಬರಿ. ಇದಕ್ಕೆ ದೃಷ್ಟ- ಸೂರ್ಯನ ಬಿಂಬ ಜಲದಲ್ಲಿ ಕಾಣುವದು. ಆ ಬಿಂಬ ಹಿಡಿಯಬಲ್ಲರೆ ಗುಣ ಬಿಟ್ಟರೆಂಬೆ. ಜ್ಯೋತಿಯ ಪ್ರಭೆಯ ಕಡೆಯಕ್ಕೆ ತೆಗೆದು ಹಿಡಿಯಬಲ್ಲರೆ ಗುಣ ಬಿಟ್ಟರೆಂಬೆ. ದೇಹದೊಳಗಣ ಪ್ರಾಣವ ಬಹಿಷ್ಕರಿಸಿ ಹಿಡಿಯಬಲ್ಲರೆ, ಗುಣ ಬಿಟ್ಟರೆಂಬೆ. ಇಂತಿ ಭೇದವ ತಿಳಿಯದೆ ತನುಮನವ ಬಳಲಿಸಿ ಭವದತ್ತ ಮುಖವಾಗಿ ಹೋಗುವ ಹೇಸಿ ಮೂಳರ ಕಂಡು ನಾಚಿತ್ತಯ್ಯ ಎನ್ನ ಮನವು, ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ವಾಯ ಪ್ರಭುವೇ."

ಇದರಲ್ಲಿ ಕಾಡ ಸಿದ್ಧೇಶ್ವರರು ಅತ್ಯಂತ ಸ್ಪಷ್ಟ ಶಬ್ದಗಳಿಂದ ಶಿವಯೋಗ ಅಥವಾ ಶಿವಾನುಭವದ ಮರ್ಮವನ್ನು ತಿಳಿಸಿಹೇಳಿದ್ದಾರೆ. ಹೀಗೆ ಶಿವಶರಣರು ಶಿವಯೋಗದಲ್ಲಿ ಲಿಂಗಾನುಭವವನ್ನು ಹೊಂದಬೇಕೆಂಬುದನ್ನೇ ತಮ್ಮ ಮುಖ್ಯ ಗುರಿಯನ್ನಾಗಿಟ್ಟುಕೊಂಡು ಅದನ್ನು ಜಾಗೃತಪಡಿಸುವಂಥ ಷಟ್‌ಸ್ಥಲಾಚರಣೆ, ಅಷ್ಟಾವರಣ, ಏಕೋತ್ತರ ಶತಸ್ಥಲ, ಪಂಚಾಚಾರ, ಮೊದಲಾದ ಆಚಾರಗಳ ವಿಷಯಗಳನ್ನು ತಮ್ಮ ವಚನಗಳ ದ್ವಾರಾ ಜಗತ್ತಿನಲ್ಲಿ ಸ್ಫುಟವಾದ ಶಬ್ದಗಳಿಂದ ಬೋಧಿಸಿದ್ದಾರೆ.

ಇದರಿಂದ ಅವರು ಸಮಾಜದಲ್ಲಿ ಒಂದು ಮಹತ್ವದ ಕ್ರಾಂತಿಯನ್ನು ಮಾಡಲು ಶಕ್ತರಾದರು. ಅವರು ಜನರಲ್ಲಿ ನೀತಿಯನ್ನೂ ಧಾರ್ಮಿಕ ವೃತ್ತಿಯನ್ನೂ ಬೀರಿದರು. ಲಿಂಗದ ತಿಳುವಳಿಕೆಯನ್ನು ಎಲ್ಲರಲ್ಲಿ ಹುಟ್ಟಿಸಿದರು. ಮನಸ್ಸಿನಲ್ಲಿ ಶುದ್ಧತೆಯನ್ನು ಹೆಚ್ಚಿಸಿದರು. ಹೀಗೆ ಅವರು ಸಮಾಜದಲ್ಲಿ ಉನ್ನತವಾದ ಮತ್ತು ಸ್ಥಿರವಾದ ಸುಧಾರಣೆಯನ್ನುಂಟುಮಾಡಿದರು.

—ರಾ|| ಬ|| ಫ. ಗು. ಹಳಕಟ್ಟಿ ವಿಜಾಪುರ.

# ಕಾಯಕ.

ಶಿವಶರಣರ ವಚನಗ್ರಂಥಗಳಲ್ಲಿ ಕಾಯಕವೆಂಬ ಶಬ್ದವು ಮೇಲಿಂದ ಮೇಲೆ ಬರುತ್ತದೆ. ಈ ಶಬ್ದದ ನಿಜವಾದ ಅರ್ಥವೇನೆಂಬುದನ್ನು ತಿಳಿಯುವದು ಅತ್ಯಾವಶ್ಯಕವಾಗಿರುತ್ತದೆ. ಇದರ ಅರ್ಥವು ಈಗಿನ ಕಾಲದಲ್ಲಿ ವಿಪರೀತವಾಗಿರುತ್ತದೆ. ಕಾಯಕಕ್ಕೆ ಭಿಕ್ಷೆ ಬೇಡತಕ್ಕ ಒಂದು ವಿಧವು ಎಂಬ ಅರ್ಥವು ಸಾಮಾನ್ಯವಾಗಿ ಬಂದಿದೆ. ವೀರಶೈವರಲ್ಲಿ ಕಾಯಕದ ಅಯ್ಯಗಳೆಂಬ ವರ್ಗವು ಇರುವದು ಎಲ್ಲರಿಗೂ ಗೊತ್ತಿದೆ. ಇವರ ಕಾಯಕಗಳಲ್ಲಿ ಮುಳ್ಳಾವಿಗೆ ಕಾಯಕ, ಗಂಟೆಯ ಕಾಯಕ, ಕಂಬದ ಕಾಯಕ ಎಂಬ ನಾನಾವಿಧ ಭೇದಗಳಿರುತ್ತವೆ. ಕಾಯಕ ಮಾಡುವವರು ಚಿತ್ರವಿಚಿತ್ರವಾದ ಉಡುಪುಗಳನ್ನು ಧರಿಸಿಕೊಂಡು ಗ್ರಾಮಾಂತರಗಳಲ್ಲಿ ಸಂಚರಿಸುತ್ತ ಜನರನ್ನು ನಿರ್ಬಂಧಿಸಿ ಭಿಕ್ಷೆಯನ್ನು ಈಗಲೂ ಎತ್ತುತ್ತಾರೆ. ಇದರ ಮೇಲಿಂದ ಕಾಯಕವೆಂದರೆ ವೀರಶೈವರಲ್ಲಿಯ ಒಂದು ಭಿಕ್ಷುಕ ವರ್ಗವೆಂದು ಜನರು ಅನ್ನುವದು ಸಹಜಿಕವೇ ಸರಿ. ಆದರೆ ವಚನಗ್ರಂಥಗಳಲ್ಲಿ ಇದಕ್ಕೆ ಈ ಅರ್ಥವು ಇರುವದಿಲ್ಲ. ಅವುಗಳಲ್ಲಿ ಕಾಯಕದ ಅರ್ಥವು ಬಹು ಉದಾತ್ತವಾಗಿರುತ್ತದೆ. ಒಂದು ಭಾಷೆಯಲ್ಲಿ ಕಾಲಾಂತರದಿಂದ ಶಬ್ದಗಳ ಅರ್ಥವು ಬದಲಾಗುವದುಂಟು. ಈ ಸ್ಥಿತಿಯು ಈ ಕಾಯಕ ಶಬ್ದಕ್ಕೂ ಒದಗಿದೆ. ಇಷ್ಟೇ ಅಲ್ಲ, ಅದಕ್ಕೆ ಈಗ ಒಂದು ವಿಪರೀತ ಅರ್ಥವೂ ಉಂಟಾಗಿರುತ್ತದೆ.

## ಕಾಯಕಗಳ ಸಾಮಾನ್ಯ ಸ್ವರೂಪು.

ವಚನ ವಾಙ್ಮಯದಲ್ಲಿ ಕಾಯಕದ ಅರ್ಥವು ಒಂದು ಬಗೆಯಾಗಿ ಉದ್ಯೋಗ ಮಾಡುವದು, ಅಥವಾ ದುಡಿಯುವದು ಎಂದು ಇರುತ್ತದೆ. ಆದರಲ್ಲಿ ಭಿಕ್ಷೆ ಎಂಬ ಅರ್ಥವು ಇರುವದಿಲ್ಲ. ವೀರಶೈವನು ಒಂದು ಉದ್ಯೋಗವನ್ನು ಮಾಡಿ ಅದರಿಂದ ಬಂದುದನ್ನು ಶಿವಾರ್ಪಣ ಭಾವದಿಂದ ಭೋಗಿಸಬೇಕು. ಇದು ಅವನ ಧರ್ಮವು. ಈದೃಷ್ಟಿಯಿಂದ ಅವನು ಒಂದು ಉದ್ಯೋಗ ಮಾಡಿ ತನ್ನ ಚರಿತಾರ್ಥವನ್ನು ಸಾಗಿಸಿಕೊಳ್ಳಬೇಕು. ಇದೇ ಕಾಯಕವೆನಿಸಿಕೊಳ್ಳುತ್ತದೆ- ವೀರಶೈವನು ಭಿಕ್ಷೆಯನ್ನು ಬೇಡಿ ತನ್ನ ಹೊಟ್ಟೆಯನ್ನು ಎಂದೂ ಹೊರೆದುಕೊಳ್ಳತಕ್ಕದ್ದಲ್ಲ. ಬಸವೇಶ್ವರನ ಕಾಲದಲ್ಲಿ ಅನೇಕ ಶಿವಶರಣರು ಉದ್ಭವಿಸಿದ್ದು ಎಲ್ಲರಿಗೂ ಗೊತ್ತಿದೆ. ಈ ಶಿವಶರಣರೆಲ್ಲರೂ ಒಂದೊಂದು ಕಾಯಕವನ್ನು ಅವಲಂಬಿಸಿದವರಾಗಿದ್ದರು. ಈಕಾಯಕಗಳನ್ನು ನಾವು ನೋಡಿದರೆ ಅವುಗಳಿಗೆ ಈಗಿನಂತೆ ಮುಳ್ಳಾವಿಗೆಯ ಕಾಯಕ, ಗಂಟೆಯ ಕಾಯಕ, ತಕ್ಕೆಯ ಕಾಯಕ ಎಂಬಿವೇ ಮೊದಲಾದ ಹೆಸರುಗಳಿದ್ದದ್ದು ತೋರಿಬರುವದಿಲ್ಲ. ಆದರೆ ಅವು ಸೂಜಿಯ ಕಾಯಕ, ಕಟ್ಟಿಗೆಯ ಕಾಯಕ, ನೇಗಿಯ ಕಾಯಕ, ನುಲಿಯ ಕಾಯಕ, ಮಡಿವಳನ ಕಾಯಕ, ಹಡಪದ ಕಾಯಕ ಎಂಬಿವೇ ಮೊದಲಾದವುಗಳು ಇದ್ದ ಹಾಗೆ ತೋರಿಬರುತ್ತದೆ. ಈ ಹೆಸರುಗಳು ಬೇರೆಬೇರೆ ಶರಣರು ಕೈಕೊಂಡಿದ್ದ ಉದ್ಯೋಗಗಳನ್ನು ಅಥವಾ ಹೋರೆಗಳನ್ನು ನಿರ್ದೇಶಿಸುತ್ತವೆ. ವೀರಶೈವನು ಈ ಹೋರೆಗಳನ್ನು ಹೇಗೆ ನಿರ್ವಹಿಸತಕ್ಕದ್ದೆಂಬದನ್ನು ಅರಿಯುವದೇ ಕಾಯಕದ ಜ್ಞಾನವಾಗಿದೆ.

ಮನುಷ್ಯನು ಮಾಡುವ ಉಪಜೀವನದ ಹೋರೆಗಳಿಗೆ ವಚನಕಾರರು ಒಂದು ಧಾರ್ಮಿಕ ಸ್ವರೂಪನ್ನು ಕೊಟ್ಟಿದ್ದಾರೆ. ವೀರಶೈವನು ತಾನು ಮಾಡುವ ಕಸಬನ್ನು ಕೇವಲ ಐಹಿಕ ಸುಖಕ್ಕೋಸ್ಕರವಾಗಿ ಉಪಯೋಗಿಸುತ್ತಿದ್ದರೆ, ಅದು ಕಾಯಕವೆನಿಸಿಕೊಳ್ಳಲಾರದು. ಅದು ಒಂದು ಉದರಪೋಷಣಸಾಧನ ಎಂದು ಮಾತ್ರ ಹೇಳಬಹುದು. ಮೊದಲನೆಯದು ಮನುಷ್ಯನನ್ನು ಉಚ್ಚ ಸ್ಥಾನಕ್ಕೆ ಒಯ್ಯುತ್ತದೆ. ಆದರೆ ಎರಡನೆಯದು ಅವನನ್ನು ಕೆಳಗಿನ ಸ್ಥಿತಿಗೆ ಒಯ್ಯುತ್ತದೆ. ಮೊದಲನೆಯದು ಮನುಷ್ಯನ ಗುಣಗಳನ್ನು ವಿಕಾಸಗೊಳಿಸುತ್ತದೆ. ಆದರೆ ಎರಡನೆಯದು ಅವನನ್ನು ಸ್ವಾರ್ಥಪರಾಯಣತೆಗೆ ಎಳೆಯುತ್ತದೆ. ಮೊದಲನೆಯದು ಸದಾಚಾರಕ್ಕೆ ಎಳೆಯುತ್ತದೆ. ಆದರೆ ಎರಡನೆಯದು ವಿಷಯಲೋಲುಪತೆಗೆ ಎಳೆಯುತ್ತದೆ. ವಚನಕಾರರ ದೃಷ್ಟಿಯಿಂದ ಮೊದಲನೇ ರೀತಿಯಿಂದ ವರ್ತಿಸುವವರು ಭಕ್ತರು. ಆದರೆ ಎರಡನೇ ರೀತಿಯಿಂದ ವರ್ತಿಸುವವರು ಪ್ರಾಪಂಚಿಕರು ಅಥವಾ ಭವಿಗಳು. ಕಾಯಕ ಮತ್ತು ಕಸಬು ಅಥವಾ ಉಪಜೀವನದ ಉದ್ಯೋಗ ಈ ಎರಡು ಶಬ್ದಗಳಲ್ಲಿ ಇಷ್ಟು ಭಿನ್ನತೆಯು ಇರುತ್ತದೆ.

## ಕಾಯಕದ ಅರ್ಥ

ವಚನಕಾರರ ದೃಷ್ಟಿಯಿಂದ ಕಾಯಕದ ನಿಜವಾದ ಅರ್ಥವನ್ನು ತಿಳಿಯಬೇಕಾದರೆ ಮನುಷ್ಯನು ತನ್ನ ಕ್ರಿಯೆ ಅಥವಾ ಕರ್ತವ್ಯವನ್ನು ಈ ಜಗತ್ತಿನಲ್ಲಿ ಹೇಗೆ ಮಾಡಬೇಕೆಂಬುದನ್ನು ಮೊದಲು ಅರಿಯುವದು ಅತ್ಯವಶ್ಯವು. ವೀರಶೈವನು ಈ ಜಗತ್ತು ಕೇವಲ ಮಾಯಾಮಯವೆಂದು ತಿಳಿದು ಆಚರಿಸತಕ್ಕದ್ದಲ್ಲ. ಆದ್ದರಿಂದ ಜ್ಞಾನವು ಅವನಿಗೆ ಎಷ್ಟು ಮಹತ್ವವಾದದ್ದೋ ಅಷ್ಟೇ ಕ್ರಿಯೆಯೂ ಮಹತ್ವದ್ದಾಗಿದೆ. ಕ್ರಿಯೆಗೂ ಮಹತ್ವದ ಸ್ಥಾನವಿದೆ. ಕ್ರಿಯೆಯನ್ನು ಮಾಡದ ವಿನಹಾ ಯಾವದೂ ಸಾಧ್ಯವಲ್ಲ. ಅಲ್ಲಮಪ್ರಭುದೇವರು ಇದರ ವಿಷಯವಾಗಿ ಹೇಳಿರುವದೇನಂದರೆಃ –

"ಕ್ರಿಯಾಮಥನವಿಲ್ಲದೆ ಕಾಣಬಂದುದೇ ಇಕ್ಷುವಿನೊಳಗಣ ಮಧುರ? ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ತಿಲದೊಳಗಣ ತೈಲ? ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ಕ್ಷೀರದೊಳಗಣ ತುಪ್ಪ? ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ಕಾಷ್ಠದೊಳಗಣ ಅಗ್ನಿ? ಇದು ಕಾರಣ ನಮ್ಮ ಗುಹೇಶ್ವರ ಲಿಂಗವ ತನ್ನೊಳರಿದೆನೆಂಬ ಮಹಾಂತಂಗೆ ಸತ್ ಕ್ರಿಯಾಚರಣೆಯೇ ಸಾಧನ ಕಾಣಿ ಭೋ."

ಈ ಪ್ರಕಾರ ಕ್ರಿಯೆಯಿಂದ ಜ್ಞಾನದ ಹೆಚ್ಚುವಿಕೆಯು ಆಗುತ್ತದೆ. ಅದರಿಂದಲೇ ಮನುಷ್ಯನ ವಿಕಾಸವು. ವೀರಶೈವನು ಪರಮಾತ್ಮನನ್ನು ಅರಿಯಬೇಕಾದರೆ ಜಗತ್ತನ್ನು ಬಿಟ್ಟುಕೊಟ್ಟು ಏಕಾಂತವಾಸಿಯಾಗಿರುವದು ಅವಶ್ಯವಾಗಿರುವದಿಲ್ಲ. ಅವನು ಜಗತ್ತಿನಲ್ಲಿದ್ದುಕೊಂಡು ಅಲ್ಲಿ ತನ್ನ ಕ್ರಿಯೆಗಳನ್ನು ಸರಿಯಾದ ರೀತಿಯಿಂದ ಮಾಡುತ್ತ ಹೋದರೆ ಪರಮಾರ್ಥವನ್ನು ಸಾಧಿಸಬಹುದು.

ಆದರೆ ಅವನು ತನ್ನ ಕ್ರಿಯೆಗಳನ್ನು ಕೇವಲ ಇಂದ್ರಿಯ ಸುಖಕ್ಕೋಸ್ಕರ ಮಾಡದೆ ಪಾರಮಾರ್ಥಿಕ ದೃಷ್ಟಿಯಿಂದ ಮಾಡುವದು ಅವಶ್ಯವು. ಹೀಗೆ ಮಾಡುವಲ್ಲಿ ಅವನು ಯಾವ ತರದ ಫಲಪದದ ಆಶೆಯನ್ನು ಮಾಡತಕ್ಕದ್ದಲ್ಲ. ಎಂದರೆ ತಾನು ಮಾಡುವ ಕ್ರಿಯೆಯಿಂದ ತನಗೆ ಏನಾದರೊಂದು ಫಲವು ಅಥವಾ ಲಾಭವು ದೊರಕೀತೆಂಬ ಉದ್ದೇಶದಿಂದ ಮಾಡತಕ್ಕದ್ದಲ್ಲ. ಅವನಲ್ಲಿ ಇಂಥ ಫಲಾಪೇಕ್ಷೆಯು ಇರಕೂಡದು.



ಅವನು ಕಾಮರಹಿತನಾಗಿ ವರ್ತಿಸತಕ್ಕದ್ದು. ಹೀಗೆ ಕ್ರಿಯೆಯನ್ನು ಮಾಡುವದೇ ಲಿಂಗಾಂಗಿಯ ಕರ್ತವ್ಯವು.

"ಫಲ ಪದದ ಆಶೆ ಮಾಡಲಾಗದು ನಿನ್ನ ಕ್ರಿಯೆಯಲ್ಲಿ. ಅದೇನು ಕಾರಣವೆಂದರೆ, ಬಯಕೆಯ ಭಕ್ತಿಯ ಪೂರ್ವ ಪುರಾತನರು ಮೆಚ್ಚರು. ನಮ್ಮ ಅಖಂಡೇಶ್ವರ ದೇವರು ಹಂಗಿನ ಭಕ್ತರನೊಲ್ಲ ನೋಡಾ."

"ಈ ಸತ್ಕ್ರಿಯೆಗೆ ಈ ಫಲ, ಈ ಪುಷ್ಪಕ್ಕೀ ಫಲ ಎಂಬ ಕೈಕೂಲಿಕಾರರು ಅವರೆಲ್ಲ ಕರ್ಮಿಗಳಯ್ಯ. ಪುಣ್ಯ-ಪಾಪವನುಂಬ ಕರ್ಮಿಗಳಯ್ಯ. ಸ್ವರ್ಗ-ನರಕವನುಂಬ ಕರ್ಮಿಗಳಯ್ಯ. ಒಡಲೊಡವೆ, ಪಡೆದರ್ಥ, ಮೃಡದೇವ ಸೊಡ್ಡಳನಿಗೆಂಬಾತ ಬೆಡಗಿನ ಶಿವಪುತ್ರ. ಉಳಿದವರೆಲ್ಲ ಜಗದ ಮಿತ್ರರು."

ಹೀಗೆ ವಚನಕಾರರು ಒಬ್ಬ ಭಕ್ತನು ನಿಷ್ಕಾಮಕರ್ಮದಿಂದ ಜಗತ್ತಿನಲ್ಲಿ ವ್ಯವಹರಿಸಬೇಕೆಂದು ನುಡಿದಿರುವರು. ಈ ಬಗೆಯ ಉಕ್ತಿಗಳನ್ನು ಶ್ರೀಕೃಷ್ಣನು ಅರ್ಜುನನಿಗೆ ಭಗವದ್ಗೀತೆಯಲ್ಲಿ ಬೋಧಿಸಿದ್ದನ್ನು ನಾವು ನೋಡುತ್ತೇವೆ. ಇವೇ ತತ್ವಗಳನ್ನು ವಚನಕಾರರು ತಮ್ಮ ವಿಶಿಷ್ಟ ಶಬ್ದಗಳಿಂದ ತಮ್ಮ ವಚನಗಳಲ್ಲಿ ನಿರೂಪಿಸಿರುವರು. ಹೀಗೆ ಲಿಂಗಾಂಗಿಯು ಲಿಂಗಾರ್ಪಣ ಭಾವದಿಂದ ತನ್ನ ಕ್ರಿಯೆಗಳನ್ನು ಮಾಡತಕ್ಕದ್ದು. ಲಿಂಗಾರ್ಪಣ ಭಾವವೆಂದರೆ ಕಾಮರಹಿತನಾಗಿ ತಾನು ಮಾಡುವ ಕ್ರಿಯೆಗಳನ್ನು ಶಿವನಿಗೋಸ್ಕರವೆಂದು ಭಾವಿಸಿ ಅದರಿಂದ ಬಂದುದನ್ನು ಪ್ರಸಾದ ರೂಪವಾಗಿ ಸೇವಿಸುವದೇ ಇರುತ್ತದೆ. ಬಸವೇಶ್ವರನು ಒಂದೆಡೆಗೆ ಈ ವಿಷಯವಾಗಿ ಅಂದಿರುವದೇನಂದರೆಃ-

"ಲಿಂಗಕ್ಕೆಂದೇ ನೆನೆವೆ, ಲಿಂಗಕ್ಕೆಂದೇ ಮಾಡುವೆ, ಲಿಂಗಕ್ಕೆಂದೇ ಕೂಡುವೆನು ನಾನಯ್ಯ. ಸಕಲ ಪದಾರ್ಥಂಗಳ ಲಿಂಗಕ್ಕೆಂದೇ ಭಾವಿಸುವೆ. ಅಂಗಗುಣಂಗಳನರಿಯೆನಯ್ಯ. ಲಿಂಗಕ್ಕೆಂದೇ ಕಾಮಿಸುವೆನು. ನಿಃಕಾಮಿಯಾಗಿ ಎನ್ನ ದೇಹೇಂದ್ರಿಯ ಮನ-ಪ್ರಾಣಾದಿಗಳು ಲಿಂಗದ ಸತಿಯರಾಗಿ ಲಿಂಗಕ್ಕೆಂದೇ ಬಯಸಿ ಲಿಂಗ ಪ್ರಾಣಿಗಳಾದ ಕಾರಣ, ಲಿಂಗಕ್ಕೆಂದೇ ಕೈಕೊಂಬೆನು. ಅನರ್ಪಿತವನರಿಯೆ ಕೂಡಲ ಸಂಗಮದೇವಾ."

ಈ ದೃಷ್ಟಿಯಿಂದ ವೀರಶೈವನು ತನ್ನ ನಿತ್ಯದ ವ್ಯವಹಾರಗಳನ್ನು ಮಾಡತಕ್ಕದ್ದು. ಅವನು ಉಪಜೀವನಕ್ಕೋಸ್ಕರ ಒಂದು ಹೋರೆಯನ್ನು ಕೈಕೊಂಡರೂ ಅವನು ಹೀಗೆಯೇ ಅದನ್ನು ನಿರ್ವಹಿಸತಕ್ಕದ್ದು. ಹೀಗೆ ತಾನು ಮಾಡಿದ್ದನ್ನೆಲ್ಲ ಪ್ರಸಾದ ರೂಪವಾಗಿ ಗ್ರಹಿಸಿದರೆ ಆ ಹೋರೆಯಿಂದ ಅವನಿಗೆ ಹಾನಿಯು ಏನೂ ಆಗಲಾರದು. ಇಷ್ಟೇ ಅಲ್ಲ, ಅದು ಅವನ ಮೋಕ್ಷಕ್ಕೆ ಸಹಾಯಕಾರಿಯಾಗುವದು. ಹೀಗೆ ಒಂದು ಉದ್ಯೋಗವನ್ನು ಮಾಡುವದೇ ವಚನಕಾರರ ದೃಷ್ಟಿಯಿಂದ, ಕಾಯಕವೆನಿಸಿಕೊಳ್ಳುತ್ತದೆ. ಇದು ಪವಿತ್ರವಾದ ಆಚರಣೆಯು ಇಷ್ಟೇ ಅಲ್ಲ, ಅದು ಧಾರ್ಮಿಕ ಆಚರಣೆಯು.

## ಕಾಯಕಗಳಲ್ಲಿ ಉಚ್ಚ ನೀಚ ತರಗಳಿಲ್ಲ. ಎಲ್ಲವೂ ಶ್ರೇಷ್ಠವಾದವುಗಳು.

ಜಗತ್ತಿನಲ್ಲಿ ಉದ್ಯೋಗಗಳು ಅಥವಾ ಕಸಬುಗಳು ಅಸಂಖ್ಯವಾಗಿರುತ್ತವೆ. ಆದರೆ ಒಬ್ಬ ಮನುಷ್ಯನು ಅವುಗಳಲ್ಲಿ ಯಾವದಾದರೊಂದನ್ನು ಗ್ರಹಿಸಿ ನಾವು ಮೇಲೆ ಹೇಳಿದ ಪ್ರಕಾರ ಅದನ್ನು ಕಾಯಕ ರೂಪದಿಂದ ಅವನು ಮಾಡಿದಲ್ಲಿ, ಅದು ಯಾವಾಗಲೂ ಶ್ರೇಷ್ಠವೆನಿಸಿಕೊಳುತ್ತದೆ. ಆದ್ದರಿಂದ ಒಂದು ಉದ್ಯೋಗದ ಉಚ್ಚ ಅಥವಾ ನೀಚ ಸ್ಥಿತಿಯು ಅದು ಎಂಥದು ಇದೆ, ಇದರ ಮೇಲೆ ಅವಲಂಬಿಸದೆ ಅದನ್ನು ಒಬ್ಬ ಮನುಷ್ಯನು ಯಾವ ಭಾವದಿಂದ ನಿರ್ವಹಿಸುತ್ತಾನೆ ಮತ್ತು ಅದರಿಂದ ಬಂದುದನ್ನು ಹೇಗೆ ಉಪಯೋಗಿಸುತ್ತಾನೆ ಇದರ ಮೇಲೆ ಅವಲಂಬಿಸಿರುತ್ತದೆ. ಈ ವಿಷಯವಾಗಿ ಬಸವೇಶ್ವರನ ಒಂದು ಪ್ರಸಿದ್ಧವಾದ ವಚನವಿದೆ. ಅದು ಯಾವದೆಂದರೆ:—

"ಹೊತ್ತಾರೆ ಎದ್ದು ಕಣ್ಣ ಹೊಸೆವುತ್ತ ಎನ್ನೊಡಲಿಂಗೆ ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದೊಡೆ, ಎನ್ನ ಮನಕ್ಕೆ ಮನವೇ ಸಾಕ್ಷಿ. ॥ ಶ್ಲೋಕ ॥ ಅಶನೇ ಶಯನೇ ಯಾನೇ ಸಂಪರ್ಕೇ ಸಹ ಭೋಜನೆ । ಸಂಚರಂತಿ ಮಹಾಘೋರೆ ನರಕೆ ಕಾಲಮಕ್ಷಯಂ ॥ ಎಂದುದಾಗಿ, ಈ ಶ್ರುತಿಯ ಬಸವಣ್ಣನೋದುವನು. ಭವಿಯ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹನೆಂದು ನುಡಿವರಯ್ಯ ಪ್ರಮಥರು. ಕೊಡುವೆನುತ್ತರವನವರಿಗೆ. ಕೊಡಲಮ್ಮೆನು. ಹೊಲೆ ಹೊಲೆ



ಯರ ಮನೆಯ ಹೊಕ್ಕಾದರೆಯೂ ಸಲೆ ಕೈಕೂಲಿಯ ಮಾಡಿಯಾಪೊಡೆಯೂ, ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನೊಡಲವಸರಕ್ಕೆ ಕುದಿವೆನಾದಡೆ, ತಲೆದಂಡ ತಲೆದಂಡ ಕೂಡಲಸಂಗಮದೇವಯ್ಯ.

ಇದರಲ್ಲಿ ಬಸವೇಶ್ವರನು ಕಾಯಕವನ್ನು ಹೇಗೆ ಮಾಡಬೇಕೆಂಬುವನ್ನು ಬಹು ಚನ್ನಾಗಿ ವ್ಯಕ್ತಪಡಿಸಿದ್ದಾನೆ. ಒಬ್ಬ ಮನುಷ್ಯನು ಮಂತ್ರಿಪದವಂಥ ಮಹತ್ತರವಾದ ಪದವನ್ನು ಅಲಂಕರಿಸಬಹುದು. ಅಥವಾ ಹೊಲೆಯರ ಮನೆಯಲ್ಲಿ ಆಳಾಗಿ ದುಡಿಯುತ್ತಿರಬಹುದು. ಆದರೆ ಅವನು ತನ್ನ ಉದ್ಯೋಗದಲ್ಲಿ ಪರಮಾತ್ಮನ ನಿಲವನ್ನು ಎಂದರೆ ಸ್ವರೂಪನ್ನು ಹೇಗೆ ಹೊಂದುವೆನೆಂದು ಹಾರೈಸುತ್ತಾ ಇದ್ದಿದ್ದಾದರೆ, ಅದು ಕಾಯಕ ಸ್ವರೂಪವಾಗುವದು.

ಹೀಗೆ ಕಾಯಕವೆಂದರೆ ಕೇವಲ ಉಪಜೀವನದ ಹೋರೆ ಮಾತ್ರವಲ್ಲ. ಅದರಲ್ಲಿ ಧಾರ್ಮಿಕ ಸ್ವರೂಪವೂ ಇರುತ್ತದೆ. ಅದೊಂದು ಪರಮಾತ್ಮನ ಸೇವೆ ಎಂತಲೂ ಭಾವಿಸಬೇಕು. ಆದ್ದರಿಂದಕಾಯಕಗಳಲ್ಲಿ ಉಚ್ಚ ನೀಚ ಭೇದವಿರಲಾರದು. ಎಲ್ಲವೂ ಅಷ್ಟೇ ಮಹತ್ವವಾದವುಗಳು. ಬಸವೇಶ್ವರನ ಕಾಲದಲ್ಲಿ ಒಕ್ಕಲುತನ, ಸಿಂಪಿಗತನ, ನೇಕಾರಿಕೆ, ಮಡಿವಳನ ಉದ್ಯೋಗ ಹೀಗೆ ಅನೇಕ ತರದ ಹೋರೆಗಳನ್ನು ಶಿವಶರಣರು ಮಾಡುತ್ತಿದ್ದುದನ್ನು ನಾವು ನೋಡುತ್ತೇವೆ. ಆದರೆ ಅವರಲ್ಲಿ ನೀಚೋಚ್ಚಭಾವಗಳು ಇದ್ದದ್ದು ಕಂಡು ಬರುವದಿಲ್ಲ. ಯಾಕಂದರೆ, ಅವರು ತಮ್ಮ ಹೋರೆಗಳು ಕಾಯಕಗಳೆಂದು ತಿಳಿದು ಅವುಗಳನ್ನು ಹೇಗೆ ಮಾಡತಕ್ಕದ್ದೋ ಹಾಗೆ ಮಾಡುತ್ತಿದ್ದದರಿಂದ, ಅವರಲ್ಲಿ ಹೆಚ್ಚು ಕಡಿಮೆ ಎಂಬ ಭಾವನೆಗಳು ಉತ್ಪನ್ನವಾಗಲಿಲ್ಲ. ಬಸವೇಶ್ವರನ ಕಾಲದಲ್ಲಿದ್ದ ಸಿದ್ಧರಾಮೇಶ್ವರನು ತನ್ನ ಒಂದು ಉಕ್ತಿಯಲ್ಲಿ ಹೀಗೆ ಹೇಳಿರುತ್ತಾನೆ. ಅದು ಏನಂದರೆ,

ಬಲ್ಲಿದ ಬಾಣನ ಬಾಗಿಲ ಕಾಯುವವರು ಭೂತಗಳೇನಯ್ಯ ? ಅಪ್ಪ ರೇವಣಸಿದ್ಧ ನೀರ ಹೊತ್ತನೆಂಬರು. ಅವನೇನು ಕೀಳನಯ್ಯ ? ನಮ್ಮ ನೀರು ಹೊರುವವರು ಕೂಲಿಕಾರರೇನಯ್ಯ ? "ಸರ್ವೇಷಾಂ ಹೃದಿ ಸ್ಥಿತಶ್ಚಂದ್ರಮೌಲಿಃ" ಎಂಬ ಶ್ರುತಿ ವಾಕ್ಯವ ನಂಬು, ನಂಬು, ಕಪಿಲಸಿದ್ಧ ಮಲ್ಲಿಕಾರ್ಜುನನ ಮುಂದೆ ಎಲೈ ಮನವೇ.

ಇದರ ಮೇಲಿಂದ ಶಿವನು ಬಾಣಾಸುರನ ಬಾಗಿಲ ಕಾಯ್ದನೆಂದು ಅವನ ದೇವತ್ವವೇನೂ ಹೋಗಲಿಲ್ಲ. ಅಥವಾ ರೇವಣಸಿದ್ಧೇಶ್ವರನು ನೀರು

ಹೊತ್ತನೆಂದು ಅವನ ಮಹತ್ವವೇನೂ ಕಡಿಮೆಯಾಗಲಿಲ್ಲ. ಹೀಗೆ ಈ ವಚನಕಾರನು ಹೇಳಿದ್ದಾನೆ. ಆದ್ದರಿಂದ ವೀರಶೈವನಾದವನು ಯಾವ ಕಸಬನ್ನು ಮಾಡುತ್ತಿದ್ದರೂ ಅದರಿಂದ ಅವನಿಗೆ ಹೀನತೆಯು ಪ್ರಾಪ್ತವಾಗಲಾರದು.

ಆದರೆ ಸ್ಮೃತ್ಯಾದಿ ಗ್ರಂಥಗಳಲ್ಲಿ ಕಸಬುಗಳಿಗೆ ಈ ಪ್ರಕಾರ ಮಹತ್ವವು ಕೊಡಲ್ಪಟ್ಟಿಲ್ಲ. ಅವುಗಳು ಶೂದ್ರರ ಹೋರೆಗಳೆಂದು ತಿಳಿದು ಅವು ನಿರಾಕರಿಸಲ್ಪಟ್ಟಿವೆ. ಬ್ರಾಹ್ಮಣನು ಅವುಗಳನ್ನು ಮಾಡಬಾರದು. ಆದರೆ ವೀರಶೈವರ ದೃಷ್ಟಿಯಿಂದ ಯಾವ ಕಸಬುಗಳಿದ್ದರೂ ಅವು ಹೀನವಾದವುಗಳಲ್ಲ. ಯಾಕಂದರೆ ಅವುಗಳನ್ನು ಅವರು ಕಾಯಕಗಳೆಂದು ಭಾವಿಸಿ ಒಂದು ವಿಶಿಷ್ಟ ರೀತಿಯಿಂದ ಜರಗಿಸುತ್ತಾರೆ.

## ವೀರಶೈವನು ಕಾಯಕವಿಲ್ಲದೆ ಇರಕೂಡದು

ವೀರಶೈವನು ಒಂದು ಕಾಯಕವನ್ನು ಅವಲಂಬಿಸಿಯೇ ತೀರಬೇಕು. ಹೀಗೆ ವಚನಕಾರರು ನಿರ್ಬಂಧಿಸಿ ಹೇಳಿದ್ದಾರೆ. ಒಬ್ಬನು ದೀಕ್ಷೆಯನ್ನು ಹೊಂದಿದ ಬಳಿಕ ಅವನಿಗೆ ಕೆಲವೊಂದು ಕಾಯಕವನ್ನು ಕೊಡಲೇಬೇಕು. ಕಾಯಕವೆಂದರೆ ಜೋಳಿಗೆ ಎಂಬರ್ಥವಲ್ಲ. ವೀರಶೈವನು ಸೋಮಾರಿಯಾಗಿ ಪರಾವಲಂಬಿಯಾಗಿರಕೂಡದು. ಇದೇ ಬಸವಾದಿ ಪ್ರಮಥರ ಆಚರಣೆಯು. ಸೋಮಾರಿಯಾಗಿರುವವರನ್ನು ವಚನಕಾರರು ಬಹಳ ಹಳಿದಿರುತ್ತಾರೆ. ಒಬ್ಬ ವಚನಕಾರನು ಇಂಥವರ ಬಗ್ಗೆ ಅನ್ನುವದೇನಂದರೆ:-

ಕಾಯಕಕಾರದೆ ಮೈಸೊಂಬತನದಿಂದ ಬೇರೆ ಕೂಳ ಗಳಿಸಲಾರದೆ ಹಸಿದಿಪ್ಪರಯ್ಯ. ಒಡಲು ಸೀರೆಯ ಗಳಿಸಲಾರದೆ ಕಚ್ಚುಟವ ಕಟ್ಟಿಕೊಂಡಿಪ್ಪರಯ್ಯ. ಮೀಯಲು ಎಣ್ಣೆಯ ಗಳಿಸಲಾರದೆ ಮಂಡೆ ಬೋಳಾಗಿಪ್ಪರಯ್ಯ. ದಿಟದಿಂದ ಬಿಡಿಸಲರಿಯದೆ ಸಂಸಾರದ ಸಟೆಯನವಧರಿಸಿಕೊಂಡಿಪ್ಪವರಿಗೆ ನಾನಂಜುವೆನಯ್ಯ ಸಕಳೇಶ್ವರಾ.

ಆರದೆ = ಶಕ್ತನಾಗದೆ; ಮೈಸೊಂಬತನ = ಶರೀರದ ಮಾಂದ್ಯ, ಆಲಸ್ಯ; ಕಚ್ಚುಟ = ಲಂಗೋಟಿ; ಮೀಯು = ಸ್ನಾನಮಾಡು; ಅವಧರಿಸು = ಸ್ವೀಕರಿಸು.



ಈ ಮೇರೆಗೆ ವೀರಶೈವನು ಭಿಕ್ಷಾಹಾರಿಯಾಗಿರದೆ ಒಂದು ಉದ್ಯೋಗವನ್ನು ಮಾಡಿ, ತನ್ನ ಉಪಜೀವನವನ್ನು ಸಾಗಿಸತಕ್ಕದ್ದು. ಇದೇ ಅವನ ಆಚರಣೆಯು.

ಶಂಕರದಾಸಿಮಯ್ಯನು ವೀರಶೈವ ಶಿವಶರಣರಲ್ಲಿ ಅತ್ಯಂತ ಪ್ರಸಿದ್ಧನಾಗಿದ್ದಾನೆ. ಈತನು ಮೊದಲು ಬ್ರಾಹ್ಮಣನು. ಅವನ ಹೆಸರು ಗಂಗಾಧರಭಟ್ಟ. ಆದರೆ ಅವನು ವೀರಶೈವನಾದ ಬಳಿಕ, ಅವನು ತನ್ನ ಗುರುವಿನ ಅಪ್ಪಣೆಯಿಂದ ಹೊಲಿಗೆಯ ಕಾಯಕವನ್ನು ಪ್ರಾರಂಭಿಸಿದನು. ಅಂದರೆ ಶಿಂಪಿಗನಾದನು. ಹೀಗೆ ಬಸವೇಶ್ವರನ ಕಾಲದಲ್ಲಿ ಎಲ್ಲ ಶಿವಶರಣರ ವೃತ್ತಾಂತವಿದೆ. ಅವರು ಮಾಡುವ ಕಾಯಕಗಳಿಂದ ಅವರಲ್ಲಿ ಯಾವ ಹೀನತೆಯೂ ಉಂಟಾಗಿಲ್ಲ. ಮೊರದ ಮೇದಯ್ಯನೆಂಬವನು ಬಿದಿರನ್ನು ತಂದು ಬುಟ್ಟಿಗಳನ್ನು ಮಾಡಿ ಅವುಗಳನ್ನು ಮಾರಿ ಜೀವಿಸುತ್ತಿದ್ದನು. ಒಂದು ದಿವಸ ಒಬ್ಬ ಶರಣನು ಅವನ ಬಡತನದ ಸ್ಥಿತಿಯನ್ನು ಕಂಡು, ಕನಿಕರ ಪಟ್ಟು ಅವನ ಮನೆಗೆ ಹೋಗಿ, ಮೇದಯ್ಯನ ಹೆಂಡತಿಯ ಕೈಯ್ಯಲ್ಲಿ ಬಹಳ ದ್ರವ್ಯವನ್ನು ಕೊಟ್ಟು ಹೋದನು. ಮೇದಯ್ಯನು ಮನೆಗೆ ಬಂದ ಬಳಿಕ ನಡೆದ ಸಂಗತಿಯನ್ನು ತಿಳಿದು ಸಿಟ್ಟಿನಿಂದ ಆ ದ್ರವ್ಯವನ್ನು ತಿಪ್ಪೆಗೆ ಒಗಿಸಿದನು. ಯಾಕಂದರೆ ಆ ದ್ರವ್ಯವು ತನ್ನ ಕಾಯಕದಿಂದ ಬಂದುದಾಗಿರಲಿಲ್ಲ. ಅದು ಎರಡನೆಯವರಿಂದ ಗಳಿಸದೆ ಬಂದುದಾಗಿತ್ತು. ಇಂಥದು ಶಿವಾರ್ಪಣಕ್ಕೆ ಸಲ್ಲದು ಎಂದು ಮೇದಯ್ಯನು ಅದನ್ನು ನಿರಾಕರಿಸಿಬಿಟ್ಟನು. ಹೀಗೆ ಕಾಯಕವು ಮನುಷ್ಯನಿಗೆ ಅತ್ಯಾವಶ್ಯಕವಾಗಿದೆ. ಬಸವೇಶ್ವರನು ಒಂದೆಡೆಯಲ್ಲಿ ಹೇಳುವದೇನಂದರೆ:—

ಭಕ್ತಿ ವಿಶೇಷದ ಮಾಡುವರೆ, ಹತ್ತು ಬೆರಳುಂಟು. ಹಾಸಿ ದುಡಿದರೆ, ತನಗುಂಟು, ತನ್ನ ಪ್ರಮಥರಿಗುಂಟು. ಮಾರಿ ತಂದೆಗಳಂತೆ ಎನಗೇಕಹುದಯ್ಯ? ರತ್ನದ ಸಂಕೋಲೆಯನಿಕ್ಕಿ ಕಾಡಿಹ ಕೂಡಲ ಸಂಗಮದೇವ, ಶಿವಧೋ.

ಹೀಗೆ ದುಡಿದು ಗಳಿಸಿದ್ದೇ ಶಿವಾರ್ಪಣಕ್ಕೆ ಸಲ್ಲುವದು. ಅದೇ ಪ್ರಸಾದವು. ಅದರಿಂದಲೇ ತಾನೂ ಹೆರವರೂ ಧನ್ಯರಾಗುವರು. ಎಲ್ಲಿಂದಲೋ ಬಂದ ಶ್ರೀಮಂತಿಕೆಯಿಂದ ಇದು ಆಗದು. ಈ ಅಭಿಪ್ರಾಯವನ್ನು ಬಸವೇಶ್ವರನು ಈ ವಚನದಲ್ಲಿ ವ್ಯಕ್ತಪಡಿಸಿದ್ದಾನೆ.

## ಕಾಯಕಗಳಿಂದ ಪರಮಾತ್ಮನ ಪೂಜೆ.

ಆದ್ದರಿಂದ ವಚನಕಾರರು ಕಾಯಕಗಳೆಂದರೆ ಪರಮಾತ್ಮನ ಒಂದು ಬಗೆಯ ಪೂಜೆ ಎಂದು ಭಾವಿಸಿ ಅದನ್ನು ವರ್ಣಿಸುತ್ತಾರೆ. ಪೂಜೆಯೆಂದರೆ ದಿನಾಲು ನಿಯಮಿತ ವೇಳೆಯಲ್ಲಿ ಷೋಡಶೋಪಚಾರಾದಿ ವಿಧಿಗಳನ್ನು ಮಾಡುತ್ತ ತಾಸುಗಟ್ಟಲೆ ಕುಳ್ಳಿರುವದು ಮಾತ್ರವಲ್ಲ. ಹೀಗೆ ಅನೇಕರು ದಿನಾಲು ಪೂಜೆಯನ್ನು ಮಾಡಿಯೂ ತಮ್ಮ ನಿತ್ಯದ ಹೋರೆಗಳಲ್ಲಿ ಅಧರ್ಮ ದಿಂದ ಆಚರಿಸುವದುಂಟು. ಆದರೆ ನಿತ್ಯದ ಈ ಹೋರೆಗಳಲ್ಲಿ ಸಹ ಒಂದು ಬಗೆಯ ದೇವರ ಪೂಜೆ ಇರುತ್ತದೆಂಬುವನ್ನು ಅವರು ಅರಿಯರು. ಈ ಪೂಜೆಯ ತೆರವನ್ನು ವೀರಶೈವ ವಚನಕಾರರು ಕಂಡು ಹಿಡಿದು ಅದರಂತೆ ಆಚರಿಸಬೇಕೆಂದು ತಮ್ಮ ವಚನಗಳಲ್ಲಿ ಬೋಧಿಸಿದ್ದಾರೆ. ಈ ಬಗ್ಗೆ ಒಬ್ಬ ವಚನಕಾರನು ಅನ್ನುವದೇನಂದರೆ:—

ಕಾಯಕದಲ್ಲಿ ನಿರತನಾದೊಡೆ ಗುರುದರ್ಶನವಾದಡೂ ಮರೆಯಬೇಕು, ಲಿಂಗಪೂಜೆಯಾದಡೂ ಮರೆಯಬೇಕು, ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು, ಕಾಯಕವೇ ಕೈಲಾಸವಾದ ಕಾರಣ. ಅಮಲೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು ಎಂದು ನುಡಿದಿದ್ದಾನೆ. ಇದ ರಲ್ಲಿ ಕಾಯಕವನ್ನು ಈ ವಚನಕಾರನು ಕೈಲಾಸವೆಂದು ಕರೆದಿದ್ದಾನೆ! ಸಾಮಾನ್ಯ ಹೋರೆಗಳಿಗೆ ವಚನಕಾರರು ಎಂಥ ಉಚ್ಚ ಸ್ವರೂಪನ್ನು ಕೊಟ್ಟಿರುವರೆಂಬುದನ್ನು ವಾಚಕರು ಚನ್ನಾಗಿ ವಿಚಾರ ಮಾಡಕ್ಕದ್ದು.

## ಕಾಯಕಗಳನ್ನು ಶುದ್ಧತೆಯಿಂದ ಮಾಡತಕ್ಕದ್ದು.

ಕಾಯಕವು ಇಷ್ಟು ಮಹತ್ವವಾದ ಬಳಿಕ ಅವನ್ನು ಎಲ್ಲರೂ ಅತ್ಯಂತ ಶುದ್ಧತೆಯಿಂದ ನಿರ್ವಹಿಸತಕ್ಕದ್ದೆಂಬುದು ಸ್ಪಷ್ಟವು. ವೀರಶೈವನು ತನ್ನ ಹೋರೆಯಲ್ಲಿ ಅಧರ್ಮತನದಿಂದ ಎಂದೂ ವರ್ತಿಸತಕ್ಕದ್ದಲ್ಲ. ಇಂಥದು ಅರ್ಪಣಕ್ಕೆ ಯೋಗ್ಯವಾಗಲಾರದು. ಅವನು ಅವನ್ನು ಸತ್ಯತೆಯಿಂದಲೂ ಪ್ರಾಮಾಣಿಕತನದಿಂದಲೂ ಅಹಿಂಸೆಯಿಂದಲೂ ಜರುಗಿಸತಕ್ಕದ್ದು. ಇದೇ ಅವನ ಧಾರ್ಮಿಕಾಚರಣೆಯು. ಈ ಬಗ್ಗೆ ವಚನಕಾರರು ಅನ್ನುವದೇನಂದರೆ:-

ಸತ್ಯ ಶುದ್ಧ ಕಾಯಕದಲ್ಲಿ ಚಿತ್ತ ಸ್ವಚ್ಛಂದವಾಗಿರಬೇಕು. ನೇಮದ ಕೂಲಿಯುಂದಿನ ನಿತ್ಯ ಕಾಯಕದಲ್ಲಿ ಸಂದಿರಬೇಕು. ನೇಮದ ಕೂಲಿಯ



ಬಿಟ್ಟು, ಹೇಮದಾಸೆಗೆ ಕಾನಿಸಿ ದ್ರವ್ಯವ ಹಿಡಿದರೆ ತಾ ಮಾಡುವ ಸೇವೆ ನಷ್ಟವಯ್ಯ. ಈ ನಿನ್ನ ಸೇವೆ ನನಗೆ ನನ್ನ ಪ್ರಸಾದಕ್ಕೆ ಚಂದೇಶ್ವರ ಲಿಂಗಕ್ಕೆ ಪ್ರಾಣವಯ್ಯ.

ಮನ ಶುದ್ಧವಿಲ್ಲದವರಿಗೆ ದ್ರವ್ಯದ ಬಡತನವಲ್ಲದೆ, ಚಿತ್ತ ಶುದ್ಧನಾಗಿ ಕಾಯಕವ ಮಾಡುವಲ್ಲಿ ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿ ಪ್ಪಳು, ಮಾರಯ್ಯ ಪ್ರಿಯ ಅಮಳೇಶ್ವರ ಲಿಂಗದ ಸೇವೆಯುಳ್ಳನ್ನಕ್ಕರ.

ಈ ಮೇರೆಗೆ ಮನುಷ್ಯನು ತನ್ನ ಕಾಯಕಗಳನ್ನು ಅತ್ಯಂತ ಚಿತ್ತ ಶುದ್ಧತೆಯಿಂದ ಮಾಡತಕ್ಕದ್ದು. ಅಂದರೆ ಅವನಿಗೆ ಲಕ್ಷ್ಮಿಯು ತಾನಾಗಿ ಒಲಿಯುವಳೆಂದು ಇಲ್ಲಿ ಹೇಳಲ್ಪಟ್ಟದೆ.

ಹೀಗೆ ಬಸವಾದಿ ಪ್ರಮಥರು ಉಪಜೀವನದ ಹೋರೆಗಳಿಗೆ ಬಹು ಉದಾತ್ತ ಧಾರ್ಮಿಕ ಸ್ವರೂಪನ್ನು ಕೊಟ್ಟಿರುವರು. ಇದರಿಂದ ವೀರಶೈವನು ತನ್ನ ನಿತ್ಯಾಚರಣೆಯಲ್ಲಿ ಅತ್ಯಂತ ಶ್ರೇಷ್ಠ ತರವಾದ ವರ್ತನೆಯನ್ನು ಅನುಸರಿಸುವದು ಅವಶ್ಯವು. ಕಾರಣ ಅವನು ಯಾವಾಗಲೂ ಉದ್ಯೋಗಿ ಯಾಗಿರತಕ್ಕದ್ದು, ದುಡಿದು ಗಳಿಸತಕ್ಕದ್ದು, ಪರಾವಲಂಬಿಯಾಗಿರಕೂಡದು, ದೊರಕಿದ್ದನ್ನು ಶಿವಾರ್ಪಣ ಬುದ್ಧಿಯಿಂದ ವಿನಿಯೋಗಿಸತಕ್ಕದ್ದು, ಸತ್ಯ ಸಂಧನಾಗಿಯೂ ಶುದ್ಧನಾಗಿಯೂ ಆಚರಿಸತಕ್ಕದ್ದು, ಹೀಗೆ ಆಚರಿಸಿ ಗಳಿಸಿದ್ದನ್ನು ಅವನು ಪ್ರಸಾದ ರೂಪವಾಗಿ ಅನುಭವಿಸತಕ್ಕದ್ದು. ಹೀಗೆ ವರ್ತಿಸುವದೇ ಅವನ ಕರ್ತವ್ಯವು. ಹೀಗೆಯೇ ಅವನು ತನ್ನ ಕಸಬು ಗಳನ್ನು ಮಾಡತಕ್ಕದ್ದು. ಇವೇ ಕಾಯಕವೆನಿಸಿಕೊಳ್ಳುತ್ತದೆ.

ಈ ಪ್ರಕಾರ ಕಸಬುಗಳ ವಿಷಯವಾಗಿ ಹಿಂದುಸ್ಥಾನದ ಬೇರೆ ಯಾವ ಧರ್ಮದಲ್ಲಿಯೂ ವಿವೇಚನೆ ಇದ್ದಂತೆ ತೋರಿಬರುವದಿಲ್ಲ. ಸಂಸಾರವು ನಿಸ್ಸಾ ರವು, ತ್ಯಾಜ್ಯವು ಎಂಬಿವೇ ವಿಚಾರಗಳು ಮಾತ್ರ ಅವುಗಳಲ್ಲಿ ಪ್ರಕಟ ವಾಗಿವೆ. ಇದರಿಂದ ಆ ಧರ್ಮಗಳು ಅವ್ಯವಹಾರ್ಯವಾಗಿರುತ್ತವೆ. ಅಂದರೆ ಧರ್ಮಕ್ಕೂ ವ್ಯವಹಾರಕ್ಕೂ ಸಂಬಂಧವು ಉಳಿದಿರುವದಿಲ್ಲ. ಆದರೆ ವೀರಶೈವ ಧರ್ಮದ ಸ್ವರೂಪು ಹೀಗೆ ಆಗಿರುವದಿಲ್ಲ. ಅದು ಒಂದು ವ್ಯವಹಾರಿಕ ಧರ್ಮವಾಗಿದೆ. ಸೂಕ್ಷ್ಮ ದೃಷ್ಟಿಯಿಂದ ನಿರೀಕ್ಷಿಸಿದರೆ ಕಾಯಕದ ಸಂಬಂಧವಾಗಿರುವ ವಚನಕಾರರ ಈ ವಿಚಾರಗಳು ಬೇರೆ ಮತಗಳಲ್ಲಿ ಕೆಲವಂಶದಿಂದ ಇರುವದು ಕಂಡುಬರುತ್ತದೆ. ಉದಾಹರಣಾರ್ಥ

ರವಾಗಿ ಭಗವದ್ಗೀತೆಯಲ್ಲಿ ಇಂಥ ವಿಚಾರಗಳು ಹೇಳಲ್ಪಟ್ಟಿವೆ. ಆದರೆ ಇಂಥ ತತ್ವಗಳನ್ನು ವ್ಯವಹಾರದಲ್ಲಿ ಸಾರ್ವತ್ರಿಕವಾಗಿ ತರಲು ಪ್ರಯತ್ನಿಸಿದ ಧರ್ಮಗಳು ಹಿಂದೀ ದೇಶದಲ್ಲಿ ಬಹು ಸ್ವಲ್ಪ ಇರುತ್ತವೆ. ಹೀಗೆ ಪ್ರಯತ್ನಿಸಿದವುಗಳಲ್ಲಿ ವೀರಶೈವ ಧರ್ಮಕ್ಕೆ ನಾವು ಅಗ್ರಸ್ಥಾನವನ್ನು ಕೊಡಬಹುದು. ವೀರಶೈವ ಧರ್ಮ ಪ್ರವರ್ತಕರು, ಅವರಲ್ಲಿ ವಿಶೇಷವಾಗಿ ಬಸವಾದಿ ವಚನಕಾರರು ಅನೇಕ ಕ್ರಾಂತಿಕಾರಕವಾದ ಸಾಮಾಜಿಕ ಸುಧಾರಣೆಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಅವರು ಕಸಬುಗಳಿಗೆ ಕೊಟ್ಟ ಧಾರ್ಮಿಕ ಸ್ವರೂಪವು ಅತ್ಯಂತ ಮಹತ್ವದ್ದಿರುತ್ತದೆ. ಇದರಿಂದ ವೀರಶೈವ ಸಮಾಜದ ಮೇಲೆ ಕೆಲವು ವಿಶೇಷತರದ ಪರಿಣಾಮಗಳುಂಟಾದವು.

## ಸಮಾಜದ ಮೇಲೆ ಕಾಯಕದ ಪರಿಣಾಮಗಳು.

ಕಾಯಕದ ಈ ವಿಚಾರಗಳಿಂದ ವೀರಶೈವ ಸಮಾಜವು ಉದ್ಯೋಗೀ ಸಮಾಜವಾಯಿತು. ಪೂರ್ವ ಕಾಲದಲ್ಲಿ ಕರ್ನಾಟಕವು ಧನಕನಕದಿಂದ ತುಂಬಿಕೊಂಡು ಶ್ರೀಮಂತಿಕೆಯಲ್ಲಿ ಹೆಸರಾಗಿತ್ತು. ಈ ಸ್ಥಿತಿಯು ಒದಗಬೇಕಾದರೆ ವೀರಶೈವರು, ಅವರಲ್ಲಿ ವಿಶೇಷವಾಗಿ ಬಸವಾದಿ ಪ್ರಮಥರು ಕಾಯಕಗಳಿಗೆ ಮಹತ್ವದ ಸ್ಥಾನವನ್ನು ಕೊಟ್ಟದ್ದೇ ಕಾರಣವೆಂದು ಹೇಳಬಹುದು. ಅವರ ದೃಷ್ಟಿಯಿಂದ ಜಂಗಮರು ಸಹ ಕಾಯಕಗಳನ್ನು ಮಾಡತಕ್ಕದ್ದು. ಹೀಗೆ ಅವರ ವಾಕ್ಯಗಳಿವೆ. ಆದ್ದರಿಂದ ಜಂಗಮರು ವ್ಯಾಪಾರ, ಒಕ್ಕಲುತನ ಮಾಡಿದ್ದಾದರೆ ಅವರಿಗೆ ಯಾವ ಹೀನತೆಯೂ ಉಂಟಾಗಲಾರದು. ಆದರೆ ಬ್ರಾಹ್ಮಣರು ಈ ಬಗೆಯಾಗಿ ಕಸಬುಗಳನ್ನು ಕೈಕೊಂಡರೆ ಅವರ ಬ್ರಾಹ್ಮಣ್ಯವು ಹೋಗುತ್ತದೆ. ಹೀಗೆ ಸ್ಮೃತ್ಯಾದಿ ಗ್ರಂಥಗಳಲ್ಲಿ ಉಕ್ತಿಗಳೂ ಇವೆ. ಆದ್ದರಿಂದ ವೀರಶೈವ ಸಮಾಜದಲ್ಲಿ ಜಂಗಮರು ನಾನಾ ಬಗೆಯ ಉದ್ಯೋಗಗಳನ್ನು ಮಾಡುವದನ್ನು ನೋಡುತ್ತೇವೆ. ಬ್ರಾಹ್ಮಣರಂತೆ ಜಂಗಮರು ಒಂದು ಭಿಕ್ಷುಕ ವರ್ಗವಲ್ಲ. ಹೀಗೆ ಬಸವಾದಿ ಪ್ರಮಥರು ಕಸಬುಗಳಿಗೆ ಧಾರ್ಮಿಕ ಸ್ವರೂಪವನ್ನು ಕೊಟ್ಟದ್ದರಿಂದ, ಸಮಾಜದಲ್ಲಿ ಇನ್ನೊಂದು ಮಹತ್ವದ ಪರಿಣಾಮವಾದದ್ದು ಆವುದೆಂದರೆ, ಒಬ್ಬ ಮನುಷ್ಯನು ಯಾವ ಕಸಬು ಮಾಡುತ್ತಿದ್ದರೂ ಅವನು ವೀರಶೈವ ಸಮಾಜವನ್ನು ಸೇರಲಿಕ್ಕೆ ಅನುವಾಯಿತು. ಇದರಿಂದ ಕಾಯಕಗಳು ಜಾತಿ ಭೇದವನ್ನು ಅಳುಕಿಸಿದವು. ಒಬ್ಬ ಮನುಷ್ಯನು ಎಂಥ ಉದ್ಯೋಗ ಮಾಡು



ತ್ತಿದ್ದರೂ ಆ ಮೂಲಕ ಅವನು ಹೀನನೆಂದು ತಿಳಿಯಲು ಆಸ್ಪದವಿಲ್ಲವಾಯಿತು. ಆದ್ದರಿಂದ ಬಸವೇಶ್ವರನ ಕಾಲದಲ್ಲಿ ಒಬ್ಬ ಭಕ್ತನು ಹೊಲೆಯ, ಬೇಡ, ಬ್ರಾಹ್ಮಣ, ಜೈನ ಯಾವನಿದ್ದರೂ ಅವನ ಉದ್ಯೋಗದ ಮೂಲಕ ಅವನು ಹೀನ ಕುಲದವನೆಂದು ಭಾವಿಸುವದು ತಪ್ಪಿ ಹೋಯಿತು.

## ಕಾಯಕಗಳ ಬಗ್ಗೆ ಇರುವ ಒಂದು ತಪ್ಪು ತಿಳುವಳಿಕೆ.

ಎಷ್ಟೋ ಜನರು ವೀರಶೈವ ಸಮಾಜದಲ್ಲಿ ಅನೇಕ ಕಸಬುದಾರರಿರುವದನ್ನು ನೋಡಿ, ಇದರ ಉದ್ದೇಶವು ಎರಡನೇ ಸಮಾಜದವರ ಸಂಬಂಧವಿಡದೆ, ತಮ್ಮಷ್ಟಕ್ಕೆ ತಾವಾಗಿಯೇ ಇರತಕ್ಕದ್ದು, ಭವಿಗಳ ಸಂಬಂಧವಿರಕೂಡದು ಎಂದು ತಿಳಿದು ಶಿವಶರಣರು ಹೀಗೆ ಕಾಯಕಗಳನ್ನು ನಿರ್ಮಿಸಿದರೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಇದು ತೀರ ತಪ್ಪು ಇರುತ್ತದೆ. ಹೀಗೆ ಇತರ ಸಮಾಜದವರ ಸಂಬಂಧವಿಡದೆ ವೀರಶೈವರು ವ್ಯವಹರಿಸುವದು ಹೇಗೆ? ಸ್ವತಃ ಬಸವೇಶ್ವರನು ಒಬ್ಬ ಭವಿಯ ಸೇವೆ ಮಾಡುತ್ತಿರಲಿಲ್ಲವೇ? ಬಸವಾದಿ ಪ್ರಮಥರಲ್ಲಿ ಈ ತೆರದ ವಿಚಾರಗಳು ಎಂದೂ ಇರಲಿಲ್ಲ. ಆದರೆ ನಾನು ಮೇಲೆ ವಿವರಿಸಿದಂತೆ ಕಾಯಕಗಳ ಬಗ್ಗೆ ಅವರ ವಿಚಾರಗಳು ತೀರ ಬೇರೆಯಾಗಿವೆ.

## ಕಾಯಕಗಳ ಉದಾಹರಣೆಗಳು.

ಇನ್ನುಮೇಲೆ ವಚನಕಾರರ ದೃಷ್ಟಿಯಿಂದ ಯಾವ ಯಾವ ಉದ್ಯೋಗಗಳು ಸರಿಯಾದ ಕಾಯಕಗಳು ಎಂಬದನ್ನು ನಾನು ಇಲ್ಲಿ ಸ್ವಲ್ಪದರಲ್ಲಿ ವಿವೇಚಿಸಲು ಯತ್ನಿಸುತ್ತೇನೆ. ಇದರಿಂದ ಕಾಯಕಗಳ ಸ್ವರೂಪವು ವಾಚಕರ ಮನಸ್ಸಿನಲ್ಲಿ ಸ್ಪಷ್ಟವಾಗಿ ಬಿಂಬಿಸಬಹುದು.

ಕೈಗಾರಿಕೆಗಳು:— ಇವುಗಳಲ್ಲಿ ಒಕ್ಕಲುತನ, ನೇಕಾರಿಕೆ, ಹೊಲಿಯುವದು, ಬಣ್ಣಗಾರಿಕೆ, ಕುಂಬಾರಿಕೆ, ಮಡಿವಳತನ, ಕ್ಷೌರ, ಸಮ್ಮಗಾರಿಕೆ ಇವೇ ಮೊದಲಾದ ನಾನಾ ಬಗೆಯ ಉದ್ಯೋಗಗಳು ಬರುತ್ತವೆ. ಬ್ರಾಹ್ಮಣರ ಗ್ರಂಥಗಳ ಪ್ರಕಾರ ಇವೆಲ್ಲ ಶೂದ್ರ, ಅಥವಾ ವೈಶ್ಯರ ಕರ್ಮಗಳು. ಆದ್ದರಿಂದ ಅವು ಹೀನ ಉದ್ಯೋಗಗಳೆಂದು ಅವರು ಭಾವಿಸಿದ್ದಾರೆ. ಆದರೆ ಕಾಯಕದ ದೃಷ್ಟಿಯಿಂದ ಇವು ಉತ್ಕೃಷ್ಟ ಕಸಬುಗಳು. ಯಾಕಂದರೆ ಇವುಗಳಲ್ಲಿ ಒಬ್ಬ ಮನುಷ್ಯನು ದುಡಿದು ಗಳಿಸಬೇಕಾಗುತ್ತದೆ.

ಪರಾಧೀನತೆ ಇಲ್ಲ. ಅಧರ್ಮಕ್ಕೆ ಇಂಬು ಕಡಿಮೆ. ಆದ್ದರಿಂದ ಶಿವ ಶರಣರು ಇಂಥ ಕೈಗಾರಿಕೆಗಳನ್ನೇ ಅವಲಂಬಿಸಿದರು. ವಿಚಾರ ಮಾಡಿ ನೋಡಿದರೆ ಒಕ್ಕಲುತನ ಮತ್ತು ಇಂಥ ಕಲಾ-ಕೌಶಲ್ಯಗಳ ಮೇಲೆಯೇ ಸಮಾಜದ ಅಭಿವೃದ್ಧಿಯು ಇದೆ. ಆದ್ದರಿಂದ ಇವು ಶ್ರೇಷ್ಠವಾದ ಕಾಯಕಗಳೆಂದು ನಾವು ಹೇಳಬಹುದು.

ವ್ಯಾಪಾರ:— ಶ್ರಮಬಟ್ಟು ಅದಕ್ಕೆ ತಕ್ಕಷ್ಟು ಲಾಭ ಪಡೆದರೆ ಮಾತ್ರ ಅದು ಕಾಯಕವು. ಈ ಉದ್ಯೋಗದಲ್ಲಿ ಅಲ್ಪ ಶ್ರಮ ಮಾಡಿ ಕುಯುಕ್ತಿಯಿಂದ ಬಹಳ ಹಣ ಗಳಿಸಬಹುದು. ಹೀಗೆ ಮಾಡಿದರೆ ಅದು ಕಾಯಕನೆನಿಸಿಕೊಳ್ಳಲಾರದು. ಅದು ಠಕ್ಕುತನವು. ಆದ್ದರಿಂದ ವಚನಕಾರರಲ್ಲಿ ಅನೇಕರು, ಅವರಲ್ಲಿ ಬಸವೇಶ್ವರ ಮಡಿವಾಳ ಮಾಚಿದೇವ ಮೊದಲಾದವರು ಬಹಳ ಕಡೆಗೆ ವ್ಯಾಪಾರಸ್ಥರನ್ನು ಅತಿ ಹೀಯಾಳಿಸಿದ್ದಾರೆ.

ದೊಡ್ಡ ಜಮೀನದಾರರು: – ಸ್ವತಃ ಹೊಲಗಷ್ಟ ಮಾಡಿ ಬೆಳೆಯನ್ನು ಬೆಳೆದು ಶ್ರಮಪಟ್ಟದ್ದಷ್ಟೇ ಕಾಯಕವು. ಆದರೆ ರೈತರಿಂದ ಆಯಾಸವಿಲ್ಲದೆ ಬಂದ ಕಂದಾಯದ ಹಣವು ಕಾಯಕದಿಂದ ಬಂದುದಲ್ಲ. ಆದ್ದರಿಂದ ಯಾವ ಇನಾಮುದಾರರು ಅಥವಾ ಜಮೀನುದಾರರು ಕಷ್ಟಪಡದೆ ರೈತರಿಂದ ಬಂದ ಹಣದ ಮೇಲೆ ಉಪಜೀವಿಸಿ ತಮ್ಮ ಅಂಗ ಸೌಕರ್ಯಕ್ಕೂ ವೈಭವಕ್ಕೂ ಉಳಿದದ್ದನ್ನು ವೆಚ್ಚ ಮಾಡುತ್ತಾರೋ ಅವರು ಕಾಯಕವಂತರೆಂದು ಹೇಳಲಿಕ್ಕೆ ಬರಲಾರದು. ಅವರು ಪರೋಪಜೀವಿಗಳು.

ರಾಜ್ಯ ಕಾರಭಾರ ಮತ್ತು ಸರಕಾರಿ ನೌಕರಿ:— ಇದು ಜನಸೇವೆಯಲ್ಲಿ ಪರಿಣಮಿಸುತ್ತಿದ್ದರೆ ಕಾಯಕವೆನ್ನಿಸಿಕೊಳ್ಳುವದು. ಇಲ್ಲದಿದ್ದರೆ ಅದು ಜುಲುಮೆಯೇ ಸರಿ.

ಮಠಾಧಿಕಾರಿಗಳು:— ಸಮಾಜೋದ್ಧರಣ ಕಾರ್ಯದಲ್ಲಿ ತೊಡಗಿ, ಅದಕ್ಕೆ ಪ್ರತಿಫಲವಾಗಿ ತಮ್ಮ ಉಂಬಳಿಯನ್ನು ಅನುಭವಿಸುತ್ತಿದ್ದರೆ ಕಾಯಕವು. ಇಲ್ಲದಿದ್ದರೆ, ಇದು ಹೊಟ್ಟೆಗಾಗಿ ನಡಿಸಿದ ಕೇವಲ ಒಕ್ಕಲುತನವು. ಮಠದ ಕಾಯಕವಾಗಲಾರದು.

ಫಂಡು ಕೂಡಿಸುವದು:— ಜನಸೇವೆಗಾಗಿ ಹೀಗೆ ದುಡಿಯುತ್ತಿದ್ದರೆ, ಕಾಯಕವು. ಇಲ್ಲದಿದ್ದರೆ ಅದು ಹೊಟ್ಟೆಗಾಗಿ ಭಿಕ್ಷೆಯು.



ಬಡ್ಡಿ ವ್ಯವಹಾರ:— ಕಾಯಕವಾಗಲಾರದು. ಇದರಲ್ಲಿ ಯಾವ ದುಡಿಕೆಯು ಇಲ್ಲ. ಎಷ್ಟೋ ಕಡೆಗೆ ವಚನಕಾರರು ಇದನ್ನು ತಿರಸ್ಕರಿದ್ದಾರೆ. ಇದು ಸೋಮಾರಿತನವು.

ದೊಡ್ಡ ಕಾರಖಾನೆದಾರರು:— ತಾವು ಶ್ರಮಪಟ್ಟು ಸಂಬಳ ದೊರಕಿಸಿದ್ದಷ್ಟೇ ಕಾಯಕವು. ಆದರೆ ಬಹಳ ಹಣ ಕೂಡಿಸಿ ದೊಡ್ಡ ಕಾರಖಾನೆಗಳನ್ನು ನಿರ್ಮಿಸಿ ಅಸಂಖ್ಯ ಜನರನ್ನು ಆರ್ಥಿಕ ಗುಲಾಮಗಿರಿಗೆ ಗುರಿ ಮಾಡಿ ಬಂದದ್ದನ್ನು ತಮ್ಮ ವೈಭವಕ್ಕೆ ವೆಚ್ಚ ಮಾಡುವಂತಹದು ಕಾಯಕವಾಗಲಾರದು. ಅದು ಅಧರ್ಮವು.

ಈ ಮೇರೆಗೆ ವಾಚಕರು ಬೇರೆ ಬೇರೆ ಕಾಯಕಗಳ ಬಗ್ಗೆ ತಾವೇ ವಿಚಾರ ಮಾಡಬೇಕು. ಒಟ್ಟಿಗೆ ಕಾಯಕದ ಅರ್ಥವು ತಾನು ದುಡಿದು ಸಂಪಾದಿಸಿ ಅದನ್ನು ಶಿವಾರ್ಪಣ ಭಾವದಿಂದ ಭೋಗಿಸುವದೇ ಇರುತ್ತದೆ. ದುಡಿಯದೇ ಬಂದದ್ದು ಮತ್ತು ಅಧರ್ಮದಿಂದ ಗಳಿಸಿದ್ದು ಕಾಯಕವಾಗಲಾರದು. ಯಾವ ಕಾಯಕದಿಂದ ಒಬ್ಬ ಮನುಷ್ಯನು ಪರೋಪಜೀವಿಯಾಗಿರದೆ ಸ್ವತಂತ್ರನಾಗಿರಲು ಶಕ್ಯವಾದದ್ದೋ ಅದೇ ಶ್ರೇಷ್ಠತರವಾದುದು.

## ಕಾಯಕಗಳ ಈಗಿನ ಸ್ವರೂಪ.

ಬಸವಾದಿ ಪ್ರಮಥರ ದೃಷ್ಟಿಯಿಂದ ಕಾಯಕಗಳ ನಿಜವಾದ ಅರ್ಥವು ಈ ಪ್ರಕಾರ ಇರುತ್ತದೆ. ಹೀಗಿದ್ದರೂ ಈ ಕಾಲದಲ್ಲಿ ಈ ಶಬ್ದಕ್ಕೆ ವಿಪರೀತ ಅರ್ಥವು ಉಂಟಾದದ್ದು ಸಖೇದಾಶ್ಚರ್ಯವನ್ನುಂಟು ಮಾಡುತ್ತದೆ. ಈಗಿನ ಕಾಯಕದ ಅಯ್ಯಗಳನ್ನು ಕಾಯಕದ ಅರ್ಥವೇನೆಂದು ಕೇಳಿದರೆ ಬಸವೇಶ್ವರನು ಕಲ್ಯಾಣವನ್ನು ಬಿಟ್ಟುಕೊಟ್ಟು ಹೋಗುವ ಸಮಯದಲ್ಲಿ ಆವನ ಹತ್ತರವಿದ್ದ ಒಂದು ಲಕ್ಷ ತೊಂಬತ್ತಾರು ಸಾವಿರ ಜಂಗಮರಿಗೆ ತಮ್ಮ ಅಶನಕ್ಕೆ ತೊಂದರೆಯು ಬರಲಾಗಿ, ಅವರು ತಮ್ಮ ಗತಿ ಏನೆಂದು ಬಸವೇಶ್ವರನಿಗೆ ಕೇಳಲು, ಅವನು ಅವರಿಗೆ ಮುಳ್ಳಾವಿಗೆ ಕಾಯಕ, ಗಂಟೇ ಕಾಯಕ ಮೊದಲಾದ ಕಾಯಕಗಳನ್ನು ಮಾಡುತ್ತ ಭಿಕ್ಷೆಯಿಂದ ಉಪಜೀವಿಸಿರಿ ಎಂದು ಹೇಳಿ ಹೋದನಂತೆ! ಆದ್ದರಿಂದ ಈ ಕಾಯಕಗಳು ಉತ್ಪನ್ನವಾದವಂತೆ!! ಇದು ಎಂಥ ವಿಸಂಗತತನವು, ಎಷ್ಟು ವಿಪರೀತ ವಿಚಾರವುಳ್ಳದು!!! ಬಸವಾದಿ ಪ್ರಮಥರ ದೃಷ್ಟಿಯಿಂದ

ಕಾಯಕಕ್ಕೆ ಈ ಅರ್ಥವು ಇಲ್ಲವೇ ಇಲ್ಲ. ಮಹಾತ್ಮನಾದ ಬಸವೇಶ್ವರನ ಹೆಸರಿಗೆ ಕುಂದು ತರುವಂಥ ಅನೇಕ ಆಖ್ಯಾಯಿಕೆಗಳು ದೇಶದಲ್ಲಿ ಇನ್ನೂ ರೂಢವಾಗಿವೆ. ಅವುಗಳಲ್ಲಿ ನಾನು ಈ ಲೇಖದಲ್ಲಿ ವಿವೇಚಿಸಿದ್ದೊಂದು ಇರುತ್ತದೆ. ಈ ವಿಚಾರಗಳನ್ನು ದೂರ ಮಾಡಬೇಕಾದರೆ ಅತ್ಯಂತ ಶ್ರೇಷ್ಠ ತರವಾದ ವಚನಕಾರರ ವಚನ ವಾಙ್ಮಯವನ್ನು ಪ್ರಸಿದ್ಧಿಸಿ ಅವರ ತತ್ವಗಳನ್ನು ಹೊರಗೆಡುವುದೊಂದೇ ಮಾರ್ಗವಾಗಿದೆ.

—ರಾ|| ಬ|| ಫ. ಗು. ಹಳಕಟ್ಟಿ, ವಿಜಾಪುರ.

---

## ಶಿವಾನುಭವ ಶಾಸ್ತ್ರದ ವಿಸ್ತಾರವು.

ಶಿವಾನುಭವ ಶಾಸ್ತ್ರದ ವಿಸ್ತಾರವು ಬಹು ದೊಡ್ಡದದೆ. ವಚನಕಾರರು ವ್ಯಾಪಕವಾದ ಅನೇಕ ವಿಷಯಗಳನ್ನು ಇದರಲ್ಲಿ ನಿರೂಪಿಸುತ್ತಾರೆ. ಇದರೊಳಗೆ ನೈತಿಕ, ಸಾಮಾಜಿಕ, ಆಚಾರ ವಿಷಯಕ, ತಾತ್ವಿಕ, ಯೌಗಿಕ, ವ್ಯವಹಾರಿಕ ಇವೇ ಮೊದಲಾದ ವಿಷಯಗಳು ಅಡಕವಾಗಿರುತ್ತವೆ. ಶಿವಾನುಭವಿಗಳು ಜ್ಞಾನ ಮತ್ತು ಕ್ರಿಯೆ ಇವುಗಳಲ್ಲಿ ಪರಸ್ಪರ ವಿರುದ್ಧತೆಯನ್ನು ಕಲ್ಪಿಸಿಲ್ಲ. ಅವರು ಇವೆರಡಕ್ಕೂ ಸರಿಯಾಗಿ ಮಹತ್ವಕೊಟ್ಟಿರುತ್ತಾರೆ. ಒಂದರ ವ್ಯಾಪಾರವು ಮತ್ತೊಂದರ ಮೇಲೆ ಅವಲಂಬಿಸಿದೆಂಬುದನ್ನು ಅವರು ತಿಳಿದು ಅವುಗಳನ್ನು ಅವರು ಒಂದಕ್ಕೊಂದು ಸಂಬಂಧಿಸಿ ವಿವೇಚನೆ ಮಾಡಿದ್ದಾರೆ. ಈ ವಿಷಯವನ್ನು ಕುರಿತು ವಚನಕಾರರಲ್ಲಿ ಅತ್ಯಂತ ಶ್ರೇಷ್ಠ ಸ್ಥಾನವನ್ನು ಹೊಂದಿದ ಚನ್ನಬಸವೇಶ್ವರನು ಅನ್ನುವದೇನಂದರೆ:—

"ಕ್ರಿಯೆಯೇ ಜ್ಞಾನವು, ಜ್ಞಾನವೇ ಕ್ರಿಯೆ. ಜ್ಞಾನವೆಂದರೆ ತಿಳಿಯುವದು, ಕ್ರಿಯೆಯೆಂದರೆ, ತಿಳಿದಂತೆ ಮಾಡುವದು. ಪರಸ್ತ್ರೀ ಭೋಗಿಸಬಾರದೆಂಬುದೇ ಜ್ಞಾನ. ಅದರಂತೆ ಆಚರಿಸುವದೇ ಕ್ರಿಯೆ. ಅಂತು ಆಚರಿಸದಿದ್ದರೆ, ಅದೇ ಅಜ್ಞಾನ ನೋಡಾ ಕೂಡಲ ಚನ್ನಸಂಗಮದೇವಾ."

"ಕ್ರಿಯೆ ಜಡವೆಂಬರು, ಜ್ಞಾನ ಅಜಡವೆಂಬರು. ಅದೆಂತಯ್ಯಾ? ನೀತಿಯು ಹೇಳಿದ್ದು, ಜಡವೇ? ಕಷ್ಟವಿಲ್ಲದೆ ಬಂದಂತೆ ಬೊಗಳಿ, ಭೋಗಿಸಿ,



ಭವಕ್ಕೆ ಹೋಗುವದು ಅಜಡವೇ? ಕ್ರಿಯಾಜ್ಞಾನವೆಂಬ ಉಭಯ ಶಬ್ದದರ್ಥವನರಿಯದೆ ಕಂಡ ಕಂಡ ಹಾಗೆ ಬೊಗಳುವ ಹೊಲೆ ಮಾದಿಗರನು ಏನೆಂಬೆ ಕೂಡಲ ಚನ್ನ ಸಂಗಮದೇವಾ?"

ಆದುದರಿಂದ ವೀರಶೈವ ವಚನಕಾರರು ಕ್ರಿಯಾಯುಕ್ತವಾದ ಈ ಜಗತ್ತು ಮಾಯಾಮಯವು, ಸುಳ್ಳು ಎಂದು ತಿಳಿದಿಲ್ಲ. ಆದ್ದರಿಂದ ಅವರು ಪರಮಾತ್ಮನ ಜ್ಞಾನದ ವಿವೇಚನೆಗಾಗಿ ಎಷ್ಟು ಪರಿಶ್ರಮ ಪಟ್ಟಿರುವರೋ, ಅಷ್ಟೇ ಅಥವಾ ಅದಕ್ಕೂ ಹೆಚ್ಚು ಮನುಷ್ಯನು ವ್ಯವಹಾರದಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ಕುರಿತು ವಿವೇಚಿಸಿದ್ದಾರೆ. ಆದ್ದರಿಂದ ಶಿವಾನುಭವ ಶಾಸ್ತ್ರದಲ್ಲಿ ತತ್ವಜ್ಞಾನ ವಿವೇಚನೆಯಷ್ಟೇ ಅಲ್ಲ, ನೈತಿಕ, ಸಾಮಾಜಿಕ, ಆಚಾರ ವಿಷಯಕ ಹೀಗೆ ಅನೇಕ ತರದ ವ್ಯವಹಾರಿಕ ವಿಷಯಗಳ ವಿವೇಚನೆಗಳಾದರೂ ಹೆಚ್ಚಾಗಿ ಇದ್ದುದು ಕಂಡು ಬರುತ್ತದೆ. ಈ ವಿವೇಚನೆಯಲ್ಲಿ ಅವರು ಯಾವ ಯಾವ ಭಾಗಗಳನ್ನು ಮಾಡಿದ್ದಾರೆ, ಮತ್ತು ಯಾವ ಯಾವ ವಿಷಯಗಳನ್ನು ಹೇಗೆ ನಿರೂಪಿಸಿದ್ದಾರೆ, ಇವನ್ನು ಅತ್ಯಂತ ಸ್ಥೂಲ ತೆರನಾಗಿ ನಾವು ಕೆಳಗೆ ವಿವರಿಸಲು ಪ್ರಯತ್ನಿಸುತ್ತೇವೆ.

### ಸೃಷ್ಟಿಯ ಕ್ರಮ.

ಪಂಚ ಸಾದಾಖ್ಯಗಳು:— ಶಿವಾನುಭವ ಶಾಸ್ತ್ರಜ್ಞರು ಸೃಷ್ಟಿಯ ರಚನೆಯ ವಿಷಯವಾಗಿ ಅನೇಕ ವಚನಗಳನ್ನು ಬರೆದಿದ್ದಾರೆ. ಸೃಷ್ಟಿಯ ಉಗಮವು ಪರಮಾತ್ಮನ ಒಂದು ಶಕ್ತಿಯಿಂದಲೇ ಆಗಿರುತ್ತದೆಂದು ಅವರು ಭಾವಿಸಿದ್ದಾರೆ. ಈ ಶಕ್ತಿಯು ವಿಶ್ವದಲ್ಲೆಲ್ಲ ಪಸರಿಸಿದ್ದು ಇದಕ್ಕೆ ಚಿತ್ಶಕ್ತಿ ಎಂಬ ಹೆಸರಿದೆ. ಈ ಚಿತ್ಶಕ್ತಿಯೇ ಸೃಷ್ಟಿಯ ವ್ಯಕ್ತ ಸ್ಥಿತಿಗೆ ಮೂಲವಾಗಿರುತ್ತದೆ. ಜಗತ್ತಿನಲ್ಲಿ ನಕ್ಷತ್ರ, ಸೂರ್ಯಚಂದ್ರಾದಿಗಳು ಒಂದು ವ್ಯವಸ್ಥೆಯಿಂದ ವ್ಯವಹರಿಸುವದನ್ನು ನೋಡುತ್ತೇವೆ. ಅವುಗಳಂತೆಯೇ ಪೃಥ್ವಿಯಲ್ಲಿಯೂ ಸಜೀವ ನಿರ್ಜೀವ ಪದಾರ್ಥಗಳೆಲ್ಲ ತಮ್ಮ ತಮ್ಮ ವ್ಯಾಪಾರಗಳಲ್ಲಿ ಉದ್ಯುಕ್ತವಾಗಿವೆ. ಈ ಪದಾರ್ಥಗಳನ್ನೆಲ್ಲ ನಾವು ಸೂಕ್ಷ್ಮ ದೃಷ್ಟಿಯಿಂದ ನಿರೀಕ್ಷಿಸಿದಲ್ಲಿ ಅವುಗಳಲ್ಲೆಲ್ಲ ಒಂದು ವ್ಯವಸ್ಥಿತವಾದ ಪ್ರಚಂಡ ಶಕ್ತಿಯು ವ್ಯಾಪಿಸಿಕೊಂಡು ವ್ಯವಹರಿಸುತ್ತದೆಂಬದನ್ನು ನಾವು ಕಾಣಬಹುದು. ಇದಕ್ಕೆಲ್ಲ ಈ ಚಿತ್ಶಕ್ತಿಯೇ ಕಾರಣವಾಗಿರುತ್ತದೆ. ಆದರೆ ಈ ಜಗ

ತ್ತಿಗೆ ಈ ಚಿತ್ಶಕ್ತಿಯಿಂದ ನಾವು ಕಾಣುವ ವ್ಯಕ್ತಸ್ವರೂಪವು ಉಂಟಾಗಬೇಕಾದರೆ ಅದು ಕೆಲವು ಸ್ಥಿತಿಗಳೊಳಗಿಂದ ಹಾಯ್ದು ಬರಬೇಕಾಗುತ್ತದೆ. ಈ ಸ್ಥಿತಿಗಳಿಗೆ ವಚನಕಾರರು ಸಾದಾಖ್ಯಗಳೆಂಬ ಹೆಸರನ್ನಿಟ್ಟಿದ್ದಾರೆ. ಅವು ಯಾವವೆಂದರೆ:— ಮಹಾಸಾದಾಖ್ಯ, ಶಿವಸಾದಾಖ್ಯ, ಅಮೂರ್ತಸಾದಾಖ್ಯ, ಮೂರ್ತಿಸಾದಾಖ್ಯ, ಕರ್ತುಸಾದಾಖ್ಯ, ಕರ್ಮಸಾದಾಖ್ಯ. ಪ್ರತಿಯೊಂದು ಸಾದಾಖ್ಯದಲ್ಲಿ ನಾನಾ ತರದ ಶಕ್ತಿಗಳು ಉಗಮ ಹೊಂದುತ್ತವೆ. ಆದರೆ ಆ ಶಕ್ತಿಗಳ ಕಡೆಯ ಸ್ವರೂಪು ಕರ್ಮಸಾದಾಖ್ಯವಿದ್ದು, ಅದರ ದೃಶ್ಯ ಪರಿಣಾಮವೇ ಬ್ರಹ್ಮಾಂಡವಾಗಿರುತ್ತದೆ. ಈ ಆರು ಸಾದಾಖ್ಯಗಳಲ್ಲಿ ಹುಟ್ಟಿದ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಶಕ್ತಿಗಳ ಮೂಲಕ ಈ ಜಗತ್ತಿನ ನಾನಾ ವಿಧ ವ್ಯಾಪಾರಗಳು ನಡೆಯುತ್ತಿದ್ದು ಅವೆಲ್ಲವೂ ಪರಮಾತ್ಮನ ಇಚ್ಛಾನುಸಾರವಾಗಿ ಜಗತ್ತಿನಲ್ಲಿ ವ್ಯವಹರಿಸುತ್ತಲಿವೆ. ಷಟ್‌ಸ್ಥಲ ಶಾಸ್ತ್ರದಲ್ಲಿ ಸೃಷ್ಟಿಯ ಕ್ರಮದ ಜ್ಞಾನವೆಂದರೆ ಈ ಆರು ಸಾದಾಖ್ಯಗಳ ಜ್ಞಾನವೇ ಇರುತ್ತದೆ.

## ಷಡಧ್ವಗಳು.

ಅಧ್ವಗಳೆಂದರೆ ಮಾರ್ಗಗಳು. ಯಾವ ಮಾರ್ಗಗಳಿಂದ ಪರಮಾತ್ಮನ ಶಕ್ತಿಗಳು ವ್ಯವಹರಿಸುತ್ತವೆಯೋ ಅವು ಆರು ಇದ್ದು, ಅವುಗಳಿಗೆ ಷಡಧ್ವಗಳೆಂಬ ಹೆಸರು. ಜಗತ್ತಿನಲ್ಲಿ ವಿದ್ಯುಲ್ಲತೆಯು ತುಂಬಿರುವದಷ್ಟೇ. ಆದರೆ ಅದು ಪ್ರಕಟವಾಗಬೇಕಾದರೆ ಹೇಗೆ ಒಂದು ತಂತಿಯಂಥ ಪದಾರ್ಥವು ಅದಕ್ಕೆ ಅವಶ್ಯವೋ, ಹಾಗೆ ಪರಮಾತ್ಮನ ಶಕ್ತಿಗಳು ಈ ಷಡಧ್ವಗಳ ಮಾರ್ಗವಾಗಿ ಕಾರ್ಯಮಾಡುತ್ತವೆ. ಇವುಗಳು ಆರು ಇರುತ್ತವೆ. ಅವು ಕಲಾಧ್ವ, ಪದಾಧ್ವ, ಮಂತ್ರಾಧ್ವ, ಭುವನಾಧ್ವ, ತತ್ವಾಧ್ವ, ವರ್ಣಾಧ್ವ ಎಂಬವು ಇರುತ್ತವೆ. ಈ ಪ್ರತಿಯೊಂದು ಅಧ್ವದಲ್ಲಿ ವಚನಕಾರರು ಪುನಃ ಅನೇಕ ಭಾಗ ವಿಭಾಗಗಳನ್ನು ಮಾಡಿದ್ದಾರೆ. ಇವುಗಳ ವಿಚಾರವೇ ಷಡಧ್ವಜ್ಞಾನ. ಇವುಗಳ ವಿವೇಚನೆಯು ವಚನ ಶಾಸ್ತ್ರ ಗ್ರಂಥಗಳಲ್ಲಿ ವಿಶೇಷವಾಗಿ ಮಾಡಲ್ಪಟ್ಟಿರುತ್ತದೆ. ಈ ಅಧ್ವಗಳು ಬಾಹ್ಯ ಸೃಷ್ಟಿಯಲ್ಲಿ ಮಾತ್ರವಲ್ಲ, ಮನುಷ್ಯನ ಶರೀರದಲ್ಲಿಯೂ ಇದ್ದು ಅವುಗಳ ಜ್ಞಾನವನ್ನು ಮಾಡಿಕೊಳ್ಳುವದರಿಂದ ಮನುಷ್ಯನು ತನ್ನಲ್ಲಿ ಲಿಂಗ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಸಮರ್ಥನಾಗುತ್ತಾನೆ.



## ಕರಣ ಹಸಿಗೆ.

ಕರಣ ಹಸಿಗೆಯ ಗ್ರಂಥಗಳಲ್ಲಿ ಮನುಷ್ಯನ ಶರೀರದಲ್ಲಿರುವ ನಾನಾ ವಿಧ ತತ್ವಗಳ ವಿವೇಚನೆಯು ಇರುತ್ತವೆ. ಇವು ವೀರಶೈವರ ಮಾನಸ ಶಾಸ್ತ್ರ ಮತ್ತು ಶರೀರ ಶಾಸ್ತ್ರಗಳೆಂದು ನಾವು ಹೇಳಬಹುದು. ವಚನಕಾರರು ಇದರಲ್ಲಿ ಅಡಕವಾಗಿರುವ ವಿಷಯಗಳನ್ನು ಮೇಲಿಂದ ಮೇಲೆ ತಮ್ಮ ವಚನಗಳಲ್ಲಿ ಉಲ್ಲೇಖಿಸುತ್ತಾರೆ. ಇಂಥ ವಿಷಯಗಳ ಬಗ್ಗೆ ವಿಶೇಷ ವಿಚಾರವನ್ನು ಗ್ರೀಸ ದೇಶದ ತತ್ವಜ್ಞಾನಿಗಳೂ ಈಗಿನ ಐರೋಪ್ಯ ತತ್ವವೇತ್ತಿಗಳೂ ಬಹು ಆಳವಾಗಿ ಮಾಡಿದ್ದಾರೆ. ಅದರಂತೆಯೇ ನಮ್ಮ ಹಿಂದುಸ್ತಾನ ದೇಶದಲ್ಲಿಯ ಪುರಾತನ ತತ್ವಜ್ಞಾನಿಗಳೂ ಈ ವಿಷಯಕ್ಕೆ ವಿಶೇಷ ಲಕ್ಷವನ್ನು ಪೂರೈಸಿದ್ದಾರೆ. ಆದರೆ ಈ ವಿಚಾರಗಳು ಸಾಂಖ್ಯ ಶಾಸ್ತ್ರದಲ್ಲಿ ಹೆಚ್ಚಾಗಿ ಬಂದಿರುತ್ತದೆ. ವೀರಶೈವರು ರಚಿಸಿರುವ ಕರಣ ಹಸಿಗೆಯ ಗ್ರಂಥಗಳು ಈ ಸಾಂಖ್ಯ ತತ್ವಗಳನ್ನೇ ಅನುಸರಿಸುತ್ತವೆ. ಈ ತೆರದ ಗ್ರಂಥಗಳಲ್ಲಿ ಆತ್ಮ, ಜೀವ, ದೇಹ ಇವುಗಳ ವ್ಯಾಪಾರಗಳ ವಿವೇಚನೆ, ಶರೀರದಲ್ಲಿರುವ ೩೬ ತತ್ವಗಳ ನಿರೂಪಣೆ, ಬೇರೆ ಬೇರೆ ಇಂದ್ರಿಯಗಳ ಕಾರ್ಯಗಳು, ಷಟ್ ಚಕ್ರಗಳ ರೀತಿ, ಇವೇ ಮೊದಲಾದ ವಿಷಯಗಳು ಬರುತ್ತವೆ. ಇವುಗಳ ಜ್ಞಾನವು ಶಿವಾನುಭವಕ್ಕೆ ಅತ್ಯಾವಶ್ಯಕವು. ವಚನಕಾರರು ಇದರಲ್ಲಿ ಮನುಷ್ಯನ ಗುಣಾವಗುಣಗಳನ್ನು ಚರ್ಚಿಸಿ, ಅವುಗಳ ಭೇದಾಭೇದಗಳನ್ನು ಕಂಡು ಹಿಡಿದು, ಅವುಗಳನ್ನು ಅನೇಕ ವಿಧವಾಗಿ ವಿವೇಚಿಸಿದ್ದಾರೆ. ಯಾವ ಮನುಷ್ಯನು ಹೆಚ್ಚಿನ ಸ್ಥಿತಿಯನ್ನು ಬಯಸುತ್ತಾನೋ, ಅವನಿಗೆ ಇವುಗಳ ಜ್ಞಾನವು ಅತ್ಯಾವಶ್ಯಕವೆಂದು ವಚನಕಾರರು ತಿಳಿದು ಅವರು ಕರಣ ಹಸಿಗೆಗೆ ಷಟ್‌ಸ್ಥಲದಲ್ಲಿ ಮಹತ್ವದ ಸ್ಥಾನವನ್ನು ಕೊಟ್ಟಿರುತ್ತಾರೆ.

## ಸ್ಥಲಗಳ ವಿಚಾರ.

ವಚನಕಾರರ ಗ್ರಂಥಗಳಲ್ಲಿ ಸ್ಥಲಗಳ ಸಂಬಂಧವಾಗಿ ಮೇಲಿಂದ ಮೇಲೆ ಅನೇಕ ತರದ ವಿವರಣೆಗಳು ಬರುತ್ತವೆ. ಷಟ್‌ಸ್ಥಲ ವಿಚಾರಗಳು ಈಗ ಅಪರಿಚಿತವಾಗಿರುವದರಿಂದ ಸಾಮಾನ್ಯ ಜನರಿಗೆ ಸ್ಥಲಗಳ ಅರ್ಥವೇನು ಎಂಬುದರ ಸ್ಪಷ್ಟ ಕಲ್ಪನೆಯಾಗುವದಿಲ್ಲ. ಕೆಲವು ವಚನಕಾರರು 'ಸ್ಥಲ' ಎಂಬ ಶಬ್ದಕ್ಕೆ ವಿಷಯವೆಂಬ ಸಾಮಾನ್ಯ ಅರ್ಥವನ್ನು ಕಲ್ಪಿಸಿ ನಾನಾ ತರದ ಧಾರ್ಮಿಕ, ನೈತಿಕ ವಿಷಯಗಳನ್ನು ಕುರಿತು ತಮ್ಮ

ಗ್ರಂಥಗಳಲ್ಲಿ ವಿವೇಚನೆ ಮಾಡಿರುವರು. ಭಾವ ಚಿಂತಾರತ್ನದಲ್ಲಿಯೂ ಲಿಂಗಲೀಲಾ ವಿಲಾಸದಲ್ಲಿಯೂ ಸ್ಥಲಗಳು ಸಾಮಾನ್ಯ ರೀತಿಯಿಂದ ಹೀಗೆ ನಿರೂಪಿಸಲ್ಪಟ್ಟಿದೆ. ಆದರೆ ಪುರಾತನ ವಚನಕಾರರಲ್ಲಿ ಸ್ಥಲಗಳಿಗೆ ವಿಶೇಷಾರ್ಥಗಳು ಇರುತ್ತವೆ. ಈ ಸ್ಥಲಗಳ ಜ್ಞಾನವೇ ಷಟ್‌ಸ್ಥಲ ಜ್ಞಾನವು.

ವಚನಕಾರರು ಇವರಲ್ಲಿ ನಾನಾ ವಿಧ ಭಾಗ-ವಿಭಾಗಗಳನ್ನು ಮಾಡಿ, ಅವುಗಳನ್ನು ಬಹು ಸೂಕ್ಷ್ಮವಾಗಿ ತಮ್ಮ ಉಕ್ತಿಗಳಲ್ಲಿ ವಿವೇಚಿಸಿದ್ದಾರೆ. ಈ ವಿಷಯವನ್ನು ನಾವು ರಚಿಸಿರುವ “ ವಚನ ಶಾಸ್ತ್ರಸಾರ ” ಈ ಹೆಸರಿನ ಮೂರು ಗ್ರಂಥಗಳಲ್ಲಿ ವಿಸ್ತಾರವಾಗಿರುವವನ್ನು ವಾಚಕರು ಕಾಣಬಹುದು. ವಚನಕಾರರ ಷಟ್‌ಸ್ಥಲದಲ್ಲಿ ಕೆಳಗೆ ಬರೆದ ಪ್ರಕಾರ ವಿಭಾಗಗಳನ್ನು ಮಾಡಿದ್ದಾರೆ. ಈ ವಿಭಾಗಗಳ ಸಂಖ್ಯೆಯು ಕ್ರಮವಾಗಿ ೧, ೨, ೩, ೬, ೧೮, ೩೬, ೨೧೬ ಇರುತ್ತವೆ. ಷಟ್‌ಸ್ಥಲದ ಗ್ರಂಥಗಳಲ್ಲಿ ಬಹುಶ: ಮೇಲ್ಕಂಡ ರೀತಿಯಿಂದ ಸ್ಥಲಗಳ ವಿವೇಚನೆಯು ಇರುವದು ಕಂಡು ಬರುತ್ತದೆ.

ಒಂದು ಸ್ಥಲ:— ಇದು ಪರಬ್ರಹ್ಮ ಅಥವಾ ಪರಶಿವ ವಸ್ತುವು. ಈ ವಿಷಯದಲ್ಲಿ ಪರಮಾತ್ಮನ ಮೂಲ ಅವ್ಯಕ್ತ ಸ್ಥಿತಿಯ ನಿರೂಪಣೆಯು ಇರುತ್ತದೆ.

ಎರಡು ಸ್ಥಲಗಳು:— ಇವು ಅಂಗ ಲಿಂಗಗಳು ಇರುತ್ತವೆ. ಮೂಲ ಪರಶಿವನು ದ್ವಿವಿಧವಾಗಲು ಶಕ್ತಿಯೇ ಕಾರಣವು. ಇವುಗಳ ಪರಸ್ಪರ ಸಂಬಂಧದ ವಿವೇಚನೆಯು ಈ ಭಾಗದಲ್ಲಿ ಬರುತ್ತದೆ. ಇದರಲ್ಲಿ ಜಗತ್ತು ಮತ್ತು ಲಿಂಗ ಇವೆರಡರ ಸಂಬಂಧವು ಹೇಳಲ್ಪಡುತ್ತದೆ. ಅಂಗವು ಸೃಷ್ಟ ವಸ್ತುವಾಗಿದ್ದು ಲಿಂಗವು ಅದರಲ್ಲಿ ಚೈತನ್ಯಾತ್ಮಕವಾಗಿ ವ್ಯವಹರಿಸುತ್ತದೆ. ಅಂಗದ ಕ್ರಿಯೆಗಳಿಗೆ ಅದು ಕಾರಣವಾಗಿರುತ್ತದೆ.

ಮೂರು ಸ್ಥಲಗಳು:— ಅಂಗ ಸ್ಥಲಗಳು ಮೂರು ಇವೆ. ಅವು ಯಾವವೆಂದರೆ:—ತ್ಯಾಗಾಂಗ, ಭೋಗಾಂಗ, ಯೋಗಾಂಗಗಳು. ಲಿಂಗಸ್ಥಲಗಳು ಮೂರು ಇವೆ. ಅವು ಯಾವವೆಂದರೆ:—ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳು. ಮನುಷ್ಯನಲ್ಲಿ ಸ್ಥೂಲ ಸೂಕ್ಷ್ಮ ಕಾರಣ ಎಂಬ ಮೂರು ಶರೀರಗಳಿವೆ. ಈ ಮೂರರ ಪರಸ್ಪರ ಸಹಾಯದಿಂದಲೇ ಅವನ ಬಾಹ್ಯ ಮತ್ತು ಅಂತರಂಗಿಕ ವ್ಯಾಪಾರಗಳು ನಡಿಯುತ್ತವೆ. ಈ ಮೂರು ಒಂದನ್ನೊಂದು ಬಿಟ್ಟು ವ್ಯವಹರಿಸಲಾರವು. ತ್ಯಾಗಾಂಗ, ಭೋಗಾಂಗ, ಯೋಗಾಂಗ



ಗಳು ಈ ಮೂರು ಶರೀರಗಳಿಗೆ ಅನುಕ್ರಮವಾಗಿ ಸಂಬಂಧಿಸಿವೆ. ಅವುಗಳಲ್ಲಿದ್ದು ಅವುಗಳಿಗೆ ಪ್ರೇರಣೆ ಮಾಡುವ ಲಿಂಗಶಕ್ತಿಗಳು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳು ಇವೆ. ಈ ಯಾವತ್ತೂ ವಿಷಯಗಳ ವಿವರಣೆಯು ಈ ಭಾಗದಲ್ಲಿ ಬರುತ್ತದೆ.

ಆರು ಸ್ಥಲಗಳು:— ಇವರಲ್ಲಿ ಆರು ಅಂಗ ಸ್ಥಲಗಳು ಇವೆ. ಅವು ಯಾವುವೆಂದರೆ:— ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ. ಅದರಂತೆಯೇ ಆರು ಲಿಂಗ ಸ್ಥಲಗಳು ಇವೆ. ಅವು ಯಾವವೆಂದರೆ:— ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ. ಮನುಷ್ಯನಿಗೆ ಇಂದ್ರಿಯಗಳು, ಚಕ್ರಗಳು, ಶಕ್ತಿಗಳು ಆರಾರು ಇದ್ದು ಅವುಗಳಿಗೆ ಅವು ಅನುಕ್ರಮವಾಗಿ ಸಂಬಂಧಪಡುತ್ತವೆ. ಮನುಷ್ಯನ ವಿಕಾಸವು ಇವುಗಳ ಪೂರ್ಣತೆಯ ಮೇಲೆ ಅವಲಂಬಿಸಿರುತ್ತದೆ. ಅವುಗಳ ಪರಿಪೂರ್ಣತೆಯೇ ಮನುಷ್ಯನ ಪರಿಪೂರ್ಣತೆಯು. ಅವುಗಳ ಜ್ಞಾನವೇ ಷಟ್‌ಸ್ಥಲ ಜ್ಞಾನವು. ಪ್ರತಿ ಒಂದು ವಚನ ಗ್ರಂಥದಲ್ಲಿ ಈ ಆರು ಸ್ಥಲಗಳ ವಿವೇಚನೆಯು ಇದ್ದೇ ಇರುತ್ತದೆ. ಮನುಷ್ಯನ ಐಹಿಕ ಕಾರ್ಯಗಳು ಸರಿಯಾಗಿ ನಡೆಯಬೇಕಾದರೆ ಈ ಆರು ಸ್ಥಲಗಳ ಜ್ಞಾನವು ಅವನಿಗೆ ಅತ್ಯಾವಶ್ಯಕವಾಗಿರುತ್ತದೆ. ವೀರಶೈವ ಧರ್ಮದ ವಿಚಾರದಲ್ಲಿ ಇದು ಅತ್ಯಂತ ಮಹತ್ವದ ವಿಷಯವಿರುತ್ತದೆ.

ಹದಿನೆಂಟು ಸ್ಥಲಗಳು:— ಮೇಲೆ ವಿವರಿಸಿದ ಆರು ಸ್ಥಲಗಳಲ್ಲಿಯ ಪ್ರತಿಯೊಂದು ಸ್ಥಲವು ಮನುಷ್ಯನ ಸ್ಥೂಲ ಸೂಕ್ಷ್ಮ ಕಾರಣ ಈ ಮೂರೂ ಶರೀರಗಳಲ್ಲಿ ಪರಿಣಾಮ ಮಾಡುತ್ತದೆ. ಹೀಗೆ ಅವು ವ್ಯವಹರಿಸಿದ್ದಾಗ್ಗೆಯೇ ಮನುಷ್ಯನ ಎಲ್ಲ ಶರೀರಗಳಲ್ಲಿ ವಿಕಾಸವು ಉಂಟಾಗುತ್ತದೆ. ಆದ್ದರಿಂದ ಭಕ್ತಸ್ಥಲದಲ್ಲಿ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳ ಪ್ರಕಾರ ಮೂರು ವಿಭಾಗಗಳು, ಹಾಗೆಯೇ ಮಹೇಶ್ವರ ಸ್ಥಲದಲ್ಲಿ ಮೂರು ವಿಭಾಗಗಳು, ಹೀಗೆ ಪ್ರತಿಯೊಂದು ಸ್ಥಲದಲ್ಲಿ ಮೂರು ಮೂರು ವಿಭಾಗಗಳನ್ನು ವಚನಕಾರರು ಮಾಡಿದ್ದಾರೆ. ಹೀಗೆ ಆರು ಸ್ಥಲಗಳಿಗೆ ಹದಿನೆಂಟು ಸ್ಥಲಗಳಾಗುವವು. ಅವುಗಳ ವಿವೇಚನೆಯು ವಚನ ಶಾಸ್ತ್ರದಲ್ಲಿ ಬರುತ್ತದೆ. ಅದಕ್ಕನುಗುಣವಾಗಿಯೇ ಪ್ರತಿಯೊಂದು ಲಿಂಗಸ್ಥಲದಲ್ಲಿಯೂ ಮೂರು ಮೂರು ವಿಭಾಗಗಳನ್ನು ಅವರು ಮಾಡಿರುವರು. ಹೀಗೆ ೧೮

ಅಂಗಸ್ಥಲಗಳೂ ಅವುಗಳಿಗನುಸರಿಸಿ ೧೮ ಲಿಂಗಸ್ಥಲಗಳೂ ಆಗುವವು. ಅಂಗಸ್ಥಲಗಳಲ್ಲಿ ಆಗುವ ಕ್ರಿಯೆಗಳು ಲಿಂಗಸ್ಥಲಗಳ ವಿಕಾಸಕ್ಕೆ ಕಾರಣವಾಗುತ್ತವೆ. ಹಾಗೆಯೇ ಲಿಂಗಸ್ಥಲಗಳ ಕ್ರಿಯೆಗಳು ಅಂಗಗಳ ಪೋಷಣೆಗೆ ಕಾರಣವಾಗುತ್ತವೆ.

ಮೂವತ್ತಾರು ಸ್ಥಲಗಳು:— ಮೇಲೆ ಹೇಳಿದ ಆರು ಸ್ಥಲಗಳಲ್ಲಿಯ ಪ್ರತಿಯೊಂದು ಸ್ಥಲದಲ್ಲಿ ಪುನಃ ಆರು ಆರು ವಿಭಾಗಗಳನ್ನು ಕಲ್ಪಿಸಿ, ಈ ಆರು ಸ್ಥಲಗಳಿಗೆ ಮೂವತ್ತಾರು ಸ್ಥಲಗಳನ್ನು ವೀರಶೈವ ವಚನಕಾರರು ಮಾಡಿರುತ್ತಾರೆ. ಉದಾ:— ಭಕ್ತನ ಭಕ್ತ, ಭಕ್ತನ ಮಹೇಶ, ಭಕ್ತನ ಪ್ರಸಾದಿ ಇತ್ಯಾದಿ. ಮಹೇಶನ ಭಕ್ತ, ಮಹೇಶನ ಮಹೇಶ, ಮಹೇಶನ ಪ್ರಸಾದಿ ಇತ್ಯಾದಿ. ಹೀಗೆ ಒಟ್ಟು ೩೬ ಸ್ಥಲಗಳಾಗುತ್ತವೆ. ಅದರಂತೆಯೇ ಲಿಂಗಸ್ಥಲಗಳಿಗೂ ೩೬ ವಿಭಾಗಗಳನ್ನು ಅವರು ಮಾಡಿದ್ದಾರೆ. ಉದಾ:— ಆಚಾರಲಿಂಗದೊಳಗಣ ಆಚಾರಲಿಂಗ, ಆಚಾರಲಿಂಗದೊಳಗಣ ಗುರುಲಿಂಗ ಇತ್ಯಾದಿ. ಇದರ ಉದ್ದೇಶವೇನಂದರೆ, ಮನುಷ್ಯನ ಕ್ರಿಯೆಗಳು ಒಂದೇ ಒಂದು ಸ್ಥಲದಲ್ಲಿ ಇದ್ದರೆ ಅವನ ಸರ್ವತೋಮುಖ ಪ್ರಗತಿಯು ಆಗಲಾರದು. ಅವನು ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಿಗೆ ಮೇಲೆ ಹೇಳಿದಂತೆ ಸಂಬಂಧಿಸಿಕೊಂಡು ಅವುಗಳಲ್ಲಿರುವ ಎಲ್ಲ ಸ್ಥಲಗಳಲ್ಲಿಯೂ ಅವನ ಶಕ್ತಿಯು ಹರಿದಾಡಬೇಕು. ಆದರೆ ಅವನು ತನ್ನ ಶಕ್ತಿಯನ್ನು ಒಂದೇ ಒಂದರಲ್ಲಿ ಬೆಳಿಸಿದರೆ ಅದು ಅವನ ಪೂರ್ಣ ಪ್ರಗತಿಗೆ ಕಾರಣವಾಗಲಾರದು. ಉದಾ:— ಅವನಲ್ಲಿ ಕೇವಲ ಶಾರೀರಕ ಸಾಮರ್ಥ್ಯವಿದ್ದರೆ, ಅದು ಅವನಿಗೆ ಹಿತಕಾರಿಯಲ್ಲ. ಅದರೊಡನೆ ಅವನ ಮಾನಸಿಕ ಶಕ್ತಿಯೂ ಬೌದ್ಧಿಕ ಸಾಮರ್ಥ್ಯವೂ ಬೆಳೆಯಬೇಕು. ವಚನಕಾರರು ಈ ಸಂಗತಿಯನ್ನು ತಮ್ಮ ಉದ್ದೇಶವಾಗಿಟ್ಟುಕೊಂಡು ಅವರು ಮೇಲೆ ಕಾಣಿಸಿದಂತೆ ೩೬ ಸ್ಥಲಗಳನ್ನು ಕಲ್ಪಿಸಿದ್ದಾರೆ.

೨೧೬ ಸ್ಥಲಗಳು:— ೨೧೬ ಸ್ಥಲಗಳ ಜ್ಞಾನದಿಂದ, ಮನುಷ್ಯನ ಅತ್ಯಂತ ಸೂಕ್ಷ್ಮ ದೇಹವಾದ ಕಾರಣ ಶರೀರದ ಪ್ರಗತಿಯು ಉಂಟಾಗುತ್ತದೆ. ಮನುಷ್ಯನಿಗೆ ಸ್ಥೂಲ, ಸೂಕ್ಷ್ಮ, ಕಾರಣ ಎಂಬ ಮೂರು ಶರೀರಗಳು ಇರುತ್ತವಷ್ಟೇ. ಈ ಮೂರು ಶರೀರಗಳ ಕಾರ್ಯಗಳು ಯಾವಾಗ್ಗೆ ಪರಸ್ಪರ ಆತಂಕವಿಲ್ಲದೆ ಸಮರಸಭಾವದಿಂದ ವ್ಯವಹರಿಸುತ್ತವೆಯೋ ಆಗ್ಗೆ ಮನುಷ್ಯನು ಶ್ರೇಷ್ಠ ಸ್ಥಿತಿಯನ್ನು ಹೊಂದುತ್ತಾನೆ.



೨೧೬ ಸ್ಥಲಗಳ ಜ್ಞಾನದಿಂದ ಮನುಷ್ಯನಲ್ಲಿ ಈ ವಿಧದ ಪರಿಸ್ಥಿತಿಯು ಉಂಟಾಗುತ್ತದೆ.

ಈ ೨೧೬ ಸ್ಥಲಗಳು ಯಾವವೆಂದರೆ:— ಭಕ್ತನ ಭಕ್ತನ ಭಕ್ತ, ಭಕ್ತನ ಭಕ್ತನ ಮಹೇಶ ಇತ್ಯಾದಿ ಆರು ಸ್ಥಲಗಳು. ಭಕ್ತನ ಮಹೇಶನ ಭಕ್ತ, ಭಕ್ತನ ಮಹೇಶನ ಮಹೇಶ ಇತ್ಯಾದಿ ಆರು ಸ್ಥಲಗಳು. ಹೀಗೆ ಭಕ್ತ ಸ್ಥಲಕ್ಕೆ ೩೬ ಸ್ಥಲಗಳು. ಅದರಂತೆ ಮಹೇಶ್ವರ ಸ್ಥಲಕ್ಕೆ ೩೬ ಸ್ಥಲಗಳು. ಹೀಗೆ ಪ್ರತಿಯೊಂದು ಸ್ಥಲಕ್ಕೆ ೩೬ ಸ್ಥಲಗಳಂತೆ ಒಟ್ಟು ೨೧೬ ಸ್ಥಲಗಳಾಗುತ್ತವೆ. ಪ್ರತಿಯೊಂದು ಸ್ಥಲದಲ್ಲಿ ಅಂಗಸ್ಥಲಗಳೂ ಲಿಂಗಸ್ಥಲಗಳೂ ಇದ್ದೇ ಇರುತ್ತವೆ. ಈ ಸ್ಥಿತಿಯನ್ನು ಸಾಧಿಸಿದಲ್ಲಿ ಮನುಷ್ಯನ ಎಲ್ಲ ಶರೀರಗಳಲ್ಲಿರುವ ಶಕ್ತಿಗಳ ಪೂರ್ಣ ವಿಕಾಸವಾಗುತ್ತದೆ.

## ನಿವೃತ್ತಿ

ಹೀಗೆ ಮನುಷ್ಯನ ಮೂರೂ ಶರೀರಗಳು ಸರಿಯಾಗಿ ಪೂರ್ಣತೆಯನ್ನು ಹೊಂದಿದ ಕೂಡಲೆ ಅವುಗಳ ಎಲ್ಲ ವ್ಯಾಪಾರಗಳು ನಿವೃತ್ತಿಸ್ಥಿತಿಯನ್ನು ಹೊಂದಲು ಯೋಗ್ಯತೆಯನ್ನು ಹೊಂದುತ್ತವೆ. ಪ್ರಗತಿಯ ಆರಂಭದಲ್ಲಿ ಮೊದಲನೇ ಸ್ಥಲವಾದ ಲಿಂಗಸ್ಥಲದಿಂದ ಕ್ರಮೇಣ ೧, ೨, ೩, ೧೮, ೩೬, ೨೧೬ ಸ್ಥಲಗಳನ್ನು ಮುಟ್ಟುವ ವರೆಗೂ ಅವನು ಪ್ರವೃತ್ತಿಯಲ್ಲಿರುತ್ತಾನೆ. ಈ ಕಾಲದಲ್ಲಿ ಅವನ ಗುಣಗಳು ವಿಕಾಸವನ್ನು ಹೊಂದುತ್ತಲೇ ಇರುತ್ತವೆ. ಹೀಗೆ ಮನುಷ್ಯನು ಪ್ರಗತಿಯ ಪರಮಾವಧಿ ಸ್ಥಿತಿಯನ್ನು ಹೊಂದಿದ ಬಳಿಕ ಅವನ ಪರಿಪಕ್ವವಾದ ಶಕ್ತಿಗಳು ನಿವೃತ್ತಿಯ ಸ್ಥಿತಿಯನ್ನು ಹೊಂದಹತ್ತುವವು. ಆಗ ಅವನ ೨೧೬ ಸ್ಥಲಗಳು ೩೬ ಸ್ಥಲಗಳಲ್ಲಿ, ೩೬ ಸ್ಥಲಗಳು ೬ ಸ್ಥಲಗಳಲ್ಲಿ, ೬ ಸ್ಥಲಗಳು ೩ ಸ್ಥಲಗಳಲ್ಲಿ, ೩ ಸ್ಥಲಗಳು ೨ ಸ್ಥಲಗಳಲ್ಲಿ, ೨ ಸ್ಥಲಗಳು ೧ ಸ್ಥಲದಲ್ಲಿ ಹೀಗೆ ಕ್ರಮವಾಗಿ ಅಡಗಿ, ಮನುಷ್ಯನು ಯಾವ ಪರಬ್ರಹ್ಮದೊಳಗಿಂದ ಹೊರಬಿದ್ದಿರುತ್ತಾನೋ, ಅದೇ ಪರಬ್ರಹ್ಮದಲ್ಲಿ ಅಂದರೆ ೧ ರಲ್ಲಿ ಅವನು ಪುನಃ ಲಯವಾಗುವನು. ಇದೇ ಲಿಂಗಾಂಗ ಸಾಮರಸ್ಯವಾಗಿರುತ್ತದೆ. ಈ ನಿವೃತ್ತಿಯ ಮಾರ್ಗದಲ್ಲಿ ಮನುಷ್ಯನಲ್ಲಿಯ ತತ್ವಗಳಲ್ಲಿ ಯಾವದು ಯಾವುದರಲ್ಲಿ ಕೂಡುತ್ತಾ ಹೋಗುತ್ತದೆಂಬುದರ ವಿಚಾರವನ್ನು ವಚನಕಾರರು ಇಲ್ಲಿ ನಿರೂಪಿಸುತ್ತಾರೆ.

ಹೀಗೆ ವಚನಕಾರರು ಯಾವ ರೀತಿಯಿಂದ ಜಗತ್ತಿನಲ್ಲಿ ವ್ಯವಹರಿಸಬೇಕು, ತಮ್ಮ ಅವಗುಣಗಳನ್ನು ಹೇಗೆ ಕಳೆದುಕೊಳ್ಳಬೇಕು, ತಮ್ಮ ಸದ್ಗುಣಗಳನ್ನು ಹೇಗೆ ಬೆಳಸಿಕೊಳ್ಳಬೇಕು, ತಮ್ಮ ಶಕ್ತಿಗಳನ್ನು ಹೇಗೆ ಲಿಂಗಮಯ ಮಾಡಬೇಕು, ಇವೇ ಮೊದಲಾದ ಮಹತ್ವದ ವಿಷಯಗಳನ್ನು ಬಹು ಆಶ್ಚರ್ಯಕರವಾದ ರೀತಿಯಿಂದ ವಚನಗಳಲ್ಲಿ ವಿವೇಚಿಸುತ್ತಾರೆ. ಇವೆಲ್ಲವುಗಳ ಜ್ಞಾನವೇ ಷಟ್ಸ್ಥಲ ಜ್ಞಾನವೆನಿಸಿಕೊಳ್ಳುತ್ತದೆ.

ಪ್ರತಿಯೊಂದು ಧರ್ಮದಲ್ಲಿ ದೇವರ ಸಂಬಂಧದ ತಾತ್ವಿಕ ಜ್ಞಾನ ಮತ್ತು ಅವನ ಉಪಾಸನೆ ಅಥವಾ ಆಚಾರ ಎಂಬ ಎರಡು ವಿಭಾಗಗಳು ಇದ್ದೇ ಇರುತ್ತವೆ. ಇವುಗಳಲ್ಲಿ ಉಪಾಸನೆಯ ಕ್ರಮವು, ಬೇರೆ ಬೇರೆ ಧರ್ಮಗಳ ಪರಿಸ್ಥಿತಿಗನುಸರಿಸಿ ಭಿನ್ನ ಭಿನ್ನ ತೆರನಾಗಿರುತ್ತದೆ. ಕ್ರಿಸ್ತೀ ಧರ್ಮದ ಪ್ರಕಾರ ಒಂದು ಸ್ಥಳದಲ್ಲಿ ಎಲ್ಲರೂ ನೆರೆದು ದೇವರನ್ನು ಕುರಿತು ಪ್ರಾರ್ಥನೆ ಮಾಡುತ್ತಾರೆ. ಇದೇ ಅವರ ಉಪಾಸನೆಯಲ್ಲಿ ಮಹತ್ವದ ಭಾಗವಾಗಿರುತ್ತದೆ. ಇಸ್ಲಾಮಿ ಧರ್ಮದಲ್ಲಿ ಅದರ ಅನುಯಾಯಿಗಳು ನಮಾಜಕ್ಕೆ ಮಹತ್ವದ ಸ್ಥಾನವನ್ನು ಕೊಟ್ಟಿದ್ದಾರೆ. ವೇದಗಳ ಕಾಲಕ್ಕೆ ಹಿಂದೂ ಧರ್ಮದಲ್ಲಿ ಯಜ್ಞ-ಯಾಗಾದಿಗಳಿಗೆ ಮಹತ್ವದ ಸ್ಥಾನವು ಕೊಡಲ್ಪಟ್ಟಿತ್ತು. ಹಿಂದುಗಡೆ ಪೌರಾಣಿಕ ಕಾಲದಲ್ಲಿ ನಾನಾವಿಧ ದೇವತೆಗಳ ಉಪಾಸನೆಗಳು ಬೇರೆ ಬೇರೆ ಧರ್ಮಗಳಲ್ಲಿ ಪ್ರಚಾರ ಹೊಂದಿದವು. ಆದರೆ ವೀರಶೈವ ಧರ್ಮದಲ್ಲಿ ಅಷ್ಟಾವರಣಗಳು ಕಲ್ಪಿಸಲ್ಪಟ್ಟು, ಇವುಗಳಂತೆ ಆಚರಿಸುವದೇ ವೀರಶೈವರ ಮುಖ್ಯ ಉಪಾಸನೆಯಾಗಿದೆ.

## ಅಷ್ಟಾವರಣಗಳು

ಅಷ್ಟಾವರಣಗಳ ಉದ್ದೇಶವು ಷಟ್ಸ್ಥಲಗಳ ತಿಳಿವಳಿಕೆಯನ್ನು ಉಂಟುಮಾಡಿಕೊಂಡು ಲಿಂಗಾಂಗ ಸಾಮರಸ್ಯವನ್ನು ಹೊಂದುವುದೇ ಇರುತ್ತದೆ. ಭಕ್ತನು ಇವುಗಳ ಮೂಲಕ ಈ ಜ್ಞಾನ ಮಾಡಿಕೊಂಡು ಅವುಗಳ ಆಚರಣೆಯಂತೆ ನಡೆಯುತ್ತ ತನ್ನ ಸ್ಥೂಲ ಸೂಕ್ಷ್ಮ ಕಾರಣ ಶರೀರಗಳಲ್ಲಿ ನಡೆಯುವ ವ್ಯಾಪಾರಗಳನ್ನು ಉಚ್ಚ ಸ್ಥಿತಿಗೆ ಒಯ್ಯತಕ್ಕದ್ದಾಗಿರುತ್ತದೆ. ಅಷ್ಟಾವರಣಗಳನ್ನು ಪಾಲಿಸುವವನು ಯಜ್ಞಾದಿ ಕರ್ಮಗಳನ್ನೂ ಕರ್ಮಮಾರ್ಗ ಮತ್ತು ಯೋಗಮಾರ್ಗಗಳ ಕ್ಲಿಷ್ಟ ಆಚರಣೆಗಳನ್ನೂ ಪಾಲಿಸುವದು ಅನವಶ್ಯವು.



ಅಷ್ಟಾವರಣಗಳನ್ನು ಪಾಲಿಸುತ್ತ ಲಿಂಗಾಂಗ ಸಾಮರಸ್ಯವನ್ನು ಭಕ್ತನು ಹೊಂದಲು ಶಕ್ಯವಿದೆ. ಉಪಾಸನೆಯ ಮುಖ್ಯ ಉದ್ದೇಶವು ಧಾರ್ಮಿಕ ತತ್ವಗಳ ಅರಿವಿನ ಅನುಭವ ಮಾಡಿಕೊಳ್ಳುವದೇ ಇರುತ್ತದೆ. ವೀರಶೈವನು ಅಷ್ಟಾವರಣಗಳನ್ನು ಪಾಲಿಸುವದರಿಂದ ಅವನಲ್ಲಿ ಇಂಥ ಅರಿವು ಉಂಟಾಗಿ ಲಿಂಗದಲ್ಲಿ ಅಡಗುವನು.

ಅಷ್ಟಾವರಣದಲ್ಲಿಯು ಎರಡು ಭೇದಗಳು:— ವೀರಶೈವ ಷಟ್ಸ್ಥಲ ಜ್ಞಾನಿಗಳು ಸ್ಥೂಲ ಅಷ್ಟಾವರಣವೆಂತಲೂ ಸೂಕ್ಷ್ಮ ಅಥವಾ ಜ್ಞಾನ ಅಷ್ಟಾವರಣವೆಂತಲೂ ಎರಡು ವಿಭಾಗಗಳನ್ನು ಮಾಡಿದ್ದಾರೆ. ಸ್ಥೂಲ ಅಷ್ಟಾವರಣಗಳು ಬಹಿರಂಗದ ಉಪಾಸನೆಯಾಗಿರುತ್ತವೆ. ಜ್ಞಾನ ಅಷ್ಟಾವರಣಗಳು ಶರೀರದೊಳಗಿರುವ ಎಲ್ಲ ಅಂತಃಶಕ್ತಿಗಳನ್ನು ಬಲಪಡಿಸುವವು.

ಅಷ್ಟಾವರಣದಲ್ಲಿಯ ಮೂರು ಭೇದಗಳು:- ಅಷ್ಟಾವರಣಗಳು ಮನುಷ್ಯನ ಕಾರಣ ಸೂಕ್ಷ್ಮ ಮತ್ತು ಸ್ಥೂಲ ಶರೀರಗಳಿಗೆ ಅನುಸಾರವಾಗಿಯೂ ಇರುತ್ತವೆ. ಅವುಗಳನ್ನು ಅವುಗಳಿಗೆ ಸಂಬಂಧಿಸಿ ಆಚರಿಸಿದಲ್ಲಿ ಮನುಷ್ಯನ ಮೂರೂ ಶರೀರಗಳು ವಿಕಾಸವನ್ನು ಹೊಂದುತ್ತವೆ.

ಹೀಗೆ ಈ ಅಷ್ಟಾವರಣಗಳನ್ನು ಪಾಲಿಸುವದರಿಂದ ಮನುಷ್ಯನಲ್ಲಿ ಷಡ್ಲಿಂಗಗಳು ತಾವೇ ಜಾಗೃತವಾಗಿ ಅವು ಅವನನ್ನು ಸಾಮರಸ್ಯ ಸ್ಥಿತಿಗೆ ತರುತ್ತವೆ.

ಈ ಮೇರೆಗೆ ಶಿವಾನುಭವ ಶಾಸ್ತ್ರಜ್ಞರು ವೀರಶೈವರು ಮಾಡತಕ್ಕ ಉಪಾಸನೆಯನ್ನು ಕುರಿತು ವಿವೇಚನೆ ಮಾಡಿದ್ದಾರೆ. ಇದರ ಮೇಲಿಂದ ವೀರಶೈವ ಉಪಾಸನೆಯು ವಿಷಯಗಳು ಎಷ್ಟು ತಾತ್ವಿಕವಾಗಿರುತ್ತವೆಂಬುದನ್ನು ವಾಚಕರು ಸಹಜವಾಗಿಯೇ ಅರಿಯಬಹುದಾಗಿದೆ. ದಿನಾಲು ಸ್ಥಾವರ ದೇವರಿಗೆ ಹೋಗಿ ಅವರ ಮೂರ್ತಿಯನ್ನು ಪೂಜಿಸುವದಕ್ಕೆ ಅವರು ಯಾವ ಮಹತ್ವವನ್ನೂ ಕೊಟ್ಟಿಲ್ಲ. ಅವರಲ್ಲಿ ಉಪಾಸನೆ ಎಂದರೆ ಅಷ್ಟಾವರಣಗಳ ಮೂಲಕ ಆತ್ಮಿಕ ಅಂತಃಶಕ್ತಿಗಳನ್ನು ಬಲಪಡಿಸುವದೇ ಇರುತ್ತದೆ.

## ಅಷ್ಟಾವರಣದ ಭಾಗಗಳು

(೧) ಗುರು ಲಿಂಗ ಜಂಗಮ:— ಇವುಗಳ ಭೇದ ವಿಭೇದಗಳ ವಿವೇಚನೆಯನ್ನು ವಚನಕಾರರು ಅತ್ಯಂತ ಸೂಕ್ಷ್ಮ ರೀತಿಯಿಂದ ಮಾಡಿರು

ತ್ತಾರೆ. ಇವುಗಳು ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಿಗೆ ಅನುಕ್ರಮವಾಗಿ ಸಂಬಂಧಪಡುತ್ತವೆ. ಇವುಗಳ ವಿಸ್ತೃತ ವಿವೇಚನೆಯು ವಚನಶಾಸ್ತ್ರದಲ್ಲಿ ವಿಶೇಷವಾಗಿ ಮಾಡಲ್ಪಟ್ಟಿರುತ್ತದೆ. ಇವುಗಳ ಆಚರಣೆಗಳು ಮನುಷ್ಯನ ನೈತಿಕ, ಬೌದ್ಧಿಕ, ಮಾನಸಿಕ ಮತ್ತು ಯೌಗಿಕ ಉನ್ನತಿಗೆ ಕಾರಣವಾಗುತ್ತವೆ.

(೨) ಪ್ರಸಾದ ಮತ್ತು ಪಾದೋದಕ:— ಇವುಗಳಿಗೆ ಆಚರಣೆಯಲ್ಲಿ ಮಹತ್ವದ ಸ್ಥಾನವಿದೆ. ಇವುಗಳು ಕೇವಲ ಬಾಹ್ಯ ಆಚರಣೆಗಳಷ್ಟೇ ಅಲ್ಲ ಲಿಂಗ ಸಂಬಂಧದ ಸೂಕ್ಷ್ಮ ಆಚರಣೆಗಳಿರುತ್ತವೆ. ಪ್ರಸಾದದಲ್ಲಿ ಮೂರು ವಿಭಾಗಗಳಿಂದ ಹಿಡಿದು ಒಂದು ಸಾವಿರದ ಮೇಲ್ಪಟ್ಟು ವಿಭಾಗಗಳಿವೆ. ಇವರ ಮೇಲಿಂದ ಇವುಗಳ ಆಚರಣೆಯು ಎಷ್ಟು ಸೂಕ್ಷ್ಮವಾಗಿರುತ್ತದೆಂಬುದನ್ನು ನಾವು ಊಹಿಸಬಹುದು.

ಇದರಂತೆಯೇ ಪಾದೋದಕ ವಿಷಯವಾದರೂ ಅತ್ಯಂತ ಸೂಕ್ಷ್ಮತರದ್ದಾಗಿರುತ್ತದೆ. ಪಾದೋದಕದ ಜ್ಞಾನವು ಆಗಬೇಕಾದರೆ ಷಟ್ಸ್ಥಲ ಶಾಸ್ತ್ರದ ತತ್ವಗಳು ಮತ್ತು ಷಡಕ್ಷರೀ ಮಂತ್ರದ ಮರ್ಮ ಇವುಗಳನ್ನು ಮೊದಲು ಅರಿಯುವದು ಅವಶ್ಯವಾಗಿದೆ.

ಸ್ಥೂಲ ರೀತಿಯಿಂದ ಪಾದೋದಕಗಳು ದಶವಿಧವೂ ಪ್ರಸಾದಗಳು ದ್ವಾದಶವಿಧವೂ ಆಗಿರುತ್ತವೆ.

(೩) ವಿಭೂತಿ, ರುದ್ರಾಕ್ಷಿ:— ಬೇರೆ ಬೇರೆ ಸ್ಥಾನಗಳಿಗನುಸಾರವಾಗಿ ವಿಭೂತಿಯನ್ನು ಹೇಗೆ ಮತ್ತು ಯಾವ ಭಾವನೆಯಿಂದ ಧರಿಸಬೇಕು ಎಂಬುದನ್ನು ವಚನಕಾರರು ಹೇಳಿರುತ್ತಾರೆ. ರುದ್ರಾಕ್ಷ ಧಾರಣೆಯಲ್ಲಿಯೂ ಇದೇ ಕ್ರಮವು ಇರುತ್ತದೆ. ಇವುಗಳ ಮೂಲಕ ದೇಹಶುದ್ಧಿ ಮತ್ತು ಮನಃಶುದ್ಧಿ ಇವೆರಡೂ ಉಂಟಾಗುತ್ತವೆ. ಇವುಗಳಲ್ಲಿ ರುದ್ರಾಕ್ಷಿಯು ಮಂತ್ರ, ಜಪದಲ್ಲಿ ಅತ್ಯಂತ ಸಹಾಯಕಾರಿಯಾದುದು. ಇದರಲ್ಲಿ ಚಿದ್ರುದ್ರಾಕ್ಷಿಯ ಕ್ರಮವು ಷಟ್‌ಚಕ್ರಗಳ ಪ್ರೇರಣೆಗೆ ಸಹಾಯಕವಾದುದು.

ಮಂತ್ರ:— ಶಿವಾನುಭವ ಶಾಸ್ತ್ರಜ್ಞರು ಇದರ ಮರ್ಮವನ್ನು ಅತ್ಯಂತ ಗೂಢವಾಗಿಯೂ ಗರ್ಭಿತವಾಗಿಯೂ ಇಟ್ಟಿದ್ದಾರೆ. ಷಟ್ಸ್ಥಲ ಜ್ಞಾನವನ್ನು ಆಚರಣೆಯಲ್ಲಿ ಬರಲು ಮಂತ್ರವೇ ಅವನಿಗೆ ಸಹಾಯಕಾರಿಯು. ಮಂತ್ರದ



ಉದ್ದೇಶವು ಲೈಂಗಿಕ ಶಕ್ತಿಗಳನ್ನು ತನ್ನಲ್ಲಿ ಹೆಚ್ಚಿಸಿಕೊಳ್ಳುವುದೇ ಇರುತ್ತದೆ. ಆದ್ದರಿಂದ ಶಿವಾನುಭವಿಯು ಮಂತ್ರದ ಜ್ಞಾನವನ್ನು ಮಾಡಿಕೊಳ್ಳುವದು ಅತ್ಯಂತ ಮಹತ್ವದ್ದಿರುತ್ತದೆ. ಇದರಲ್ಲಿ ಪಂಚಾಕ್ಷರಿಯ ಭೇದಾಭೇದಗಳ ವಿವರಣೆ, ಅವುಗಳ ಮೂಲಕ ಮನುಷ್ಯನ ಶರೀರದಲ್ಲಿರುವ ಲಿಂಗಗಳಲ್ಲಿ ಜಾಗ್ರತೆಯನ್ನುಂಟು ಮಾಡುವದು, ಜಪವಿಭೇದಗಳು, ಶರೀರಕ್ಕೆ ಮಂತ್ರ ಸಂಬಂಧ ಇವೇ ಮೊದಲಾದ ವಿಷಯಗಳು ಬರುತ್ತವೆ. ಈ ಮಂತ್ರ ಶಾಸ್ತ್ರವು ಬಹು ಗಹನವಾದುದು. ಇದು ವೀರಶೈವ ಧರ್ಮದ ವೈಶಿಷ್ಟ್ಯವು. ಇದರ ಮೂಲಕವೇ ಶಿವಶರಣರು ಉನ್ನತಾವಸ್ಥೆಯನ್ನು ಹೊಂದಿರುತ್ತಾರೆ.

ಶಿವಾನುಭವ ಶಾಸ್ತ್ರಜ್ಞರು ಈ ಪ್ರಕಾರ ಅನೇಕ ವಿಧವಾಗಿ ಅಷ್ಟಾವರಣದ ಮರ್ಮಗಳನ್ನು ತಮ್ಮ ವಚನಗಳಲ್ಲಿ ನಿರೂಪಿಸಿದ್ದಾರೆ. ಈ ಎಲ್ಲ ವಿವರಣೆಗಳ ಮೇಲಿಂದ ವೀರಶೈವರಲ್ಲಿ ಉಪಾಸನೆಯ ಪದ್ಧತಿಯು ಎಷ್ಟು ತಾತ್ವಿಕ ಮತ್ತು ಉದಾತ್ತವಾಗಿರುತ್ತದೆಂಬವರ ಕಲ್ಪನೆಯು ವಾಚಕರಿಗೆ ಬರಬಹುದು.

ಹೀಗೆ ಶಿವಾನುಭವ ಶಾಸ್ತ್ರಕಾರರು ಧರ್ಮ ಜ್ಞಾನವನ್ನೂ ಉಪಾಸನೆಯ ವಿಷಯಗಳನ್ನೂ ವಿವರಿಸಿ ಅವುಗಳನ್ನು ಆಚರಿಸಲು ಸಹಾಯವಾಗಬೇಕೆಂದು ಅವರು ಇನ್ನೂ ಅನೇಕ ಅವಾಂತರ ಕಾರ್ಯಕ್ರಮಗಳನ್ನು ಕಲ್ಪಿಸಿದ್ದಾರೆ. ಇದರಲ್ಲಿ ಅವರ ಉದ್ದೇಶವು ಆತ್ಮ ಪ್ರಗತಿಯನ್ನು ಉಂಟು ಮಾಡಿಕೊಳ್ಳಲಿಕ್ಕೆ ಸಹಾಯವಾಗಬೇಕೆಂಬುದೇ ಇರುತ್ತದೆ. ಈ ಉದ್ದೇಶದಿಂದ ಅವರು ಕೆಳಗೆ ಕಾಣಿಸಿದ ಭೇದ ವಿಭೇದಗಳನ್ನು ಮಾಡಿದ್ದಾರೆ.

### ಪಂಚಾಚಾರಗಳು.

ಪಂಚಾಚಾರಗಳು ಯಾವವೆಂದರೆ, ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ. ಈ ಆಚಾರಗಳ ಮೂಲಕ ಮನುಷ್ಯನು ವ್ಯವಹಾರದಲ್ಲಿ ಹೇಗೆ ನಡೆಯಬೇಕೆಂಬುದನ್ನು ತಿಳಿಯಬಹುದು. ಇವುಗಳಿಂದ ಸಮಾಜದ ಕಟ್ಟು ಹೇಗೆ ಬಲಪಡುವದೆಂಬುದನ್ನು ನಾವು ಅರಿತುಕೊಳ್ಳಬಹುದು. ಇವುಗಳ ವ್ಯಾಖ್ಯೆಗಳು ಕೆಳಗೆ ಕೊಡಲ್ಪಟ್ಟಿವೆ. ಇವು ಸಮಾಜ ವಿಕಾಸಕ್ಕೆ ಕಾರಣವಾದವುಗಳು.

ಲಿಂಗವಲ್ಲದೆ ಅನ್ಯವನರಿಯದಿರುವದೇ ಲಿಂಗಾಚಾರವು. ಎಲ್ಲರಿಗೂ ಒಪ್ಪಿಗೆಯಾಗುವಂತೆ ನಡೆಯುವದೇ ಸದಾಚಾರವು. ಜಾತಿಯನ್ನರಸದಿರು

ವದೇ ಶಿವಾಚಾರವು. ನಿಂದೆಯನ್ನು ಸೈರಿಸದಿರುವದೇ ಗಣಾಚಾರವು. ದಾಸಭಾವದಿಂದಿರುವದೇ ಭೃತ್ಯಾಚಾರವು.

### ಸಪ್ತಾಚಾರಗಳು.

ಸಪ್ತಾಚಾರಗಳು ಯಾವವೆಂದರೆ, ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರ, ಸತ್ಯಾಹಾರ, ನಿತ್ಯಾಚಾರ, ಧರ್ಮಾಚಾರ, ಸರ್ವಾಚಾರ. ಇವು ಆತ್ಮವಿಕಾಸಕ್ಕೆ ಸಹಾಯಕವಾದವುಗಳು. ಲಿಂಗ ಕ್ರಿಯೆಗಳಂತೆ ಆಚರಿಸುವದೇ ಕ್ರಿಯಾಚಾರವು. ವಚನಾನುಭಾವದಲ್ಲಿರುವುದೇ ಜ್ಞಾನಾಚಾರವು. ಗುಣಾವಗುಣಗಳನ್ನರಿತು ಸ್ವಾನುಭಾವದಿಂದಿರುವದೇ ಭಾವಾಚಾರವು. ನುಡಿಯಂತೆ ನಡೆಯುವದೇ ಸತ್ಯಾಚಾರವು. ಹಠಯೋಗವನ್ನನುಸರಿಸದೆ ಲಿಂಗಾಣತಿಯಿಂದ ಬಂದುದು ಪ್ರಸಾದವೆಂದು ಭಾವಿಸಿ ತೃಪ್ತನಾಗಿರುವದೇ ನಿತ್ಯಾಚಾರವು. ಪ್ರಣವ ಮೊದಲಾದ ಮಹಾಮಂತ್ರಗಳಲ್ಲಿ ಏಕತ್ವವನ್ನುಳ್ಳುದೇ ಧರ್ಮಾಚಾರವು. ಬಯಲೊಳಗೆ ಬಚ್ಚಬರಿಯ ನಿರವಯವ ಸಾಧಿಸುವದೇ ಸರ್ವಾಚಾರ ಸಂಪತ್ತಿನಾಚರಣೆ.

### ಷಡ್ಲಿಂಗ ಸಾಧನೆಗಳು.

ಶಿವಾನುಭವ ಶಾಸ್ತ್ರಜ್ಞರು ಮನುಷ್ಯನು ಲಿಂಗದ ಗುಣಗಳನ್ನು ತನ್ನಲ್ಲಿ ಒಳಕೊಳ್ಳುವದರ ಉದ್ದಿಶ್ಯವಾಗಿ ಮೇಲೆ ಹೇಳಿದಂತೆ ನಾನಾ ವಿಧ ಉಪಾಯಗಳನ್ನು ಯೋಜಿಸಿರುವರು. ಹಾಗೆಯೇ ಸಾಧಕನು ತನ್ನಲ್ಲಿ ಆರು ಲಿಂಗಗಳನ್ನು ಹೇಗೆ ಒಳಪಡಿಸಿಕೊಳ್ಳಬೇಕೆಂಬುದನ್ನು ಕುರಿತು ಕೆಲವು ಸಾಧನೆಗಳನ್ನು ಸಹ ಅವರು ಕಲ್ಪಿಸಿದ್ದಾರೆ. ಇದರಲ್ಲಿ ಅವರು ಕೆಳಗೆ ಕಾಣಿಸಿದಂತೆ ವಿಭಾಗಗಳನ್ನು ಮಾಡಿ ಆ ಪ್ರಕಾರ ಮನುಷ್ಯನು ಪ್ರತಿಯೊಂದು ಲಿಂಗದಲ್ಲಿ ವರ್ತಿಸಿದಲ್ಲಿ ಆ ಲಿಂಗದ ಗುಣಗಳು ಒಡಮೂಡುವವೆಂದು ಹೇಳಿದ್ದಾರೆ. ಅವು ಮೋಹೀ, ಭಕ್ತ, ಪೂಜಕ, ವೀರ, ಪ್ರಸಾದಿ, ಪ್ರಾಣಿ ಎಂಬವು ಇವೆ. ಈ ಮೇರೆಗೆ ಆಚಾರಲಿಂಗ, ಗುರುಲಿಂಗ ಮೊದಲಾದ ಆರುಲಿಂಗಗಳನ್ನು ಆಯಾ ಸ್ಥಲಗಳಲ್ಲಿ ಸಾಧಿಸಬೇಕೆಂದು ಅವರು ಸೂಚಿಸಿದ್ದಾರೆ. ಮೇಲ್ಕಂಡ ಆರು ಭಾಗಗಳ ಅರ್ಥವನ್ನು ವಾಚಕರು ಅವುಗಳಿಗೆ ಕೊಟ್ಟ ಹೆಸರುಗಳ ಮೇಲಿಂದಲೇ ಕಂಡುಹಿಡಿಯಬಹುದಾಗಿದೆ.



ಮೇಲ್ಕಂಡ ವಿಷಯಗಳ ವಿವರಣೆಗಳ ಮೇಲಿಂದ ಷಟ್‌ಸ್ಥಲ ಶಾಸ್ತ್ರದಲ್ಲಿ ಅನೇಕ ಭಾಗಗಳಿದ್ದು ಅವುಗಳಲ್ಲಿ ಬಹು ಸೂಕ್ಷ್ಮ ವಿಚಾರಗಳಿರುವದಾಗಿ ತೋರಿಬರುತ್ತದೆ. ಭಾಗಗಳನ್ನು ನಾವು ಎಣಿಸಹೋದರೆ ಇವುಗಳ ಸಂಖ್ಯೆಯು ಬಹು ದೊಡ್ಡದಾಗುತ್ತದೆ. ಇದರಿಂದ ಷಟ್‌ಸ್ಥಲ ವಿಚಾರಗಳು ಮತ್ತು ಭಾಗಗಳು ಬಹಳ ವಿಸ್ತಾರವಾದವುಗಳೂ ಗೊಂದಲದವುಗಳೂ ಇರುವದಾಗಿ ತೋರಿಬರುವದು. ಇದನ್ನು ಶಿವಾನುಭವ ಶಾಸ್ತ್ರಕಾರರು ತಿಳಿದುಕೊಂಡವರಾಗಿ ಈ ಯಾವತ್ತೂ ವಿಷಯಗಳ ಪರಸ್ಪರ ಸಂಬಂಧವನ್ನು ಸುಲಭವಾಗಿ ಕಂಡುಹಿಡಿಯುವದಕ್ಕೋಸ್ಕರ ಒಂದು ಯೋಜನೆಯನ್ನು ಮಾಡಿದ್ದಾರೆ. ಈ ಯೋಜನೆಗೆ ಅವರು ಸಕೀಲ ಜ್ಞಾನವೆಂಬ ಹೆಸರನ್ನಿಟ್ಟಿದ್ದಾರೆ.

### ಸಕೀಲಗಳು.

ಸಕೀಲಗಳ ಜ್ಞಾನದಿಂದ ಆಯಾ ಸ್ಥಲಗಳ ಪರಸ್ಪರ ಸಂಬಂಧವನ್ನು ಸಾಧಕನು ಕಂಡುಹಿಡಿಯಲು ಶಕ್ತನಾಗುತ್ತಾನೆ. ಇದರಲ್ಲಿ ಪ್ರತಿಯೊಂದು ಸ್ಥಲದ ವಿವರಣೆಯೂ ವ್ಯಾಖ್ಯೆಯೂ ಇರುತ್ತವೆ. ಈ ಸಕೀಲಗಳಲ್ಲಿ ಕೆಲವು ವಿಭಾಗಗಳೂ ಇವೆ. ಅವುಗಳಲ್ಲಿ ಷಡ್ವಿಧ ಸಕೀಲಗಳು, ಅಷ್ಟವಿಧ ಸಕೀಲಗಳು, ನೂರೆಂಟು ಸಕೀಲಗಳು, ಇನ್ನೂರು ಹದಿನಾರು ಸಕೀಲಗಳು ಮುಖ್ಯವಾದವುಗಳು. ಇವೂ ಅಲ್ಲದೆ ಅರವತ್ತಾರು ಸಕೀಲಗಳು, ತೊಂಭತ್ತಾರು ಸಕೀಲಗಳು ಎಂತಲೂ ಬೇರೆ ಭೇದಗಳಿವೆ. ಇವೂ ಅಲ್ಲದೆ ಉಪಾಸನಾ ಸಂಬಂಧದ ಸಕೀಲಗಳೂ ಬೇರೆ ಇವೆ. ಉದಾ:— ಇಷ್ಟಲಿಂಗದ ಸಕೀಲಗಳು, ಮಂತ್ರ ಸಕೀಲಗಳು, ಇತ್ಯಾದಿ.

### ಶಿವಯೋಗ.

ಶಿವಯೋಗವು ಲಿಂಗವನ್ನು ತನ್ನಲ್ಲಿ ಒಳಕೊಳ್ಳುವ ಒಂದು ಕ್ರಮವಿರುತ್ತದೆ. ಇದರ ವಿವೇಚನೆಯನ್ನು ಶಿವಾನುಭವ ಶಾಸ್ತ್ರಜ್ಞರು ಪ್ರಾಣಲಿಂಗಿ ಸ್ಥಲದಲ್ಲಿ ವಿಶೇಷವಾಗಿ ಮಾಡುವದುಂಟು. ಯೋಗಶಾಸ್ತ್ರದ ತತ್ವಗಳು ಷಟ್‌ಸ್ಥಲಗಳಲ್ಲಿ ತೆಗೆದುಕೊಳ್ಳಲ್ಪಟ್ಟಿವೆ. ಈ ವಿಷಯದ ಬಗ್ಗೆಯೂ ಶಿವಾನುಭವದಲ್ಲಿ ವಿವರಣೆಗಳು ಬರುವದುಂಟು. ಶಿವಯೋಗದ ಉದ್ದೇಶವು ಲಿಂಗದಲ್ಲಿ ಸ್ಥಿರ ಮನಸ್ಸುಳ್ಳವನಾಗಿ ಲಿಂಗದ ಗುಣಗಳನ್ನು ತನ್ನಲ್ಲಿ ಬರಮಾಡಿಕೊಳ್ಳುವದೇ ಇರುತ್ತದೆ. ಈ ಗುಣಗಳು ಬಂದ ಬಂದ ಹಾಗೆ

ಅವನು ಶರಣನೆನಿಸಿಕೊಳ್ಳುತ್ತಾನೆ. ಅವನು ತನ್ನ ಕಾಯಕ ಮಾಡುತ್ತಲೇ ಉಚ್ಚಸ್ಥಿತಿಯನ್ನು ಸಾಧಿಸಿಕೊಳ್ಳುತ್ತಾನೆ.

### ನೂರೊಂದು ಸ್ಥಲಗಳು.

ಹಿಂದೆ ವಿವರಿಸಿದ ಷಟ್‌ಸ್ಥಲಗಳ ಭೇದಾ ಭೇದಗಳನ್ನು ಅರುಹಿ ಕೊಡಲಿಕ್ಕೂ ಅವುಗಳಂತೆ ಆಚರಿಸಲಿಕ್ಕೂ ಅನುಕೂಲವಾಗಬೇಕೆಂದು ನೂರೊಂದು ಸ್ಥಲಗಳು ವಚನಕಾರರಿಂದ ಕಲ್ಪಿಸಲ್ಪಟ್ಟಿರುತ್ತವೆ. ಇವರಲ್ಲಿ ಷಟ್‌ಸ್ಥಲದ ತಾತ್ವಿಕ ವಿಚಾರಗಳಲ್ಲದೆ ಉಪಾಸನೆಯ ಮತ್ತು ಆಚಾರದ ವಿಷಯಗಳೂ ಕೂಡ ಸೇರ್ಪಡೆಯಾಗಿರುತ್ತವೆ. ಆದ್ದರಿಂದ ಇದರಲ್ಲಿ ಕೇವಲ ಷಟ್‌ಸ್ಥಲದ ತಾತ್ವಿಕ ವಿಚಾರಗಳಷ್ಟೇ ಅಲ್ಲ, ಅಷ್ಟಾವರಣ ಮೊದಲಾದವುಗಳ ವಿಚಾರಗಳೂ ಬರುತ್ತವೆ. ಆದ್ದರಿಂದ ಈ ನೂರೊಂದು ಸ್ಥಲಗಳಿಗೆ ವಚನಕಾರರು ಬಹಳ ಮಹತ್ವವನ್ನು ಕೊಟ್ಟಿದ್ದಾರೆ. ಇದರಲ್ಲಿ ಅಂಗಸ್ಥಲಗಳೂ ಲಿಂಗಸ್ಥಲಗಳೂ ಎಂದು ಕಲ್ಪಿಸಿ, ಅಂಗಸ್ಥಲದಲ್ಲಿ ೪೪ ವಿಭೇದಗಳೂ ಲಿಂಗಸ್ಥಲದಲ್ಲಿ ೫೭ ವಿಭೇದಗಳೂ ಮಾಡಲ್ಪಟ್ಟಿವೆ. ಇವುಗಳಲ್ಲಿ ೪೪ ಅಂಗಸ್ಥಲಗಳು ಭಕ್ತ ಮಹೇಶ ಮೊದಲಾದ ಆರು ಸ್ಥಲಗಳಲ್ಲಿ ಮತ್ತು ೫೭ ಲಿಂಗಸ್ಥಲಗಳು ಆರು ಲಿಂಗಸ್ಥಲಗಳಲ್ಲಿ ಹಂಚಿಹಾಕಲ್ಪಟ್ಟಿವೆ. ಈ ವಿಷಯದ ಬಗ್ಗೆ ಅನೇಕ ಉದ್ಗ್ರಂಥಗಳಾಗಿವೆ.

### ವಿವಿಧ ಕರ್ಮಗಳು.

ಬ್ರಾಹ್ಮಣರು ರಚಿಸಿದ ಧರ್ಮ ಶಾಸ್ತ್ರಗಳಲ್ಲಿ ಷೋಡಶ ಕರ್ಮಗಳ ವಿವರಣೆಯು ಮೇಲಿಂದ ಮೇಲೆ ಬರುತ್ತದೆ. ಇದರಲ್ಲಿ ಜಾತಕರ್ಮ, ಲಗ್ನ, ಗರ್ಭಾದಾನ, ಅಂತ್ಯವಿಧಿ ಇವೇ ಮೊದಲಾದ ವಿಧಿಗಳ ವರ್ಣನೆಗಳು ಇರುತ್ತವೆ. ಇಂಥ ವಿವರಣೆಗಳು ಕ್ರಿಶ್ಚನ್ನ, ಇಸ್ಲಾಮಿ, ಬೌದ್ಧ ಮೊದಲಾದ ಧರ್ಮದವರಲ್ಲಿಯೂ ಕಂಡುಬರುತ್ತವೆ. ಇಂಥ ವಿಧಿಗಳು ಬ್ರಾಹ್ಮಣ ಧರ್ಮ ಗ್ರಂಥಗಳಲ್ಲಿ ಬಹು ವಿಸ್ತೃತವಾಗಿ ವಿವೇಚಿಸಲ್ಪಟ್ಟಿರುತ್ತವೆ. ಇದರಂತೆಯೆ ಪ್ರಾಯಶ್ಚಿತ ವಿಧಿಗಳಿಗೂ ಬ್ರಾಹ್ಮಣರು ಮಹತ್ವದ ಸ್ಥಾನವನ್ನು ಕೊಟ್ಟಿರುತ್ತಾರೆ. ಆದರೆ ಶಿವಾನುಭವ ಶಾಸ್ತ್ರಜ್ಞರು ಇಂಥ ಕರ್ಮಗಳಿಗೆ ಮಹತ್ವ ಕೊಟ್ಟಿಲ್ಲ. ಯಾಕಂದರೆ ಅವು ಕೇವಲ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟವು ಇರುತ್ತವೆಂದು ಅವರ ಅಭಿಪ್ರಾಯವು. ಅವು ಆತ್ಮೋನ್ನತಿಯ



ಕ್ರಿಯೆಗಳಲ್ಲ. ಆದ್ದರಿಂದ ಇಂಥ ಕರ್ಮಗಳಿಗೆ ಅವರು ವಿಶೇಷತರದ ನಿರ್ಬಂಧನೆಗಳನ್ನು ಕಲ್ಪಿಸಿರುವದಿಲ್ಲ. ಆದರೂ ಶಿವಾನುಭವ ಶಾಸ್ತ್ರಜ್ಞರು ಈ ವಿಷಯವಾಗಿ ಎರಡು ಕರ್ಮಗಳ ವಿಷಯವಾಗಿ ಮಾತ್ರ ಅಪವಾದವನ್ನು ಮಾಡಿದ್ದಾರೆ. ಅವುಗಳಿಗೋಸ್ಕರ ಅವರು ವಿಶೇಷತರದ ವಿವರಣೆಗಳನು ಮಾಡಿದ್ದಾರೆ. ಆ ವಿಧಿಗಳು ಯಾವವೆಂದರೆ:— ದೀಕ್ಷಾವಿಧಿ ಮತ್ತು ಅಂತ್ಯವಿಧಿ.

### ದೀಕ್ಷೆಗಳು.

ದೀಕ್ಷಾ ಕ್ರಮದಲ್ಲಿ ಅವರು ಕ್ರಿಯಾ ದೀಕ್ಷೆ, ಮಂತ್ರ ದೀಕ್ಷೆ, ವೇಧಾ ದೀಕ್ಷೆ ಎಂದು ಮೂರು ಮುಖ್ಯ ವಿಭಾಗಗಳನ್ನು ಮಾಡಿದ್ದಾರೆ. ಅವು ಮನುಷ್ಯನ ಮೂರು ಶರೀರಗಳಿಗೆ ಸಂಬಂಧ ಪಡುತ್ತವೆ. ಪ್ರತಿಯೊಂದು ವಿಧಿಯಲ್ಲಿಯೂ ಪುನಃ ಏಳು ಏಳು ವಿಭಾಗಗಳನ್ನು ಮಾಡಿರುವದರಿಂದ ಅವು ಒಟ್ಟು ೨೧ ದೀಕ್ಷೆಗಳಿರುತ್ತವೆ.

### ಅಂತ್ಯವಿಧಿ.

ವೀರಶೈವನ ಅಂತ್ಯ ಕಾಲವು ದುಃಖಪಡತಕ್ಕ ಸಮಯವಲ್ಲ. ಒಬ್ಬ ಮನುಷ್ಯನು ಜಗತ್ತಿನಲ್ಲಿ ತನ್ನ ಆಚರಣೆಗಳನ್ನು ಸರಿಯಾಗಿ ಜರಗಿಸಿ, ಶ್ರೇಷ್ಠ ಸ್ಥಾನಕ್ಕೆ ತೆರಳಿದನೆಂದು ಭಾವಿಸಲ್ಪಟ್ಟಿರುತ್ತದೆ. ಈ ದೃಷ್ಟಿಯಿಂದ ಶಿವಾನುಭವ ಶಾಸ್ತ್ರಜ್ಞರು ಈ ವಿಷಯವನ್ನು ವಿವೇಚಿಸಿ, ಮರಣ ಹೊಂದಿದವನು ಸಮಾಧಿಸ್ಥನಾದನೆಂದು ತಿಳಿಯುತ್ತಾರೆ. ಹೀಗೆ ಅವರು ಕಲ್ಪಿಸಿ ಇದರಲ್ಲಿ ಎಂಟು ವಿಧಗಳನ್ನು ಮಾಡಿದ್ದಾರೆ. ಅವು ಯಾವವೆಂದರೆ, ಸಹಜಕ್ರಿಯೆ, ಗೋಮುಖ, ಗೋಳಕ, ಬಯಲು, ನಿಜಶಿವ, ನಿರವಯ, ಚಿದಾನಂದ, ಮತ್ತು ನಿರ್ವಾಣ. ಈ ಹೆಸರುಗಳ ಮೇಲಿಂದ ವಾಚಕರು ಸಮಾಧಿಗಳೆಂದರೇನು ಎಂಬದರ ಸ್ಥೂಲ ಕಲ್ಪನೆಯನ್ನು ಮಾಡಿಕೊಳ್ಳಬಹುದು.

ಈ ಮೇರೆಗೆ ಶಿವಾನುಭವ ಶಾಸ್ತ್ರದ ವಿಸ್ತಾರವಿರುತ್ತದೆ. ಇದರ ಮೇಲಿಂದ ಈ ಜ್ಞಾನವು ಎಷ್ಟು ಮಹತ್ವದ್ದಿರುತ್ತದೆಂಬದರ ಅರಿಕೆಯು ವಾಚಕರಿಗೆ ಗೋಚರವಾಗಬಹುದು. ಈ ವಿಷಯಗಳ ಮೇಲೆ ವಚನ ಶಾಸ್ತ್ರದಲ್ಲಿ ಬೇರೆ ಬೇರೆ ಸ್ವತಂತ್ರ ಗ್ರಂಥಗಳಾಗಿವೆ. ಒಟ್ಟಿಗೆ ಶಿವಾನುಭವವು

ಮನುಷ್ಯನ ನಿಜ ಧರ್ಮದ ಸಾರವಿರುತ್ತದೆ. ಇದು ಅವನ ಪ್ರಗತಿಗೆ ಕಾರಣವಾಗಿರುತ್ತದೆ. ಶಿವಶರಣರು ಇದರ ವಿವರಣೆಯನ್ನು ತಮ್ಮ ವಚನ ಗ್ರಂಥಗಳಲ್ಲಿ ವಿಸ್ತಾರವಾಗಿ ಮಾಡಿದ್ದಾರೆ.

ಆದರೆ ವೀರಶೈವರ ದುರ್ದೈವದಿಂದ ವಚನ ವಾಙ್ಮಯದ ಅಭ್ಯಾಸವು ನಿಂತು ಹೋಗಿ ಎಷ್ಟೋ ಶತಮಾನಗಳಾದವು. ಬಸವಾದಿ ಪ್ರಮಥರ ಕಾಲದಲ್ಲಿ ಮತ್ತು ಅವರ ತರುವಾಯ ೧೦೦—೧೫೦ ವರ್ಷಗಳ ವರೆಗೆ ಅದು ಉಜ್ವಲ ಸ್ಥಿತಿಯಲ್ಲಿತ್ತು. ಮುಂದೆ ಮುಸಲ್ಮಾನರ ಆಕ್ರಮಣದ ಮೂಲಕ ಈ ವಾಙ್ಮಯದಲ್ಲಿ ಬಹಳ ಅಂಶವು ನಷ್ಟವಾಯಿತು. ವಿಜಯನಗರದ ಕಾಲದಲ್ಲಿ ಕೆಲವು ಕಾಲ ಮಾತ್ರ ಅದು ಕಳೆಯೆತ್ತಿತು. ಮುಂದೆ ಅದು ಸ್ವಲ್ಪ ಕಾಲದಲ್ಲಿ ಹಿಂದೆಗೆಯಿತು. ಆದರೆ ಆಗ ವಚನ ವಾಙ್ಮಯದ ಬದಲು ಪುರಾಣಗಳ ಮಹತ್ವವು ಹೆಚ್ಚಾಗಹತ್ತಿತು. ಇದರಿಂದ ಪ್ರಮಥರ ಸಂಸ್ಕೃತಿಯು ಕಳೆಗುಂದಿತು. ಈ ಸ್ಥಿತಿಯು ಈಗಲೂ ಇದೆ. ವಚನ ಗ್ರಂಥಗಳ ಸಂಗ್ರಹ ಮತ್ತು ಅವುಗಳ ಸಂಶೋಧನೆ ಇವು ಬಲವಾಗಿ ಸಾಗದ ಹೊರ್ತು ಈ ದುಃಸ್ಥಿತಿಯು ದೂರಾಗಲಾರದು. ಈ ಗ್ರಂಥಗಳು ನಾಶವಾಗುವದರಲ್ಲಿ ಇವೆ. ಅವು ನಾಶವಾದಲ್ಲಿ ವೀರಶೈವರಿಗಷ್ಟೇ ಅಲ್ಲ, ಹಿಂದುಸ್ತಾನಕ್ಕೂ ಹಾನಿಯದೆ.

**—ರಾ॥ ಬ॥ ಫ. ಗು. ಹಳಕಟ್ಟಿ,**
ಬಿ. ಏ. ಎಲ್. ಎಲ್. ಬಿ.

---

# ಶಿವಯೋಗಾಚರಣೆಯ ತ್ರಿವಿಡಿ.

ಆದಿ ಶ್ರೀ ಪರಶಿವನ—ಪಾದವನು ಮರೆದು ಮನ ।
ಹೋದ ಪರಿಯಲ್ಲಿ ನಡೆದು ನುಡಿದಾಡುವ ।
ಕ್ರೋಧಿಗೆಲ್ಲಿಯದು ಶಿವಯೋಗ ॥ ೧ ॥

ಲಿಂಗಪೂಜೆಯನೊಲ್ಲ-ದಂಗ ಶೃಂಗಾರದೊಳಗೆ ।
ಹಿಂಗದೆ ಪೊತ್ತುಗಳೆದು ಲಿಂಗವ ಮರೆದ ।
ಭಂಗಗೆಲ್ಲಿಯದು ಶಿವಯೋಗ ॥ ೨ ॥

ಗಡ್ಡ ಮಂಡೆಯ ಬೆಳಿಸಿ—ದೊಡ್ಡ ಪಾಗುವ ಸುತ್ತಿ ।
ಅಡ್ಡ ನೆರೆ ತೋರೆ ಧರಣಿಯೊಳು ತಿರಿದುಂಬ ।
ಹೆಡ್ಡಗೆಲ್ಲಿಯದೊ ಶಿವಯೋಗ ॥ ೩ ॥

ಮಂಡೆಯ ಬೋಳಿಸಿಕೊಂಡು—ಕಂಡಕಂಡಲಿ ತಿರಿದುಂಡು ।
ಕಂಡಕಂಡವರ ಜರಿದು ಅಂಜಿಸಿಕೊಂಬ ।
ಭಂಡಗೆಲ್ಲಿಯದೊ ಶಿವಯೋಗ ॥ ೪ ॥

ಒರಿಸಿ ದುರ್ಲಿಪಿಯು ತನು—ಕರದೊಳಿಷ್ಟವ ಕೊಟ್ಟ ।
ಪರಮ ಶ್ರೀಗುರುವ ನರನೆಂದು ಭಾವಿಸುವ ।
ನರಕಿಗೆಲ್ಲಿಯದೊ ಶಿವಯೋಗ ॥ ೫ ॥

ತನ್ನೊಳಗೆ ಮಾಯೆ ಸಂ—ಪೂರ್ಣವಾಗಿರುತಿರ್ದು ।
ಮನ್ನೆಯರ ಮೇಲೆ ಮಾಯಿಕವ ಕಲ್ಪಿಪ ।
ಕುನ್ನಿಗೆಲ್ಲಿಯದೊ ಶಿವಯೋಗ ॥ ೬ ॥

ಏಣಾಂಕಧರ ತನ್ನ—ಪ್ರಾಣವೆಂದು ತಿಳಿಯದೆ ।
ಪ್ರಾಣವೆ ಹೇಮ ಕಾಮಿನಿಯರೆಂದೆಂಬ ।
ಕೋಣಗೆಲ್ಲಿಯದೊ ಶಿವಯೋಗ ॥ ೭ ॥

ಇಷ್ಟಲಿಂಗವ ಗಳದಿ—ಕಟ್ಟಿಕೊಂಡಿರುತಿರ್ದು ।
ಸೃಷ್ಟಿಯೊಳಗಿರುವ ಪರದೈವಕೆರಗುವ ।
ಭ್ರಷ್ಟಗೆಲ್ಲಿಯದೊ ಶಿವಯೋಗ ॥ ೮ ॥

ಕೊಡುವವರ ಹೊಗಳುತ್ತ—ಕೊಡದವರ ಬೊಗಳುತ್ತ ।
ಪೊಡವಿಯೊಳು ಶ್ರೇಷ್ಠ ಒಡೆಯರೆಂದೆನಿಸುವ ।
ಹುಡುಗಗೆಲ್ಲಿಯದೊ ಶಿವಯೋಗ ॥ ೯ ॥

ಅನ್ನವಸ್ತ್ರಂಗಳಿಗೆ—ಅನ್ಯರನು ಬೋಧಿಸುತ ।
ತನ್ನ ದುರ್ಘಟವ ಸಂತವಿಡುತಿರುತಿಹ ।
ಜುನ್ನಗೆಲ್ಲಿಯದೊ ಶಿವಯೋಗ ॥ ೧೦ ॥

ಒಡೆಯರಿಹ ಮನೆಯ ಮುಂ—ಗಡೆಗೆ ಭಿಕ್ಷಾಯೆನಲು ।
ಮುಡಿವಾಗಿ ನೋಡಿ ಭೂತ ಹೊಡೆದಂತಿರುವ ।
ಬಡುಕಗೆಲ್ಲಿಯದೊ ಶಿವಯೋಗ ॥ ೧೧ ॥

ಎಲ್ಲ ಶಬ್ದಂಗಳನು—ಬಲ್ಲೆನೆಂದೆನುತಲಿ ।
ಎಲ್ಲರ ನುಡಿಯ ಕಟ್ಟಿ ತನ್ನೊಳು ಮೆರೆವ ।
ಖುಲ್ಲಗೆಲ್ಲಿಯದೊ ಶಿವಯೋಗ ॥ ೧೨ ॥

ಮಾಹೇಶ್ವರರ ಮುಂದೆ—ತಾ ಹಿಡಿದ ವ್ರತವನ್ನು ।
ವಾಹಿಯಲಿ ಬಿಟ್ಟು ತನ್ನಸುವ ಹೊರೆವ ಸಂ ।
ದೇಹಿಗೆಲ್ಲಿಯದೊ ಶಿವಯೋಗ ॥ ೧೩ ॥

ರೂಪೇಂದ್ರಿಯಂಗಳಿಗೆ—ತಾ ಪರಿದು ವಿಷಯದೊಳು ।
ಆ ಪರಶಿವನ ನೆನೆಹ ಮನಕೆ ತಾರದ ।
ಪಾಪಿಗೆಲ್ಲಿಯದೊ ಶಿವಯೋಗ ॥ ೧೪ ॥

ಕ್ರೂರ ವಿಷಯಗಳೆಂಬ—ವಾರುಧಿಯ ನಡುವಿರ್ದು ।
ಸಾರ ಶರಣರನು ಹಳಿದಾಡುತಿಹ ಸಂ ।
ಸಾರಿಗೆಲ್ಲಿಯದೊ ಶಿವಯೋಗ ॥ ೧೫ ॥



ದೇಶ ದೇಶವ ತಿರುಗಿ—ಹೇಸದೆಲ್ಲರ ಬೇಡಿ ।
ಕಾಸ ಗಂಟಿಕ್ಕಿ ತಾ ವಿರಕ್ತನು ಯೆಂಬ ।
ಹೇಸಿಗೆಲ್ಲಿಯದೊ ಶಿವಯೋಗ ॥ ೧೬ ॥

ಎಲ್ಲಾ ಪುರಾತನರು—ಸೊಲ್ಲಿದ ವಚನಗಳೊಳು ।
ಅಲ್ಲಿಗೊಂದೊಂದು ಕಲಿತೆಲ್ಲರ ಪಳಿವ ।
ಪುಳುವಿಗೆಲ್ಲಿಯದೊ ಶಿವಯೋಗ ॥ ೧೭ ॥

ಮುಂದೆ ಶರಣು ಮಾಡಿ—ಹಿಂದಿರುಗಿ ನಿಂದಿಸಿಯರ ।
ನಿಂದಸಖನ ತನುಜಗೆ ವಶವಾಗಿರುವ ।
ಹಂದಿಗೆಲ್ಲಿಯದೊ ಶಿವಯೋಗ ॥ ೧೮ ॥

ಭೂತೇಶನವರುಗಳ—ಜಾತಿಸೂತಕವೆತ್ತಿ ।
ಖ್ಯಾತಿಯಿಂ ನುಡಿದು ಕರ್ಪುಕೀಡಾಗುವ ।
ಪಾತಕನಿಗುಂಟೆ ಶಿವಯೋಗ ॥ ೧೯ ॥

ಮೃಡನಿತ್ತ ದ್ರವ್ಯವನು—ಮೃಡಗರ್ಪಿಸದೆ ಕೊಂಡು ।
ಒಡಲನನುದಿನ ಪೊರೆದು ಜೀವಿಸುತಿಹ ।
ತುಡುಗಗೆಲ್ಲಿಯದೊ ಶಿವಯೋಗ ॥ ೨೦ ॥

ತನು ಗುಣಂಗಳ ಕೆಡದೆ—ಮನಗುಣಂಗಳ ಬಿಡದೆ ।
ಅನುಭಾವಿ ಎಂದು ಸರ್ವರೊಳಗುಸುರುವ ।
ಬಿನುಗಗೆಲ್ಲಿಯದೊ ಶಿವಯೋಗ ॥ ೨೧ ॥

ಅಸಮ ಶ್ರೀಗುರುವಿನಾ—ಎಸೆವ ಕರದೊಳು ಪುಟ್ಟಿ ।
ವಸುಧಿಯೊಳು ಪಿತನ ಪೆಸರನ್ನು ಪೇಳುವ ।
ಹುಸಿಕಗೆಲ್ಲಿಯದೊ ಶಿವಯೋಗ ॥ ೨೨ ॥

ಕರಣಾದಿ ಗುಣಗಳನು—ಪರಿದು ಈಡಾಡದೆ ।
ಚರಲಿಂಗವೆಂದು ಧರೆಯೊಳು ಚರಿಸುತಿಹ ।
ದುರುಳಗೆಲ್ಲಿಯದೊ ಶಿವಯೋಗ ॥ ೨೩ ॥

ಹರನ ವಂಶಿಕರಾದ—ಚರಲಿಂಗ ಮೂರ್ತಿಗಳ ।
ಪರಿತೋಷದಿಂದ ಶಿವನೆಂದು ನಂಬದ ।
ಮರುಳಗೆಲ್ಲಿಯದೊ ಶಿವಯೋಗ ॥ ೨೪ ॥

ಮದಗಳೆಂಟರ ನೆಲೆಯು—ಹದವು ಬತ್ತದೆ ನಾನೆ ।
ಸಮಗುಣಿಯೆಂದು ಜಗದೊಳು ಸಲೆ ತಿರುಗುವ ।
ಮದಡಗೆಲ್ಲಿಯದೊ ಶಿವಯೋಗ ॥ ೨೫ ॥

ಸಟೆಯನ್ನು ಬಳಸುತ್ತ—ದಿಟವನತಿಗಳೆವುತ್ತ ।
ನಿಟಲಾಕ್ಷನಡಿಯು ನಂಬಿ ನಂಬದ ಬರಿಯ ।
ಕುಟಿಲಗೆಲ್ಲಿಯದೊ ಶಿವಯೋಗ ॥ ೨೬ ॥

ಆಚಾರ ತಪ್ಪಿ ಮೇಲಾ—ಚಾರವನು ಪಿಡಿದು ।
ನೀಚರಂದದೊಳು ಘಟವ ರಕ್ಷಿಸುತಿರ್ಪ ।
ಕೂಚಗೆಲ್ಲಿಯದೊ ಶಿವಯೋಗ ॥ ೨೭ ॥

ಆಶೆಯು ಒಳಗಿರುತಿರಲು—ನಿರಾಶಕನಂದದೊಳು ।
ವೇಷವನು ತಾಳಿ ಬಕನಂತೆ ಚರಿಸುವ ।
ದೋಷಿಗೆಲ್ಲಿಯದೊ ಶಿವಯೋಗ ॥ ೨೮ ॥

ಕರಮನಂಗಳ ಮೇಲೆ—ಹರ ತಾನೆ ನೆಲಿಸಿರಲು ।
ದೊರೆಕೊಳ್ಳದೆನಗೆ ಶಿವ ಕೃಪೆಯೆಂದೆಂಬ ।
ಕುರುಬಗೆಲ್ಲಿಯದೊ ಶಿವಯೋಗ ॥ ೨೯ ॥

ಅಂಗ ಗುಣಗಳ ತಿಳಿದು—ಸಂಗಮದೆಡೆಯಲ್ಲಿಹ ।
ಲಿಂಗದಲಿ ಮನವ ನಿಲಿಸಿ ಸತ್ಯದೊಳಿರೆ ।
ಹಿಂಗದಿಹುದು ಆ ಶಿವಯೋಗ ॥ ೩೦ ॥

ವಿದ್ಯೆ ಬುದ್ಧಿಗಳನ್ನು—ಪೊರ್ದಿಸಿದ ಗುರುವಿಗು ।
ಪದ್ರವನು ಮಾಡಿ ತನ್ನನೆ ಮೆರೆಯುತಿಹ ।
ಕ್ಷುದ್ರಗೆಲ್ಲಿಯದೊ ಶಿವಯೋಗ ॥ ೩೧ ॥



ಅಂದಿನಾ ಶರಣರಿಗೆ—ಇಂದಿನವರಾರು ಸರಿ ।
ಎಂದು ಸಂತೋಷದಿಂದ ನಂಬದೆ ಇಹ ।
ಮಂದಮತಿಗುಂಟೆ ಶಿವಯೋಗ ॥ ೩೨ ॥

ಅಂಗದವಗುಣವಿರುತ—ಲಿಂಗಕ್ಕೆ ಸಹಭೋಜ ।
ಸಂಗಳ ಮಾಡಿ ಲಿಂಗಾಂಗಿಯೆಂಬ ಭವ ।
ಭಂಗಿಗೆಲ್ಲಿಯದೊ ಶಿವಯೋಗ ॥ ೩೩ ॥

ಕರುಣದಿಂ ಗುರುವಿತ್ತ—ಪರಮ ಲಿಂಗವ ಹೃದಯ ।
ಸರಸಿಜದೊಳಗೆ ನೆಲೆಗೊಳಿಸಿ ನೆನೆಯಲು ।
ದೊರೆಕೊಂಬುದವಗೆ ಶಿವಯೋಗ ॥ ೩೪ ॥

ಸತ್ತು ಚಿತ್ತಾನಂದವೆ—ಕರ್ತೃ ಶಿವಲಿಂಗವೆಂ ।
ಬರ್ಥವ ತಿಳಿದು ಅರ್ಥಿಯಿಂದ ಜಪಿಸಲು ।
ಹತ್ತೆ ಸಾರುವುದು ಶಿವಯೋಗ ॥ ೩೫ ॥

ಆರಿಂದಲಾದೆನಾ—ನಾರಿಂದ ಬೆಳೆದೆನಾ ।
ನಾರಿಂದಲೆನಗೆ ಐಕ್ಯವೆಂದರಿಯದ ।
ಚೋರಗೆಲ್ಲಿಯದೊ ಶಿವಯೋಗ ॥ ೩೬ ॥

ಶರಿರವಾಸನೆಯೊಳಗೆ—ಧರೆ ಹೇಮ ಕಾಮಿನಿಯ ।
ಸ್ಮರಿಸುತ್ತ ಮನದಿ ಪ್ರಣವಾಕ್ಷರವ ಮರೆವ ।
ನರಕಿಗೆಲ್ಲಿಯದೊ ಶಿವಯೋಗ ॥ ೩೭ ॥

ತನುವ ಮಹ ಗುರುವಿಂಗೆ—ಮನವ ಘನಲಿಂಗಕ್ಕೆ ।
ಮನ ಶುದ್ಧದಿಂದೆ ಧನವ ಜಂಗಮಕಿತ್ತ ।
ಅನಘನಿಗೆ ಉಂಟು ಶಿವಯೋಗ ॥ ೩೮ ॥

ಅಂಗ ಲಿಂಗದ ಭೇದ—ದಿಂಗಿತವ ನೆರೆ ತಿಳಿದು ।
ಮಾಂಗಲ್ಯನಾಗಿ ನಿರವಯದಿ ಮನ ನಿಂದ ।
ಲಿಂಗೈಕ್ಯಗುಂಟು ಶಿವಯೋಗ ॥ ೩೯ ॥

ಜೀವ ಭಾವವ ತೊರೆದು—ದೇವರ ದೇವನನು ।
ಸಾವಧಾನದೊಳು ಭಜಿಸುವ ಮಹಿಮನಿಗೆ ।
ಆವಾಗಳುಂಟು ಶಿವಯೋಗ ॥ ೪೦ ॥

ಗುರು ಚೆನ್ನಬಸವೇಶ—ಚರಣಗಳ ಸಲೆ ನೆನವು ।
ವರ ತ್ರಿವಿಡಿಯರ್ಥವಂ ಪೇಳಿ ಕೇಳ್ವರ ।
ದೊರೆವುದಂತವರ್ಗೆ ಶಿವಯೋಗ ॥ ೪೧ ॥

॥ ಇಂತೀ ಶಿವಯೋಗಾಚರಣೆ ತ್ರಿವಿಡಿ ॥

ಸಮಾಪ್ತ.

1847.